ಮಂಗಳೂರು
ಮಂಗಳವಾರ, 2 ಜೂನ್ 2026
ಸಂಪುಟ 48, ಸಂಚಿಕೆ 75, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎರಡು ದಿನಗಳಲ್ಲಿ ಕೇರಳಕ್ಕೆ ಮುಂಗಾರು | ೦೭
₹1.94 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ | ೦೭
ಭಾರತದ ಹಿತಾಸಕ್ತಿಗಳ ರಕ್ಷಣೆಗೆ ಬದ್ಧ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಮೂಲ

ದಿನದ ಮಾತು

ದುಷ್ಟರೊಂದಿಗೆ ಮಾಡಿಕೊಳ್ಳುವ ಸ್ನೇಹ ಪೂರ್ವಾಹ್ನದ ನೆರಳಿನ ಹಾಗೆ ಕುಗ್ಗುತ್ತದೆ. ಸಜ್ಜನರ ಸ್ನೇಹ ಅಪರಾಹ್ನದ ನೆರಳಿನ ಹಾಗೆ ಬೆಳೆಯುತ್ತದೆ.
▲ ನೀತಿ ಮಂಜರಿ

ಯುದ್ಧದ ಒಂಬತ್ತು ದಿನಗಳಲ್ಲಿ ನಾವು ಸಾಧಿಸಿದ್ದೇನು?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಆರು ಜನರ ಬರ್ಬರ ಹತ್ಯೆ 12 ಆರೋಪಿಗಳ ಸೆರೆ

• **ವಿಜಯಪುರ:** ಜಿಲ್ಲೆಯಲ್ಲಿ ಆತಂಕ ಮೂಡಿಸಿದ ಭೀಮಾತೀರದ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ 6 ಜನರ ಬರ್ಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 12 ಆರೋಪಿಗಳನ್ನು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ. ಗ್ರಾಮದ ಮಾಸಿದ್ದ ಶ್ರೀಮಂತ ಬಿರಾದಾರ (44), ಮಹೇಶ ಲಕ್ಷ್ಮಣ ಬಿರಾದಾರ (22), ರಾಜಕುಮಾರ ಸಿದ್ದರಾಮ ಕೋಳಿ (28), ರಾಜು ಚಂದ್ರಕಾಂತ ಉಗಾರ (20), ಯಲ್ಲಪ್ಪ ಮಹಾದೇವ ಆರಕೇರಿ (25), ಕಲ್ಲನಗೌಡ ಈಶ್ವರಗೌಡ ಪಾಟೀಲ (65), ಲಾಯಪ್ಪ ನೇನಪ್ಪ ಬಿರಾದಾರ (65), ಸುಭಾಷ ಮಾಸಿದ್ದ ಬಿರಾದಾರ (21), ರೇವಸಾಬ ಅವಧೂತ ಬಿರಾದಾರ (20), ಗಜಾನಂದ ಭೂತಾಳೆ ಬಿರಾದಾರ (20), ಮಲಕಾರಿ ಹನುಮಂತ ಕೋಳಿ (18), ಸಂಜು ಮಹಾದೇವ ಆರಕೇರಿ (31) ಬಂಧಿತ ಆರೋಪಿಗಳು ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಖ್ಯಾತ ಗಾಯಕಿ ಸುಮನ್ ಕಲ್ಯಾಣಪುರ್ ಇನ್ನಿಲ್ಲ

• **ಮುಂಬೈ:** ಭಾರತೀಯ ಚಿತ್ರರಂಗದ ಸುವರ್ಣಯುಗದ ಖ್ಯಾತ ಹಿನ್ನೆಲೆ ಗಾಯಕಿ, ಪದ್ಮಭೂಷಣ ಪುರಸ್ಕೃತ ಸುಮನ್ ಕಲ್ಯಾಣಪುರ್ ಅವರ ಅಂತ್ಯಕ್ರಿಯೆ ಸೋಮವಾರ ಮುಂಬೈನಲ್ಲಿ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು. 89 ವರ್ಷದ ಸುಮನ್ ಕಲ್ಯಾಣಪುರ ಅವರು ವಯೋಸಹಜ ಅನಾರೋಗ್ಯದಿಂದ ಭಾನುವಾರ ರಾತ್ರಿ ನಿಧನರಾಗಿದ್ದರು.



• ಪುಟ ೫

ಅಮೆರಿಕ ಜತೆ ವ್ಯಾಪಾರ ಒಪ್ಪಂದ ಅಂತಿಮ ಹಂತ

• ಪುಟ ೭

ಉಗ್ರ ಜಾಲಕ್ಕೆ ಯುವಕರ ಸೆಳೆತ

• ಪುಟ ೭



ಚಿನ್ನ ಕೇವಲ ಲೋಹವಲ್ಲ

• ಪುಟ ೭

ಸುದ್ದಿ ಸಮಗ್ರ

ಸಾಧ್ಯವಾಗದ ವರಿಷ್ಠರ ಭೇಟಿ | ಹೈಕಮಾಂಡ್ ಎದುರು ಸಚಿವರ ಸಿದ್ಧಪಟ್ಟಿ ಮಂಡನೆ | ದಿಲ್ಲಿಯಲ್ಲೇ ಉಳಿದ ಡಿಕೆಶಿ, ಸಿದ್ದರಾಮಯ್ಯ

ಇಂದು ಸಂಪುಟ ಚರ್ಚೆ

• **ಹೊಸದಿಲ್ಲಿ:** ಮೊದಲ ಹಂತದ ಸಚಿವ ಸಂಪುಟದಲ್ಲಿ ಯಾರನ್ನು ಪರಿಗಣಿಸಬೇಕೆಂಬುದರ ಕುರಿತು ಚರ್ಚಿಸಲು ದಿಲ್ಲಿಗೆ ತೆರಳಿರುವ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರಿಗೆ ಪಕ್ಷದ ವರಿಷ್ಠರ ಭೇಟಿ ಲಭ್ಯವಾಗದ ಕಾರಣ ಚರ್ಚೆ ಮಂಗಳವಾರಕ್ಕೆ ಮುಂದೂಡಿಕೆಯಾಗಿದೆ.

ತಡರಾತ್ರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿ ಸಚಿವರ ಪಟ್ಟಿ ನೀಡಿದ್ದು, ಇಂದು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಚಿವರ ಪಟ್ಟಿಗೆ ಅಂತಿಮ ಮುದ್ರೆ ಪಡೆಯಲಿದ್ದಾರೆ.

ದಿಲ್ಲಿಯಲ್ಲೇ ಉಳಿದಿರುವ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಮಂಗಳವಾರ ಸಚಿವ ಸ್ಥಾನದ ಹೆಸರುಗಳನ್ನು ಹೈಕಮಾಂಡ್ ಎದುರು ಪ್ರಸ್ತಾಪಿಸಿ ಚರ್ಚೆ ನಡೆಸಲಿದ್ದು, ಈಗ ಸಿದ್ಧವಾಗಿರುವ ಪಟ್ಟಿಯಲ್ಲಿ ಒಂದೆರಡು ಹೆಸರು ಹೊರತುಪಡಿಸಿ ಪಟ್ಟಿ ಅಂತಿಮಗೊಳ್ಳುವ ಸಾಧ್ಯತೆ ಇದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಬುಧವಾರವೇ ಪ್ರಮಾಣವಚನ ಸಮಾರಂಭ ಕಾರ್ಯಕ್ರಮ ನಿಗದಿಯಾಗಿರುವುದರಿಂದ ಸಚಿವರ ಪಟ್ಟಿ ಮಂಗಳವಾರ ಬಹುತೇಕ ಅಂತಿಮಗೊಳ್ಳಲಿದ್ದು, ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಮಂಗಳವಾರ ಅಥವಾ ಬುಧವಾರ ಬೆಳಗ್ಗೆ ದಿಲ್ಲಿಯಿಂದ ಆಗಮಿಸಲಿದ್ದಾರೆ.



- ಇಂದು ಅಥವಾ ನಾಳೆ ದಿಲ್ಲಿಯಿಂದ ವಾಪಸ್
- ಸಚಿವ ಸ್ಥಾನಕ್ಕಾಗಿ ಮುಂದುವರಿದ ಲಾಬಿ
- ರಾಜ್ಯದ ಹಲವು ಕಾಂಗ್ರೆಸ್ ನಾಯಕರು ದಿಲ್ಲಿಯಲ್ಲೇ ಠಿಕಾಣಿ
- ನಾಳೆ ಪ್ರಮಾಣವಚನ ಕಾರ್ಯಕ್ರಮ ಹಿನ್ನೆಲೆ ಇಂದೇ ಸಚಿವರ ಪಟ್ಟಿ ಅಂತಿಮ ಸಾಧ್ಯತೆ

ಲಾಬಿ ಜೋರು

ಮೊದಲ ಹಂತ ಹಾಗೂ ಕೊನೆಯ ಹಂತದಲ್ಲಿ ಸಂಪುಟದಲ್ಲಿ ಸ್ಥಾನ ಕೈತಪ್ಪುವ ಆತಂಕ ಇರುವ ನಾಯಕರು ದಿಲ್ಲಿಗೆ ದೌಡಾಯಿಸಿದ್ದಾರೆ. ಇದರ ನಡುವೆ ಹೊಸದಾಗಿ ಸಂಪುಟದಲ್ಲಿ ಸೇರ್ಪಡೆಯಾಗಲು ಯತ್ನಿಸುತ್ತಿರುವ ನಾಯಕರು ಕೂಡ ದಿಲ್ಲಿಗೆ ತೆರಳಿ ಲಾಬಿ ಆರಂಭಿಸಿದ್ದಾರೆ. ಇದರ ನಡುವೆ ಡಿಸಿಎಂ ಸ್ಥಾನಕ್ಕೂ ಪ್ರಯತ್ನ ನಡೆದಿದ್ದು, ಹಿರಿಯ ನಾಯಕರು ನಮ್ಮನ್ನು ಪರಿಗಣಿಸಿ ಎಂದು ಹೈಕಮಾಂಡ್‌ಗೆ ದುಂಬಾಲು ಬಿದ್ದಿದ್ದಾರೆ.

ಜಮೀರ್ ಅಹ್ಮದ್ ಖಾನ್ ಆಡಿಯೋ ವೈರಲ್?

• **ಬೆಂಗಳೂರು/ದಾವಣಗೆರೆ:** ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಅವರದ್ದು ಎನ್ನಲಾದ ಆಡಿಯೋವೊಂದು ಕಾಂಗ್ರೆಸ್ ಪಕ್ಷದಲ್ಲಿ ತೀವ್ರ ಸಂಚಲನ ಮೂಡಿಸಿದೆ. ಇದು ಎಐ ತಂತ್ರಜ್ಞಾನದಿಂದ ಸೃಷ್ಟಿಯಾದ ನಕಲಿ ಆಡಿಯೋ ಎಂದು ಜಮೀರ್ ಸ್ಪಷ್ಟನೆ ನೀಡಿದರೆ, ದಾವಣಗೆರೆ ಶಾಸಕ ಸಮರ್ಥ ಶಾಮನೂರು ಹೈಕಮಾಂಡ್ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ದಾವಣಗೆರೆ ಉಪ ಚುನಾವಣೆಯಲ್ಲಿ ಮಾತನಾಡಿದ್ದಾರೆ ಎನ್ನಲಾದ ಸುಮಾರು 3 ನಿಮಿಷ 51 ಸೆಕೆಂಡ್ ಅವಧಿಯ ಆಡಿಯೋ ಕ್ಲಿಪ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವೈರಲ್ ಆಗಿದೆ. ಇದರಲ್ಲಿ ಜಮೀರ್ ಅಹಮದ್ ಅವರು ತಮ್ಮ ಆಪ್ತ ಮೊಹಮ್ಮದ್ ಸಿರಾಜ್ ಎಂಬುವರ ಜತೆ ಮಾತನಾಡಿದ್ದಾರೆ ಎನ್ನಲಾಗಿದೆ. ಆಡಿಯೋದಲ್ಲಿ ಬಹಳಷ್ಟು ವಾರ್ಡ್‌ಗಳಲ್ಲಿ ಎಸ್‌ಡಿಪಿಐ (ಕುಕ್ಕರ್ ಗುರುತು) ಹವಾ ಇದೆ. ಒತ್ತಾಯಪೂರ್ವಕವಾಗಿ ಯಾರಿಗೂ ಕಾಂಗ್ರೆಸ್‌ಗೆ ವೋಟ್ ಹಾಕಲು ಕರೆಯಬೇಡಿ. ಸಾದಿಕ್ ಪೈಲ್ವಾನ್ ವಾರ್ಡ್‌ನಲ್ಲಿ ಕಾಂಗ್ರೆಸ್‌ಗೆ ಮೈನಸ್ ಆಗಬೇಕು. ಮನೆಯಿಂದ ಹೊರಬಂದವರಿಗೆ ಎಸ್‌ಡಿಪಿಐ ಅಥವಾ ಪಕ್ಷೇತರರಿಗೆ ಮತ ಹಾಕುವಂತೆ ಹೇಳಿ ಎಂಬ ಅಂಶಗಳಿವೆ. ಇದು ಸ್ವಪಕ್ಷದ ಅಭ್ಯರ್ಥಿಗಳಿಗೇ ಹಿನ್ನಡೆ ಉಂಟುಮಾಡುವ ಷಡ್ಯಂತ್ರ ಎಂಬ ಆರೋಪಕ್ಕೆ ಕಾರಣವಾಗಿದೆ.

ಇದು ಎಐ ಸೃಷ್ಟಿಸಿದ ನಕಲಿ ಆಡಿಯೋ: ಜಮೀರ್ ಸ್ಪಷ್ಟನೆ

ಈ ವಿವಾದದ ಬೆನ್ನಲ್ಲೇ ಸ್ಪಷ್ಟನೆ ನೀಡಿರುವ ಜಮೀರ್ ಅಹಮದ್ ಖಾನ್, ವೈರಲ್ ಆಗಿರುವ ಆಡಿಯೋ ಸಂಪೂರ್ಣ ನಕಲಿ. ಇತ್ತೀಚಿನ ಎಐ ತಂತ್ರಜ್ಞಾನ ಬಳಸಿ ಕಿಡಿಗೇಡಿಗಳು ನನ್ನ ಧ್ವನಿಯನ್ನು ಅನುಕರಿಸಿ ಈ ರೀತಿ ಮಾಡಿದ್ದಾರೆ. ಇದೊಂದು ರಾಜಕೀಯ ಷಡ್ಯಂತ್ರವಾಗಿದ್ದು, ಗೊಂದಲ ಸೃಷ್ಟಿಸಲು ಈ ರೀತಿ ಮಾಡಲಾಗಿದೆ. ಇದರ ಬಗ್ಗೆ ಸೈಬರ್ ಠಾಣೆಗೆ ದೂರು ನೀಡುತ್ತೇನೆ. ಯಾವ ತನಿಖೆಗಾದರೂ ನಾನು ಸಿದ್ಧ ಎಂದು ಸವಾಲು ಹಾಕಿದ್ದಾರೆ.



ಸತ್ಯ ಹೇಗೆ ಷಡ್ಯಂತ್ರ ಆಗುತ್ತದೆ? ಸಮರ್ಥ ಶಾಮನೂರು ಪ್ರಶ್ನೆ

• ಪುಟ ೯

ಮಮತಾ ಅವಧಿಯ ಯೋಜನೆಯಲ್ಲಿ 30 ಲಕ್ಷ ನಕಲಿ ಖಾತೆ | ತನಿಖೆಗೆ ಆದೇಶ

ಪುರುಷರ ಖಾತೆಗಳಿಗೂ ಲಕ್ಷ್ಮೀ ಭಂಡಾರ್ ಹಣ!



- ಕೆಲ ಪುರುಷ ಫಲಾನುಭವಿಗಳ ಬಂಧನ
- ತನಿಖೆಗೆ ವಿಶೇಷ ತಂಡ ರಚನೆ
- ಹಣ ವರ್ಗಾವಣೆ ಬಗ್ಗೆಯೂ ತನಿಖೆ
- ಮಹಿಳೆಯರ ಖಾತೆಗೆ ನಾಳೆ ಅನ್ನಪೂರ್ಣ ಭಂಡಾರ್ ಹಣ



• **ಕೋಲ್ಕತ್ತ:** ಪಶ್ಚಿಮ ಬಂಗಾಳದಲ್ಲಿ ಹಿಂದಿನ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರದ ಮಹಿಳಾ ನಗದು ವರ್ಗಾವಣೆ ಯೋಜನೆಯಾದ 'ಲಕ್ಷ್ಮೀ ಭಂಡಾರ್'ನ ಹಿಂದೆ ಭಾರೀ ಅಕ್ರಮಗಳು ಬಯಲಿಗೆ ಬಂದಿದ್ದು, ಯೋಜನೆಯಲ್ಲಿ ಲಕ್ಷಾಂತರ ನಕಲಿ ಖಾತೆಗಳು ಕಂಡುಬಂದಿದ್ದು, ಮಹಿಳೆಯರ ಹೆಸರಿನಲ್ಲಿ ಪುರುಷರು ಈ ನಕಲಿ ಖಾತೆಗಳ ಮೂಲಕ ಹಣ ಪಡೆಯುತ್ತಿದ್ದುದು ಬೆಳಕಿಗೆ ಬಂದಿದೆ. ಇದೀಗ ನಕಲಿ ಖಾತೆಗಳ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ರಚಿಸುವಂತೆ ರಾಜ್ಯ ಡಿಜಿಪಿಗೆ ಅಲ್ಲಿನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಸೋಮವಾರ ಸೂಚಿಸಿದ್ದಾರೆ.



ಬಂಗಾಳದ ರಾಜ್ಯ ಸಚಿವಾಲಯದ ನಬನ್ನಾದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಸುವೇಂದು ಅಧಿಕಾರಿ, ಅಕ್ರಮ ನಗದು ವರ್ಗಾವಣೆಯನ್ನು ಒಳಗೊಂಡಿರುವುದರಿಂದ ಈ ವಿಷಯದ ಬಗ್ಗೆ ಹಣ ವರ್ಗಾವಣೆ ತನಿಖೆಯನ್ನು ಸಹ ನಡೆಸಲಾಗುವುದು ಎಂದು ಹೇಳಿದರು.

ಮಮತಾ ಸರ್ಕಾರದ ಅವಧಿಯಲ್ಲಿ ಮಹಿಳೆಯರಿಗಾಗಿ ಇದ್ದ ಈ ಯೋಜನೆಯಲ್ಲಿ ಪುರುಷರು ಹಣಕಾಸು ನೆರವು ಪಡೆದುಕೊಂಡಿರುವುದು ಕಂಡುಬಂದಿದೆ ಎಂದು ಮುಖ್ಯಮಂತ್ರಿ ಹೇಳಿದರು. ಸುಮಾರು 30 ಲಕ್ಷ ಲಕ್ಷ್ಮೀ ಭಂಡಾರ್ ಖಾತೆಗಳು ನಕಲಿಯಾಗಿವೆ. ಈ ವಿಷಯದ ತನಿಖೆಗಾಗಿ ಎಸ್‌ಐಟಿ ರಚಿಸುವಂತೆ ನಾನು ಪೊಲೀಸ್ ಮಹಾನಿರ್ದೇಶಕರನ್ನು (ಡಿಜಿಪಿ) ಕೇಳಿದ್ದೇನೆ ಎಂದು ಮುಖ್ಯಮಂತ್ರಿ ಹೇಳಿದರು.

➡ಪುಟ ೪

ಮನೆಗೆಲಸದ ಕಲಿತಾ ಮಾಝಿ ಈಗ ಸಚಿವೆ!

• **ಕೋಲ್ಕತ್ತಾ:** ಮುಖ್ಯಮಂತ್ರಿ ಸುವೇಂದು ಅಧಿಕಾರಿ ಸಚಿವ ಸಂಪುಟ ವಿಸ್ತರಣೆ ನಡೆಸಿದ್ದು, ಒಟ್ಟು 35 ಬಿಜೆಪಿ ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಇದರಲ್ಲಿ ಪ್ರಮುಖವಾಗಿ ತಿಂಗಳಿಗೆ ಕೇವಲ 3,000 ಸಂಬಳಕ್ಕೆ ಮನೆಗೆಲಸ ಮಾಡುತ್ತಿದ್ದ ಕಲಿತಾ ಮಾಝಿ ಸೋಮವಾರ ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಹೊಸ ಅಧ್ಯಾಯ ಬರೆದಿದ್ದಾರೆ. ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ಅವರು ಬಡತನವನ್ನು ಮೆಟ್ಟಿ ನಿಂತು ಶಾಸಕಿಯಾಗಿದ್ದು, ಇದೀಗ ಸಚಿವೆಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.



➡ಪುಟ ೪

ಸರ್ಕಾರಿ ಶಾಲಾ ಮಕ್ಕಳು ಆತ್ಮವಿಶ್ವಾಸ ಕಳೆದುಕೊಳ್ಳಬಾರದು

ವಿದ್ಯಾರ್ಥಿಗಳಿಗೆ ಡಿಕೆಶಿ ಶುಭ ಹಾರೈಕೆ

• **ಬೆಂಗಳೂರು:** ಸೋಮವಾರ(ಜೂ.1)ದಿಂದ ನೂತನ ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ನನ್ನ ಪ್ರೀತಿಯ ವಿದ್ಯಾರ್ಥಿಗಳಿಗೆ ಶುಭವಾಗಲಿ, ಯಶಸ್ಸು ಸಿಗಲಿ ಎಂದು ಸರ್ಕಾರದ ಪರವಾಗಿ ಹಾಗೂ ವೈಯಕ್ತಿಕವಾಗಿ ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾರೈಸಿದ್ದಾರೆ.



ಸದಾಶಿವನಗರ ನಿವಾಸದ ಬಳಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮಲ್ಲಿ ಓದಿರುವ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಆತ್ಮಮೂಲ್ಯ, ಮಾನವ ಸಂಪನ್ಮೂಲವಾಗಿ ತಮ್ಮದೇ ಆದ ಕೊಡುಗೆ ನೀಡಿದ್ದು, ಇಡೀ ವಿಶ್ವ ಇದಕ್ಕೆ ಸಾಕ್ಷಿಯಾಗಿದೆ. ನಮ್ಮ ಜ್ಞಾನದ ಭಂಡಾರ ಇಡೀ ವಿಶ್ವವನ್ನೇ ಆಕರ್ಷಿಸುತ್ತಿದೆ. ಜಗತ್ತಿನ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ನಮ್ಮ ವಿದ್ಯಾರ್ಥಿಗಳು ಓದಿ ಅನೇಕ ಸಾಧನೆ ಮಾಡಿದ್ದಾರೆ ಎಂದರು.

➡ಪುಟ ೪

ರಾಜ್ಯಾದ್ಯಂತ ಶಾಲೆಗಳು ಪುನರಾರಂಭ



ಸರ್ಕಾರದ ಕೇಸ್ ವಾಪಸ್ ನಿರ್ಧಾರಕ್ಕೆ ಬಿವೈವಿ ಆಕ್ರೋಶ

ಕಲಬುರಗಿಯಲ್ಲಿ ಬಿಜೆಪಿ ಪ್ರತಿಭಟನೆ

• **ಕಲಬುರಗಿ:** 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ರಾಜ್ಯಾದ್ಯಂತ ಹಿಂದು ಕಾರ್ಯಕರ್ತರ ಮೇಲಿನ ರಾಜಕೀಯ ಪ್ರೇರಿತ ಸುಳ್ಳು ಕೇಸುಗಳನ್ನು ವಾಪಸ್ ಪಡೆಯಲಿದೆ ಎಂದು ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭರವಸೆ ನೀಡಿದರು.

2022ರಲ್ಲಿ ಜಿಲ್ಲೆಯ ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶಿವಲಿಂಗ ಪೂಜೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗಲಭೆಕೋರರ ಮೇಲಿನ ಕೇಸ್ ವಾಪಸ್ ಪಡೆದಿರುವ ಕಾಂಗ್ರೆಸ್ ಸರ್ಕಾರದ ನಿಲುವನ್ನು ಖಂಡಿಸಿ ಬಿಜೆಪಿ ಸೋಮವಾರ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆ ನೇತೃತ್ವ ವಹಿಸಿ ಅವರು ಮಾತನಾಡಿದರು.

ಈ ಮಾತು ಕೇವಲ ಚಪ್ಪಾಳೆಗಾಗಿ ಹೇಳ್ತಾ ಇಲ್ಲ. ರಾಜ್ಯದ ಹಿಂದು ಕಾರ್ಯಕರ್ತರ ಭಾವನೆ ಅರಿತಿದ್ದೇನೆ. ಯಾವುದೇ ಕಾರಣಕ್ಕೂ ಬಿಜೆಪಿ ಹಿಂದು ಕಾರ್ಯಕರ್ತರ ಅಪಮಾನ ಸಹಿಸುವುದಿಲ್ಲ.

➡ಪುಟ ೪



ಹಾರ್ಮುಜ್ ಸಂಪೂರ್ಣ ಬಂದ್

• **ವಾಷಿಂಗ್ಟನ್/ಟೆಹ್ರಾನ್:** ಅಮೆರಿಕದೊಂದಿಗೆ ಮಧ್ಯವರ್ತಿಗಳ ಮೂಲಕ ನಡೆಯುತ್ತಿದ್ದ ಎಲ್ಲಾ ಸಂದೇಶ ವಿನಿಮಯ ಮತ್ತು ಮಾತುಕತೆಗಳನ್ನು ಸ್ಥಗಿತಗೊಳಿಸುವುದಾಗಿ ಇರಾನ್ ಘೋಷಿಸಿದೆ. ಜತೆಗೆ, ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಬಂದ್ ಮಾಡುವುದಾಗಿ ಎಚ್ಚರಿಕೆ ನೀಡಿದೆ.

ಅಮೆರಿಕ ಜತೆಗಿನ ಶಾಂತಿ ಮಾತುಕತೆ ಸ್ಥಗಿತ: ಇರಾನ್ ಘೋಷಣೆ

ಇರಾನ್ ಬೆಂಬಲಿತ ಸುದ್ದಿ ಸಂಸ್ಥೆ ತಸ್ನೀಮ್ ವರದಿ ಪ್ರಕಾರ, ಲೆಬನಾನ್ ಮತ್ತು ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ದಾಳಿಗಳು ಹಾಗೂ ಯುದ್ಧ ವಿರಾಮ ಉಲ್ಲಂಘನೆಗಳಿಗೆ ಪ್ರತಿಯಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಇಸ್ರೇಲ್ ಲೆಬನಾನ್‌ನ ಆಕ್ರಮಿತ ಪ್ರದೇಶಗಳಿಂದ ಸಂಪೂರ್ಣ ಹಿಂತೆಗೆದುಕೊಳ್ಳುವವರೆಗೆ ಮತ್ತು ದಾಳಿಗಳನ್ನು ನಿಲ್ಲಿಸುವವರೆಗೆ ಯಾವುದೇ ಸಂವಾದ ನಡೆಯುವುದಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.

➡ಪುಟ ೪

ನಾಲ್ಕೇ ತಿಂಗಳಲ್ಲಿ 2,511 ಶಸ್ತ್ರಚಿಕಿತ್ಸೆ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ರಾಜ್ಯದಲ್ಲಿ ಮೂತ್ರಪಿಂಡ ಮತ್ತು ಮೂತ್ರಕೋಶ ಸಂಬಂಧಿ ಕಾಯಿಲೆಗಳ ಪ್ರಮಾಣ ಹೆಚ್ಚುತ್ತಿರುವ ನಡುವೆಯೇ ನಗರದ ನೆಫ್ರೋ ಯುರಾಲಜಿ ಸಂಸ್ಥೆ ಸಾವಿರಾರು ರೋಗಿಗಳಿಗೆ ಜೀವದಾನ ನೀಡುವ ಕೇಂದ್ರವಾಗಿ ಹೊರಹೊಮ್ಮಿದೆ. ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ಸಂಸ್ಥೆಯು 2,511 ಯಶಸ್ವಿ ಶಸ್ತ್ರಚಿಕಿತ್ಸೆಗಳನ್ನು ನಡೆಸುವ ಮೂಲಕ ಮತ್ತೊಂದು ಮೈಲಿಗಲ್ಲು ಸಾಧಿಸಿದೆ.



ಈ ಶಸ್ತ್ರಚಿಕಿತ್ಸೆಗಳ ಪೈಕಿ 771 ಪ್ರಮುಖ, 1,740 ಸಣ್ಣ ಶಸ್ತ್ರಚಿಕಿತ್ಸೆಗಳು ಸೇರಿವೆ. ಜತೆಗೆ ಅತ್ಯಾಧುನಿಕ ರೊಬೋಟಿಕ್ ತಂತ್ರಜ್ಞಾನ ಬಳಸಿ, 10 ಯಶಸ್ವಿ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸುವುದು ಸಂಸ್ಥೆಯ ವೈದ್ಯಕೀಯ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. 2007ರಲ್ಲಿ ಆರಂಭವಾದ ನೆಫ್ರೋ ಯುರಾಲಜಿ ಸಂಸ್ಥೆ ಇಂದು ರಾಜ್ಯದ ಪ್ರಮುಖ ಕಿಡ್ನಿ ಆರೈಕೆ ಕೇಂದ್ರವಾಗಿ ಬೆಳೆದಿದೆ. ಮೂತ್ರಪಿಂಡ ಕಸಿ, ಡಯಾಲಿಸಿಸ್, ಮೂತ್ರಕೋಶ, ಮೂತ್ರನಾಳದ ಕಾಯಿಲೆಗಳ ಚಿಕಿತ್ಸೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ರೋಗಿಗಳು ಇಲ್ಲಿ ಆಗಮಿಸುತ್ತಿದ್ದು, 160 ಹಾಸಿಗೆಗಳ ಸೌಲಭ್ಯ ಹೊಂದಿರುವ ಆಸ್ಪತ್ರೆಗಳಲ್ಲಿ 20 ಡಯಾಲಿಸಿಸ್ ಘಟಕ ಕಾರ್ಯನಿರ್ವಹಿಸುತ್ತಿವೆ.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,69,900 (2,72,800) ಅಪರಂಜಿ ಚಿನ್ನ 15,580 (15,740) ಆಭರಣ ಚಿನ್ನ: 14,320 (14,450) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 74,267 (508↓) ಎನ್‌ಎಸ್‌ಇ 23,382 (164↓)

$1 = ₹95.01



ಕಿನ್ನಿಗೋಳಿ ಕೆಮ್ರಾಲ್ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಮಂಟಪದಲ್ಲಿ ಕೆಮ್ರಾಲ್ ಶ್ರೀ ಮಹಾಗಣಪತಿ ಭಜನಾ ಮಂಡಳಿಯ 19 ನೇ ವರ್ಷದ ಭಜನಾ ಮಂಗಲೋತ್ಸವ ನಡೆಯಿತು. ಸಮಿತಿಯ ಗೌರವ ಸಲಹೆಗಾರ ರಾಧಾಕೃಷ್ಣ ನಾಯಕ್ ಮೂರುಕಾವೇರಿ, ಮಾಧವ ಶೆಟ್ಟಿಗಾರ್ ಕೆರೆಕಾಡು, ನಿರಂಜನ ಶೆಟ್ಟಿ, ವಸಂತ ಕೆರೆಕಾಡು, ಸಮಿತಿಯ ಸಂಚಾಲಕ ಅಶೋಕ್ ಕೆಮ್ರಾಲ್, ಅಧ್ಯಕ್ಷೆ ವಸಂತಿ ರಾಮಕೃಷ್ಣ ದೇವಾಡಿಗ ಹಾಗೂ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು. ಬೆಳಿಗ್ಗೆ ಸೂರ್ಯೋದಯದಿಂದ ಸಂಜೆ ಸೂರ್ಯಾಸ್ತದ ತನಕ ವಿವಿಧ ಭಜನಾ ಮಂಡಳಿಗಳಿಂದ ಭಜನೆ ನಡೆಯಿತು.


ಕಿರುಸುದ್ದಿ

ಉಡುಪಿ ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾ ಪದಾಧಿಕಾರಿಗಳ ನಿಯುಕ್ತಿ

ಉಡುಪಿ: ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾದ ನೂತನ ಪದಾಧಿಕಾರಿಗಳನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಎಸ್.ಟಿ. ಮೋರ್ಚಾ ಅಧ್ಯಕ್ಷ ಭುಜಂಗ ನಾಯ್ಕ್ ಅವರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ.

ಉಪಾಧ್ಯಕ್ಷರುಗಳಾಗಿ ನಾರಾಯಣ ನಾಯ್ಕ್, ರಮೇಶ್ ನಾಯ್ಕ್, ರಾಮ ನಾಯ್ಕ್, ಸುಬೇದ ರವಿ, ರೇವತಿ, ಉಮೇಶ್ ನಾಯ್ಕ್, ಸುಭಾಷ್ ನಾಯ್ಕ್, ಪ್ರಧಾನ ಕಾರ್ಯದರ್ಶಿಗಳಾಗಿ ಉಮೇಶ್ ನಾಯ್ಕ್, ಸುಭಾಷ್ ನಾಯ್ಕ್, ಕಾರ್ಯದರ್ಶಿಗಳಾಗಿ ನವೀನ್, ಸುದೀಪ್ ನಾಯ್ಕ್, ಸುರೇಶ ಕೊರಗ, ಸುಜಾತ ನಾಯ್ಕ್, ಸುಗಂಧಿ, ಕೋಶಾಧಿಕಾರಿಗಳಾಗಿ ನಾರಾಯಣ ನಾಯ್ಕ್, ಕಾರ್ಯಕಾರಿಣಿ ಸದಸ್ಯರುಗಳಾಗಿ ಶರತ್ ನಾಯ್ಕ್ ಕರಂಬಳ್ಳಿ, ನಾಗೇಂದ್ರ ನಾಯ್ಕ್, ಶ್ರೀಧರ ಗೌಡ, ನಾಗೇಶ ನಾಯ್ಕ್, ದಯಾನಂದ ನಾಯ್ಕ್, ಸುರೇಂದ್ರ ನಾಯ್ಕ್, ಮಂಜುನಾಥ ನಾಯ್ಕ್, ಸತೀಶ್ ನಾಯ್ಕ್, ನಿತೀಶ್ ನಾಯ್ಕ್, ದಿನೇಶ್ ಗೌಡ, ಸುಬ್ರಮಣ್ಯ ನಾಯ್ಕ್, ಸಂದೀಪ್ ನಾಯ್ಕ್, ರಾಜ ನಾಯ್ಕ್, ಮಾಲತಿ ಬಿ. ನಾಯ್ಕ್, ಮನೋಜ್ ನಾಯ್ಕ್, ಸನ್ನಿ, ಗೀತಾ ನಾಯ್ಕ್ ಇವರುಗಳನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಭುಜಂಗ ನಾಯ್ಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆದ್ದಾರಿಯಲ್ಲಿ ಕಂಟೇನರ್ ಪಲ್ಟಿ-ಚಾಲಕ ಗೆ ಗಾಯ



ಮುಲ್ಕಿ: ಕಿನ್ನಿಗೋಳಿ ಮೂಡಬಿದ್ರೆ ರಾಜ್ಯ ಹೆದ್ದಾರಿಯ ಐಕಳ ಕಮ್ಮಾಜೆ ಹೆದ್ದಾರಿಯಲ್ಲಿ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಂಟೇನರ್ ಲಾರಿ ಪಲ್ಟಿಯಾಗಿ ಚಾಲಕ ಅಲ್ಪ ಸ್ವಲ್ಪ ಗಾಯಗಳೊಂದಿಗೆ ಪಾರಾಗಿದ್ದಾರೆ. ಕಿನ್ನಿಗೋಳಿಯಿಂದ ಮೂಡಬಿದ್ರೆ ಕಡೆಗೆ ಸಿಎನ್‌ಜಿ ಸಾಗಿಸುತ್ತಿದ್ದ ಕಂಟೇನರ್ ಕಮ್ಮಾಜೆ ತಲುಪುತ್ತಿದ್ದಂತೆ ಚಾಲಕನ ನಿಯಂತ್ರಣ ತಪ್ಪಿ, ಹೆದ್ದಾರಿಯಲ್ಲಿ ಪಲ್ಟಿಯಾಗಿದೆ. ಕೂಡಲೇ ಸ್ಥಳೀಯರು ಲಾರಿಯ ಒಳಗಡೆ ಸಿಲುಕಿ ಕೊಂಡ ಚಾಲಕನನ್ನು ಹೊರಗೆ ತೆಗೆದು ಕಿನ್ನಿಗೋಳಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಘಾತದಿಂದ ಕಂಟೇನರ್‌ಗೆ ಹಾನಿಯಾಗಿದ್ದು , ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಯಿತು. ಕೂಡಲೇ ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು ಬಳಿಕ ಕ್ರೇನ್ ಮೂಲಕ ಕಂಟೇನರ್ ನ್ನು ತೆರವುಗೊಳಿಸಲಾಯಿತು. ಅಪಘಾತಕ್ಕೆ ಕಂಟೇನರ್ ಚಾಲಕನ ಅತಿ ವೇಗ ಹಾಗೂ ನಿರ್ಲಕ್ಷ್ಯ ಚಾಲನೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ಪಿ.ಎಂ.ಶ್ರೀ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕಿಗೆ ಬೀಳ್ಕೊಡುಗೆ

ಸುಬ್ರಹ್ಮಣ್ಯ: ಗುತ್ತಿಗಾರು ಪಿ.ಎಂ.ಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಉಮಾವತಿ ಎನ್. ಅವರಿಗೆ ಬೀಳ್ಕೊಡುಗೆ ಮತ್ತು ಗೌರವಾರ್ಪಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಉಮಾವತಿ ಮತ್ತು ಸುಬ್ರಹ್ಮಣ್ಯ ಪಿ.ಎಸ್. ದಂಪತಿಯನ್ನು ಚಿನ್ನದ ಉಂಗುರ, ಫಲಪುಷ್ಪ, ಹಾರ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಎಸ್.ಡಿ.ಎಂ.ಸಿ. ಅಧ್ಯಕ್ಷ ವೆಂಕಟ್ ದಂಬೆಕೋಡಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಪ್ರಸನ್ನ ಅಮೆ, ಸದಸ್ಯರಾದ ಅಶೋಕ್ ನೆಕ್ರಾಜೆ, ದಯಾನಂದ ಕನ್ನಡ್ಕ, ತಿಮ್ಮಪ್ಪ ನಾಯ್ಕ ವಿನಯ ಪುಲ್ಲಡ್ಕ ತೇಜಕುಮಾರ್ ಚೆಮ್ನೂರು, ಸುಮಿತ್ರಾ ಮೂಕಮಲೆ, ಕುಲಶ್ರೀ ಬಾಕಿಲ, ಕವಿತಾ ಬಾಕಿಲ, ಕವಿತಾ ಪುಚ್ಚಪ್ಪಾಡಿ, ಪವಿತ್ರ ಕೂವೆಕೋಡಿ, ಗುತ್ತಿಗಾರು ಗ್ರಾ.ಪಂ. ಮಾಜಿ ಸದಸ್ಯ ಜಗದೀಶ್ ಬಾಕಿಲ, ಪ್ರಭಾರ ಮುಖ್ಯ ಶಿಕ್ಷಕಿ ಪೂರ್ಣಿಮಾ ಎ., ಶಿಕ್ಷಕಿಯರಾದ ಸವಿತ ಕುಮಾರಿ ಚೈತ್ರ, ಜೀವಿತ, ಶುಭಲಕ್ಷ್ಮಿ, ಭವ್ಯ, ರಮ್ಯ, ಜ್ಯೋತಿಪ್ರಿಯ, ಆರತಿ, ವೈಷ್ಣವಿ, ಶ್ರೀದೇವಿ, ಜಯಶ್ರೀ, ಶಿಕ್ಷಕ ಅನಿಲ್ ಮತ್ತಿತರರು ಉಪಸ್ಥಿತರಿದ್ದರು.

ಜೂ. 4: ಉಳ್ಳಾಲ ಮೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ಜನ ಸಂಪರ್ಕ ಸಭೆ

ಉಳ್ಳಾಲ: ಮೆಸ್ಕಾಂ ಉಳ್ಳಾಲ ಮತ್ತು ಕೊಣಾಜೆ ಉಪವಿಭಾಗಗಳಿಗೆ ಸಂಬಂಧಿಸಿದ ಜನ ಸಂಪರ್ಕ ಸಭೆಯು ಉಳ್ಳಾಲ ಉಪವಿಭಾಗ ಕಚೇರಿಯಲ್ಲಿ ಜೂ. 4ರಂದು ಬೆಳಿಗ್ಗೆ 11ರಿಂದ 12 ಗಂಟೆಯವರೆಗೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಿ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ, ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 0824-2468333.

ಶಾಸಕರಾದ ಪೊನ್ನಣ್ಣ-ಮಂಥರ್ ಗೌಡರಿಗೆ ಸಚಿವ ಸ್ಥಾನ ನೀಡಲು ಕೊಡಗು ಗೌಡ ಸಮಾಜ ಒತ್ತಾಯ

ಮಡಿಕೇರಿ: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿರುವ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿರುವ ಕೊಡಗು ಗೌಡ ಸಮಾಜವು, ಸಚಿವ ಸಂಪುಟದಲ್ಲಿ ಶಾಸಕರಾದ ಎ.ಎಸ್.ಪೊನ್ನಣ್ಣ ಹಾಗೂ ಡಾ. ಮಂಥರ್ ಗೌಡರಿಗೆ ಸ್ಥಾನ ಕಲ್ಪಿಸುವುದ ರೊಂದಿಗೆ ಪ್ರಮುಖ ಖಾತೆಯನ್ನು ನೀಡಬೇಕೆಂದು ಒತ್ತಾಯಿಸಿದೆ.

ಈ ಕುರಿತು ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿರುವ ಸಮಾಜದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಕೊಡಗಿನ ಜನತೆಯ ಆಕಾಂಕ್ಷೆ ಹಾಗೂ ವಿಶೇಷವಾಗಿ ಕೊಡಗಿನ ಒಕ್ಕಲಿಗ ಜನಾಂಗದ ನಿರೀಕ್ಷೆಯಂತೆ ಕರ್ನಾಟಕ ರಾಜ್ಯದ 25ನೇ ಮುಖ್ಯ ಮುಖ್ಯಂತ್ರಿಗಳಾಗಿ ಅಧಿಕಾರ ಸ್ವೀಕರಿಸುವ ಸುಸಂದರ್ಭ ಕೊಡಗಿನ ಗೌಡರ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ನೇತೃತ್ವದಲ್ಲಿ ಹಾಗೂ ತಾವು ನೀಡಿದ ನೈತಿಕ ಬಲದಿಂದಾಗಿ ಕೊಡಗಿನ ಎರಡು ಪ್ರತಿಷ್ಠಿತ ವಿಧಾನಸಭಾ ಕ್ಷೇತ್ರದಿಂದ ಇಬ್ಬರು ಕಾಂಗ್ರೆಸ್ ಪಕ್ಷದ ಯುವ ಅಭ್ಯರ್ಥಿಗಳು ವಿಜಯ ಸಾಧಿಸಿದ್ದಾರೆ. ನಂತರದ ಮೂರು ವರ್ಷಗಳಲ್ಲಿ ಕೊಡಗಿನ ಶಾಸಕರು ಕೊಡಗು ಜಿಲ್ಲೆಯ ಅಭಿವೃದ್ಧಿಗೆ ಪ್ರಯತ್ನದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇಬ್ಬರು ಶಾಸಕರೂ ಕೊಡಗು ಜಿಲ್ಲೆಯ ಅಭಿವೃದ್ಧಿ ಕಾರ್ಯವನ್ನು ಜಾತ್ಯತೀತವಾಗಿ ನಡೆಸುತ್ತಿದ್ದಾರೆ.

ಈ ಅಭಿವೃದ್ಧಿ ಕಾರ್ಯ ಮುಂದುವರಿಯುವುದಕ್ಕಾಗಿ ತಾವು ರಚಿಸಲಿರುವ ಕರ್ನಾಟಕ ಸರಕಾರದ ನೂತನ ಮಂತ್ರಿಮಂಡಲದಲ್ಲಿ ಎ.ಎಸ್. ಪೊನ್ನಣ್ಣ ಹಾಗೂ ಡಾ. ಮಂಥರ್ ಗೌಡ ಅವರಿಗೆ ಪ್ರಮುಖ ಖಾತೆಯ ಮಂತ್ರಿ ಪದವಿ ನೀಡುವುದರೊಂದಿಗೆ ಕೊಡಗು ಜಿಲ್ಲೆಯ ಅಭಿವೃದ್ಧಿಗೆ ಅವಕಾಶ ಮಾಡಿಕೊಡಬೇಕು ಎಂದು ಗೌಡ ಜನಾಂಗದ ಪರವಾಗಿ ಸಮಾಜದ ಪದಾಧಿಕಾರಿಗಳು ಡಿ.ಕೆ. ಶಿವಕುಮಾರ್ ಅವರ ಗಮನಸೆಳೆದಿದ್ದಾರೆ.

ಮಲ್ಪೆ ಕಡಲ ತೀರದಲ್ಲಿ ಶ್ರೀಕೃಷ್ಣ ಪರಿಸರ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿದ್ದ 'ಮಾತೃ ವಂದನಾ' ಕಾರ್ಯಕ್ರಮ

ಪ್ರತಿಯೊಬ್ಬರೂ ಸತ್ಕಾರ್ಯ ಮಾಡಬೇಕು

ಉಡುಪಿ: ಲೋಕವೇ ಸಮಸ್ತ ಎನ್ನುವ ಭ್ರಮೆಯಲ್ಲಿ ನಾವೆಲ್ಲಾ ಜೀವಿಸುತ್ತಿದ್ದೇವೆ. ಆದರೆ ನಾವು ಈ ಭೂಮಿಯ ಮೇಲಿರುವುದು ಕೆಲವೇ ದಿನಗಳು ಮಾತ್ರ ಎಂಬ ವಾಸ್ತವವನ್ನು ನಾವಿಂದು ಅರಿಯಬೇಕಿದೆ. ಪ್ರಪಂಚದಲ್ಲಿ ಮನುಷ್ಯ ಸಂಬಂಧಗಳು ಶಾಶ್ವತವಲ್ಲ, ನಮಗೆ ದೇವರ ಜೊತೆಗಿನ ಸಂಪರ್ಕ ಮಾತ್ರ ಎಂದಿಗೂ ಶಾಶ್ವತವಾಗಿರುತ್ತದೆ. ಆದ್ದರಿಂದ ದೇವರು ಮತ್ತು ನಮ್ಮ ನಡುವಿನ ಈ ಪರಮ ಸಂಬಂಧ ಹೀಗೆಯೇ ಉಳಿಯಬೇಕಾದರೆ ಪ್ರತಿಯೊಬ್ಬರೂ ಸತ್ಕಾರ್ಯಗಳನ್ನು ಮಾಡಬೇಕು. ಜಡ ಬದುಕು ಬಾಳದೆ ತತ್ವವಾದದ ಚಿಂತನೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂದು ಕೃಷ್ಣಾಪುರ ಮಠದ ಶ್ರೀವಿದ್ಯಾಸಾಗರತೀರ್ಥ ಶ್ರೀಪಾದರು ಅನುಗ್ರಹ ಸಂದೇಶ ನೀಡಿದರು.

ಮಲ್ಪೆ ಕಡಲ ತೀರದಲ್ಲಿ ಶ್ರೀಕೃಷ್ಣ ಪರಿಸರ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿದ್ದ 'ಮಾತೃ ವಂದನಾ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



ಶ್ಲಾಘನೀಯ ಕಾರ್ಯಕ್ರಮ

ಇದೇ ವೇಳೆ ಮಲ್ಪೆ ತೀರದ ಆಧ್ಯಾತ್ಮಿಕ ಮಹತ್ವದ ಕುರಿತು ಮಾತನಾಡಿದ ಶ್ರೀಗಳು, ಜಗದ್ಗುರು ಮಧ್ವಾಚಾರ್ಯರಿಗೆ ಶ್ರೀಕೃಷ್ಣನ ವಿಗ್ರಹ ದೊರೆತ ಪರಮ ಪವಿತ್ರ ಸ್ಥಳವಾದ ಮಲ್ಪೆ ಕಡಲ ತೀರವನ್ನು ಕೇವಲ ಪ್ರವಾಸಿ ತಾಣವಾಗಿ ನೋಡದೆ, ಪ್ರಮುಖ ಆಧ್ಯಾತ್ಮಿಕ ಕೇಂದ್ರವನ್ನಾಗಿ ರೂಪಿಸುವ ಪ್ರಯತ್ನಗಳು ಆಗಬೇಕಿದೆ. ಈ ಮೂಲಕ ಜನರಲ್ಲಿ ಪಾರಮಾರ್ಥಿಕ ಆನಂದ ಸಾಧನೆಗೆ ಹಾಗೂ ಸಚ್ಚಿಂತನೆಗೆ ಪ್ರೇರಣೆ ಸಿಗುವಂತಾಗಬೇಕು ಎಂದರು.

ಇಡೀ ಪ್ರಪಂಚವೇ ಪರಮಾತ್ಮನ ಮನೆ. ನಾವು ಭೂಮಿಯನ್ನು ಮಾತೃ ಸ್ಥಾನದಲ್ಲಿಟ್ಟು ಪೂಜಿಸುತ್ತೇವೆ. ಭೂಮಿಯ ಆರಾಧನೆ ನಡೆದರೆ ಅದು ಸಾಕ್ಷಾತ್ ಹೆತ್ತ ತಾಯಿಯ ಆರಾಧನೆ ನಡೆದಂತೆ. ಮಧ್ವಾಚಾರ್ಯರ ಇಷ್ಟಾರ್ಥ ನೆರವೇರಿಸಿದ ಈ ಪುಣ್ಯಭೂಮಿ ಇಲ್ಲಿಗೆ ಬರುವ ಭಕ್ತರ ಬಯಕೆಗಳನ್ನೂ ಈಡೇರಿಸಲಿದೆ. ಈ ಸ್ಥಳದ ಪಾವಿತ್ರ್ಯತೆ ಹೆಚ್ಚಿಸಲು ಭಜನೆ, ಮಾತೃವಂದನೆಯಂತಹ ಕಾರ್ಯಕ್ರಮಗಳ ಮೂಲಕ ಜನರ ಸಮಾಗಮ ಏರ್ಪಡಿಸಿರುವುದು ಶ್ಲಾಘನೀಯ ಎಂದರು.

ಮನೆ ಮಹಿಳೆಗೆ ಕರ್ಮಯೋಗದ ವೇದಿಕೆ

ದಿಕ್ಸೂಚಿ ಭಾಷಣ ಮಾಡಿದ ವಾಗ್ಮಿ ಹಾಗೂ ಆಧ್ಯಾತ್ಮಿಕ ಚಿಂತಕಿ ಡಾ. ಆರತಿ ವಿ. ಬಿ. ಮಾತನಾಡಿ, ಮನೆವಾರ್ತೆ ಮತ್ತು ಕುಟುಂಬವನ್ನು ನೋಡಿಕೊಳ್ಳುವುದು ಶಿಕ್ಷೆಯಲ್ಲ, ಅದೊಂದು ಪವಿತ್ರ ಜವಾಬ್ದಾರಿ. ಗೃಹಿಣಿಯು ವಾತ್ಸಲ್ಯಮಯಿಯಾಗಿರುವ ಮನೆಯಲ್ಲಿ ಮಾತ್ರ ಶೌರ್ಯವಂತ ಹಾಗೂ ಉದಾತ್ತ ಚಾರಿತ್ರ್ಯವುಳ್ಳ ಸತ್ಪ್ರಜೆಗಳು ಜನ್ಮತಾಳುತ್ತಾರೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಸ್ತುತಿ ಮತ್ತು ನಿಂದನೆಗಳಿಗೆ ಅಂಜದೆ ಕುಟುಂಬವನ್ನು ಪೋಷಿಸುವ ಸ್ತ್ರೀಯ ಕರ್ಮಫಲವನ್ನು ಭಗವಂತನೇ ನೀಡುತ್ತಾನೆ. ಸನಾತನ ಧರ್ಮದಲ್ಲಿ ಸ್ತ್ರೀ ಲಕ್ಷ್ಮೀ ಸ್ವರೂಪಿಣಿಯಾಗಿದ್ದು, ಮನೆ ಆಕೆಗೆ ಕರ್ಮಯೋಗದ ವೇದಿಕೆಯಾಗಿದೆ ಎಂದರು.

ಸಮಾರಂಭದಲ್ಲಿ ಕರ್ನಾಟಕ ಬ್ಯಾಂಕ್‌ನ ಡಿ.ಜಿ.ಎಂ. ವಾದಿರಾಜ್, ಪ್ರತಿಷ್ಠಾನದ ಕಾರ್ಯದರ್ಶಿ ರತ್ನಕುಮಾರ್, ಹಿರಿಯ ಸಂಘಟಕಿ ಉಷಾ ಎ. ಸುವರ್ಣ, ಎಸ್‌ಎನ್‌ಎಸ್ ಎನ್ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ತಾರಾ ಉಮೇಶ್ ಆಚಾರ್ಯ, ಸಂಗೀತ ವಿದುಷಿ ಉಷಾ ಹೆಬ್ಬಾರ್, ಮಣಿಪಾಲ ಮಹಿಳಾ ಸಮಾಜದ ಅಧ್ಯಕ್ಷೆ ವೈಜಯಂತಿ ಕಾಮತ್, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸಂಧ್ಯಾ ರಮೇಶ್, ನಿಕಟಪೂರ್ವ ನಗರಸಭಾ ಸದಸ್ಯೆ ರಶ್ಮಿ ಭಟ್, ಲಕ್ಷ್ಮಿ ಮಂಜುನಾಥ್ ಹಾಗೂ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಜ್ಯೋತಿ ಹೆಬ್ಬಾರ್, ಶೋಭಾ ಉಪಾಧ್ಯಾಯ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

> **ಎಡಪಂಥೀಯರ ಇತಿಹಾಸದ ಭ್ರಮೆ ತಳ್ಳಿಹಾಕಿದ ಚಿಂತಕಿ**
>
> ಪ್ರಾಚೀನ ಭಾರತದಲ್ಲಿ ಸ್ತ್ರೀಯರ ಸಶಕ್ತೀಕರಣವಾಗಿರಲಿಲ್ಲ, ಬ್ರಿಟಿಷರು ಬಂದ ಮೇಲೆಯೇ ಮಹಿಳೆಯರಿಗೆ ಶಿಕ್ಷಣ ದೊರೆತಿದ್ದು ಎಂಬಂತಹ ಸುಳ್ಳು ಭ್ರಮೆಗಳನ್ನು ಎಡಪಂಥೀಯ ಚಿಂತಕರು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬಿತ್ತಿದ್ದಾರೆ. ಆದರೆ ವಾಸ್ತವವಾಗಿ ಭಾರತದ ಇತಿಹಾಸದಲ್ಲಿ ವೇದಾಧ್ಯಯನವನ್ನು ಹೊರತುಪಡಿಸಿ ಉಳಿದೆಲ್ಲಾ ವಿಧದ ಶ್ರೇಷ್ಠ ಶಿಕ್ಷಣವನ್ನು ಹೆಣ್ಣುಮಕ್ಕಳಿಗೆ ನೀಡಲಾಗುತ್ತಿತ್ತು. ಜಗತ್ತಿನಲ್ಲೇ ಅತ್ಯಂತ ಶೌರ್ಯವಂತೆ ಹಾಗೂ ಸಾಕ್ಷರ ಹೆಣ್ಣುಮಕ್ಕಳು ಭಾರತದಲ್ಲಿದ್ದರು ಎಂಬುದಕ್ಕೆ ಝಾನ್ಸಿರಾಣಿ ಲಕ್ಷ್ಮೀಬಾಯಿ, ರಾಣಿ ದುರ್ಗಾವತಿ, ಕಿತ್ತೂರುರಾಣಿ ಚೆನ್ನಮ್ಮ ಹಾಗೂ ಕರಾವಳಿಯ ವೀರರಾಣಿ ಅಬ್ಬಕ್ಕ ಅವರೇ ಸಾಕ್ಷಿ
>
> ■ ಡಾ. ಆರತಿ ವಿ. ಬಿ.

ಕರ್ನಾಟಕ ಗಮಕ ಕಲಾ ಪರಿಷತ್ತು : ಕಟೀಲಿನಲ್ಲಿ ಗಮಕ ಸಪ್ತಾಹ ಉದ್ಘಾಟನೆ



ಕಟೀಲು : ಹಿಂದೆ ಶಾಲೆಗಳಲ್ಲಿ ಕುಮಾರವ್ಯಾಸನ ಭಾರತ, ರಾಮಾಯಣ ಮುಂತಾದ ಕಾವ್ಯ ಪರಂಪರೆಯನ್ನು ತಿಳಿಸುವ ಕಲಿಸುವ ಕೆಲಸ ಆಗುತ್ತಿತ್ತು. ಮತ್ತೆ ಈ ಸಂಪ್ರದಾಯ ಮುಂದುವರಿಯಲಿ ಎಂದು ಶಾರದಾ ವಿದ್ಯಾ ಸಂಸ್ಥೆಗಳ ಮುಖ್ಯಸ್ಥ ಡಾ. ಎಂ. ಬಿ. ಪುರಾಣಿಕ್ ಹೇಳಿದರು.

ಅವರು ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತು ಮಂಗಳೂರು ತಾಲೂಕು ಘಟಕ ಆಧಿಕಸ್ಯ ಆಧಿಕಂಫಲಂಗಮಕಸಪ್ತಾಹ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಟೀಲು ದೇಗುಲದ ಅರ್ಚಕರಾದ ಲಕ್ಷ್ಮೀನಾರಾಯಣ ಆಸ್ರಣ್ಣ ಅರ್ಚಕ ಕಮಲಾದೇವಿಪ್ರಸಾದ. ಆಸ್ರಣ್ಣ ಕಸಾಪ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು, ಭುವನಾಭಿರಾಮ ಉಡುಪ, ಗಮಕ ವಾಚನಕಾರ ಯಜ್ಞೇಶ ಆಚಾರ್ಯ ಹೊಸಬೆಟ್ಟು, ವ್ಯಾಖ್ಯಾನಕಾರ ಪಶುಪತಿ ಶಾಸ್ತ್ರಿ ಮತ್ತಿತರರಿದ್ದರು. ಯಶೋದ ಕುಮಾರಿ ಸ್ವಾಗತಿಸಿದರು.

ಗಮಕ ಕಲಾ ಪರಿಷತ್ತು ಮಂಗಳೂರು ಘಟಕ ಅಧಿಕ ಮಾಸದಲ್ಲಿ ಶರವು ದೇವಸ್ಥಾನ, ಮಂಗಳಾದೇವಿ ದೇವಸ್ಥಾನ, ಕಟೀಲು ದೇವಸ್ಥಾನ, ಕುಡುಪು ದೇವಸ್ಥಾನಗಳಲ್ಲಿ ಒಂದು ತಿಂಗಳ ಕಾಲ ಗಮಕ ಸಪ್ತಾಹ ನಾಲ್ಕು ಕಡೆಗಳಲ್ಲಿ ನಡೆಯಲಿದೆ. ಕಟೀಲಿನಲ್ಲಿ ಶ್ರೀಮದ್ ಭಾಗವತದ ಕಥೆಗಳನ್ನು ಪ್ರಸ್ತುತಪಡಿಸಲಾಗುವುದು. ಅಲ್ಲದೆ ಈಗಾಗಲೇ 42 ಮನೆಗಳಲ್ಲಿ ಗಮಕ ವಾಚನ ನಡೆಸಿದ್ದೇವೆ ಎಂದು ಗಮಕ ಕಲಾ ಪರಿಷತ್ತು ಅಧ್ಯಕ್ಷ ಸುರೇಶ್ ರಾವ್ ಅತ್ತೂರು ಹೇಳಿದರು.

ಬಿಟಿಡಿಸಿ :ನೂತನ ನಿರ್ದೇಶಕರ ಅವಿರೋಧ ಆಯ್ಕೆ: ಅಧ್ಯಕ್ಷರಾಗಿ ಮೋಹನ್ ಕುಂಬ್ಳೇಕರ್



ಮಂಗಳೂರು: ಕರ್ನಾಟಕ, ಕೇರಳ, ಗೋವಾಗಳನ್ನೊಳಗೊಂಡ ಬಹುರಾಜ್ಯ ಸಹಕಾರಿ ಸಂಸ್ಥೆ ಭಾರತೀ ಟೂರಿಸಂ ಡೆವಲಪ್‌ಮೆಂಟ್ ಕೋ-ಆಪರೇಟಿವ್ ಲಿಮಿಟೆಡ್ (ಬಿಟಿಡಿಸಿ)ನ ನೂತನ ಆಡಳಿತ ಮಂಡಳಿಗೆ ನಿರ್ದೇಶಕರ ಆಯ್ಕೆ ಅವಿರೋಧವಾಗಿ ನಡೆದಿದ್ದು, ಅಧ್ಯಕ್ಷರಾಗಿ ಹಾಲಿ ಅಧ್ಯಕ್ಷ ಮೋಹನ್ ಕುಮಾರ್ ಕುಂಬ್ಳೇಕರ್ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಗಣೇಶ್ ಕುಮಾರ್ ಪಾರಕಟ್ಟ ಆಯ್ಕೆಯಾಗಿದ್ದಾರೆ.

ಮೇ 17 ಮತ್ತು ಮೇ 25ರಂದು ಅನುಕ್ರಮವಾಗಿ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ ಮತ್ತು ಪದಾಧಿಕಾರಿಗಳ ಆಯ್ಕೆ ನಡೆದಿದ್ದು, 2026-31ರವರೆಗಿನ 5ವರ್ಷಗಳ ಅವಧಿಗೆ ಈ ಆಯ್ಕೆ ನಡೆದಿದೆ. 2004ರ ಮಾ.18ರಂದು ಅಸ್ತಿತ್ವಕ್ಕೆ ಬಂದಿರುವ ಸಂಸ್ಥೆಯು ಮಂಗಳೂರಿನಿಂದ ಕಾರ್ಯಾಚರಿಸುತ್ತಿದೆ.ನಿರ್ದೇಶಕರಾಗಿ ಗಣೇಶ್ ಶೆಣೈ, ನರಸಿಂಹ ಕಾಮತ್, ಭಾರತೀ ಜಿ.ಭಟ್, ಸೋಮಪ್ಪ ನಾಯ್ಕ್ ಎ., ಕೈಲಾಸಮಣಿ ಯು.,ಸತ್ಯನ್ ಪಿ., ನಾರಾಯಣನ್ ಪಿ.ವಿ., ಸ್ವಾತಿ ಎ.ಪ್ರಭು, ಸುಭಾಶ್ ಎಸ್.ಹಲರ್ನ್‌ಕರ್, ಸುರೇಶ್ ಬಿ.ಬೋರ್ಕರ್,ಸಾಗರ್ ಎಂ.ಭಟ್, ಸುರೇಶ್ ಡಿ.ಡಿಚೋಲ್ಕರ್, ಜಾನು ಜಿ.ಗೌಡೆ ಅವರು ಆಯ್ಕೆಯಾಗಿರುವುದಾಗಿ ಬಿಟಿಡಿಸಿಯ ಸಿಇಒ ಕೆ.ಲಕ್ಷ್ಮೀ ಗೌರಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸಂಸ್ಥೆಯು ಪ್ರವಾಸೋದ್ಯಮ ಸಂಬಂಧಿ ಪ್ಯಾಕೇಜ್ ಟೂರ್,ವಿಮಾನ, ರೈಲು, ಬಸ್ಸು ಟಿಕೆಟ್‌ಗಳ ವಿತರಣೆ ಸೇರಿದಂತೆ ಇತ್ಯಾದಿ ಯೋಜನೆಗಳನ್ನು ಹೊಂದಿದೆ.

ರಾಯಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ರೂ. 1 ಸಾವಿರದ ಠೇವಣಿ ಪತ್ರ



ಬಂಟ್ವಾಳ: ಪ್ರತೀ ವಿದ್ಯಾರ್ಥಿಗೆ ಹುಟ್ಟಿನಿಂದ ಶಿಕ್ಷಣ ಮುಗಿಯುವ ತನಕ ಸರ್ಕಾರವು ತಲಾ ರೂ 1 ಲಕ್ಷ ಮೊತ್ತ ವಿನಿಯೋಗಿಸುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿ ಆಧುನಿಕತೆಗೆ ತಕ್ಕಂತೆ ಪ್ರತಿಭಾನ್ವಿತ ಶಿಕ್ಷಕರಿಂದ ಗುಣಮಟ್ಟದ ದ್ವಿಭಾಷಾ ಶಿಕ್ಷಣವೂ ಸಿಗುತ್ತಿದೆ ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿವೃತ್ತ ಮುಖ್ಯಶಿಕ್ಷಕ ಕೆ.ರಮೇಶ ನಾಯಕ್ ಹೇಳಿದ್ದಾರೆ.

ತಾಲೂಕಿನ ರಾಯಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ನಡೆದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಲೊರೆಟ್ಟೋ ಹಿಲ್ಸ್ ರೋಟರಿ ಕ್ಲಬ್ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ್ ವಿತರಿಸಿ ಅವರು ಮಾತನಾಡಿದರು.

ಆರಂಭದಲ್ಲಿ ವಿದ್ಯಾರ್ಥಿಗಳನ್ನು ಮೆರವಣಿಗೆಯಲ್ಲಿ ಕರೆತರಲಾಯಿತು.

ಇದೇ ವೇಳೆ ದಾನಿಗಳು ನೀಡಿದ ಉಚಿತ ಪುಸ್ತಕ, ಕೊಡೆ ಮತ್ತಿತರ ಕಲಿಕಾ ಸಾಮಾಗ್ರಿ ವಿತರಿಸಲಾಯಿತು. ಮುಖ್ಯಶಿಕ್ಷಕಿ ಜಾನೆಟ್ ಕಾನ್ಸೆಸೊ ಇವರ ವತಿಯಿಂದ ಹೊಸ ವಿದ್ಯಾರ್ಥಿಗಳಿಗೆ ತಲಾ ರೂ. 1 ಸಾವಿರದಂತೆ ಠೇವಣಿ ಪತ್ರ ವಿತರಿಸಿದರು.

ಪಶು ವೈದ್ಯಾಧಿಕಾರಿ ಡಾ.ಉಮೇಶ್ ಕಿರಣ್, ಸಿ ಆರ್ ಪಿ ಪ್ರೇಮಲತಾ ಶುಭ ಹಾರೈಸಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಚಂದ್ರಾವತಿ ಲೋಕೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೃಷಿಕ ವಸಂತ ಗೌಡ ಮುದ್ದಾಜೆ, ರೋಟರಿ ಕ್ಲಬ್ ಕಾರ್ಯದರ್ಶಿ ಮೋಹನ್ ಕೆ. ಶ್ರೀಯಾನ್ ರಾಯಿ, ಶಿಕ್ಷಕಿಯರಾದ ಬೇಬಿ, ತನುಜಾ, ನಿಖಿತಾ ಮತ್ತಿತರರು ಇದ್ದರು.

ಮುಖ್ಯಶಿಕ್ಷಕಿ ಜಾನೆಟ್ ಕಾನ್ಸೆಸೊ ಸ್ವಾಗತಿಸಿದರು. ಶಿಕ್ಷಕ ಸಿದ್ದಪ್ಪ ಕಡೂರು ವಂದಿಸಿ, ಕಾರ್ಯಕ್ರಮ ನಿರೂಪಿಸಿದರು.

ಪ್ರಧಾನಿ ಮೋದಿ 134ನೇ 'ಮನ್ ಕೀ ಬಾತ್' ವೀಕ್ಷಣೆ

ಉಡುಪಿ: ಪ್ರಧಾನಿ ನರೇಂದ್ರ ಮೋದಿ ಅವರ 'ಮನ್ ಕೀ ಬಾತ್' ಕಾರ್ಯಕ್ರಮದ 134ನೇ ಆವೃತ್ತಿಯ ರಾಜ್ಯ ಮಟ್ಟದ ನೇರ ಪ್ರಸಾರದ ವೀಕ್ಷಣೆಯು ಮೇ 31ರಂದು ಉಡುಪಿ ಜಿಲ್ಲಾ ಬಿಜೆಪಿ ವತಿಯಿಂದ ಬಿಜೆಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ನೇತೃತ್ವದಲ್ಲಿ ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾದ ಸಂಯೋಜನೆಯಲ್ಲಿ ವಿವಿಧ ಚರ್ಚ್‌ಗಳ ಧರ್ಮ ಗುರುಗಳು, ಭಗಿನಿಯರು ಮತ್ತು ಅಲ್ಪಸಂಖ್ಯಾತ ಸಮುದಾಯದ ಪ್ರಮುಖರ ಉಪಸ್ಥಿತಿಯಲ್ಲಿ ಅಧಿಕೃತ ವೀಕ್ಷಣಾ ಕೇಂದ್ರ ಉಡುಪಿ ಕಕ್ಕುಂಜೆಯ ಪಾಸ್ಟರಲ್ ಸೆಂಟರ್ 'ಅನುಗ್ರಹ'ದಲ್ಲಿ ನಡೆಯಿತು.



ಈ ಸಂದರ್ಭದಲ್ಲಿ ಶಾಸಕರುಗಳಾದ ಸುರೇಶ್ ಶೆಟ್ಟಿ ಗುರ್ಮೆ, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ, ವಿಧಾನ ಪರಿಷತ್ ಸದಸ್ಯರುಗಳಾದ ಡಾ. ಧನಂಜಯ ಸರ್ಜಿ, ಕಿಶೋರ್ ಕುಮಾರ್ ಬೊಟ್ಯಾಡಿ, ಮಾಜಿ ವಿಭಾಗ ಪ್ರಭಾರಿ ಕೆ.ಉದಯ ಕುಮಾರ್ ಶೆಟ್ಟಿ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ. ಅನಿಲ್ ಥೋಮಸ್, ಜಿಲ್ಲಾಧ್ಯಕ್ಷ ರುಡಾಲ್ಫ್ ಡಿ'ಸೋಜಾ, ರಾಜ್ಯ ಕಾರ್ಯದರ್ಶಿ ಜೆಸೇಲ್ ಡಿಸೋಜ, ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಜಿ. ಸುವರ್ಣ, ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಶ್ಯಾಮಲಾ ಎಸ್ ಕುಂದರ್, 'ಮನ್ ಕೀ ಬಾತ್' ಜಿಲ್ಲಾ ಸಂಚಾಲಕ ಶಿವಕುಮಾರ್ ಅಂಬಲಪಾಡಿ, ಕಲ್ಯಾಣಪುರ ಚರ್ಚಿನ ಫಾ. ಫ್ರಾನ್ಸಿಸ್ ಲೂಯಿಸ್, ಪಾಸ್ಟರಲ್ ಸೆಂಟರ್ ನಿರ್ದೇಶಕ ಫಾ! ವಿನ್ಸೆಂಟ್ ಕ್ರಾಸ್ತ ಸಂಪದ ಸಂಚಾಲಕ ಫಾ. ರೆಜಿನಾಲ್ಡ್, ಸಾಸ್ತಾನ ಚರ್ಚಿನ ಫಾ. ಸುನೀಲ್, ಸಹಿತ ಹಲವು ಧರ್ಮ ಗುರುಗಳು, ಧರ್ಮ ಭಗಿನಿಯರು, ಕೆಥೋಲಿಕ್ ಸಭಾ ಉಡುಪಿ ಜಿಲ್ಲಾಧ್ಯಕ್ಷ ಮೆಲ್ವಿನ್ ಆರಾನ್ಹ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಕಮಲಾಕ್ಷ ಹೆಬ್ಬಾರ್, ಉಡುಪಿ ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಪ್ರಮುಖರಾದ ಸಲೀಂ ಅಂಬಾಗಿಲು, ಹರೀಶ್ ಶೆಟ್ಟಿ ಚೇರ್ಕಾಡಿ, ಬಾಲಕೃಷ್ಣ ಶೆಟ್ಟಿ, ಹರೀಶ್ ಶೆಟ್ಟಿ, ಟಿ.ಜಿ. ಹೆಗ್ಡೆ, ಗಿರಿಧರ್ ಆಚಾರ್ಯ, ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾ ಪದಾಧಿ ಕಾರಿಗಳಾದ ಶೇಕ್ ಆಸಿಫ್, ಮೊಹಮ್ಮದ್ ಅಫ್ಸರ್, ಮೈಕಲ್ ಡಿಸೋಜ, ಗ್ಲೆನ್ ಮೋನಿಸ್, ನವೀನ್ ಡಿಸೋಜ, ನೋಯೆಲ್ ಮಣಿಪಾಲ್, ಜಾನ್ಸನ್ ಕಲ್ಯಾಣಪುರ, ಜೋಯೆಲ್ ಮೆಂಡೋನ್ಸಾ, ಅನಿತಾ ಬಿಲಿಂಡ ಡಿಸೋಜ, ಸುನೀತಾ ಡಿಸೋಜ, ಇಜಾದ್ ಕಾರ್ಕಳ ಮತ್ತು ಅಲ್ಪಸಂಖ್ಯಾತ ಸಮುದಾಯದ ಪ್ರಮುಖರು ಉಪಸ್ಥಿತರಿದ್ದರು.

ಕುಶಾಲನಗರ ಭಾಗದಲ್ಲಿ ನಾಲ್ಕು ದಿನಗಳಿಂದ ಹದವಾದ ಮಳೆ

ಉಳುಮೆಯಲ್ಲಿ ತೊಡಗಿಕೊಂಡಿರುವ ರೈತರು

ಕುಶಾಲನಗರ: ಕುಶಾಲನಗರ ತಾಲೂಕು ವ್ಯಾಪ್ತಿಯಲ್ಲಿ ಕಳೆದ ನಾಲ್ಕು ದಿನಗಳಿಂದ ಹದವಾದ ಮಳೆಯಾಗಿದ್ದು, ರೈತರು ಭೂಮಿ ಉಳುಮೆಯಲ್ಲಿ ತೊಡಗಿಕೊಂಡಿದ್ದಾರೆ.

ಕುಶಾಲನಗರ ತಾಲೂಕು ಅತ್ತ ಮಲೆನಾಡೂ ಅಲ್ಲದ ಇತ್ತ ಬಯಲು ಸೀಮೆಯೂ ಅಲ್ಲದ ಅರೆ ಮಲೆನಾಡು ಪ್ರದೇಶವಾಗಿದ್ದು, ಈ ವ್ಯಾಪ್ತಿಯ 9.ಗ್ರಾಮ ಪಂಚಾ ಯತ್ ವ್ಯಾಪ್ತಿಯ 45. ಕ್ಕೂ ಹೆಚ್ಚು ಉಪಗ್ರಾಮಗಳು ಮಳೆಯಾಶ್ರಿತ ಕೃಷಿ ಭೂಮಿಯನ್ನೇ ಹೊಂದಿವೆ. ಇದೀಗ ಬೇಸಿಗೆ ಕಾಲ ಮುಗಿಯುವ ಹಂತದಲ್ಲಿದ್ದು, ಮೇ ಕೊನೆಯ ವಾರದಲ್ಲಿ ಈ ವ್ಯಾಪ್ತಿಯಲ್ಲಿ ಹದವಾದ ಮಳೆಯಾಗಿರುವುದರಿಂದ ಭೂಮಿಯೂ ಉಳುಮಗೆ ಹದಗೊಂಡಿದೆ.

ಈ ವಾತಾವರಣ ಮುಂದಿನ ಸಾಲಿನ ಕೃಷಿ ಚಟುವಟಿಕೆಗೆ ಅನುಕೂಲವಾಗುವುದರಿಂದ ತೊಯ್ದಿರುವ ಭೂಮಿಯನ್ನು ಟ್ರ್ಯಾಕ್ಟರ್ ಮೂಲಕ ಉಳುಮೆ ಮಾಡುವ ಕಾರ್ಯದಲ್ಲಿ ರೈತರು ನಿರತರಾಗಿದ್ದಾರೆ.

ಕುಶಾಲನಗರ ತಾಲೂಕಿನ ಕೂಡುಮಂಗಳೂರು, ಕೂಡಿಗೆ, ಸೀಗೆಹೊಸೂರು, ಹೆಬ್ಬಾಲೆ, ತೊರೆನೂರು, ಶಿರಂಗಾಲ, ಬಾಣಾವರ, ಅಳುವಾರ, ಹುದುಗೂರು, ಮದಲಾಪುರ ಸೇರಿದಂತೆ ಹಲವು ಗ್ರಾಮಗಳಲ್ಲಿ ಹೆಚ್ಚಾಗಿ ಮೆಕ್ಕೆಜೋಳ ಬೆಳೆಯಲಾಗುತ್ತಿದ್ದು, ಮುಂದಿನ ತಿಂಗಳುಗಳಲ್ಲಿ ಮೆಕ್ಕೆಜೋಳ ಬೇಸಾಯಕ್ಕೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಮೊದಲ ಹಂತವಾಗಿ ಉಳುಮೆ ಮಾಡುವಲ್ಲಿ ಈ ಭಾಗದ ನೂರಾರು ರೈತರು ಕಾರ್ಯೋನ್ಮುಖರಾಗಿದ್ದಾರೆ.

ಈ ಭಾಗದ ಅನೇಕ ರೈತರು ಕೊಳವೆ ಬಾವಿಯನ್ನು ಹೊಂದಿರುವುದರಿಂದ ನೀರಾವರಿ ಸೌಕರ್ಯ ಮಾಡಿಕೊಂಡು ಹೈನುಗಾರಿಕೆಗೆ ಸಹಕಾರವಾಗುವ ಸಿಹಿ ಗೆಣಸು, ಮತ್ತು ಇತರೆ ಉಪ ಬೆಳೆಗಳನ್ನು ಬೆಳೆಯಲು ಮುಂದಾಗಿದ್ದಾರೆ.



ಇದೀಗ ಉತ್ತಮವಾದ ಮಳೆ ಬಿದ್ದಿರುವ ಹಿನ್ನೆಲೆಯಲ್ಲಿ ಈಗಾಗಲೇ ಬೆಳೆದಿರುವ ಶುಂಠಿ ಮತ್ತು ಸಿಹಿ ಗೆಣಸು ಬೆಳೆಗೆ ಅನುಕೂಲವಾಗಿದ್ದು, ಅದಕ್ಕೆ ಬೇಕಾಗುವ ರಸಗೊಬ್ಬರ, ಮತ್ತು ಮಣ್ಣು ಕಟ್ಟುವುದು, ಕಳೆತೆಗೆಯುವ ಕೆಲಸದಲ್ಲಿ ರೈತರು ನಿರತರಾಗಿದ್ದಾರೆ.

ಕಿರುಸುದ್ದಿ

ಶಾರದಾ ಕಾಲೇಜಿನ ಸಂಸ್ಕೃತ ವಿದ್ಯಾರ್ಥಿಗಳಿಗೆ ಹೊಸದಿಲ್ಲಿ ವಿವಿಯಿಂದ ವಿದ್ಯಾರ್ಥಿ ವೇತನ

ಮಂಗಳೂರು : ಹೊಸದಿಲ್ಲಿಯ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯ ನೀಡಲ್ಪಡುವ 2025-26 ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಮಂಗಳೂರು ಕೊಡಿಯಾಲ್‌ಬೈಲ್‌ನ ಶಾರದಾ ಪ.ಪೂ ಕಾಲೇಜಿನ ಸಂಸ್ಕೃತ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಪದವಿ ಪೂರ್ವಕಾಲೇಜಿನಲ್ಲಿ ಸಂಸ್ಕೃತವನ್ನು ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡುವ ಹಾಗೂ ವಾರ್ಷಿಕ ಪರೀಕ್ಷೆಯಲ್ಲಿ ಶೇ 95% ಅಂಕ ಪಡೆದ ಒಟ್ಟು 15 ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಪಡೆದಿರುತ್ತಾರೆ. ಪ್ರತಿ ವಿದ್ಯಾರ್ಥಿಗೆ ತಲಾ 6000 ರೂಪಾಯಿಯಂತೆ ಒಟ್ಟು ಹದಿನೈದು ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರುತ್ತಾರೆ ಎಂಬುದಾಗಿ ಶಾರದಾಪ.ಪೂ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ರಮೇಶ್ ಆಚಾರ್ಯ ನಾರಳ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ. ಶಾರದಾಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್, ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ದೇಶಕ ಸಮೀರ್ ಪುರಾಣಿಕ್ ಹಾಗೂ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ನಾಯಕ್ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ. 2025-26 ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಸಂಸ್ಕೃತ ಭಾಷೆಯಲ್ಲಿಒಟ್ಟು 59 ವಿದ್ಯಾರ್ಥಿಗಳು ಪೂರ್ಣ ಅಂಕವನ್ನು ಪಡೆದಿದ್ದು, ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದೆ.

ರುಡ್‌ಸೆಟ್‌ನಲ್ಲಿ 45 ದಿನಗಳ ಉಚಿತ ಕಂಪ್ಯೂಟರ್ ಡಿಟಿಪಿ ತರಬೇತಿ

ಬೆಳ್ತಂಗಡಿ: ರುಡ್‌ಸೆಟ್ ಸಂಸ್ಥೆ, ಉಜಿರೆ ವತಿಯಿಂದ 45 ದಿನಗಳ ಉಚಿತ ಕಂಪ್ಯೂಟರ್ ಡಿಟಿಪಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
ಈ ತರಬೇತಿಯು ಜೂನ್ 8ರಿಂದ ಜುಲೈ 22ರವರೆಗೆ ನಡೆಯಲಿದ್ದು, ಕಂಪ್ಯೂಟರ್ ಮೂಲಭೂತ ಜ್ಞಾನ, ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್, ಖಖಿ ಛ್ಟಜ್ಞಿಛಿ, ಈಐಐಕ , ಡಿಸೈನಿಂಗ್ ಹಾಗೂ ಸ್ವಉದ್ಯೋಗ ಮತ್ತು ಉದ್ಯೋಗಾವಕಾಶಗಳಿಗೆ ಸಂಬಂಧಿಸಿದ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುವುದು. ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗುವುದು. ತರಬೇತಿ ಸ್ಥಳ: ರುಡ್‌ಸೆಟ್ ಸಂಸ್ಥೆ, ಸಿದ್ಧವನ, ಉಜಿರೆ ಆಸಕ್ತ ಅಭ್ಯರ್ಥಿಗಳು ಈ ಕೆಳಗಿನ ಲಿಂಕ್ ಮೂಲಕ ಅರ್ಜಿಸಲ್ಲಿಸಬಹುದು: ಜಿಠಿಠಿಟಃ://ಛ್ಟಿಞ್ಛ. ಜ್ಝಿ/9ಔಜಿಉ1ಙಿಡಏಖಅಡ21ಡ್ಕಖ7
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 6364561982 / 8296770307 / 9980885900, 9448348569 / 8861514706 / 9591044014 / 9902594791, ದೂರವಾಣಿ: 08256-236404.

ಎಸ್ಸೆಸ್ಸೆಲ್ಸಿ ದ್ವಿತೀಯ ಪರೀಕ್ಷೆಯಲ್ಲಿ ಶ್ರೀವತ್ಸ ಕುಳಮರ್ವಗೆ 622 ಅಂಕ



ಶಿರ್ವ: ಕಟಪಾಡಿ ಎಸ್‌ವಿಎಸ್/ ಎಸ್‌ವಿಎಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲಾ ವಿದ್ಯಾರ್ಥಿಯಾಗಿದ್ದ ಶ್ರೀವತ್ಸ ಕುಳಮರ್ವ ಎಸ್ಸೆಸ್ಸೆಲ್ಸಿ ದ್ವಿತೀಯ ಪರೀಕ್ಷೆಯಲ್ಲಿ ವಿಜ್ಞಾನದಲ್ಲಿ 100ರಲ್ಲಿ 100 ಅಂಕಗಳಿಸಿ ಒಟ್ಟು 622 ಅಂಕ ಗಳಿಸಿದ್ದಾನೆ. ವಿದ್ಯಾರ್ಥಿಯ ಈ ಸಾಧನೆಗಾಗಿ ಶಾಲಾ ಸಂಚಾಲಕರು, ಆಡಳಿತ ಮಂಡಳಿ, ಶಿಕ್ಷಕರು ಈ ಸಾಧನೆಗಾಗಿ ಅಭಿನಂದಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಪುತ್ತೂರು: ನಗರದ ಹೊಟೇಲ್ ಒಂದರಿಂದ ದ್ವಿಚಕ್ರ ವಾಹನದಲ್ಲಿ ತೆರಳಿದ ವ್ಯಕ್ತಿಯೋರ್ವರು ನಾಪತ್ತೆಯಾಗಿರುವ ಕುರಿತು ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮಧುಸೂದನ್ ಶೆಣೈ(47) ಎಂಬವರು ನಾಪತ್ತೆಯಾದವರು. ಮೇ 30ರಂದು ಸಂಜೆ 4.30ಕ್ಕೆ ಪುತ್ತೂರಿನ ದರ್ಬೆ ಹೆರಿಟೇಜ್ ಫಿಶ್ ಲ್ಯಾಂಡ್ ಫ್ಯಾಮಿಲಿ ರೆಸ್ಟೋರೆಂಟ್ ಹೊಟೇಲ್‌ನಿಂದ ದ್ವಿಚಕ್ರ ವಾಹನ ಸಮೇತ ತೆರಳಿದ್ದ ಅವರು, ಮನೆಗೂ ಬಾರದೆ, ಸಂಬಂಧಿಕರ ಮನೆಗೂ ತೆರಳದೆ, ಹೊಟೇಲ್‌ಗೂ ಬಾರದೆ ಕಾಣೆಯಾಗಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಕುರಿತು ಕುಟುಂಬಸ್ಥರು ನೀಡಿದ ದೂರಿನ ಮೇರೆಗೆ ಪುತ್ತೂರು ನಗರ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಮಧುಸೂದನ್ ಶೆಣೈ ಅವರ ಬಗ್ಗೆ ಮಾಹಿತಿ ಸಿಕ್ಕವರು ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಪುತ್ತೂರು ನಗರ ಠಾಣೆಗೆ ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಜೆಇಇ ಅಡ್ವಾನ್ಸ್ಡ್, ಜೆಇಇ ಮೈನ್ಸ್ ಪರೀಕ್ಷೆ: ಬಿ.ವಿಶ್ರುತ್ ಕೃಷ್ಣಗೆ 79ನೇ ರ್‍ಯಾಂಕ್

ಮಂಗಳೂರು: ಬಡೆಕ್ಕಾ ವಿಶ್ರುತ್‌ಕೃಷ್ಣ ಆರ್.ಭಟ್ ಅವರು ಜೆಇಇ ಅಡ್ವಾನ್ಸ್ಡ್ 2026ರಲ್ಲಿ ಆಲ್ ಇಂಡಿಯಾ(ಎಐಆರ್) 79ನೇ ರ್‍ಯಾಂಕ್ ಮತ್ತು ಜೆಇಇ ಮೈನ್ಸ್ 2026ರಲ್ಲಿ ಆಲ್ ಇಂಡಿಯಾ 335ನೇ ರ್‍ಯಾಂಕ್ ಗಳಿಸಿದ್ದಾರೆ. 99.9803481 ಪರ್ಸಂಟೈಲ್ ಪಡೆದಿರುವ ವಿಶ್ರುತ್‌ಕೃಷ್ಣ ರಾಜಸ್ಥಾನದ ಕೋಟ ಮಾ ಭಾರತಿ ಸೀನಿಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡಿದ್ದರು. ದ.ಕ., ಉಡುಪಿ ಜಿಲ್ಲೆಗೆ ಟಾಪರ್ ಅಲ್ಲದೆ ಕರ್ನಾಟಕ ರಾಜ್ಯದ ಅಗ್ರ 10 ವಿದ್ಯಾರ್ಥಿಗಳ ಪೈಕಿ ಒಬ್ಬರಾಗಿದ್ದಾರೆ.



ಇವರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ(ಎನ್‌ಐಟಿಕೆ)ದಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಬಡೆಕ್ಕಾ ರಾಮಚಂದ್ರ ಭಟ್ ಮತ್ತು ಮಂಗಳೂರಿನ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ, ಸಲಹೆಗಾರ್ತಿ ಡಾ.ಪೂರ್ಣಿಮಾ ಆರ್.ಭಟ್ ದಂಪತಿ ಪುತ್ರ.

ಕೋಳಿ ಅಂಕಕ್ಕೆ ದಾಳಿ

ವಿಟ್ಲ: ಪುಣಚ ಗ್ರಾಮದ ಪರಿಯಾಲ್ತಡ್ಕದಲ್ಲಿ ಅಕ್ರಮವಾಗಿ ಕೋಳಿ ಅಂಕಕ್ಕೆ ದಾಳಿ ನಡೆಸಿದ ವಿಟ್ಲ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, ಸೊತ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಪುಣಚ ನಿವಾಸಿಗಳಾದ ದಿವಾಕರ ಪೂಜಾರಿ(46) ಹಾಗೂ ಯಶ್ವಂತ್(34) ಬಂಧಿಸಲ್ಪಟ್ಟ ಆರೋಪಿಗಳು. 4 ಕೋಳಿ, ರೂ.4,145 ನಗದು, ಕೋಳಿ ಅಂಕಕ್ಕೆ ಬಳಸಿದ ಕೋಳಿ ಅಂಕದ ಕತ್ತಿ(ಬಾಳು) ಹಾಗೂ ಇತರ ಸೊತ್ತುಗಳನ್ನು ವಶಕ್ಕೆ ಪಡೆದು, ವಿಟ್ಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಮುಳಿಯ ಗೋಲ್ಡ್ ಎಂಡ್ ಡೈಮಂಡ್ಸ್ ವತಿಯಿಂದ ನಡೆಯುತ್ತಿರುವ ಡೈಮಂಡ್ ಫೆಸ್ಟ್ ಅಂಗವಾಗಿ ಖ್ಯಾತ ಪಾಕತಜ್ಞೆ ಹಾಗೂ ಮಾಸ್ಟರ್ ಶೆಫ್ ಖ್ಯಾತಿಯ ಅವನಿ ಶರ್ಮಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಸಂಸ್ಥೆಯ ಚೇರ್ಮನ್ ಕೇಶವ ಪ್ರಸಾದ್ ಮುಳಿಯ ಅವರೊಂದಿಗೆ ಖ್ಯಾತ ಸೀರೆ ಬ್ರ್ಯಾಂಡ್ ರಾಧ್ವಿ ಸಾರೀಸ್ ಮಾಲಕಿ ರಂಜಿತಾ ಸಿದ್ದೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮುಳಿಯ ಶಾಖಾ ವ್ಯವಸ್ಥಾಪಕ ಸುಬ್ರಹ್ಮಣ್ಯ ಭಟ್ಟ ಹಾಗೂ ಸಿನಿಮಾಟೋಗ್ರಾಫರ್ ಪ್ರಣವ್ ಭಟ್ಟ ಉಪಸ್ಥಿತರಿದ್ದರು.

ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ
ಅಪರಾಧಿಗೆ 5 ವರ್ಷ ಶಿಕ್ಷೆ-ದಂಡ

ಮಡಿಕೇರಿ: ಅಪ್ರಾಪ್ತ ಬಾಲಕಿಯರಿಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿಗೆ ಇಲ್ಲಿನ ನ್ಯಾಯಾಲಯವು ಐದು ವರ್ಷದ ಸಜೆ ಹಾಗೂ 16 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ಬಂಗಾಳ ಮೂಲದ ಆರೋಪಿ ಆನಂದಿ ಮಂಡಲ್ ಎಂಬಾತನೇ ಶಿಕ್ಷೆಗೆ ಗುರಿಯಾದವನಾಗಿದ್ದಾನೆ.

ಮಡಿಕೇರಿ ಗ್ರಾಮಾಂತರ ಠಾಣಾ ಸರಹದ್ದಿಗೆ ಸೇರಿದ ಕಡಗದಾಳು ಗ್ರಾಮದ ಕಾಫಿ ತೋಟವೊಂದರ ಲೈನ್ ಮನೆಯಲ್ಲಿ ವಾಸವಿದ್ದ ನೊಂದ ಬಾಲಕಿಯರಿಬ್ಬರ ತಾಯಿ ಸ್ವಂತ ಕೆಲಸದ ನಿಮಿತ್ತ ತನ್ನ ಊರಾದ ರಾಯಚೂರು ಜಿಲ್ಲೆಯ ಸಿಂಧನೂರಿಗೆ ಹೋಗಬೇಕಾದ ಹಿನ್ನೆಲೆಯಲ್ಲಿ ತನ್ನ ಇಬ್ಬರು ಅಪ್ರಾಪ್ತ ಹೆಣ್ಣು ಮಕ್ಕಳನ್ನು ತನ್ನ ಪರಿಚಯಸ್ಥನಾದ ಬಂಗಾಳ ಮೂಲದ ಆರೋಪಿ ಆನಂದಿ ಮಂಡಲ್‌ನ ಜವಾಬ್ದಾರಿಯಲ್ಲಿ ಬಿಟ್ಟು ಹೋಗಿದ್ದರೆನ್ನಲಾಗಿದೆ.

ಆ ಬಳಿಕ ಕೋವಿಡ್-19 ಲಾಕ್‌ಡೌನ್ ಶುರುವಾಗಿದ್ದರಿಂದ ಹಿಂದಿರುಗಲು ಅಸಾಧ್ಯವಾಗಿದ್ದು, ಆ ಸಂದರ್ಭದಲ್ಲಿ ಅಪ್ರಾಪ್ತ ಬಾಲಕಿಯರನ್ನು ನೋಡಿಕೊಳ್ಳುತ್ತಿದ್ದ ಆನಂದಿ ಮಂಡಲ್ ಬಾಲಕಿಯರಿಬ್ಬರ ಮೇಲೆ ಹಲವಾರು ಬಾರಿ ಲೈಂಗಿಕ ಹಲ್ಲೆ, ಮಾನಭಂಗ ಮಾಡಿದ್ದಾಗಿ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯ ಉಪನಿರೀಕ್ಷಕರಾಗಿದ್ದ ಚಂದ್ರಶೇಖರ್ ಹೆಚ್.ವಿ. ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದ ದೋಷರೋಪಣ ಪತ್ರದ ವಿಚಾರಣೆ ನಡೆಸಿದ ಕೊಡಗು ಜಿಲ್ಲಾ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಸಿ.ಕೆ. ಬಸವರಾಜು ಅವರು ಆರೋಪಿಯ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ ಐಪಿಸಿ ಮತ್ತು ಪೋಕ್ಸೋ ಕಾಯಿದೆಯ ಅಪರಾಧಗಳಿಗೆ ಒಟ್ಟು 5 ವರ್ಷದ ಸಜೆ ಮತ್ತು ರೂ.16 ಸಾವಿರ ದಂಡ ವಿಧಿಸಿದ್ದಾರೆ. ಅಲ್ಲದೆ ನೊಂದ ಬಾಲಕಿಯರಿಬ್ಬರಿಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಸರ್ಕಾರದಿಂದ ನೀಡುವಂತೆ ಆದೇಶಿಸಿದ್ದಾರೆ.

ಪ್ರಕರಣದಲ್ಲಿ ಸರಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಬಿ.ಎಸ್. ರುದ್ರಪ್ರಸನ್ನ ಅವರು ವಾದ ಮಂಡಿಸಿದರು.

ತುರ್ತು ಪರಿಹಾರಕ್ಕೆ 3.25 ಕೋಟಿ ರೂ. ಲಭ್ಯ : ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ
ಮಳೆಗಾಲ ಎದುರಿಸಲು ಜಿಲ್ಲಾಡಳಿತ ತಯಾರಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲ ಎದುರಿಸಲು ಜಿಲ್ಲಾಡಳಿತ ಸರ್ವ ಸಿದ್ಧತೆ ನಡೆಸಿದೆ.

ತಹಶೀಲ್ದಾರ್ ಹಂತದಲ್ಲಿ ಜಿಲ್ಲೆಯ 9 ತಾಲೂಕುಗಳಲ್ಲಿ ತುರ್ತು ಪರಿಹಾರ ಕ್ರಮಗಳಿಗಾಗಿ ಒಟ್ಟು 3.25 ಕೋಟಿ ರೂ. ಲಭ್ಯ ಇದ್ದು, ಅಗತ್ಯವಿದ್ದಲ್ಲಿ ಇನ್ನೂ ಹೆಚ್ಚಿನ ಅನುದಾನ ಒದಗಿಸಲಾಗುವುದು ಎಂದು ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದರು.

ಜೂ.4ರಿಂದ ಜಿಲ್ಲೆಯಲ್ಲಿ ಮುಂಗಾರು ಆರಂಭವಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಸಂಭವನೀಯ ಕೃತಕ ನೆರೆ, ಪ್ರವಾಹ ಸೇರಿದಂತೆ ಪ್ರಾಕೃತಿಕ ವಿಕೋಪದ ಪರಿಸ್ಥಿತಿಗಳನ್ನು ಎದುರಿಸಲು ಜಿಲ್ಲಾಡಳಿತ ಸಿದ್ಧವಾಗಿದೆ. ಜಿಲ್ಲೆಯಲ್ಲಿ ಒಟ್ಟು 115 ಕಾಳಜಿ ಕೇಂದ್ರಗಳನ್ನು ಗುರುತಿಸಲಾಗಿದೆ. ಮಳೆಗಾಲದ ಸಂದರ್ಭ ರಾತ್ರಿ ವೇಳೆ ಪ್ರಾಕೃತಿಕ ವಿಕೋಪಗಳಾದ ಸಂದರ್ಭ ಅಧಿಕಾರಿಗಳು ದೂರವಾಣಿ ಕರೆ ಸ್ವೀಕರಿಸುವುದಿಲ್ಲ ಎಂಬ ದೂರಿನ ಹಿನ್ನೆಲೆಯಲ್ಲಿ 24X7 ಮೊಬೈಲ್ ಕರೆಗಳನ್ನು ಡೈವರ್ಟ್ ಮಾಡಲು ಸೂಚನೆ ನೀಡಲಾಗಿದೆ. ಕರೆ ಬಂದಾಗ ಅಧಿಕಾರಿಗಳು ಸ್ವೀಕರಿಸದೇ ಇದ್ದರೆ ಕಂಟ್ರೋಲ್ ರೂಂಗೆ ಕರೆ ಹೋಗುವಂತೆ ಮಾಡಲಾಗುತ್ತಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು

ಮಂಗಳೂರಿಗೆ ಮಹಾನಗರ ಪಾಲಿಕೆಯ 60 ವಾರ್ಡ್‌ಗಳಿಗೆ ಇಂಜಿನಿಯರ್‌ಗಳನ್ನು, 223 ಗ್ರಾ.ಪಂ. ವ್ಯಾಪ್ತಿಯಲ್ಲಿ ಪಿಡಿಒಗಳು, 13 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಾಧಿಕಾರಿಗಳನ್ನು ಇನ್ಸಿಡೆಂಟ್ ಕಮಾಂಡರ್‌ಗಳಾಗಿ ನೇಮಕ ಮಾಡಲಾಗಿದೆ. ಜಿಲ್ಲಾಡಳಿತದಿಂದ ವಿವಿಧ ಪ್ರದೇಶಗಳಿಗೆ ನೇಮಿಸಲಾಗಿರುವ ಇನ್ಸಿಡೆಂಟ್ ಕಮಾಂಡರ್‌ಗಳು ಜಾಗೃತರಾಗಿದ್ದು, ಸಾರ್ವಜನಿಕ ದೂರಗಳಿಗೆ ಸ್ಪಂದಿಸುವುದು, ಮತ್ತು ಜಿಲ್ಲಾಧಿಕಾರಿ ಕಚೇರಿಯ ನಿಯಂತ್ರಣ ಕೊಠಡಿಯೊಳಗೆ ನಿರಂತರ ಸಂಪರ್ಕದಲ್ಲಿರಲು ನಿರ್ದೇಶನ ನೀಡಲಾಗಿದೆ ಎಂದವರು ಹೇಳಿದರು.

25 ಸಿಬ್ಬಂದಿಗಳ ಎನ್‌ಡಿಆರ್‌ಎಫ್ ತಂಡ ಪುತ್ತೂರು ತಾಲೂಕಿನಲ್ಲಿ ನಿಯೋಜಿಸಲಾಗಿದ್ದು,10 ಸಿಬ್ಬಂದಿಯ ಎಸ್‌ಡಿಆರ್‌ಎಫ್ ತಂಡವನ್ನು ಸುಬ್ರಹ್ಮಣ್ಯದಲ್ಲಿ ನಿಯೋಜಿಸಲಾಗಿದೆ. ತುರ್ತು ಸಂದರ್ಭದಲ್ಲಿ ಕಾರ್ಯ ನಿರ್ವಹಿಸಲು 28 ಬೋಟ್ ಕಟ್ಟರ್, ಲೈಫ್ ಜಾಕೆಟ್, ಜೀವ ರಕ್ಷಕರು, ಜೆಸಿಬಿ ಯಂತ್ರ, ಟಿಪ್ಪರ್, ಕ್ರೇನ್‌ಗಳನ್ನು ಸಿದ್ಧಗೊಳಿಸಲಾಗಿದೆ. ಸಂಭಾವ್ಯ ಪ್ರವಾಹ ಹಾಗೂ ಭೂಕುಸಿತ ಪ್ರದೇಶಗಳಲ್ಲಿ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ತುರ್ತು ರಕ್ಷಣಾ ಕಾರ್ಯಾಚರಣೆಗಾಗಿ ಸರ್ವ ಸನ್ನದ್ಧ ಆಗಿರಬೇಕಾಗಿರುವ ಹಿನ್ನೆಲೆಯಲ್ಲಿ ಸದ್ರಿ ಪ್ರದೇಶಗಳಲ್ಲಿ ಅಗತ್ಯ ಸಿಬ್ಬಂದಿ ಹಾಗೂ ಯಂತ್ರೋಪಕರಣಗಳನ್ನು ವಿವಿಧ ಇಲಾಖೆಯವರು ಸನ್ನದ್ಧವಾಗಿಡಲು ಸೂಚಿಸಲಾಗಿದೆ. ಜೂ.1ರಿಂದ 2 ತಿಂಗಳ ಕಾಲ ಮೀನುಗಾರಿಕೆ ನಿಷೇಧವಿರಲಿದೆ. ಜಿಲ್ಲೆಯ ಎಲ್ಲಾ ಕಿಂಡಿ ಅಣೆಕಟ್ಟುಗಳ ಗೇಟ್‌ಗಳಲ್ಲಿ ಮರದ ದಿಮ್ಮಿ, ಹಾಗೂ ಇತರ ತ್ಯಾಜ್ಯ ಸಂಗ್ರಹವಾಗದಂತೆ ಸಣ್ಣ ನೀರಾವರಿ ಇಲಾಖೆ ವತಿಯಿಂದ ಕ್ರಮ ವಹಿಸಲು ನಿರ್ದೇಶನ ನೀಡಲಾಗಿದೆ. ಪ್ರವಾಸಿಗರು, ಸಾರ್ವಜನಿಕರು ಮಳೆಗಾಲದಲ್ಲಿ ಗುಡ್ಡ ಪ್ರದೇಶದ ಚಾರಣಕ್ಕೆ, ನದಿ ತೀರ, ಸಮುದ್ರ ತೀರಕ್ಕೆ ತೆರಳದಂತೆ ಸೂಚನೆ ನೀಡುವ ಜತೆಗೆ ಎಲ್ಲಾ ರೀತಿಯ ಅಗತ್ಯ ಸುರಕ್ಷಾ ಕ್ರಮಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ವಿವರ ನೀಡಿದರು.

ಜಿ.ಪಂ. ಸಿಇಒ ನರ್ವಾಡೆ ವಿನಾಯಕ ಕಾರ್ಬಾರಿ, ಅಪರ ಜಿಲ್ಲಾಧಿಕಾರಿ ರಾಜು ಉಪಸ್ಥಿತರಿದ್ದರು.



> **ಜಲಸಿರಿ ಅಥವಾ ಒಳಚರಂಡಿಗೆ ಸಂಬಂಧಿಸಿ ನಡೆಯುತ್ತಿರುವ ಕಾಮಗಾರಿಯ ಹಿನ್ನೆಲೆಯಲ್ಲಿ ಮಳೆಗಾಲದಲ್ಲಿ ಮುಂದಿನ ಎರಡೂವರೆ ತಿಂಗಳ ಅವಧಿಯಲ್ಲಿ ಯಾವುದೇ ಹೊಸತಾಗಿ ಗುಂಡಿ ಅಗೆಯುವುದು ಅಥವಾ ರಸ್ತೆ ಅಗೆತ ಕಾರ್ಯಕ್ಕೆ ಅವಕಾಶ ಇರುವುದಿಲ್ಲ. ದ.ಕ. ಜಿಲ್ಲೆಯಲ್ಲಿ ಒಟ್ಟು 92 ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಲಾಗಿದೆ. ಬೆಳ್ತಂಗಡಿಯಲ್ಲಿ ಗರಿಷ್ಠ 32 ಹಾಗೂ ಉಳ್ಳಾಲದಲ್ಲಿ ಕನಿಷ್ಠ 3 ಸಂಭವನೀಯ ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಲಾಗಿದೆ. 88 ಕಡೆ ಸಂಭವನೀಯ ಭೂಕುಸಿತ ಪ್ರದೇಶವೆಂದು ಗುರುತಿಸಲಾಗಿದೆ. ಇದು ಕೂಡಾ ಬೆಳ್ತಂಗಡಿಯಲ್ಲಿ ಗರಿಷ್ಠ 35ಹಾಗೂ ಪುತ್ತೂರಿನಲ್ಲಿ ಕನಿಷ್ಠ 3 ಕಡೆ ಭೂಕುಸಿತ ಪ್ರದೇಶಗಳನ್ನು ಗುರುತಿಸಲಾಗಿದೆ.**
>
> ■ ದರ್ಶನ್ ಎಚ್.ವಿ., ದ.ಕ. ಜಿಲ್ಲಾಧಿಕಾರಿ

ಕುಸಿಯುವ ಭೀತಿಯಲ್ಲಿರುವ ಕಟ್ಟಡಗಳನ್ನು ಪತ್ತೆಹಚ್ಚಿ ಮಾಹಿತಿ ನೀಡಿ : ಜಿಲ್ಲಾಧಿಕಾರಿ ದರ್ಶನ್ ಎಚ್.ವಿ.

ಶಾಲೆ ಮತ್ತು ಅಂಗನವಾಡಿ ದುರಸ್ತಿ ಕಾರ್ಯ ಅನುದಾನದ ಕೊರತೆ ಹಾಗೂ ಇತರ ಕಾರಣಗಳಿಂದ ತುರ್ತಾಗಿ ನಡೆಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ಈಗಾಗಲೇ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮೂಲಕ 91 ಶಾಲೆಗಳು, 137 ಅಂಗನವಾಡಿಗಳ ದುರಸ್ತಿಗೆ ಅನುಮೋದನೆ ನೀಡಲಾಗಿದೆ. ಅಂಗನವಾಡಿಗಳಿಗೆ 2.5 ಕೋ. ರೂ. ಹಾಗೂ ಶಾಲೆಗಳನ್ನು 1.5 ಕೋ. ರೂ. ವೆಚ್ಚದಲ್ಲಿ ತುರ್ತಾಗಿ ದುರಸ್ತಿಗೆ ಅನುಮೋದನೆ ನೀಡಲಾಗಿದೆ. ಇದಲ್ಲದೆ, ಈ ಬಾರಿ ಮಳೆಗಾಲದಲ್ಲಿ ಯಾವುದೇ ಶಾಲೆ, ಅಂಗನವಾಡಿ, ಆಸ್ಪತ್ರೆಗಳು ದುರಸ್ತಿ ಅಗತ್ಯವಿದ್ದಲ್ಲಿ ಮುಂದಿನ ದಿನಗಳಲ್ಲಿ ಅದಕ್ಕೂ ಅನುದಾನ ಒದಗಿಸಲಾಗುವುದು. ತುಂಬಾ ಪ್ರಮಾಣದ ದುರಸ್ತಿ ಇರುವ ಸಂಸ್ಥೆಗಳಲ್ಲಿ ಮಕ್ಕಳನ್ನಾಗಲಿ, ಸಾರ್ವಜನಿಕರನ್ನಾಗಲಿ ಇರದಂತೆ, ಅಂತಹ ಕಟ್ಟಡಗಳನ್ನು ಉಪಯೋಗಿಸದಂತೆ ಎಲ್ಲಾ ತಾಲೂಕಿನ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಮಾತ್ರವಲ್ಲದೆ, ಸಂಬಂಧಪಟ್ಟ ಇಲಾಖೆಗಳು ಅಂತಹ ದುಸ್ಥಿತಿಯಲ್ಲಿರುವ ಕುಸಿಯುವ ಭೀತಿಯಲ್ಲಿರುವ ಕಟ್ಟಡಗಳನ್ನು ಪತ್ತೆಹಚ್ಚಿ ಮಾಹಿತಿ ನೀಡುವಂತೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದರು.

ಪೆರಿಯ ಕೊಲೆ ಆರೋಪಿಗಳಿಗೆ ಸಾಮೂಹಿಕ ಪೆರೋಲ್ ವಿವಾದ
ಇನ್ನುಳಿದ ನಾಲ್ವರ ಪೆರೋಲ್‌ಗೂ ತಡೆ

ಕಾಸರಗೋಡು: ಪೆರಿಯ ಕಲ್ಯೋಟ್‌ನಲ್ಲಿ ಕೆಲವು ವರ್ಷಗಳ ಹಿಂದೆ ಸಂಭವಿಸಿದ ಜೋಡಿ ಕೊಲೆ ಪ್ರಕರಣದ ಆರು ಮಂದಿ ಆರೋಪಿಗಳಿಗೆ ಸಾಮೂಹಿಕ ಪೆರೋಲ್ ನೀಡಿದ ವಿಚಾರ ವಿವಾದವಾಗುತ್ತಿರುವ ನಡುವೆ ಇದೀಗ ಬಾಕಿ ಉಳಿದ ನಾಲ್ವರು ಆರೋಪಿಗಳ ಪೆರೋಲ್‌ಗೂ ತಡೆಹಿಡಿಯಲಾಗಿದೆ ಎಂದು ತಿಳಿದು ಬಂದಿದೆ.

ಪೆರೋಲ್ ಲಭಿಸಿದ್ದರೂ ನಾಲ್ವರು ಆರೋಪಿಗಳನ್ನು ಭದ್ರತಾ ಕಾರಣ ನೀಡಿ ಜೈಲಿನಿಂದ ಹೊರಗೆ ಹೋಗಲು ಬಿಡಲಾಗಿಲ್ಲ ಎಂದು ವರದಿಯಾಗಿದೆ.

ಪ್ರಕರಣದ ಆರು ಮಂದಿ ಆರೋಪಿಗಳನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿದ ನಂತರ ವಿವಾದ ಭುಗಿಲೆದ್ದಿತು. ನಿಯಮಗಳನ್ನು ಉಲ್ಲಂಘಿಸಿ ಎಲ್ಲಾ ಆರೋಪಿಗಳಿಗೆ ಒಟ್ಟಿಗೆ ಪೆರೋಲ್ ನೀಡಲಾಗಿದೆ ಎಂಬ ದೂರು ಕೇಳಿ ಬಂದಿತ್ತು.

ಕಣ್ಣೂರು ಕೇಂದ್ರ ಕಾರಾಗೃಹದಲ್ಲಿರುವ ಪೆರಿಯ ಕಲ್ಯೋಟ್ ಪ್ರಕರಣದ ಎಲ್ಲಾ ಹತ್ತು ಮಂದಿ ಆರೋಪಿಗಳಿಗೆ ಒಟ್ಟಿಗೆ ಪೆರೋಲ್ ನೀಡಲಾಗಿತ್ತು. ಮೇ 18 ರಂದು ಪ್ರಥಮ ಆರೋಪಿ ಪೀತಾಂಬರನ್ ಸೇರಿದಂತೆ ಐದು ಆರೋಪಿಗಳನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು. ಮೇ 20ರಂದು ಆರನೇ ಆರೋಪಿಯನ್ನೂ ಬಿಡುಗಡೆ ಮಾಡಲಾಯಿತು. ಇದು ವ್ಯಾಪಕ ಟೀಕೆಗೆ ಕಾರಣವಾಯಿತು.



> ▸▸ **ಪ್ರಕರಣದ ಆರು ಮಂದಿ ಆರೋಪಿ ಗಳನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿದ ನಂತರ ವಿವಾದ ಭುಗಿಲೆದ್ದಿತು.**

ಘಟನೆ ವಿವಾದವಾಗುತ್ತಿದ್ದಂತೆ ನೂತನ ಗೃಹ ಸಚಿವ ರಮೇಶ್ ಚೆನ್ನಿತ್ತಲ ವರದಿಯನ್ನು ಕೋರಿದರು ಮತ್ತು ತನಿಖೆಗೆ ಆದೇಶಿಸಿದರು. ಆರೋಪಿಗಳ ಸಾಮೂಹಿಕ ಪೆರೋಲ್‌ನಲ್ಲಿ ಗಂಭೀರ ಉಲ್ಲಂಘನೆಗಳು ನಡೆದಿರುವುದು ತನಿಖೆಯಲ್ಲಿ ಕಂಡುಬಂದಿದೆ. ಪೆರೋಲ್ ನೀಡಲು ಜಿಲ್ಲಾ ಪರೀಕ್ಷಣಾಧಿಕಾರಿ ಮತ್ತು ಸ್ಥಳೀಯ ಪೊಲೀಸರ ವರದಿಗಳನ್ನು ಕೋರಲಾಗಿಲ್ಲ ಮತ್ತು ಸ್ಥಳೀಯ ಕಾನೂನು ಹಾಗೂ ಸುವ್ಯವಸ್ಥೆಯನ್ನು ಪರಿಶೀಲಿಸಲಾಗಿಲ್ಲ ಎಂದು ಸ್ಪಷ್ಟಗೊಂಡಿದೆ.

2019ನೇ ಫೆಬ್ರವರಿ 17ರಂದು ಕಾಸರಗೋಡಿನ ಪೆರಿಯ ಕಲ್ಯೋಟ್‌ನಲ್ಲಿ ಜೋಡಿ ಕೊಲೆ ನಡೆಯಿತು. ಬೈಕ್‌ನಲ್ಲಿ ಹೋಗುತ್ತಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರಾದ ಶರತ್‌ಲಾಲ್ ಮತ್ತು ಕೃಪೇಶ್ ಅವರನ್ನು ಆರೋಪಿಗಳು ಕಲ್ಯೋಟ್ ಕುರಂಕರ ರಸ್ತೆಯಲ್ಲಿ ತಡೆದು ಕ್ರೂರವಾಗಿ ಹಲ್ಲೆ ನಡೆಸಿದ್ದರು. ಘಟನೆ ರಾತ್ರಿ 7.30ರ ಸುಮಾರಿಗೆ ನಡೆದಿತ್ತು.

ಇರಿತಕ್ಕೊಳಗಾದ ಕೃಪೇಶ್ ಸ್ಥಳದಲ್ಲೇ ಸಾವನ್ನಪ್ಪಿದರು ಮತ್ತು ಶರತ್‌ಲಾಲ್ ಮಂಗಳೂರಿನ ಆಸ್ಪತ್ರೆಗೆ ಸಾಗಿಸುವ ದಾರಿಮಧ್ಯೆ ಮೃತಪಟ್ಟಿದ್ದರು. ಪ್ರಕರಣದಲ್ಲಿ ಪೀತಾಂಬರನ್ ಸೇರಿದಂತೆ ಹತ್ತು ಮಂದಿ ಆರೋಪಿಗಳನ್ನು ನ್ಯಾಯಾಲಯ ತಪ್ಪಿತಸ್ಥರೆಂದು ಘೋಷಿಸಿ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. 22 ತಿಂಗಳ ವಿಚಾರಣೆಯ ನಂತರ ಪ್ರಕರಣದ ತೀರ್ಪು ಹೊರಬಿದ್ದಿದೆ. ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಉಳಿದ ಹತ್ತು ಮಂದಿ ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ.

ಶಾರದಾ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ ಪ್ರಾರಂಭೋತ್ಸವ

ಮಂಗಳೂರು: ಶಾರದಾ ಪದವಿ ಪೂರ್ವ ಕಾಲೇಜನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳನ್ನು ಶ್ಲಾಘಿಸಿ, ಈ ಎರಡು ವರ್ಷಎಂಬುದು ತಪಸ್ಸು. ಇಲ್ಲಿ ಸಮಯವನ್ನು ವ್ಯರ್ಥಮಾಡದೆ ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಂಡಾಗ ನಿಮ್ಮ ಗುರಿಯನ್ನು ತಲುಪಲು ಸಾಧ್ಯ, ಜೊತೆಗೆ ಫಲಿತಾಂಶ ದೊರೆತು ಭವಿಷ್ಯವು ಉಜ್ವಲವಾಗುವುದರಲ್ಲಿಎರಡುಮಾತಿಲ್ಲ. ಹಾಗಂತ ಬರೇ ಪುಸ್ತಕದ ಹುಳುಗಳಾಗದೆ ಇತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ಮಾತ್ರ ವಿದ್ಯಾರ್ಥಿಜೀವನದಲ್ಲಿ ಪರಿಪೂರ್ಣತೆಯನ್ನು ಕಾಣಲು ಸಾಧ್ಯ. ಹದಿಹರೆಯದ ಹಂತದಲ್ಲಿ ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ಸಂಯಮದಿಂದ ಅಭ್ಯಾಸದಲ್ಲಿ ತೊಡಗಿ, ಯಶಸ್ಸು ಗಳಿಸಿ, ಕಾಲೇಜು ಹಾಗೂ ಹೆತ್ತವರಿಗೆ ಕೀರ್ತಿಯನ್ನು ತಂದುಕೊಡುವಂತಾಗಬೇಕು ಎಂದು ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಬಿ. ಪುರಾಣಿಕರು ಅಭಿಪ್ರಾಯಪಟ್ಟರು. ಅವರು ಕಾಲೇಜಿನ ಧ್ಯಾನಮಂದಿರದಲ್ಲಿ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.



> ▸▸ **ಸಮಯವನ್ನು ವ್ಯರ್ಥಮಾಡದೆ ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಂಡಾಗ ನಿಮ್ಮ ಗುರಿಯನ್ನು ತಲುಪಲು ಸಾಧ್ಯ**
>
> ▸▸ **ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ಪರಿಪೂರ್ಣತೆಯನ್ನು ಕಾಣಲು ಸಾಧ್ಯ.**

ಶಾರದಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ನಾಯ್ಕ್ ಶಿಕ್ಷಣದ ಮಹತ್ವ ಹಾಗೂ ವಿವಿಧ ಸ್ಪರ್ಧಾತ್ಮಕ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಉಪ ಪ್ರಾಂಶುಪಾಲೆ ಅರುಣಾಕುಮಾರಿ ಅವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳಾ ದ ವಿದ್ಯುನ್ಮಾನ ವಿಜ್ಞಾನ ವಿಭಾಗದ ಮುಖ್ಯಸ್ಥ ಗುರುರಾಜ ಬಿ.ಅವರು ಕಾಲೇಜಿನ ನಿಯಮ ಹಾಗೂ ಪ್ರಾಣಾಯಾಮದ ಬಗ್ಗೆ ತಿಳಿಸಿಕೊಟ್ಟರು. ಸಂಸ್ಕೃತ ಉಪನ್ಯಾಸಕ ರಮೇಶ್ ಆಚಾರ್ಯ ಅವರು ಕಾಲೇಜಿನ ಪ್ರಾರ್ಥನೆಯನ್ನು ತಿಳಿಸಿಕೊಟ್ಟರು. ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ರಶ್ಮಿ ದಿನೇಶ್ ಕಾರ್ಯಕ್ರಮ ನಿರೂಪಿಸಿದರು.

ಹೆಬ್ರಿ ಪೊಲೀಸರ ಕ್ಷಿಪ್ರ ಕಾರ್ಯಾಚರಣೆ । ಆಭರಣಗಳು, ಕಾರು ವಶಕ್ಕೆ । ಇನ್ನೊಬ್ಬ ಆರೋಪಿಗಾಗಿ ತೀವ್ರ ಶೋಧ
ಮನೆಯಿಂದ ಚಿನ್ನಾಭರಣ ಕಳವು: ಮೂವರು ಆರೋಪಿಗಳ ಸೆರೆ

ಹೆಬ್ರಿ: ಹೆಬ್ರಿ ತಾಲೂಕು ಅನಂತನಗರ ಎಸ್ ಆರ್‌ಎಸ್ ಶಾಲೆಯ ಬಳಿಯ ಕೀರ್ತನ ಪ್ರಭು ಎಂಬವರ ಮನೆಯಲ್ಲಿ ಮೇ 24 ರಂದು ಜನರು ನಿದ್ರೆ ಮಾಡಿಕೊಂಡಿದ್ದ ಸಂದರ್ಭದಲ್ಲಿ ಕಳ್ಳರು ಮನೆಯ ಹಿಂಭಾಗದ ಕಿಟಕಿಯ ಚಿಲಕದ ಕೊಂಡಿಯನ್ನು ಮೀಟಿ ತೆಗೆದು ಮನೆಯ ಒಳಗೆ ಪ್ರವೇಶಿಸಿ ಗಾಡ್ರೇಜ್ ಕಪಾಟಿನ ಬೀಗವನ್ನು ಒಡೆದು ಲಾಕರ್‌ನಲ್ಲಿ ಇದ್ದ ಸುಮಾರು 49,42,000 ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಮತ್ತು ಸುಮಾರು 3,95,000 ರೂಪಾಯಿ ಮೌಲ್ಯದ ಬೆಳ್ಳಿ ಆಭರಣಗಳನ್ನು ಮತ್ತು ಸುಮಾರು 6,60,000 ರೂಪಾಯಿ ಮೌಲ್ಯದ ಚಿನ್ನದ ಹೊದಿಕೆ ಇರುವ ವಜ್ರದ ಆಭರಣಗಳನ್ನು ಒಟ್ಟು ಸುಮಾರು ರೂಪಾಯಿ 59,77,000 ಮೌಲ್ಯದ ಸ್ವತ್ತುಗಳನ್ನು ಕಳವು ಮಾಡಿಕೊಂಡು ಹೋಗಿದ್ದರು.

ಸದರಿ ಪ್ರಕರಣದ ಪತ್ತೆ ಬಗ್ಗೆ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಹರಿರಾಮ ಶಂಕರ್ ಐಪಿಎಸ್ ಅವರ ಆದೇಶದಂತೆ ಉಡುಪಿ ಜಿಲ್ಲಾ ಪೊಲೀಸ್ ಹೆಚ್ಚುವರಿ ಪೊಲೀಸ್ ಅಧಿಕಾರಿ ಸುಧಾಕರ ಎಸ್. ನಾಯಕ್ ಅವರ ನಿರ್ದೇಶನದಂತೆ ಕಾರ್ಕಳ ಉಪ ವಿಭಾಗದ ಡಿವೈಎಸ್ಪಿ ಎಸ್ ವಿಜಯಪ್ರಸಾದ್ ರವರ ಮಾರ್ಗದರ್ಶನದಲ್ಲಿ ಕಾರ್ಕಳ ಪೊಲೀಸ್ ವೃತ್ತ ನಿರೀಕ್ಷಕರಾದ ಮಂಜಪ್ಪ ಡಿ ಆರ್ ಮತ್ತು ಕಾರ್ಕಳ ವೃತ್ತ ಪ್ರಭಾರ ಸಿಪಿಐ ರಾಘವೇಂದ್ರ ರವರು ಹೆಬ್ರಿ ಪೊಲೀಸ್ ಠಾಣಾ ಪಿಎಸ್‌ಐಗಳಾದ ರವಿ ಬಿ. ಕೆ. ಮತ್ತು ಚಂದ್ರ ಏ. ಕೆ., ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ಪಿಎಸ್‌ಐ ಪ್ರಸನ್ನ ಎಂ. ಎಸ್., ಶಿರ್ವ ಪೊಲೀಸ್ ಠಾಣಾ ಪಿಎಸ್‌ಐ ಮಂಜುನಾಥ ಮರಬದ, ಪಡುಬಿದ್ರಿ ಪೊಲೀಸ್ ಠಾಣಾ ಎಎಸ್‌ಐ ರಾಜೇಶ್ ಪಿ. ಅವರನ್ನು ಒಳಗೊಂಡ ವಿಶೇಷ ಅಪರಾಧ ಪತ್ತೆ ದಳವನ್ನು ರಚಿಸಿ ತಮಿಳುನಾಡು ಚೆನ್ನೈ ಪೆರೂರು ಮೂಲದ, ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಚೆರ್ಕಳ ಮುಟ್ಟತ್ತೋಡಿ ಚೆರಿಯಾಲಂಬಾಡಿ ವಾಸಿ ಕಾಸರಗೋಡು ರಫ್ಸೀನ್ ಸಲೀಂ, ಮೂಡಬಿದ್ರೆಯ ಮಿಜಾರು ಗ್ರಾಮದ ಹರೀಶ್ ಶೆಟ್ಟಿ ಮತ್ತು ಕಾಸರಗೋಡು ಜಿಲ್ಲೆಯ ನೆಕ್ರಾಜೆ ಗ್ರಾಮದ ನೆಲ್ಲಿಕಟ್ಟೆ ಚೆನ್ನಡ್ಕ ನಿವಾಸಿ ಮಹಮ್ಮದ್ ಸಫ್ವಾನ್ ಎಂಬವರನ್ನು ದಸ್ತಗಿರಿ ಮಾಡಿ ಕಳವಾದ 37,87,800 ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಮತ್ತು ಬೆಳ್ಳಿ ಆಭರಣಗಳನ್ನು ಹಾಗೂ 4 ಲಕ್ಷ ರೂಪಾಯಿ ಮೌಲ್ಯದ ಮಾರುತಿ ಆಲ್ಟೋ ಕಾರನ್ನು ವಶಪಡಿಸಿಕೊಂಡಿದ್ದಾರೆ. ಇನ್ನೊಬ್ಬ ಆರೋಪಿಯ ದಸ್ತಗಿರಿಗೆ ಬಾಕಿ ಇದ್ದು ಉಳಿದ ಚಿನ್ನಾಭರಣಗಳ ಸ್ವಾಧೀನಕ್ಕೆ ಬಾಕಿ ಇದೆ.







ಸದರಿ ಪ್ರಕರಣದಲ್ಲಿ ಆರೋಪಿ ದಸ್ತಗಿರಿ ಮತ್ತು ಸ್ವತ್ತು ಸ್ವಾಧೀನತಾ ಕಾರ್ಯದಲ್ಲಿ ಹೆಬ್ರಿ ಪೊಲೀಸ್ ಠಾಣಾ ಹೆಚ್ ಸಿ ರಾಜಕುಮಾರ್, ಅವಿನಾಶ್, ಪಿ ಸಿ ಕಿರಣ, ಅಜೆಕಾರು ಪೊಲೀಸ್ ಠಾಣಾ ಹೆಚ್ ಸಿ ಸತೀಶ, ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ಪಿ ಸಿ ಸಿದ್ದರಾಯಪ್ಪ, ಸಂತೋಷ , ತನಿಖಾ ಸಹಾಯಕರಾಗಿ ಹೆಬ್ರಿ ಪೊಲೀಸ್ ಠಾಣಾ ಹೆಚ್ ಸಿ ರಘು ಮೊಘವೀರ, ಕಾರ್ಕಳ ವೃತ್ತ ನಿರೀಕ್ಷಕರ ಕಚೇರಿಯ ಪಿಸಿ ಶಶಿಕುಮಾರ್, ಕಾರ್ಕಳ ಡಿವೈಎಸ್ಪಿ ಕಚೇರಿಯ ಸಿಬ್ಬಂದಿ ಶಿವಾನಂದ ಪೂಜಾರಿ ಭಾಗವಹಿಸಿದ್ದರು.

ಉಡುಪಿ ಜಿಲ್ಲಾ ಪೊಲೀಸ್ ಕಚೇರಿಯ ಸಿಡಿಆರ್ ವಿಭಾಗದ ಸಿಬ್ಬಂದಿ ದಿನೇಶ್ ಮತ್ತು ನಿತಿನ್, ಜಿಲ್ಲಾ ಬೆರಳು ಮುದ್ರೆ ಘಟಕದ ತಜ್ಞೆ ಪೊಲೀಸ್ ಇನ್ಸ್‌ಪೆಕ್ಟರ್ ಎಲ್. ಮೋಹನ ಕುಮಾರಿ ಹಾಗೂ ಅವರ ಸಿಬ್ಬಂದಿ ಸಹಕರಿಸಿದ್ದಾರೆ.

ಚುನಾವಣೆಯಲ್ಲಿ ಮುಸ್ಲಿಮರಿಗೆ ಆದ್ಯತೆ ನೀಡಿ: ಕೈಗೆ ಒಕ್ಕೂಟ ಆಗ್ರಹ


ಬೆಂಗಳೂರು: ಕರ್ನಾಟಕದಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳು ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ಜೂ.18ರಂದು ನಡೆಯಲಿರುವ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡುವಂತೆ ಕರ್ನಾಟಕ ರಾಜ್ಯ ಮುಸ್ಲಿಮ್ ಸಂಘಟನೆಗಳ ಒಕ್ಕೂಟ ಕಾಂಗ್ರೆಸ್ ಪಕ್ಷವನ್ನು ಆಗ್ರಹಿಸಿದೆ.

ಕಾಂಗ್ರೆಸ್ ಪಕ್ಷವು ವಿಧಾನ ಪರಿಷತ್ತಿನ ಏಳು ಸ್ಥಾನಗಳಲ್ಲಿ ಕನಿಷ್ಠ ನಾಲ್ಕು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇರುವುದರಿಂದ, ಅವುಗಳಲ್ಲಿ ಕನಿಷ್ಠ ಎರಡು ಸ್ಥಾನಗಳನ್ನು ಮುಸ್ಲಿಂ ಅಭ್ಯರ್ಥಿಗಳಿಗೆ ನೀಡಬೇಕು.ಇದೇ ವೇಳೆ ರಾಜ್ಯಸಭೆಯ ನಾಲ್ಕು ಸ್ಥಾನಗಳ ಪೈಕಿ ಕನಿಷ್ಠ ಒಂದು ಸ್ಥಾನವನ್ನು ಮುಸ್ಲಿಂ ಸಮುದಾಯಕ್ಕೆ ಮೀಸಲಿಡುವಂತೆ ಸಂಘಟನೆ ಆಗ್ರಹಿಸಿದೆ.

ಪ್ರಸ್ತುತ ಕರ್ನಾಟಕ ವಿಧಾನ ಪರಿಷತ್ತಿನ ಒಟ್ಟು 75 ಸದಸ್ಯರಲ್ಲಿ ಕೇವಲ ನಾಲ್ವರು ಮುಸ್ಲಿಂ ಸದಸ್ಯರಿದ್ದು, ರಾಜ್ಯದಲ್ಲಿರುವ ಮುಸ್ಲಿಂ ಜನಸಂಖ್ಯೆಗೆ ಹೋಲಿಸಿದರೆ ಇದು ಸಮರ್ಪಕ ಪ್ರಾತಿನಿಧ್ಯವಲ್ಲ. ಜನಸಂಖ್ಯೆಯ ಅನುಪಾತದ ಆಧಾರದ ಮೇಲೆ ಕನಿಷ್ಠ 9 ರಿಂದ 10 ಮುಸ್ಲಿಂ ಸದಸ್ಯರು ಇರಬೇಕಾಗಿತ್ತು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ವಿಧಾನ ಪರಿಷತ್ತಿನ 15 ಸ್ಥಾನಗಳಿಗೆ ಸದಸ್ಯರನ್ನು ಆಯ್ಕೆ ಮಾಡುವ ಅವಕಾಶ ದೊರೆತಿದ್ದರೂ, ಅದರಲ್ಲಿ ಕೇವಲ ಒಬ್ಬ ಮುಸ್ಲಿಂ ಸದಸ್ಯರಿಗೆ ಮಾತ್ರ ಅವಕಾಶ ನೀಡಲಾಗಿದೆ. 2025ರಲ್ಲಿ ನಡೆದ ನಾಲ್ಕು ವಿಧಾನ ಪರಿಷತ್ ನಾಮನಿರ್ದೇಶನಗಳಲ್ಲಿಯೂ ಒಬ್ಬ ಮುಸ್ಲಿಂ ಅಭ್ಯರ್ಥಿಗೂ ಅವಕಾಶ ಸಿಕ್ಕಿಲ್ಲ. ಹಿಂದೆ ಕಾಂಗ್ರೆಸ್ ಪಕ್ಷದಿಂದ ಕನಿಷ್ಠ ಇಬ್ಬರು ಮುಸ್ಲಿಂ ಲೋಕಸಭಾ ಸದಸ್ಯರು ಆಯ್ಕೆಯಾಗುತ್ತಿದ್ದರು. ಆದರೆ ಪ್ರಸ್ತುತ ಮುಸ್ಲಿಂ ಸಮುದಾಯದಿಂದ ಒಬ್ಬರೂ ಲೋಕಸಭಾ ಸದಸ್ಯರಿಲ್ಲ ಎಂದು ಒಕ್ಕೂಟ ಹೇಳಿದೆ.

ರಾಮ ಬಾಣ



ಸಮೀಕ್ಷೆ ದತ್ತಾಂಶದ ಸುಳ್ಳು ಮಾಹಿತಿ ಹಂಚಿದರೆ ಕ್ರಮ

ಬೆಂಗಳೂರು: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2025ರ ವರದಿಯ ದತ್ತಾಂಶಗಳ ಕುರಿತು ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬರುತ್ತಿರುವುದು ಕೇವಲ ಊಹಾಪೋಹ ಹಾಗೂ ಸುಳ್ಳು ಮಾಹಿತಿಯಾಗಿದೆ. ಇಂತಹ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಹಿಂದುಳಿದ ವರ್ಗಗಳ ಆಯೋಗ ಎಚ್ಚರಿಕೆ ನೀಡಿದೆ.

ಆಯೋಗವು 2025ರಲ್ಲಿ ರಾಜ್ಯಾದ್ಯಂತ ಹಮ್ಮಿಕೊಂಡಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮೂಲಕ ಸಂಗ್ರಹಿಸಿದ ದತ್ತಾಂಶಗಳ ಆಧಾರದ ಮೇಲೆ ಸಮಗ್ರ ವರದಿ ಸಿದ್ಧಪಡಿಸಿ, ಮೇ.25 ರಂದು ಅಧಿಕೃತವಾಗಿ ಸರ್ಕಾರಕ್ಕೆ ಸಲ್ಲಿಕೆ ಮಾಡಿತ್ತು.ಸಮೀಕ್ಷೆಯಲ್ಲಿ ಸಂಗ್ರಹಿಸಲಾದ ಯಾವುದೇ ಮಾಹಿತಿ ಅಥವಾ ದತ್ತಾಂಶಗಳನ್ನು ಸಾರ್ವಜನಿಕವಾಗಿ ಸೋರಿಕೆಯಾಗದಂತೆ ಕಟ್ಟುನಿಟ್ಟಿನ ಗೌಪ್ಯತೆ ಕಾಪಾಡಿಕೊಳ್ಳಲು ನ್ಯಾಯಾಲಯವು ಸೂಚಿಸಿತ್ತು.

ಕಾನೂನು ಕ್ರಮದ ಎಚ್ಚರಿಕೆ

ವರದಿಯ ದತ್ತಾಂಶಗಳ ಬಗ್ಗೆ ಸುಳ್ಳು ಮತ್ತು ಅನಧಿಕೃತ ಮಾಹಿತಿಯನ್ನು ಹಂಚಿಕೊಳ್ಳುವುದು ಉಚ್ಚ ನ್ಯಾಯಾಲಯದ ಆದೇಶದ ನೇರ ಉಲ್ಲಂಘನೆಯಾಗುತ್ತದೆ. ನ್ಯಾಯಾಂಗ ನಿಂದನೆ ಹಾಗೂ ಕಾನೂನು ಉಲ್ಲಂಘನೆಗೆ ಕಾರಣರಾಗುವ ವ್ಯಕ್ತಿಗಳು ಅಥವಾ ಸಂಸ್ಥೆಗಳ ವಿರುದ್ಧ ಆಯೋಗವು ನಿರ್ದಾಕ್ಷಿಣ್ಯವಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕ್ರಮ ಕೈಗೊಳ್ಳಲಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೇಟಿ

ಹಿಂದುಗಳು ಸದೃಢರಾದರೆ ಮಾತ್ರ ಭಾರತ ಸದೃಢವಾಗುತ್ತದೆ
– ಶ್ರೀರಾಜಶೇಖರಾನಂದ ಸ್ವಾಮೀಜಿ
– ಭಾರತ ಸದೃಢವಾದರೆ ಜಗತ್ತಿನ ಸಜ್ಜನ ಶಕ್ತಿ ಸದೃಢವಾಗುತ್ತದೆ, ಮೂಲಭೂತವಾದಿಗಳು ಮೂಲೆಗೆ ಸೇರುವಂತಾಗಿ ಶಾಂತಿ ಸ್ಥಾಪನೆಯಾಗುತ್ತದೆ!

ದಿನ ಭವಿಷ್ಯ

ಮೇಷ ಪರಿಸ್ಥಿತಿ ಪ್ರತಿಕೂಲ ಆಗಿದ್ದರೆ ಸ್ವಲ್ಪ ಕಾಲ ಕಾದು ನೋಡಿ. ಬಳಿಕ ಸರಿ ಹೋಗುವುದು. ದುಡುಕಿನ ಕ್ರಮ ಕೈಗೊಳ್ಳಬೇಡಿ. ಸೂಕ್ತ ಸಹಕಾರ ಪಡೆಯಿರಿ.

ವೃಷಭ ಕೆಲವರನ್ನು ಬದಲಿಸಲು ನಿಮ್ಮಿಂದ ಅಸಾಧ್ಯ. ಅವರ ಜತೆ ಹೊಂದಿಕೊಂಡು ಹೋಗುವುದೇ ಒಳಿತು. ವ್ಯವಹಾರದಲ್ಲಿ ಯಶ.

ಮಿಥುನ ವೃತ್ತಿಯಲ್ಲಿ ಸಮಸ್ಯೆ ನೀಗಿಸಲು ಶಕ್ತರಾಗುವಿರಿ. ವಿರೋಧಿಗಳ ಬಾಯಿ ಮುಚ್ಚಿಸುವಿರಿ. ಆರೋಗ್ಯ ಕಾಳಜಿ ನೋಡಿಕೊಳ್ಳಿ. ಸಿಕ್ಕಿದ್ದನ್ನು ತಿನ್ನಬೇಡಿ.

ಕಟಕ ಸದಾ ಮುಂದೆ ಹೆಜ್ಜೆ ಇಡಿ. ಸಣ್ಣ ಅಪಯಶಸ್ಸು ಕಂಡು ಹಿಂದಡಿ ಇಡಬೇಡಿ. ವ್ಯವಹಾರದಲ್ಲಿ ಕೆಲವರ ಅಸಹಕಾರ. ಕಠಿಣ ನಿಲುವು ಪ್ರದರ್ಶಿಸಿ.

ಸಿಂಹ ಹೆತ್ತವರು ಮಕ್ಕಳ ಕುರಿತು ಕಾಳಜಿ ವಹಿಸಿ. ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಬೇಡಿ. ನೆಂಟರಿಂದ ಟೀಕೆ ಕೇಳುವಿರಿ. ಧನಹಾನಿ.

ಕನ್ಯಾ ಆರ್ಥಿಕ ಒತ್ತಡ. ಅನ್ಯರ ನೆರವು ಅಪೇಕ್ಷಿಸಿದರೂ ಸಿಗದು. ಸಣ್ಣ ಘಟನೆಯೊಂದು ಮಾನಸಿಕ ಕ್ಷೋಭೆ ಉಂಟು ಮಾಡಬಹುದು.

ತುಲಾ ಅಡ್ಡಿಗಳಿಗೆ ಅಂಜಬೇಡಿ. ಅದನ್ನು ದಾಟಿ ಮುಂದೆ ಸಾಗಲು ಯತ್ನಿಸಿ. ಮನೆಯಲ್ಲಿ ಹಿರಿಯರ ಆರೋಗ್ಯ ಚಿಂತೆಗೆ ಕಾರಣವಾದೀತು.

ವೃಶ್ಚಿಕ ವೃತ್ತಿಯಲ್ಲಿ ಕಠಿಣ ಸ್ಪರ್ಧೆ. ನಿಮ್ಮ ಪ್ರಭುತ್ವ ಸ್ಥಾಪಿಸಲು ಸಮಯ ಬೇಕಾದೀತು. ಮನೆಯಲ್ಲಿ ಶಾಂತ ಪರಿಸ್ಥಿತಿ. ಹಣದ ಬಿಕ್ಕಟ್ಟು ಪರಿಹಾರ.

ಧನು ಮಾನಸಿಕ ಶಾಂತಿ ಕದಡುವ ಬೆಳವಣಿಗೆ. ಸಮಚಿತ್ತ ಕಾಯ್ದುಕೊಳ್ಳಿ. ಕೆಲವರ ಕೆಣಕುವಿಕೆ ನಿರ್ಲಕ್ಷಿಸಿ. ಬಂಧುವಿನ ಕಿರಿಕಿರಿ ಎದುರಿಸುವಿರಿ.

ಮಕರ ಕಠಿಣ ಶ್ರಮಕ್ಕೆ ಫಲ ಸಿಗುವುದು. ಪ್ರಮುಖ ಕೆಲಸ ನಾಳೆಗೆ ಮುಂದೂಡುವ ಅಭ್ಯಾಸ ಬಿಡಿ. ಬಂಧುಗಳಿಂದ ಅಸಹಕಾರ.

ಕುಂಭ ನಿಮ್ಮ ಕಾರ್ಯಕ್ಕೆ ಮೆಚ್ಚುಗೆ ಸಿಗಲಿದೆ. ಟೀಕೆಗಳಿಗೆ ಅಂಜಿ ಉದ್ದೇಶಿತ ಕೆಲಸದಿಂದ ಹಿಂದೆ ಸರಿಯಬೇಡಿ. ಬಂಧುವಿನಿಂದ ಒತ್ತಡ.

ಮೀನ ಹತಾಶೆಯ ಮನೋಭಾವ. ಅದಕ್ಕೆ ಕಾರಣ ಮುಗಿಯದ ಸಮಸ್ಯೆ. ಗ್ರಹಗತಿ ಹಾಗಿದೆ. ಕೆಲ ಕಾಲ ಮಾನಸಿಕ ಕಿರಿಕಿರಿ ಬಾಧಿಸಲಿದೆ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30
ಅದೃಷ್ಟ ಸಂಖ್ಯೆ: 4,9,2,5

ಬಾರದ ಮುಂಗಾರು | ವಿದ್ಯುತ್ ಉತ್ಪಾದನೆಗೆ ಕೊರತೆಯಿಲ್ಲ
ಲಿಂಗನಮಕ್ಕಿ ಡ್ಯಾಂ ಬರಿದು

ಜಿ.ನಾಗೇಶ್ ಸಾಗರ

ಸಾಗರ: ಜೂನ್ 1ರಿಂದ ಮುಂಗಾರು ಪ್ರಾರಂಭವಾಗುತ್ತದೆ ಎನ್ನುವ ಜನರ ನಿರೀಕ್ಷೆ ಹುಸಿಯಾಗಿದೆ. ಕಳೆದ ಒಂದು ತಿಂಗಳಿನಿಂದ ವಿಪರೀತವಾಗಿದ್ದ ಕೆರೆಕಟ್ಟೆ ನದಿ ಜಲಮೂಲಗಳನ್ನು ಒಣಗಿಸಿ ಬಿಟ್ಟಿದೆ. ಲಿಂಗನಮಕ್ಕಿ ಜಲಾಶಯ ಸಹ ಹಿಂದಿನ ಎಲ್ಲ ವರ್ಷಗಳಿಗಿಂತ ಈ ಬಾರಿ ಹೆಚ್ಚು ಒಡಲು ಬರಿದು ಮಾಡಿ ಕೊಂಡಿದೆ. ಪ್ರತಿವರ್ಷ ಮುಂಗಾರು ಮಳೆಗೂ ಮುನ್ನ ಹಿಂಗಾರು ಮೇ ಎರಡು ಮೂರನೇ ವಾರ, ಜೂನ್ ಮೊದಲ ವಾರದಲ್ಲಿ ಬಂದು ಒಂದಷ್ಟು ನೀರು ಸಂಗ್ರಹವಾಗುತಿತ್ತು. ಆದರೆ ಈ ಬಾರಿ ಹಿಂಗಾರು ನಿರೀಕ್ಷಿತ ಮಟ್ಟದಲ್ಲಿ ಬಂದಿಲ್ಲ. ಏಪ್ರಿಲ್, ಮೇ ತಿಂಗಳಿನಲ್ಲಿ ಬಂದು ಹೋಗುತ್ತಿದ್ದ ಮಳೆಮಾರುತವೂ ಬಿದ್ದಿಲ್ಲ. ಇದರಿಂದ ಸಹಜವಾಗಿ ನದಿಮೂಲಗಳು ಬತ್ತುವ ಸ್ಥಿತಿಗೆ ತಲುಪಿದೆ. ನಾಡಿಗೆ ವಿದ್ಯುತ್ ಪೂರೈಕೆ ಮಾಡುವ ಶರಾವತಿ ಹಿನ್ನೀರು ಸಹ ವಿಪರೀತ ಬಿಸಿಲಿನಿಂದ ಬರಿದಾಗುತ್ತಾ ಬಂದಿದ್ದು ಜಲಚರಗಳು ಸಹ ಸಂಕಷ್ಟ ಅನುಭವಿಸುತ್ತಿದೆ.

ಜೂನ್1ರ ಬೆಳಿಗ್ಗೆ ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ 1752.95ರಷ್ಟು ಇದೆ. ಜಲಾಶಯಕ್ಕೆ 797 ಕ್ಯೂಸೆಕ್ಸ್ ಒಳಹರಿವು ಇದ್ದರೇ, 2467.83 ಕ್ಯೂಸೆಕ್ಸ್ ಹೊರ ಹರಿವು ಇದ್ದು, ವಿದ್ಯುತ್ ಉತ್ಪಾದನೆಗಾಗಿ 4398 ಕ್ಯೂಸೆಕ್ಸ್ ನೀರು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಜಲಾಶಯದ ಒಟ್ಟು ನೀರಿನ ಸಾಮರ್ಥ್ಯ 156 ಟಿಎಂಸಿ, 5 ಅಡಿ ಡೆಡ್ ಸ್ಟೋರೇಜ್ ಬಿಟ್ಟರೇ ಉಳಿದ 151 ಟಿಎಂಸಿ ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಬಹುದು.

8 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ: ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ವಿಪರೀತವಾಗಿದೆ. ಪ್ರತಿವರ್ಷ ಸಹಜವಾಗಿ ಏಪ್ರಿಲ್, ಮೇ, ಜೂನ್ ತಿಂಗಳಿನಲ್ಲಿ ವಿದ್ಯುತ್ ಬೇಡಿಕೆ ಜಾಸ್ತಿ ಇರುತ್ತದೆ. ಕೆಪಿಸಿ ಶರಾವತಿ ನದಿ ಮೂಲದ ಜಲ ವಿದ್ಯುತ್ ಜೊತೆಗೆ ವಿಂಡ್, ಸೋಲಾರ್, ಕಲ್ಲಿದ್ದಲು ಸೇರಿ ಬೇರೆಬೇರೆ ಮೂಲದಿಂದ ವಿದ್ಯುತ್ ಉತ್ಪಾದಿಸುವ ಜೊತೆಗೆ ಕೊರತೆ ಇದ್ದರೆ ಹೊರರಾಜ್ಯಗಳಿಂದ ಸಹ ಆಮದು ಮಾಡಿಕೊಂಡು ಸಮರ್ಪಕ ವಿದ್ಯುತ್ ಪೂರೈಕೆ ಮಾಡುತ್ತಿದೆ. ಆದರೆ ಕಡಿಮೆ ದರದಲ್ಲಿ ಮತ್ತು ಗುಣಮಟ್ಟದ ವಿದ್ಯುತ್ ನೀಡುವುದು ಶರಾವತಿ ನದಿ ಮೂಲದ ಎಬಿ ಸೈಟ್, ಗೇರುಸೊಪ್ಪ ಮತ್ತು ಶರಾವತಿ ವಿದ್ಯುದಾಗಾರ ಮಾತ್ರ.

ಲಿಂಗನಮಕ್ಕಿ ಜಲಾಶಯದಲ್ಲಿ 20 ಟಿಎಂಸಿ ನೀರು ಸಂಗ್ರಹ ಇರುವುರಿಂದ ಪ್ರತಿನಿತ್ಯ ಸುಮಾರು 8 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಮೇ ಎರಡನೇ ವಾರದವರೆಗೆ ಡ್ಯಾಂನಲ್ಲಿ 27 ಟಿಎಂಸಿ ನೀರು ಸಂಗ್ರಹ ಇದ್ದುದ್ದರಿಂದ 12 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗುತಿತ್ತು. ಆದರೆ ನೀರಿನ ಪ್ರಮಾಣ ಇಳಿಯುತ್ತಿರುವುದರಿಂದ ವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆ ಎನ್ನಲಾಗುತ್ತಿದೆ.

ಕಳೆದ ವರ್ಷ 2025ರ ಏಪ್ರಿಲ್‌ನಿಂದ 2026ರ ಏಪ್ರಿಲ್‌ವರೆಗೆ ಲಿಂಗನಮಕ್ಕಿ ಜಲಾಶಯದಲ್ಲಿ ಸಂಗ್ರಹವಾಗಿದ್ದ ನೀರಿನಿಂದ ಶರಾವತಿ ವಿದ್ಯುದಾಗಾರದಲ್ಲಿ 6100.692 ಮಿಲಿಯನ್ ಯೂನಿಟ್, ಲಿಂಗನಮಕ್ಕಿ ವಿದ್ಯುದಾಗಾರದಲ್ಲಿ 199.38 ಮಿಲಿಯನ್ ಯೂನಿಟ್, ಮಹಾತ್ಮಾ ಗಾಂಧಿ ವಿದ್ಯುದಾಗಾರದಲ್ಲಿ 697.23 ಮಿಲಿಯನ್ ಯೂನಿಟ್, ಗೇರುಸೊಪ್ಪ ವಿದ್ಯುದಾಗಾರದಲ್ಲಿ 686.54 ಮಿಲಿಯನ್ ವಿದ್ಯುತ್ ಯೂನಿಟ್ ಉತ್ಪಾದನೆ ಮಾಡಲಾಗಿದೆ.

ಮುಪ್ಪಾನೆ-ಹಲ್ಕೆ ಲಾಂಚ್ ಸ್ಥಗಿತ: ಶರಾವತಿ ಹಿನ್ನೀರನ್ನು ಆಶ್ರಯಿಸಿಕೊಂಡಿರುವ ಲಿಂಗನಮಕ್ಕಿ ಜಲಾಶಯ ವ್ಯಾಪ್ತಿಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ತಗ್ಗಿರುವುದರಿಂದ ಮಂಗಳವಾರದಿಂದ ಮುಪ್ಪಾನೆ-ಹಲ್ಕರೆ ನಡುವಿನ ಲಾಂಚ್ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿದೆ.



ಕಳೆದ ವರ್ಷಕ್ಕಿಂತ ಕಡಿಮೆ ನೀರು

ಕಳೆದ ವರ್ಷ ಇದೇ ಹೊತ್ತಿಗೆ ಲಿಂಗನಮಕ್ಕಿ ಜಲಾಶಯದಲ್ಲಿ 1766.50 ಅಡಿ ನೀರು ಸಂಗ್ರಹವಿತ್ತು. ಶೇ. 23.17ರಂತೆ ಡ್ಯಾಂನಲ್ಲಿ 35.13 ಟಿಎಂಸಿ ನೀರಿನ ಸಂಗ್ರಹವಿತ್ತು. ಆದರೆ ಈ ಬಾರಿ ಶೇ. 13.72ರಂತೆ 20.80 ಟಿಎಂಸಿ ನೀರು ಲಿಂಗನಮಕ್ಕಿ ಡ್ಯಾಂನಲ್ಲಿ ಸಂಗ್ರಹವಿದೆ. ಕಳೆದ ವರ್ಷ ಮಳೆ ಉತ್ತಮವಾಗಿದ್ದರೂ ಫೆಬ್ರವರಿಯಿಂದ ಮೇ ತಿಂಗಳ ಕೊನೆವರೆಗಿನ ಬಿಸಿಲಿನ ತಾಪಕ್ಕೆ ನೀರು ಬತ್ತುತ್ತಾ ಬಂದಿದೆ.

ಕಲಬುರಗಿಯಲ್ಲಿ ಬಿಜೆಪಿ ಪ್ರತಿಭಟನೆ

ಪುಟ 0 ಹೀಗಾಗಿ ಪುಢಾರಿಯಂತೆ ವರ್ತಿಸುತ್ತಿರುವ ಕಾಂಗ್ರೆಸ್ಸಿನ ಯಾವುದೇ ಮಂತ್ರಿಗಳಿಗೆ ಹೆದರುವ ಅಗತ್ಯವಿಲ್ಲ ಎಂದು ಹೇಳಿದರು.

ಮನೆಯಲ್ಲಿ ಕೂರಲ್ಲ: ಲಜ್ಜೆಗೆಟ್ಟು ಕೇವಲ ಮುಸ್ಲಿಂ ಓಲೈಕೆಗಾಗಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ, ಹಿಂದುಗಳಿಗೆ ಅವಮಾನ ಮಾಡುವ ಮೂಲಕ ಅಧರ್ಮದ ಹಾದಿ ತುಳಿದಿದೆ. ತನ್ನ ಅಧಃಪತನವನ್ನು ತಾನೇ ಪ್ರಾರಂಭ ಮಾಡಿಕೊಂಡಿದೆ. ಇಂತಹ ಸರ್ಕಾರವನ್ನು ಬುಡಸಮೇತ ಕಿತ್ತೊಗೆಯುವ ಶಕ್ತಿ ರಾಜ್ಯದ ಹಿಂದುಗಳಿಗಿದ್ದು, 2028ರ ಚುನಾವಣೆಯಲ್ಲಿ ಈ ಶಕ್ತಿ ಅನಾವರಣಗೊಳ್ಳಲಿದೆ. ಮುಸ್ಲಿಂ ಮತಗಳಿಂದ ಮಾತ್ರ ಅಧಿಕಾರಕ್ಕೆ ಬಂದಿರುವ ಭ್ರಮೆಯಲ್ಲಿ ಮುಳುಗಿರುವ ಕಾಂಗ್ರೆಸ್ ಸರ್ಕಾರವನ್ನು ಬೇರು ಸಮೇತ ಕಿತ್ತು ಹಾಕುವವರೆಗೂ ಮನೆಯಲ್ಲಿ ಕೂರುವ ಮಾತೇ ಇಲ್ಲ. ಕಾಂಗ್ರೆಸ್ ಅಧಃಪತನದ ಹಣೆಬರಹ ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ ಎಂದರು.

ನಾಚಿಕೆಗೇಡು: ಕಳೆದ 3 ವರ್ಷಗಳಿಂದ ನಿರಂತರವಾಗಿ ಹಿಂದುಗಳ ಮೇಲೆ ದೌರ್ಜನ್ಯ, ಸುಳ್ಳು ಕೇಸು ಹಾಕಿಸುವ ಕೆಲಸ ನಡೆದಿದೆ. ದಕ್ಷಿಣ ಕನ್ನಡದಲ್ಲಿ ಹಿಂದು ಕಾರ್ಯಕರ್ತರ ಮನೆ ಬಾಗಿಲು ತಟ್ಟಿ ಫೋಟೋ ತೆಗೆದು ಠಾಣೆಗೆ ಕರೆದುಕೊಂಡು ಹೋಗಲಾಗಿದೆ. ಸಚಿವ ಸಂಪುಟದಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಕಲ್ಲು ತೂರಾಟ ನಡೆಸಿ, ದೇಶದ್ರೋಹಿ ಚಟುವಟಿಕೆ ಮಾಡಿದವರ ಮೇಲಿನ ಕೇಸ್ ವಾಪಸ್ ಪಡೆಯುವ ತೀರ್ಮಾನ ತೆಗೆದುಕೊಳ್ಳುವಾಗ ಶಾಸಕ ಬಿ.ಆರ್.ಪಾಟೀಲ್ ಕಣ್ಣು ಮುಚ್ಚಿ ಕುಳಿತದ್ದು ನಾಚಿಕೆಗೇಡಿನ ಸಂಗತಿ. ಕಾಂಗ್ರೆಸ್‌ಗೆ ಮುಸ್ಲಿಂರ ಭಯ ಕಾಡುತ್ತಿದೆ. ಮುಂದಿನ ದಿನಗಳಲ್ಲಿ ನಿಮ್ಮ ರಾಹುಲ್ ಗಾಂಧಿ, ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ ಯಾರೇ ಬಂದರೂ ರಾಜ್ಯದಲ್ಲಿ ಹಾಗೂ ಆಳಂದ ಕ್ಷೇತ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಸಾಧ್ಯವಿಲ್ಲ ಎಂದರು.

ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಮಾತನಾಡಿ, ನಮ್ಮ ನಂಬಿಕೆಗೆ ಘಾಸಿಗೊಳಿಸುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ, ಶಾಸಕ ಬಸವರಾಜ ಮತ್ತಿಮಡು,ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಮಾಜಿ ಸಂಸದ ಡಾ.ಉಮೇಶ್ ಜಾಧವ್, ಎಂಎಲ್ಸಿ ಅರುಣ ಶಹಾಪುರ, ಮಾಜಿ ಶಾಸಕ ಸುಭಾಷ ಗುತ್ತೇದಾರ, ರಾಜಕುಮಾರ್ ಪಾಟೀಲ್, ದತ್ತಾತ್ರೇಯ ಪಾಟೀಲ, ರಾಜುಗೌಡ ಮಾತನಾಡಿದರು. ಶಾಸಕ ಶೈಲೇಂದ್ರ ಬೆಲ್ದಾಳೆ ಇದ್ದರು.



ರಾಜ್ಯದಲ್ಲಿ ಎಲ್ಲಿಯಾದರೂ ಹಿಂದುಗಳ ಮೇಲೆ ಸುಳ್ಳು ಕೇಸು ದಾಖಲಾದರೆ, ತಕ್ಷಣ ಬಿಜೆಪಿ ಮುಖಂಡರು ಪೊಲೀಸ್ ಠಾಣೆಗೆ ಘೇರಾವ್ ಹಾಕುವಂತೆ ರಾಜ್ಯದ ಎಲ್ಲ ಅಧ್ಯಕ್ಷರಾದಿಯಾಗಿ ಮುಖಂಡರಿಗೆ ಸೂಚಿಸಿದ್ದೇನೆ. ಹಿಂದು ಕಾರ್ಯಕರ್ತರು ಯಾವುದೇ ಕಾರಣಕ್ಕೂ ಹೆದರುವ ಅಗತ್ಯವಿಲ್ಲ.
■ **ಬಿ.ವೈ.ವಿಜಯೇಂದ್ರ, ರಾಜ್ಯಾಧ್ಯಕ್ಷ**

ವಿದ್ಯಾರ್ಥಿಗಳಿಗೆ ಡಿಕೆಶಿ ಶುಭ ಹಾರೈಕೆ

ಪುಟ 0 ನಮ್ಮಲ್ಲಿ ಅಮೂಲ್ಯ ಮಾನವ ಸಂಪನ್ಮೂಲಗಳಿವೆ. ಹೀಗಾಗಿ ಜಗತ್ತು ಭಾರತವನ್ನು ಕರ್ನಾಟಕ ಮೂಲಕ ನೋಡುತ್ತಿದೆ. ಇದೇ ಕಾರಣಕ್ಕೆ ನಮ್ಮ ಹಿರಿಯರು, ಐಐಟಿ, ಐಐಎಂ, ರಾಷ್ಟ್ರೀಯ ಕಾನೂನು ಕಾಲೇಜು, ಇಸ್ರೋ ಸೇರಿದಂತೆ ಎಚ್‌ಎಎಲ್ ಹಾಗೂ ಇತರೆ ಪ್ರಮುಖ ಸಂಸ್ಥೆಗಳನ್ನು ಇಲ್ಲಿಯೇ ಆರಂಭಿಸಿದ್ದಾರೆ. ಇವುಗಳನ್ನು ಮುಂದುವರಿಸಿ ಕೊಂಡು ಹೋಗುವ ನಿಟ್ಟಿನಲ್ಲಿ ಮಕ್ಕಳು ತಮ್ಮ ವಿದ್ಯಾಭ್ಯಾಸ ಮಾಡಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಆತ್ಮವಿಶ್ವಾಸ ಕಳೆದುಕೊಳ್ಳಬಾರದು: ನಾವು ಕೃತಕ ಬುದ್ಧಿಮತ್ತೆ ಯುಗಕ್ಕೆ ಹೋಗುತ್ತಿದ್ದು, ಇದಕ್ಕೆ ಪೂರಕವಾಗಿ ವಿದ್ಯಾಭ್ಯಾಸ ಮಾಡಬೇಕು. ಮುಂದಿನ ದಿನಗಳಲ್ಲಿ ನಮ್ಮ ಶಿಕ್ಷಣ ನೀತಿಯನ್ನು ತಿಳಿಸಲಾಗುವುದು. ಈ ವರ್ಷ ನಿಮಗೆ ಶುಭವಾಗಲಿ, ಯಶಸ್ಸು ಸಿಗಲಿ. ಸರ್ಕಾರಿ ಶಾಲಾ ಮಕ್ಕಳು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ನಮ್ಮ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರಿದ್ದಾರೆ. ಖಾಸಗಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಷ್ಟೇ ಪ್ರತಿಭೆ ನಿಮ್ಮಲ್ಲೂ ಇದೆ ಎಂದು ಶಿವಕುಮಾರ್ ತಿಳಿಸಿದರು.

ಹಿಜಾಬ್‌ಗೆ ಪರ್ಯಾಯವಾಗಿ ಕೇಸರಿ ಶಾಲು ಕೊಡುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕೇಸರಿ ಶಾಲು ಬೇಕೇ, ರಾಷ್ಟ್ರಧ್ವಜದ ಶಾಲು ಬೇಕೇ ಎಂದು ಮುಂದೆ ಚರ್ಚೆ ಮಾಡೋಣ ಎಂದರು.

ನಮ್ಮ ಕ್ರೀಡಾಪ್ರೇಮಿಗಳಿಗೆ ಅನ್ಯಾಯ ಆಗಿರಬಹುದು. ನಮ್ಮ ರಾಜ್ಯದ ಹೆಸರಿನಲ್ಲಿ ಪ್ರತಿನಿಧಿಸುವ ತಂಡ ಉತ್ತಮವಾಗಿ ಆಡಿ ಗೆದ್ದಿದ್ದಾರೆ. ನಮ್ಮೆಲ್ಲರಿಗೂ ಹೆಮ್ಮೆ ತಂದಿದ್ದಾರೆ. ಕರ್ನಾಟಕ ರಾಜ್ಯದ ಜನರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.
■ **ಡಿ.ಕೆ.ಶಿವಕುಮಾರ್, ನಿಯೋಜಿತ ಸಿಎಂ**

ಗುಜರಾತಿನವರು ಪಂದ್ಯ ಕಿತ್ತುಕೊಳ್ಳದಂತೆ ಕ್ರಮ

ಐಪಿಎಲ್ ಫೈನಲ್ ಪಂದ್ಯ ಬೆಂಗಳೂರಿನಲ್ಲಿ ನಡೆಯಬೇಕಿತ್ತು. ನಾವು ಅದಕ್ಕೆ ಅನುಮತಿ ನೀಡಿದ್ದೆವು. ಆದರೆ ಗುಜರಾತಿನವರು ತಮ್ಮ ಪ್ರಭಾವ ಬಳಸಿ ನಮ್ಮಿಂದ ಪಂದ್ಯ ಕಿತ್ತುಕೊಂಡಿದ್ದಾರೆ. ಮುಂದೆ ಮತ್ತೆ ಈ ರೀತಿ ಕಿತ್ತುಕೊಳ್ಳದಂತೆ ಅಗತ್ಯ ಸಿದ್ಧತೆ ಮಾಡುತ್ತಿದ್ದೇವೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ ಎಂದರು ಡಿ.ಕೆ.ಶಿವಕುಮಾರ್ ತಿಳಿಸಿದರು.

4 ತಿಂಗಳಲ್ಲಿ 2,511 ಶಸ್ತ್ರಚಿಕಿತ್ಸೆ

ಪುಟ 0 ಪ್ರತಿದಿನ 80ರಿಂದ 90 ರೋಗಿಗಳಿಗೆ ಡಯಾಲಿಸಿಸ್ ಚಿಕಿತ್ಸೆ ನೀಡಲಾಗುತ್ತಿದ್ದು, ಸುಮಾರು 300 ಹೊರರೋಗಿಗಳು ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ. ನೆಫ್ರೋ ಯುರಾಲಜಿ ಸಂಸ್ಥೆಗೆ ದಾಖಲಾಗುವ ರೋಗಿಗಳ ಸಂಖ್ಯೆಯಲ್ಲೂ ಗಣನೀಯ ಏರಿಕೆ ಕಂಡುಬಂದಿದ್ದು, ಕಳೆದ ಐದು ವರ್ಷಗಳ ಅಂಕಿ ಅಂಶಗಳು ಆಸ್ಪತ್ರೆಯ ಮೇಲಿನ ಜನರ ವಿಶ್ವಾಸವನ್ನು ಪ್ರತಿಬಿಂಬಿಸುತ್ತಿವೆ. ಜತೆಗೆ ಪ್ರತಿ ವರ್ಷ ಲಕ್ಷಕ್ಕೂ ಹೆಚ್ಚು ಹೊರರೋಗಿಗಳು ಚಿಕಿತ್ಸೆ ಪಡೆಯುತ್ತಿರುವುದು ಆಸ್ಪತ್ರೆಯ ಕಾರ್ಯಕ್ಷಮತೆಯನ್ನು ತೋರಿಸುತ್ತಿದೆ.

ಉದ್ಘಾಟನೆಗೆ ಸಜ್ಜಾಗುತ್ತಿರುವ ನೂತನ ಕಟ್ಟಡ

ರೋಗಿಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ 2016ರಲ್ಲಿ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ 150 ಹಾಸಿಗೆಗಳ ನೂತನ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗಿತ್ತು. 2018ರಲ್ಲಿ ಆರಂಭವಾದ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಮೂರು ಮಹಡಿಗಳ ಪೈಕಿ ಎರಡು ಮಹಡಿಗಳ ನಿರ್ಮಾಣ ಪೂರ್ಣಗೊಂಡಿದೆ. ಸದ್ಯ ಬಣ್ಣ ಬಳಿಯುವಿಕೆ, ಕೊಳಾಯಿ ಕಾಮಗಾರಿ, ಡಯಾಲಿಸಿಸ್ ಮತ್ತು ಐಸಿಯು ಘಟಕಗಳ ಅಂತಿಮ ಕೆಲಸಗಳು ಮಾತ್ರ ಬಾಕಿ ಉಳಿದಿವೆ. ನೂತನ ಕಟ್ಟಡದಲ್ಲಿ 30 ಹಾಸಿಗೆಗಳ ತೀವ್ರ ನಿಗಾ ಘಟಕ ಸ್ಥಾಪನೆಯಾಗಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಬರುವ ರೋಗಿಗಳಿಗೆ ಮತ್ತಷ್ಟು ಅನುಕೂಲವಾಗಲಿದೆ.

ನೆಫ್ರೋ ಯುರಾಲಜಿ ಸಂಸ್ಥೆ ಮೂತ್ರಪಿಂಡ ರೋಗಿಗಳಿಗೆ ಉನ್ನತ ದರ್ಜೆಯ ಚಿಕಿತ್ಸಾ ಸೌಲಭ್ಯ ನೀಡುತ್ತಿದ್ದೇವೆ. ರೋಗಿಗಳ ಚಿಕಿತ್ಸೆಗೆ ಮೊದಲ ಆದ್ಯತೆ ನೀಡುವ ಮೂಲಕ ಆಸ್ಪತ್ರೆ ರೋಗಿಗಳ ಪಾಲಿಗೆ ಸಂಜೀವಿನಿಯಾಗಿದೆ.
■ **ಡಾ. ಶಿವಲಿಂಗಯ್ಯ ಎಂ, ನಿರ್ದೇಶಕ, ನೆಫ್ರೋ ಯುರಾಲಜಿ ಸಂಸ್ಥೆ**

2026–27ನೇ ಶೈಕ್ಷಣಿಕ ಸಾಲಿಗೆ ಅಧಿಕೃತ ಚಾಲನೆ

ಬೆಂಗಳೂರು: ರಾಜ್ಯಾದ್ಯಂತ 2026–27ನೇ ಶೈಕ್ಷಣಿಕ ಸಾಲಿಗೆ ಸೋಮವಾರ ಅಧಿಕೃತ ಚಾಲನೆ ದೊರೆತಿದ್ದು, ಸುಮಾರು 2 ತಿಂಗಳ ಬೇಸಿಗೆ ರಜೆಯ ನಂತರ ಶಾಲೆ–ಕಾಲೇಜುಗಳು ಮತ್ತೆ ವಿದ್ಯಾರ್ಥಿಗಳ ಕಲರವದಿಂದ ಕಂಗೊಳಿಸಿದವು. ಮೊದಲ ದಿನವೇ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ಶಿಕ್ಷಣಾಭಿಮಾನಿಗಳು ಸೇರಿ ಹೊಸ ಶೈಕ್ಷಣಿಕ ವರ್ಷದ ಆರಂಭವನ್ನು ಸಂಭ್ರಮದಿಂದ ಸ್ವಾಗತಿಸಿದರು.

ಶಾಲಾ ಆವರಣಗಳನ್ನು ಹಸಿರು ತಳಿರು ತೋರಣ, ಬಣ್ಣದ ಕಾಗದಗಳು ಹಾಗೂ ವಿವಿಧ ಅಲಂಕಾರಿಕ ವಸ್ತುಗಳಿಂದ ಸಿಂಗರಿಸಲಾಗಿತ್ತು. ಬೆಳಗ್ಗೆಯೇ ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳನ್ನು ಹೂ ಮತ್ತು ಸಿಹಿ ನೀಡಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಹೊಸ ಶೈಕ್ಷಣಿಕ ವರ್ಷದ ಅಂಗವಾಗಿ ಹಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಸಮವಸ್ತ್ರ ವಿತರಣೆ ಕಾರ್ಯಕ್ರಮವೂ ನಡೆಯಿತು. ಶಾಲಾ ಮೊದಲ ದಿನದ ಹಿನ್ನೆಲೆ ಪಾಠಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳು ಆಟ, ಹಾಡು, ಪರಿಚಯದಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

ಆನ್‌ಲೈನ್ ಹಾಜರಾತಿ ಕಡ್ಡಾಯ: ಈ ವರ್ಷದಿಂದ ಆನ್‌ಲೈನ್ ಹಾಜರಾತಿ ಶಿಕ್ಷಕರಿಗೆ ಕಡ್ಡಾಯವಾಗಿದ್ದು ಹಲವು ಶಿಕ್ಷಕರು ಕರ್ತವ್ಯ ಆ್ಯಪ್‌ನಲ್ಲಿ ಹಾಜರಿ ಹಾಕದಿರುವುದು, ಆ್ಯಪ್‌ನಲ್ಲಿ ನೋಂದಾಣಿ ಮಾಡಿಕೊಳ್ಳದಿರುವುದನ್ನು ಶಾಲಾ ಶಿಕ್ಷಣ ಇಲಾಖೆ ಗಂಭೀರವಾಗಿ ಪರಿಗಣಿಸಿದ್ದು, ಧಾರವಾಡ ವಿಭಾಗದಲ್ಲಿ ಸುಮಾರು ಶೇ.30ರಷ್ಟು ಶಿಕ್ಷಕರು ಕರ್ತವ್ಯ ಆ್ಯಪ್‌ನಲ್ಲಿ ಹಾಜರಿ ಹಾಕಿಲ್ಲ. ಈ ಹಿನ್ನೆಲೆಯಲ್ಲಿ ಕರ್ತವ್ಯ ಆ್ಯಪ್‌ನಲ್ಲಿ ಹಾಜರಿ ದಾಖಲಿಸದ ಶಿಕ್ಷಕರಿಗೆ ಇಲಾಖೆ ನೋಟಿಸ್ ನೀಡಿದ್ದು 5 ದಿನದೊಳಗೆ ಉತ್ತರ ನೀಡುವಂತೆ ಸೂಚನೆ ನೀಡಿದೆ. ರಾಜ್ಯದ ಇತರೆ ಭಾಗದಲ್ಲಿಯೂ ಕರ್ತವ್ಯ ಆ್ಯಪ್‌ನಲ್ಲಿ ಹಾಜರಿ ಹಾಕದಿರುವ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳಲು ಶಿಕ್ಷಣ ಇಲಾಖೆ ಚಿಂತನೆ ನಡೆಸಿದೆ.

ಸತ್ಯ ಹೇಗೆ ಷಡ್ಯಂತ್ರವಾಗುತ್ತದೆ? ಸಮರ್ಥ ಶಾಮನೂರು ಪ್ರಶ್ನೆ

ದಾವಣಗೆರೆ: ಜಮೀರ್ ಅಹಮದ್ ಅವರ ನಕಲಿ ಆಡಿಯೋ ಹೇಳಿಕೆಗೆ ದಾವಣಗೆರೆಯಲ್ಲಿ ಶಾಸಕ ಸಮರ್ಥ ಶಾಮನೂರು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಚುನಾವಣೆ ಸಮಯದಲ್ಲಿ ಇದೆಲ್ಲವೂ ಓಪನ್ ಸೀಕ್ರೆಟ್ ಆಗಿತ್ತು. ಸತ್ಯ ಸಂಗತಿಗಳು ಹೊರಬಂದಾಗ ಅದನ್ನು ಷಡ್ಯಂತ್ರ ಎನ್ನುವುದು ಸರಿಯಲ್ಲ. ಪ್ರತಿ ಚುನಾವಣೆಯಲ್ಲಿ ಎ ಟೀಂ, ಬಿ ಟೀಂ ಎಂಬುದು ಇರುತ್ತದೆ. ಆದರೆ ಆಡಿಯೋದಲ್ಲಿ ಕಾಂಗ್ರೆಸ್ ವಿರುದ್ಧವಾಗಿ ಮಾತನಾಡಿರುವುದು ಸ್ಪಷ್ಟವಾಗಿದೆ ಎಂದು ಕಿಡಿಕಾರಿದ್ದಾರೆ.



ಎಸ್‌ಡಿಪಿಐ ಮತ್ತು ಪಕ್ಷೇತರರನ್ನು ಜಮೀರ್ ಒಗ್ಗೂಡಿಸಿದ್ದಾರಾ? ಎಲ್ಲರೂ ಒಗ್ಗೂಡಿ ಬರಬೇಕಿತ್ತಲ್ಲವೇ? ಈ ಆಡಿಯೋವನ್ನು ಫೊರೆನ್ಸಿಕ್ ಲ್ಯಾಬ್‌ಗೆ ಕಳುಹಿಸಿ ತನಿಖೆ ಮಾಡಲಿ. ಹೈಕಮಾಂಡ್ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.
■ **ಸಮರ್ಥ ಶಾಮನೂರು, ಶಾಸಕ**

ಪುರುಷರ ಖಾತೆಗಳಿಗೂ ಲಕ್ಷ್ಮೀ ಭಂಡಾರ್ ಹಣ!

ಪುಟ 0 ಹೊಸ ಬಿಜೆಪಿ ಸರ್ಕಾರದ ಅನ್ನಪೂರ್ಣ ಭಂಡಾರ್ ಯೋಜನೆಯ 12 ಪುಟಗಳ ಪರಿಶೀಲನಾ ನಮೂನೆಯನ್ನು ಪ್ರಶ್ನಿಸುವವರು, ಹಿಂದಿನ ಲಕ್ಷ್ಮೀ ಭಂಡಾರ್ ಯೋಜನೆಯಲ್ಲಿ ಅಕ್ರಮಗಳು ಕಂಡುಬಂದ ಪ್ರಕರಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಅವರು ಹೇಳಿದರು. ಸುಳ್ಳು ಮಾಹಿತಿ ಮೂಲಕ ಕಲ್ಯಾಣ ಯೋಜನೆಯ ಪ್ರಯೋಜನಗಳನ್ನು ಪಡೆದಿದ್ದಕ್ಕಾಗಿ ಕೆಲವು ಪುರುಷರನ್ನು ಈಗಾಗಲೇ ಬಂಧಿಸಲಾಗಿದೆ .'ನಾವು ಈ ಅಕ್ರಮಗಳನ್ನು ತಳಮಟ್ಟದಲ್ಲಿ ಭೇದಿಸಲಿದ್ದೇವೆ. ಅನ್ನಪೂರ್ಣ ಭಂಡಾರ್ ಪ್ರಯೋಜನಗಳನ್ನು ಬುಧವಾರ ಹೆಚ್ಚಿನ ಸಂಖ್ಯೆಯ ಮಹಿಳಾ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಪ್ರಕಟಿಸಿದರು.



ಮನೆಗೆಲಸದ ಕಲಿತಾ ಮಾಝಿ ಈಗ ಸಚಿವೆ!

ಪುಟ 0 ಗುಸ್ಕಾರ ಪುರಸಭೆ ನಿವಾಸಿಯಾಗಿರುವ ಕಲಿತಾ ಮಾಝಿ ಸಕ್ರಿಯ ರಾಜಕೀಯಕ್ಕೆ ಬರುವ ಮೊದಲು ನಾಲ್ಕು ಮನೆಗಳಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಸರಳ ಜೀವನಶೈಲಿ, ಸ್ಥಳೀಯ ಜನರೊಂದಿಗೆ ಹೊಂದಿದ್ದ ನಿಕಟ ಸಂಪರ್ಕ ಮತ್ತು ಜನಪರ ಕಾರ್ಯಗಳು ಚುನಾವಣಾ ಪ್ರಚಾರದ ವೇಳೆ ಹೆಚ್ಚಿನ ಗಮನ ಸೆಳೆದಿದ್ದವು. ಆಸ್ಗ್ರಾಮ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾಝಿ 1,07,692 ಮತಗಳನ್ನು ಪಡೆದು ತಮ್ಮ ಪ್ರತಿಸ್ಪರ್ಧಿ ಶ್ಯಾಮ ಪ್ರಸನ್ನ ಲೋಹರ್ ಅವರನ್ನು 12,535 ಮತಗಳ ಅಂತರದಿಂದ ಸೋಲಿಸಿದ್ದರು. ಮನೆಗೆಲಸದಿಂದ ಸಚಿವ ಸ್ಥಾನಕ್ಕೇರಿದ ಕಲಿತಾ ಮಾಝಿಯ ಪಯಣವು ಸಾಮಾನ್ಯ ಜನರಿಗೂ ರಾಜಕೀಯದಲ್ಲಿ ದೊಡ್ಡ ಸಾಧನೆ ಸಾಧ್ಯ ಎಂಬುದಕ್ಕೆ ಸ್ಫೂರ್ತಿದಾಯಕ ಉದಾಹರಣೆಯಾಗಿದೆ. ಎರಡನೇ ಹಂತದಲ್ಲಿ ಸುವೇಂದು ಸಂಪುಟಕ್ಕೆ ಕ್ರಿಕೆಟಿಗ ಅಶೋಕ್ ದಿಂಡಾ ಸೇರಿದಂತೆ 35 ಶಾಸಕರು ಸಚಿವರಾಗಿ ಸೇರ್ಪಡೆಯಾಗಿದ್ದು, ಸಂಪುಟದ ಬಲ 41ಕ್ಕೆ ಏರಿಕೆಯಾಗಿದೆ. ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಆರ್.ಎನ್. ರವಿ ನೂತನ ಸಚಿವರಿಗೆ ಪ್ರಮಾಣವಚನ ಬೋಧಿಸಿದರು.

ಹಾರ್ಮುಜ್ ಸಂಪೂರ್ಣ ಬಂದ್

ಪುಟ 0 ಇದೇ ವೇಳೆ, ಹಾರ್ಮುಜ್ ಜಲಸಂಧಿಯ ಜತೆಗೆ ಕೆಂಪು ಸಮುದ್ರವನ್ನು ಗಲ್ಫ್ ಆಫ್ ಏಡನ್‌ಗೆ ಸಂಪರ್ಕಿಸುವ ಬಾಬ್ ಎಲ್–ಮಂಡೆಬ್ ಜಲಸಂಧಿಯ ಮೇಲೂ ಒತ್ತಡ ಹೆಚ್ಚಿಸುವ ಸೂಚನೆ ನೀಡಿದೆ. ಈ ಬೆಳವಣಿಗೆಯ ಬೆನ್ನಲ್ಲೇ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಆತಂಕ ಹೆಚ್ಚಿದ್ದು, ಬ್ರೆಂಟ್ ಮತ್ತು ಡಬ್ಲ್ಯುಟಿಐ ಕಚ್ಚಾ ತೈಲದ ಬೆಲೆಗಳು ಶೇ.7ಕ್ಕೂ ಹೆಚ್ಚು ಏರಿಕೆ ಕಂಡಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಒಪ್ಪಂದಕ್ಕೆ ಆಸಕ್ತಿ ತೋರಿದೆ ಎಂದು ಹೇಳಿದ್ದರೂ, ಇತ್ತೀಚಿನ ಬೆಳವಣಿಗೆಗಳು ರಾಜತಾಂತ್ರಿಕ ಪರಿಹಾರದ ಸಾಧ್ಯತೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿವೆ. ಜಾಗತಿಕ ತೈಲ ಪೂರೈಕೆಯ ಸುಮಾರು ಶೇ.20ರಷ್ಟು ಹಾರ್ಮುಜ್ ಜಲಸಂಧಿಯ ಮೂಲಕ ಸಾಗುವುದರಿಂದ, ಈ ಮಾರ್ಗ ಬಂದ್ ಆದರೆ ವಿಶ್ವ ಆರ್ಥಿಕತೆ ಮತ್ತು ಇಂಧನ ಮಾರುಕಟ್ಟೆ ಮೇಲೆ ದೊಡ್ಡ ಪರಿಣಾಮ ಬೀಳುವ ಸಾಧ್ಯತೆ ಇದೆ.

ಇರಾನ್–ಅಮೆರಿಕ ದಾಳಿ, ಪ್ರತಿದಾಳಿ

ಅಮೆರಿಕದ ಡ್ರೋನ್‌ನ್ನು ಇರಾನ್ ಹೊಡೆದುರುಳಿಸಿದ ಬೆನ್ನಲ್ಲೇ, ಇರಾನ್‌ನ ರಡಾರ್ ಹಾಗೂ ಡ್ರೋನ್ ಕೇಂದ್ರಗಳ ಮೇಲೆ ದಾಳಿ ನಡೆಸಿರುವುದಾಗಿ ಅಮೆರಿಕ ಸೋಮವಾರ ತಿಳಿಸಿದೆ. ಇದಕ್ಕೆ ಪ್ರತಿಯಾಗಿ ತಾವೂ ದಾಳಿ ನಡೆಸಿರುವುದಾಗಿ ಇರಾನ್ ಹೇಳಿದ್ದು, ಕುವೈತ್ ತನ್ನ ವಾಯುಪ್ರದೇಶದತ್ತ ಡ್ರೋನ್ ಮತ್ತು ಕ್ಷಿಪಣಿಗಳು ಬಂದಿರುವುದಾಗಿ ವರದಿ ಮಾಡಿದೆ. ಅಮೆರಿಕದ ಸೆಂಟ್ರಲ್ ಕಮಾಂಡ್ ಪ್ರಕಟಣೆಯ ಪ್ರಕಾರ, ಅಂತಾರಾಷ್ಟ್ರೀಯ ಜಲಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಮೆರಿಕದ ಎಂಕ್ಯು–1 ಡ್ರೋನ್‌ನ್ನು ಇರಾನ್ ಹೊಡೆದುರುಳಿಸಿದ ಹಿನ್ನೆಲೆಯಲ್ಲಿ ಈ ದಾಳಿ ನಡೆಸಲಾಗಿದೆ. ಅಮೆರಿಕದ ಯುದ್ಧ ವಿಮಾನಗಳು ತ್ವರಿತವಾಗಿ ಪ್ರತಿಕ್ರಿಯಿಸಿ, ಇರಾನ್‌ನ ವಾಯು ರಕ್ಷಣಾ ವ್ಯವಸ್ಥೆ, ನೆಲದ ನಿಯಂತ್ರಣ ಕೇಂದ್ರ ಹಾಗೂ ಹಡಗುಗಳಿಗೆ ಅಪಾಯ ಉಂಟುಮಾಡುತ್ತಿದ್ದ ಎರಡು ದಾಳಿ ಡ್ರೋನ್‌ಗಳನ್ನು ನಾಶಪಡಿಸಿವೆ ಎಂದು ಪ್ರಕಟಣೆ ತಿಳಿಸಿದೆ. ಈ ನಡುವೆ, ಕುವೈತ್ ಸೋಮವಾರ ಮುಂಜಾನೆ ತನ್ನ ವಾಯು ರಕ್ಷಣಾ ವ್ಯವಸ್ಥೆಗಳು ಒಳಬಂದ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳನ್ನು ತಡೆದಿರುವುದಾಗಿ ಹೇಳಿದೆ. ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೂಡ ಅಮೆರಿಕದ ದಾಳಿಗೆ ಪ್ರತಿದಾಳಿ ನಡೆಸಿರುವುದಾಗಿ ತಿಳಿಸಿದ್ದು, ಅಮೆರಿಕದ ಪಡೆಗಳು ದೂರಸಂಪರ್ಕ ಗೋಪುರವೊಂದನ್ನು ಗುರಿಯಾಗಿಸಿಕೊಂಡಿದ್ದವು ಎಂದು ಆರೋಪಿಸಿದೆ. ನಂತರ ಇರಾನ್ ಸರ್ಕಾರಿ ಟಿವಿ ಬ್ಯಾಲಿಸ್ಟಿಕ್ ಕ್ಷಿಪಣಿ ಉಡಾವಣೆಯ ದೃಶ್ಯಗಳನ್ನು ಪ್ರಸಾರ ಮಾಡಿದೆ. ಅದರಲ್ಲಿ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಚಿತ್ರವಿದ್ದ ಸ್ಟಿಕ್ಕರ್ ಕಾಣಿಸಿಕೊಂಡಿದ್ದು, ಕೊನೆಯ ಅಮೆರಿಕನ್ ಸೈನಿಕ ಈ ಪ್ರದೇಶವನ್ನು ತೊರೆಯುವವರೆಗೂ ಎಂಬ ಸಂದೇಶವೂ ಅದರಲ್ಲಿ ಇತ್ತು. ಈ ಬೆಳವಣಿಗೆಗಳು ಅಮೆರಿಕ ಮತ್ತು ಇರಾನ್ ನಡುವಿನ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಿವೆ.

ರಾಜ್ಯದ ಜನರ ಮೇಲೆ ಇನ್ನಷ್ಟು ತೆರಿಗೆ ಹೇರಿಕೆ: ಆರ್.ಅಶೋಕ್

• **ಬೆಂಗಳೂರು:** ಕೆಟ್ಟುಹೋದ ಲಾರಿಯಂತಿರುವ ಆಡಳಿತವನ್ನು ಸಿದ್ದರಾಮಯ್ಯ ಮೌನವಾಗಿ ಬಿಟ್ಟುಹೋಗಿದ್ದಾರೆ. ಇನ್ನು ಮುಂದೆ ಡಿ.ಕೆ.ಶಿವಕುಮಾರ್ ಎಲ್ಲ ಬಾಕಿಗಳನ್ನು ತೀರಿಸಬೇಕಿದೆ.ಇದಕ್ಕಾಗಿ ಇನ್ನಷ್ಟು ತೆರಿಗೆಗಳನ್ನು ಅವರು ಜನರ ಮೇಲೆ ಹೇರುತ್ತಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.



ವಿಧಾನಸೌಧದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾದರೆ ಆರ್ಥಿಕ ಇಲಾಖೆಯ ಲೆಕ್ಕಪತ್ರ ಬದಲಾಗುವುದಿಲ್ಲ. 4 ಲಕ್ಷ ಕೋಟಿ ರೂ. ಗಾತ್ರದ ಬಜೆಟ್ ಇದ್ದರೆ, 7.64 ಲಕ್ಷ ಕೋಟಿ ರೂ. ಸಾಲವಿದೆ. ಈ ವರ್ಷ 94,428 ಕೋಟಿ ರೂ. ಕೊರತೆ ಇದೆ. ಅಭಿವೃದ್ಧಿಗೆ ಹಣವೇ ಇಲ್ಲ ಎಂದರು. ಹಿಂದಿನ ಬಿಜೆಪಿ ಸರ್ಕಾರದಲ್ಲಿ ಅಭಿವೃದ್ಧಿಗಾಗಿ 84 ಸಾವಿರ ಕೋಟಿ ರೂ. ಖರ್ಚು ಮಾಡಲಾಗುತ್ತಿತ್ತು. ಅವೈಜ್ಞಾನಿಕ ಗ್ಯಾರಂಟಿ ಬಂದ ನಂತರ ಆ ಮೊತ್ತದಲ್ಲಿ ಕಡಿತವಾಗಿದೆ. ಬಿಜೆಪಿ ಇದ್ದಾಗ ಹೆಚ್ಚುವರಿ ಬಜೆಟ್ ಮಂಡನೆಯಾಗಿದ್ದರೆ, ಕಾಂಗ್ರೆಸ್ ಬಂದ ನಂತರ ಕೊರತೆ ಬಜೆಟ್ ಮಂಡಿಸಲಾಯಿತು. ಮೂರು ಬಾರಿ ಸತತವಾಗಿ ಕೊರತೆ ಬಜೆಟ್ ಮಂಡಿಸಲಾಗಿದೆ ಎಂದು ಆರೋಪಿಸಿದರು.

ಮೋದಿ ಸರ್ಕಾರ ಸಾಲ ಮಾಡಿದ್ದರೂ ಸುಮಾರು 170 ಲಕ್ಷ ಕೋಟಿ ರೂ. ರೈಲ್ವೆ, ಸೇತುವೆ, ಹೆದ್ದಾರಿಗೆ ಖರ್ಚು ಮಾಡಿದೆ. ಆದರೆ ಕಾಂಗ್ರೆಸ್ ಪ್ರಗತಿಗೆ ಏನೂ ಖರ್ಚು ಮಾಡಿಲ್ಲ. ಗ್ಯಾರಂಟಿಗಾಗಿ 65 ಸಾವಿರ ಕೋಟಿ ರೂ. ಖರ್ಚು ಮಾಡುವುದನ್ನೇ ದೊಡ್ಡದಾಗಿ ಹೇಳುತ್ತಾರೆ. ಆದರೆ ಜೊತೆಗೆ 65 ಸಾವಿರ ಕೋಟಿ ರೂ. ಹೆಚ್ಚುವರಿ ತೆರಿಗೆ ಹಾಕಿದ್ದಾರೆ. ಮಾಡಿರುವ ಸಾಲಕ್ಕೆ ಪ್ರತಿ ವರ್ಷ 38 ಸಾವಿರ ಕೋಟಿ ರೂ. ಬಡ್ಡಿ ಕಟ್ಟಲಾಗುತ್ತಿದೆ. ಇದೂ ಸೇರಿದರೆ 1.03 ಲಕ್ಷ ಕೋಟಿ ರೂ. ಸಾಲ ಮತ್ತು ಬಡ್ಡಿಗೆ ಹೋಗುತ್ತದೆ ಎಂದರು.

ಆಶೀರ್ವಾದ



ಹೊಸದುರ್ಗದ ಕುಂಚಿಟಿಗ ಮಠದ ಶ್ರೀ ಶಾಂತವೀರ ಸ್ವಾಮೀಜಿ, ಭಗೀರಥ ಮಠದ ಶ್ರೀ ಪುರುಷೋತ್ತಮನಂದಪುರಿ ಸ್ವಾಮೀಜಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಚಿತ್ರದುರ್ಗದ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸೇರಿದಂತೆ ರಾಜ್ಯದ ನಾನಾ ಭಾಗದ 25 ಕ್ಕೂ ಹೆಚ್ಚು ಮಠಾಧಿಪತಿಗಳು ನಿಯೋಜಿತ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಭೇಟಿ ಮಾಡಿ ಆಶೀರ್ವದಿಸಿದರು.

ನಕಲಿ ಆಧಾರ್ ಕಾರ್ಡ್ ದೇಶದ ಹಿತಾಸಕ್ತಿಗೆ ವಿರುದ್ಧ: ಹೈ ಕಿಡಿ

• **ಬೆಂಗಳೂರು:** ದೇಶದ ಬಗ್ಗೆ ಸ್ವಲ್ಪ ಕಾಳಜಿ ಇರಲಿ. ನಕಲಿ ಆಧಾರ್ ಕಾರ್ಡ್ ಮಾಡಿಕೊಡುವುದು ವ್ಯಾಪಕವಾಗಿದ್ದು, ಆದರೂ ಯಾವುದೇ ಅಪರಾಧವಾಗಿಲ್ಲ ಎನ್ನುತ್ತಿದ್ದೀರಿ? ಇದು ಸಾಕಾಗುವುದಿಲ್ಲವೇ? ನೀವು ಬಂದವರಿಗೆಲ್ಲಾ ನಕಲಿ ಆಧಾರ್ ಕಾರ್ಡ್ ಮಾಡಿಕೊಟ್ಟಿದ್ದೀರಿ. ಅವರು ಭಾರತೀಯರೇ ಅಲ್ಲ. ಎತ್ತ ಸಾಗುತ್ತಿದ್ದೇವೆ? ಎಂದು ಹೈಕೋರ್ಟ್ ಕಿಡಿಕಾರಿದೆ.

ಬಾಂಗ್ಲಾದೇಶದ ನಿವಾಸಿಗಳಿಗೆ ಆಧಾರ್, ಪ್ಯಾನ್‌ಕಾರ್ಡ್ ಮಾಡಿಕೊಡುತ್ತಿದ್ದ ವ್ಯಕ್ತಿಯ ವಿರುದ್ಧದ ಪ್ರಕರಣ ರದ್ದತಿಗೆ ಹೈಕೋರ್ಟ್ ಸೋಮವಾರ ನಿರಾಕರಿಸಿದ್ದು, ಪಶ್ಚಿಮ ಬಂಗಾಳದ ವ್ಯಕ್ತಿ ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡಿದ್ದಾರೆ ಎಂದಿದೆ. 27 ವರ್ಷದ ಅರ್ನಬ್ ಮಂಡಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲ ಆರ್. ರಕ್ಷಿತ್ ಅವರು ಈ ಪ್ರಕರಣಕ್ಕೆ ನಕಲಿ ಆರೋಪ ಅನ್ವಯಿಸಲ್ಲ. ಅರ್ಜಿದಾರ ವಿದೇಶಿಯನಲ್ಲದ ಕಾರಣ ಅನ್ವಯಿಸಿರುವ ವಿದೇಶಿಯರ ಕಾಯಿದೆ ಸೆಕ್ಷನ್ 14 ಅನ್ವಯಿಸುವುದಿಲ್ಲ. 2024 ಜ.22ರಂದು ಅರ್ಜಿದಾರ ಕಸ್ಟಡಿಯಲ್ಲಿದ್ದು, ಶಿಕ್ಷೆಯ ಅರ್ಧ ಭಾಗವನ್ನು ಜೈಲಿನಲ್ಲೇ ಕಳೆದಿದ್ದಾರೆ ಎಂದರು. ಅನ್ಯ ದೇಶದ ವ್ಯಕ್ತಿಗಳಿಗೆ ನಕಲಿ ಆಧಾರ್ ಕಾರ್ಡ್ ಮಾಡಿಕೊಡುವ ಮೂಲಕ ಎಲ್ಲವನ್ನೂ ನೀವು ನಾಶಪಡಿಸುತ್ತಿದ್ದೀರಿ. ಅವರು ಭಾರತೀಯರಲ್ಲ, ಆದರೂ ನಕಲಿ ಆಧಾರ್ ಕಾರ್ಡ್ ನೀಡಲಾಗುತ್ತಿದೆ. ಅರ್ಜಿದಾರ ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ ಎಂದಿತು.

ಜನರು ಇದನ್ನು ಮುಂದುವರಿಸಿದರೆ ಸರ್ಕಾರ ಹೇಗೆ ತಾನೆ ಕಣ್ಣಿಡಲು ಸಾಧ್ಯ? ನೀವು ಭಾರತೀಯರಲ್ಲವೇ ಎಂದಿತು. ಅರ್ಜಿದಾರರ ಪರ ವಕೀಲರು ಅರ್ಜಿ ಹಿಂಪಡೆಯಲು ಒಪ್ಪಿದ್ದು, ವಿಚಾರಣಾಧೀನ ನ್ಯಾಯಾಲಯದಲ್ಲಿ ಜಾಮೀನು ಕೋರುವುದಾಗಿ ಹೇಳಿದರು. ಇದನ್ನು ದಾಖಲಿಸಿದ ನ್ಯಾಯಾಲಯವು ಅರ್ಜಿದಾರರು ಕಾನೂನಿನ ಅನ್ವಯ ಪರಿಹಾರ ಕೋರಬಹುದು ಎಂದು ಅರ್ಜಿ ಇತ್ಯರ್ಥಪಡಿಸಿತು.

ಕಿರುಸುದ್ದಿ

ರಾಜ್ಯಸಭೆ: ನಾಮಪತ್ರಕ್ಕೆ ಜೂ.8 ಕೊನೆ ದಿನ

• **ಬೆಂಗಳೂರು:** ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ ಆಯ್ಕೆ ಮಾಡುವ 4 ಸ್ಥಾನಗಳಿಗೆ ಸೋಮವಾರದಿಂದಲೇ ಅಧಿಸೂಚನೆ ಪ್ರಕಟಗೊಂಡಿದ್ದು, ನಾಮಪತ್ರ ಸಲ್ಲಿಕೆಗೆ ಜೂ.8 ಕೊನೆಯ ದಿನವಾಗಿದೆ. ಜೂ.9 ಮಂಗಳವಾರ ನಾಮಪತ್ರ ಪರಿಶೀಲನೆಯಾಗಲಿದೆ. ಜೂ.11 ಗುರುವಾರ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಜೂ.18 ಗುರುವಾರ ಬೆಳಗ್ಗೆ 9 ರಿಂದ 4 ಗಂಟೆಗೆ ಮತದಾನ ನಡೆಯಲಿದ್ದು, ಅದೇ ದಿನ ಸಂಜೆ 5 ಗಂಟೆಯಿಂದ ಮತ ಎಣಿಕೆ ನಡೆಯಲಿದೆ. ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಚುನಾವಣಾಧಿಕಾರಿಯಾಗಿದ್ದಾರೆ.

ಹಿಮಾಚಲದಲ್ಲಿ ಅಪಘಾತ: ವಿಜಯೇಂದ್ರ ಸಂತಾಪ

• **ಬೆಂಗಳೂರು:** ಹಿಮಾಚಲ ಪ್ರದೇಶದ ಚಂಬಾದ ಸಚ್ ಪಾಸ್ ಬಳಿ ಭಾನುವಾರ ಸಂಭವಿಸಿರುವ ಭೀಕರ ಅಪಘಾತದಲ್ಲಿ ಬೆಂಗಳೂರಿನ ಎರಡು ಕುಟುಂಬಗಳ ಒಟ್ಟು 7 ಜನರು ಸೇರಿದಂತೆ ಒಟ್ಟು 8 ಮಂದಿ ಮೃತಪಟ್ಟ ಸುದ್ದಿ ತಿಳಿದು ಅತ್ಯಂತ ಆಘಾತವಾಗಿದೆ. ಪ್ರವಾಸಕ್ಕೆ ತೆರಳಿದ್ದ ಕುಟುಂಬಗಳು ಹೀಗೆ ದುರಂತ ಅಂತ್ಯ ಕಂಡಿರುವುದು ನಿಜಕ್ಕೂ ಅತ್ಯಂತ ದುಃಖದ ಸಂಗತಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಘಟನೆ ಕುರಿತು ಎಕ್ಸ್‌ನಲ್ಲಿ ಬೇಸರ ವ್ಯಕ್ತಪಡಿಸಿರುವ ಅವರು, ರಾಜ್ಯ ಸರ್ಕಾರ ಹಿಮಾಚಲ ಪ್ರದೇಶ ಸರ್ಕಾರದೊಂದಿಗೆ ಸಂಪರ್ಕ, ಸಮನ್ವಯ ಸಾಧಿಸಿ ಮೃತರ ಪಾರ್ಥಿವ ಶರೀರಗಳನ್ನು ಬೆಂಗಳೂರಿಗೆ ಮರಳಿ ತರುವುದೂ ಸೇರಿದಂತೆ ಸಂತ್ರಸ್ತ ಕುಟುಂಬಗಳಿಗೆ ಅಗತ್ಯವಿರುವ ಎಲ್ಲಾ ನೆರವು ನೀಡುವಂತೆ ಒತ್ತಾಯಿಸುವುದಾಗಿ ತಿಳಿಸಿದ್ದು, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ಶೋಕತಪ್ತ ಕುಟುಂಬಗಳ ಸದಸ್ಯರಿಗೆ ಈ ಅನಿರೀಕ್ಷಿತ ನೋವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ಕಾವೇರಿ ನೀರು ಹಂಚಿಕೆ ತೀರ್ಪು: ರಿಟ್ ಅರ್ಜಿ ಸಲ್ಲಿಕೆ

• **ಬೆಂಗಳೂರು:** ಕಾವೇರಿ ನದಿ ನೀರು ಹಂಚಿಕೆ ತೀರ್ಪಿಗೆ ಸಂಬಂಧಿಸಿದಂತೆ ಕಾವೇರಿ ನದಿ ರಕ್ಷಣಾ ಸಮಿತಿಯಿಂದ ಸರ್ವೋಚ್ಚ ನ್ಯಾಯಾಲಯದಲ್ಲಿ ಮರುಪರಿಶೀಲನಾ ರಿಟ್ ಅರ್ಜಿ ಸಲ್ಲಿಕೆ ಮಾಡಲಾಗಿದೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಗೋಪಾಲಗೌಡರ ಬೆಂಗಳೂರಿನ ಕಚೇರಿಯಲ್ಲಿ ನಡೆದಿದ್ದ ಪೂರ್ವಭಾವಿ ಸಭೆಯ ನಿರ್ಣಯದಂತೆ ಈ ಕಾನೂನು ಹೋರಾಟವನ್ನು ಮುಂದುವರಿಸಲಾಗಿದೆ.



ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುಪ್ರಿಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಗೋಪಾಲಗೌಡ ಹಾಗೂ ಡಾ.ನಿಶ್ಚಲಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಈ ಮಹತ್ವದ ಹೆಜ್ಜೆ ಇಡಲಾಗಿದೆ. ಸುಪ್ರೀಂ ಕೋರ್ಟ್ ಹಿರಿಯ ನ್ಯಾಯವಾದಿ ಬ್ರಿಜೇಶ್ ಕಾಳಪ್ಪ, ನೀರಾವರಿ ತಜ್ಞರು ಹಾಗೂ ಮಾಜಿ ಮುಖ್ಯಮಂತ್ರಿಗಳ ಸಲಹೆಗಾರ ವೆಂಕಟರಾಮು, ಸಮಿತಿಯ ಹಿರಿಯ ಉಪಾಧ್ಯಕ್ಷ ಅಂದಾನಪ್ಪ ಲಗ್ಗೆರೆ ಹಾಗೂ ಕಾವೇರಿ ನದಿ ರಕ್ಷಣಾ ಸಮಿತಿಯ ಅಧ್ಯಕ್ಷ ಎಚ್.ಕೆ. ರಾಮು ನೇತೃತ್ವದಲ್ಲಿ, ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ ಗುರುದತ್ತ ಅಂಕೋಲ್ಕರ್ ಅವರ ಮೂಲಕ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ಸಮಿತಿ ತಿಳಿಸಿದೆ.

ಹಿಜಾಬ್ ಆದೇಶದಿಂದ ಮಕ್ಕಳಲ್ಲಿ ದ್ವೇಷದ ವಿಷಬೀಜ: ವಿಜಯೇಂದ್ರ
ಸರ್ಕಾರದ ನೀತಿಗೆ ಖಂಡನೆ

• **ಕಲಬುರಗಿ:** ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಗೆ ಅವಕಾಶ ನೀಡಿರುವ ಸರ್ಕಾರದ ನೀತಿಯನ್ನು ಖಂಡಿಸಿಯ. ರಾಜ್ಯ ಸರ್ಕಾರ ಹಿಜಾಬ್‌ಗೆ ಆದೇಶ ಮಾಡುವ ಮೂಲಕ ಎಳೆಯ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಧರ್ಮದ ಹೆಸರಿನಲ್ಲಿ ದ್ವೇಷದ ಭಾವನೆ ಹಾಗೂ ತಾರತಮ್ಯದ ವಿಷಬೀಜ ಬಿತ್ತುವ ಕೆಲಸವನ್ನು ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.



ಸೋಮವಾರ ಆಳಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಲಭೆಕೋರರ ಮೇಲಿನ ಕೇಸ್ ವಾಪಸ್ ಪಡೆದಿರುವುದು ಖಂಡಿಸಿ ನಗರದ ಸರ್ದಾರ್ ವಲ್ಲಭ ಭಾಯ್ ಪಟೇಲ್(ಎಸ್‌ವಿಪಿ) ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ನಡೆದ ಬೃಹತ್ ಪ್ರತಿಭಟನಾ ರ್ಯಾಲಿ ನೇತೃತ್ವ ವಹಿಸಿ ಅವರು ಮಾತನಾಡಿದರು.

ಇವರು ಅಧಿಕಾರದ ಮದದಿಂದ ಎಲ್ಲವನ್ನೂ ಅರಗಿಸಿಕೊಳ್ಳುತ್ತೇವೆ ಎಂಬ ಅಹಂಕಾರದಲ್ಲಿದ್ದಾರೆ. ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದರೂ ರಾಜ್ಯ ಉದ್ಧಾರವಾಗುವುದಿಲ್ಲ ಎಂದು ಹೇಳಿದರು. ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ್ ಮಾತನಾಡಿ, ಹಿಂದೂಗಳಿಗೆ ಒಂದು ನ್ಯಾಯ ಮುಸ್ಲಿಮರಿಗೆ ಒಂದು ನ್ಯಾಯವೇ? ಎಂದು ಪ್ರಶ್ನಿಸಿದರು.

ಶಾಸಕ ಬಸವರಾಜ್ ಮತ್ತಿಮಡು ಮಾತನಾಡಿ, ಸರ್ಕಾರ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಕೇಸ್ ವಾಪಸ್ ಪಡೆದಿದೆ. ಕಲಬುರಗಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಹಿಂದೂಗಳ ಮೇಲೆ ದೌರ್ಜನ್ಯ ನಡೆದರೆ ಪೊಲೀಸರು ಕೇಸ್ ದಾಖಲಿಸಿಕೊಳ್ಳುವುದಿಲ್ಲ, ಅದೇ ಮುಸ್ಲಿಮರ ಮೇಲೆ ಸಣ್ಣ ಘಟನೆಯಾದರೂ ತಕ್ಷಣ ಕೇಸ್ ಹಾಕುತ್ತಾರೆ. ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸುತ್ತಾರೆ ಎಂದರು.

> **ಕಾಂಗ್ರೆಸ್ ಓಲೈಕೆ ರಾಜಕಾರಣಕ್ಕಾಗಿ ಆಳಂದ ಗಲಭೆ ಕೇಸ್ ವಾಪಸ್ ಪಡೆದಿದೆ. ಕಳೆದ 3 ವರ್ಷಗಳಿಂದ ಕೆಡಿಪಿ, ದಿಶಾ ಸಭೆ ನಡೆದಿಲ್ಲ, ಸಂವಿಧಾನದ ಬಗ್ಗೆ ಮಾತನಾಡುವ ಜಿಲ್ಲಾ ಉಸ್ತುವಾರಿ ಸಚಿವ ಖರ್ಗೆ 'ಸ್ಪೆಷಲ್ ಬೇಬಿ ಆಫ್ ಇಂಡಿಯಾ' ಆಗಿದ್ದು, ಸಂಪುಟದಲ್ಲೇ ಸಂವಿಧಾನ ಕಗ್ಗೊಲೆಯಾಗಿದೆ. ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದು ಬಹುಸಂಖ್ಯಾತ ಹಿಂದೂಗಳಿಗೆ ನ್ಯಾಯ ಸಿಗಲಿದೆ.**
> ■ **ಡಾ. ಉಮೇಶ್ ಜಾಧವ್, ಮಾಜಿ ಸಂಸದ**

ಮುಖಂಡ ಸಂಜಯ್ ಮಿಸ್ಕಿನ್ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ, ಜಿಲ್ಲಾಧ್ಯಕ್ಷ ಅಶೋಕ ಬಗಲಿ, ಮಾಜಿ ಸಚಿವ ರಾಜುಗೌಡ, ದತ್ತಾತ್ರೇಯ ಪಾಟೀಲ್, ಅರುಣ ಶಹಾಪುರ, ಹರ್ಷಾನಂದ್ ಗುತ್ತೇದಾರ್ ಮಾತನಾಡಿದರು.ಮಾಜಿ ಶಾಸಕರಾದ ಶೈಲೇಂದ್ರ ಬೆಲ್ದಾಳೆ, ಅವಿನಾಶ್ ಜಾಧವ, ಎಂಎಲ್ಸಿ ಬಿ ಜಿ ಪಾಟೀಲ್, ಶಶೀಲ್ ನಮೋಶಿ,ವೆಂಕಟರೆಡ್ಡಿ ಮುದ್ನಾಳ್, ಶಿವಯೋಗಿ ನಾಗನಹಳ್ಳಿ, ಬಸವರಾಜ ಬೆಣ್ಣೂರ, ಲಿಂಗರಾಜ ಬಿರಾದಾರ, ಅಮರನಾಥ್ ಪಾಟೀಲ್, ಶಿವರಾಜ್ ಪಾಟೀಲ್ ಅವ್ವಣ್ಣ ಮ್ಯಾಕೇರಿ, ಸಾಯಿಬಣ್ಣ ತಳವಾರ್, ಅಂಬರಾಯ ಅಷ್ಟಗಿ, ಧರ್ಮಣ್ಣ ಇಟಗಿ, ಶೋಭಾ ಬಾಣಿ, ಮಹದೇವ್ ಬೆಳಮಗಿ, ಗಿರಿರಾಜ್ ಯಳಮೇಲಿ, ಇಂದಿರಾಶಕ್ತಿ, ವಿಜಯಲಕ್ಷ್ಮಿ ಗೊಬ್ಬುರಕರ್, ಶಾಂತಬಾಯಿ, ಸಂತೋಷಿ ರಾಣಿ, ಸುಧಾ ಹಾಲ್ಕಾಯಿ, ಭಾಗೀರಥಿ ಗುನ್ನಾಪುರ ಇದ್ದರು.

30ರವರೆಗೆ ಲಾಲ್‌ಬಾಗ್‌ನಲ್ಲಿ ಮಾವು ಮೇಳ
ಮೇಳಕ್ಕೆ ಉತ್ತಮ ಸ್ಪಂದನೆ

• **ಬೆಂಗಳೂರು:** ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಜೂ.4ರಿಂದ 30ರವರೆಗೆ ಲಾಲ್‌ಬಾಗ್‌ನಲ್ಲಿ ಮಾವು ಮತ್ತು ಹಲಸು ಮೇಳ-2026 ಅನ್ನು ಆಯೋಜಿಸಲಾಗಿದೆ ಎಂದು ನಿಗಮದ ಅಧ್ಯಕ್ಷ ಡಾ.ಬಿ.ಸಿ.ಮುದ್ದುಗಂಗಾಧರ್ ತಿಳಿಸಿದರು.



ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೇ ತಿಂಗಳಲ್ಲಿ ಕಬ್ಬನ್ ಪಾರ್ಕ್‌ನಲ್ಲಿ ನಡೆದ ಮಾವು-ಹಲಸು ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದ್ದು, ಸುಮಾರು 53 ರಿಂದ 57 ಟನ್‌ಗಳಷ್ಟು ಮಾವು ಮತ್ತು 1.5 ಟನ್‌ಗಳಷ್ಟು ಹಲಸು ಮಾರಾಟ ಮಾಡಿ ಉತ್ತಮ ಆದಾಯ ಗಳಿಸಿದ್ದಾರೆ. ಈ ಯಶಸ್ಸಿನ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ರೈತರು ಹಾಗೂ ಹಣ್ಣು ಪ್ರಿಯರನ್ನು ಒಂದೇ ವೇದಿಕೆಗೆ ತರುವ ಉದ್ದೇಶ ಲಾಲ್‌ಬಾಗ್‌ನಲ್ಲಿ ಮೇಳ ಆಯೋಜಿಸಲಾಗಿದೆ.

150 ಟನ್‌ಗೂ ಅಧಿಕ ಮಾರಾಟ

ನಿಗಮದ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ವೇದಮೂರ್ತಿ ಮಾತನಾಡಿ, ಈ ಬಾರಿ ಮಳೆಯಿಂದ ನಿರೀಕ್ಷಿತ ಪ್ರಮಾಣದಲ್ಲಿ ಇಳುವರಿ ಬಂದಿಲ್ಲ. ಆದಾಗ್ಯೂ, ಮೇಳದಲ್ಲಿ 150 ಟನ್‌ಗೂ ಅಧಿಕ ಮಾವು ಮತ್ತು 10-15 ಟನ್‌ಗೂ ಅಧಿಕ ಹಲಸು ಮಾರಾಟವಾಗುವ ನಿರೀಕ್ಷೆಯಿದೆ. ಸುಮಾರು. 1.8 ಕೋಟಿಗೂ ಅಧಿಕ ವಹಿವಾಟು ನಡೆಯುವ ಸಾಧ್ಯತೆಯಿದೆ ಎಂದರು.

170ಕ್ಕೂ ಅಧಿಕ ಮಳಿಗೆ ತೆರೆಯಲು ಅವಕಾಶ

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ತುಮಕೂರು, ಮಂಡ್ಯ, ಕೊಪ್ಪಳ, ಧಾರವಾಡ, ಬೆಂಗಳೂರು ಗ್ರಾಮಾಂತರ ಹಾಗೂ ಹಾಸನ ಜಿಲ್ಲೆಗಳ ರೈತರು ನೇರವಾಗಿ ಗ್ರಾಹಕರಿಗೆ ಹಣ್ಣುಗಳನ್ನು ಮಾರಾಟ ಮಾಡಲಿದ್ದಾರೆ. ಒಟ್ಟು 168 ಮಾವು ಬೆಳೆಗಾರರ ಮಳಿಗೆಗಳು ಹಾಗೂ 17 ಹಲಸು ಬೆಳೆಗಾರರ ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ. ಸಹಜವಾಗಿ ಮಾಗಿದ ಗುಣಮಟ್ಟದ ಹಣ್ಣುಗಳನ್ನು ರೈತರಿಂದ ನೇರವಾಗಿ ಒದಗಿಸುವುದರ ಜತೆಗೆ ಜ್ಯೂಸ್, ಜಾಮ್, ಉಪ್ಪಿನಕಾಯಿ, ಕ್ಯಾಂಡಿ, ಚಿಪ್ಸ್, ಪಲ್ಪ್ ಹಾಗೂ ಐಸ್‌ಕ್ರೀಂ ಸೇರಿದಂತೆ ಮಾವು ಮತ್ತು ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳೂ ಲಭ್ಯವಿರಲಿವೆ.

ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ: ವಿ.ಸೋಮಣ್ಣ

• **ಗುಬ್ಬಿ:** ಅಭಿವೃದ್ಧಿ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದು ನಾಣ್ಯದ ಎರಡು ಮುಖಗಳಂತೆ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಪರಸ್ಪರ ಸಹಕಾರದ ಕೊರತೆಯಿದ್ದರೆ ಜನಪರ ಯೋಜನೆಗಳು ಜನರಿಗೆ ತಲು ಪುವುದಿಲ್ಲ ಎಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯಸಚಿವ ವಿ.ಸೋಮಣ್ಣ ತಿಳಿಸಿದರು.



ತಾಲೂಕಿನ ಕಸಬಾ ಹೋಬಳಿಯ ಕಳ್ಳಿಪಾಳ್ಯ ರೈಲ್ವೆ ಗೇಟ್ ಬಳಿ ನಿರ್ಮಾಣವಾಗಲಿರುವ ರೈಲ್ವೆ ಕೆಳಸೇತುವೆ ಕಾಮಗಾರಿಗೆ ಸೋಮವಾರ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಗುಬ್ಬಿ ತಾಲೂಕೊಂದರಲ್ಲೇ ಒಟ್ಟು 10 ರೈಲ್ವೆ ಕೆಳಸೇತುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಜಿಲ್ಲೆಯಾದ್ಯಂತ ಸುಮಾರು 2,000 ಕೋಟಿ ರೂ. ವೆಚ್ಚದ ವಿವಿಧ ಯೋಜನೆಗಳು ನಡೆಯುತ್ತಿವೆ.

ತುಮಕೂರು ಸಮೀಪ 4,000 ಕೋಟಿರೂ. ವೆಚ್ಚದಲ್ಲಿ ರೈಲ್ವೆ ಟರ್ಮಿನಲ್ ನಿರ್ಮಾಣವಾಗುತ್ತಿದ್ದು, ಇದರಿಂದ ಸುಮಾರು 5,000 ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ. ರಾಯದುರ್ಗ- ಪಾವಗಡ ರೈಲ್ವೆ ಮಾರ್ಗದ ಕಾಮಗಾರಿ ಇನ್ನೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿದ್ದು, ಬಳಿಕ ಮಡಕಶಿರಾ ಹಾಗೂ ಕೊರಟಗೆರೆ ಭಾಗದ ಕಾಮಗಾರಿಗಳು ಹಂತ-ಹಂತವಾಗಿ ಮುಗಿಯಲಿವೆ. ತುಮಕೂರು-ದಾವಣಗೆರೆ ರೈಲ್ವೆ ಮಾರ್ಗದ ಕಾಮಗಾರಿಯೂ ಅಂತಿಮ ಹಂತದಲ್ಲಿದೆ. ವಸಂತನರಸಾಪುರ ಕೈಗಾರಿಕಾ ವಲಯದಲ್ಲಿ 200 ಹಾಸಿಗೆಗಳ ಆಸ್ಪತ್ರೆ ಹಾಗೂ 20 ಕೋಟಿ ರೂ. ವೆಚ್ಚದಲ್ಲಿ ಮಹಿಳಾ ವಸತಿ ನಿಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ಪಂಚಮಸಾಲಿಗೆ 1 ಡಿಸಿಎಂ, 2 ಸಚಿವಗಿರಿ ನೀಡುವಂತೆ ಒತ್ತಾಯ

• **ಬೆಂಗಳೂರು:** ಪಂಚಮಸಾಲಿ ಸಮುದಾಯಕ್ಕೆ ಒಂದು ಉಪಮುಖ್ಯಮಂತ್ರಿ ಸ್ಥಾನ ಸೇರಿ ಮೂರು ಸಚಿವ ಸ್ಥಾನಗಳನ್ನು ನೀಡಲೇಬೇಕು ಎಂದು ಪಂಚಮಸಾಲಿ ಸಮುದಾಯದ ಮುಖಂಡ ಬಸವರಾಜ ದಿಂಡೂರ್ ತಿಳಿಸಿದರು.

ಸೋಮವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ವೀರಶೈವ ಲಿಂಗಾಯುತ ದೊಡ್ಡ ಸಮುದಾಯವಾಗಿದ್ದು, ಶೇ.80ರಷ್ಟು ಇರುವ ಸಮುದಾಯಕ್ಕೆ ಇದುವರೆಗೂ ಯಾವ ಸರ್ಕಾರಗಳು ಕೊಡಬೇಕಾದ ಆದ್ಯತೆ ನೀಡಿಲ್ಲ. ನಿಜಲಿಂಗಪ್ಪ ಜೆ.ಎಚ್ ಪಟೇಲ್ ಸಿಎಂ ಆಗಿದ್ದು, ಈಗ ಕಾಲ ಸನ್ನಿತವಾಗಿದೆ. ಈಗ ಉಪಮುಖ್ಯಮಂತ್ರಿ ಸ್ಥಾನ ನೀಡಿಡಿದರೆ, ಮುಂದೆ ಅವಕಾಶ ಸಿಗುತ್ತದೆ ಎಂದು ಹೇಳಿದರು.

ಕ್ರಿಯಾಶೀಲ ಇರುವ ವ್ಯಕ್ತಿಗೆ ಅವಕಾಶ ನೀಡಿದರೆ ಅನುಕೂಲ ಆಗುತ್ತದೆ. ನಮ್ಮ ಮನವಿಗೆ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಸ್ಪಂದನೆ ಮಾಡಿದ್ದಾರೆ. ಹೈಕಮಾಂಡ್ ಜತೆಗೆ ಚರ್ಚಿಸುತ್ತೇವೆ ಎಂದು ಹೇಳಿದ್ದಾರೆ. ದಿಲ್ಲಿಗೆ ಹೋಗಿ ರಾಹುಲ್ ಗಾಂಧಿ ಮತ್ತು ವೇಣುಗೋಪಾಲ್ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ ಎಂದು ತಿಳಿಸಿದರು. ರಾಜ್ಯದ ಸಮಗ್ರ ಅಭಿವೃದ್ಧಿ ಮತ್ತು ಸಾಮಾಜಿಕ ಸಮತೋಲನದ ದೃಷ್ಟಿಯಿಂದ ಪಂಚಮಸಾಲಿ ಸಮುದಾಯಕ್ಕೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡುವುದು ಅನಿವಾರ್ಯವಾಗಿದೆ.



ಮುಂದಿನ ದಿನಗಳಲ್ಲಿ ಪಕ್ಷ ಮತ್ತು ಸರ್ಕಾರದ ಮೇಲಿನ ವಿಶ್ವಾಸವನ್ನು ಮತ್ತು ಬಲಪಡಿಸುವ ಉದ್ದೇಶದಿಂದಲೂ ನಮ್ಮ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಕಾಶಪ್ಪನವರ್‌ಗೆ ಅವಕಾಶ ಸಿಗಲಿ: ಯಾರಿಗೆ ಅವಕಾಶ ನೀಡಬೇಕೆಂದು ಹೈಕಮಾಂಡ್ ತೀರ್ಮಾನ ಮಾಡಲಿ. ಆಯ್ಕೆಯನ್ನು ಪಕ್ಷಕ್ಕೆ ಬಿಟ್ಟಿದ್ದೇವೆ. ಬಹಳ ಜನ ಆಕಾಂಕ್ಷಿಗಳಿದ್ದಾರೆ, ಎಂ.ವೈ. ಪಾಟೀಲ, ಬಿ.ಆರ್. ಪಾಟೀಲ, ಅಲ್ಲಮಪ್ರಭು ಪಾಟೀಲ ಇದ್ದಾರೆ. ಶಾಸಕ ವಿಜಯಾನಂದ ಕಾಶಪ್ಪನವರ್ 2 ಬಾರಿ ಶಾಸಕರಾಗಿದ್ದು, ಸಮಾಜದಲ್ಲಿ ಸಂಚಲನ ಮೂಡಿಸಿದ್ದಾರೆ. ಅವರ ವೀಣಾ ಅವರು ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿಯಾಗಿದ್ದು, ಮಹಾಸಭೆಯ ಮಹಿಳಾ ಘಟಕ ಅಧ್ಯಕ್ಷರಾಗಿದ್ದು, ಅವರ ಕುಟುಂಬ ಸಾಕಷ್ಟು ಸೇವೆ ಸಲ್ಲಿಸಿರುವುದರಿಂದ 4 ದಶಕಗಳಿಂದ ಪಕ್ಷ ನಿಷ್ಠೆಯಿಂದ ಇರುವ ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಿದರೆ, ಒಳ್ಳೆಯದು ಎಂದು ತಿಳಿಸಿದರು.

ಅತ್ಯಾಚಾರ ಆರೋಪಿ ಜಾಮೀನಿಗೆ ನಕಾರ

• **ಬೆಂಗಳೂರು:** ಮಣಿಪಾಲ್ ತಂತ್ರಜ್ಞಾನ ಸಂಸ್ಥೆಯ ವಿದ್ಯಾರ್ಥಿಯಾಗಿದ್ದಾಗ ಸಹಪಾಠಿ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿರುವ ಆರೋಪಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ. ಈ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿ ಎರಡು ತಿಂಗಳಿಂದ ಜೈಲಿನಲ್ಲಿರುವ ಗೋಪಿ ಕಾರ್ತಿಕ್ ರೆಡ್ಡಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಆರ್. ನಟರಾಜ್ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಅಪರಾಧಿಗಳ ವಿರುದ್ಧ ಕಠಿಣ ನಿಲುವು ತಳೆಯದೇ ಇರುವುದರಿಂದ ಕಾನೂನು ತನ್ನ ಪ್ರಾಮುಖ್ಯತೆ ಕಳೆದುಕೊಂಡಿದೆ. ಈ ಕಾರಣಕ್ಕಾಗಿ ಅಪರಾಧ ಎಸಗುವುದು ಸುಲಭವಾಗಿದೆ ಎಂದು ನ್ಯಾಯಾಲಯ ಹೇಳಿದೆ.



ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಮಾಡಿದ ರೀತಿ ಕಾಲೋ, ಕೈಯ್ಯೊ ಕತ್ತರಿಸಿದರೆ ಮಾತ್ರ ಜನರು ಕಾನೂನು ಪಾಲಿಸಬೇಕು ಎಂದು ಅರ್ಥೈಸಿಕೊಳ್ಳಬಹುದು. ನಮ್ಮಲ್ಲಿ ಪ್ರಜಾಪ್ರಭುತ್ವ ಇರುವುದರಿಂದ ಎಲ್ಲರೂ ಸರಾಗವಾಗಿ ತೆಗೆದುಕೊಳ್ಳುತ್ತಾರೆ ಎಂದ ನ್ಯಾಯಾಲಯ ಹೇಳಿದೆ. ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು. ಆತ ಇನ್ನೂ ನಾಲ್ಕೈದು ದಿನ ಜೈಲಿನಲ್ಲಿರಲಿ ಬಿಡಿ. ಜೈಲಿನ ಅನುಭವವಾಗಲಿ. ಶಿಕ್ಷೆ ವಿಧಿಸಿದರೆ ನೀವು ಮತ್ತೆ ಜೈಲಿಗೆ ಹೋಗಬೇಕಾಗುವುದು, ಯಾರಿಗೆ ಗೊತ್ತು ಎಂದಿತು. ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ಜೂನ್ 8ಕ್ಕೆ ಮುಂದೂಡಿತು.

2023ರ ಸೆ.12ರಂದು ಸಂತ್ರಸ್ತೆಯನ್ನು ಆರೋಪಿಯು ಪುಸಲಾಯಿಸಿ ತಮ್ಮ ಸಂಬಂಧದ ಬಗ್ಗೆ ಚರ್ಚಿಸಲು ತಾನಿದ್ದ ಅಪಾರ್ಟ್‌ಮೆಂಟ್ ಕರೆದೊಯ್ದಿದ್ದನು. ಈ ವೇಳೆ ಆತ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನು. ಈ ದೂರಿನ ಆಧಾರದಲ್ಲಿ ಆರೋಪಿಯ ವಿರುದ್ಧ ಉಡುಪಿ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕರ್ನಾಟಕ ಮೂಲದ ಬಾಲಿವುಡ್ ಗಾಯಕಿ | ಮುಂಬೈನಲ್ಲಿ ಅಂತ್ಯಕ್ರಿಯೆ
ಖ್ಯಾತ ಗಾಯಕಿ ಸುಮನ್ ಕಲ್ಯಾಣಪುರ್ ಇನ್ನಿಲ್ಲ

• **ಮುಂಬೈ:** ಭಾರತೀಯ ಚಿತ್ರರಂಗದ ಸುವರ್ಣಯುಗದ ಖ್ಯಾತ ಹಿನ್ನೆಲೆ ಗಾಯಕಿ, ಪದ್ಮಭೂಷಣ ಪುರಸ್ಕೃತೆ ಸುಮನ್ ಕಲ್ಯಾಣಪುರ್ ಅವರ ಅಂತ್ಯಕ್ರಿಯೆ ಸೋಮವಾರ ಮುಂಬೈನಲ್ಲಿ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು. 89 ವರ್ಷದ ಸುಮನ್ ಕಲ್ಯಾಣಪುರ ಅವರು ವಯೋಸಹಜ ಅನಾರೋಗ್ಯದಿಂದ ಭಾನುವಾರ ರಾತ್ರಿ ನಿಧನರಾಗಿದ್ದರು.

ಮುಂಬೈನ ಸಾಂತಾಕ್ರೂಜ್ ಚಿತಾಗಾರದಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಅವರ ಪಾರ್ಥಿವ ಶರೀರವನ್ನು ತ್ರಿವರ್ಣ ಧ್ವಜದಿಂದ ಹೊದಿಸಿ ಗೌರವಿಸಲಾಯಿತು. ಮುಂಬೈ ಪೊಲೀಸ್ ಸಿಬ್ಬಂದಿ ಗೌರವ ವಂದನೆ ಸಲ್ಲಿಸಿದರು. ಪುತ್ರಿ ಚಾರು ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು. ಈ ವೇಳೆ ಕುಟುಂಬಸ್ಥರು ಹಾಗೂ ಅಭಿಮಾನಿಗಳು ಅವರ ಅಮರ ಗೀತೆ ರಹೇನ್ ನಾ ರಹೇನ್ ಹಮ್, ಮಹೇಕಾ



ಕರೇಂಗೇ ಹಾಡಿನ ಮೂಲಕ ಅಂತಿಮ ನಮನ ಸಲ್ಲಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂತಾಪ ಸೂಚಿಸಿ, ಭಾರತೀಯ ಸಂಗೀತ ಲೋಕವನ್ನು ಶ್ರೀಮಂತಗೊಳಿಸಿದ್ದ ಸುಮನ್ ಕಲ್ಯಾಣಪುರ ಅವರ ನಿಧನ ಕಲಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದ್ದಾರೆ.

ಕುಂದಾಪುರ ಮೂಲದ ಕುಟುಂಬ

ಸುಮನ್ ಕಲ್ಯಾಣಪುರ್ ಅವರದ್ದು ಮೂಲತಃ ಉಡುಪಿಯ ಕುಂದಾಪುರ ತಾಲೂಕಿನ ಹೆಮ್ಮಾಡಿಯ ಕುಟುಂಬ. ಇವರ ತಂದೆ ಶಂಕರ ರಾವ್ ಹೆಮ್ಮಾಡಿ. ಇವರು ಆಗಿನ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದು, ಬ್ರಿಟಿಷರ ಅವಧಿಯಲ್ಲಿ ಢಾಕಾಗೆ ನಿಯೋಜಿಸಲಾಗಿತ್ತು. ಹೀಗಾಗಿ, ಸುಮನ್ ಕಲ್ಯಾಣಪುರ್ ಅವರು ಢಾಕಾದಲ್ಲೇ ಜನಿಸಿದ್ದರು. ಕನ್ನಡದಲ್ಲಿ ಮೂರು ಗೀತೆ ಹಾಡಿದ್ದಾರೆ. ಒಡನಾಡಿ ಬೇಕೆಂದು, ಹನಿ ಹನಿ ಹೀರಿ ತಾನಿ ಹರೆಯ ಮತ್ತು ತಲ್ಲಣ ನೂರು ಬಗೆ ಎಂಬ ಹಾಡುಗಳಿಗೆ ಧ್ವನಿ ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಸಂತಾಪ ವ್ಯಕ್ತಪಡಿಸಿ, ಅವರ ಸುಮಧುರ ಕಂಠ ಮತ್ತು ಭಾವಪೂರ್ಣ ಗಾಯನ ಭಾರತೀಯ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿತ್ತು ಎಂದು ತಿಳಿಸಿದ್ದಾರೆ.

ಹಿಂದಿ ಚಿತ್ರರಂಗದಲ್ಲಿ ಲತಾ ಮಂಗೇಶ್ಕರ್ ಮತ್ತು ಆಶಾ ಬೋಸ್ಲೆ ಅವರ ಪ್ರಾಬಲ್ಯದ ನಡುವೆಯೂ ಸುಮನ್ ಕಲ್ಯಾಣಪುರ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ನಿರ್ಮಿಸಿಕೊಂಡಿದ್ದರು. ನಾ ತುಮ್ ಹಮೇನ್ ಜಾನೋ, ಆಜ್ ಕಲ ತೆರೆ ಮೇರೆ ಪ್ಯಾರ್ ಕೆ ಚರ್ಚೆ, ಬಹ್ನಾ ನೆ ಭಾಯಿ ಕಿ ಕಲಾಯಿ ಮೇಂ ಸೇರಿದಂತೆ ಅನೇಕ ಜನಪ್ರಿಯ ಗೀತೆಗಳನ್ನು ಅವರು ಹಾಡಿದ್ದರು.

1937ರಲ್ಲಿ ಇಂದಿನ ಢಾಕಾ ನಗರದಲ್ಲಿ ಜನಿಸಿದ್ದ ಸುಮನ್ ಕಲ್ಯಾಣಪುರ ಅವರು ಹಿಂದಿ, ಕನ್ನಡ, ಮರಾಠಿ, ಬೆಂಗಾಲಿ ಸೇರಿದಂತೆ 13 ಭಾರತೀಯ ಭಾಷೆಗಳಲ್ಲಿ 3,500ಕ್ಕೂ ಹೆಚ್ಚು ಹಾಡುಗಳಿಗೆ ಕಂಠ ನೀಡಿದ್ದಾರೆ. 2023ರಲ್ಲಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಸಿಲಿಂಡರ್ ದರ ಏರಿಕೆ ಖಂಡಿಸಿದ ಮಲ್ಲಿಕಾರ್ಜುನ ಖರ್ಗೆ
ವಿಶ್ವಾಸ ಕಳೆದುಕೊಂಡ ಕೇಂದ್ರ

• **ಕಲಬುರಗಿ:** ಕೇಂದ್ರದ ಬಿಜೆಪಿ ಸರ್ಕಾರ ಬರೀ ಮಾತಿನ ಮಲ್ಲನ ಸರ್ಕಾರವಾಗಿದ್ದು, ದೇಶದ ಜನರ ಬಗ್ಗೆ ಯಾವುದೇ ಕಾಳಜಿ ಇಲ್ಲ. ದಿನೇ ದಿನೇ ಬೆಲೆ ಏರಿಕೆ ಮಾಡುವ ಮೂಲಕ ಕೇಂದ್ರ ಸರ್ಕಾರ ಸಾರ್ವಜನಿಕರ ವಿಶ್ವಾಸವನ್ನು ಸಂಪೂರ್ಣ ವಾಗಿ ಕಳೆದುಕೊಂಡಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೀವ್ರ ವಾಗ್ದಾಳಿ ನಡೆಸಿದರು.



ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ದರ ಏರಿಕೆಯಾಗಿರುವುದನ್ನು ಖಂಡಿಸಿ ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳ ವಿರುದ್ಧ ಕಠಿಣ ಶಬ್ದಗಳಲ್ಲಿ ವಿರೋಧ ವ್ಯಕ್ತಪಡಿಸಿದರು.

ದಿನ ಬಿಟ್ಟು ದಿನ ಬೆಲೆ ಏರಿಕೆ: ಪ್ರಧಾನಿ ನರೇಂದ್ರ ಮೋದಿ ಅವರು ಗ್ಯಾಸ್, ಪೆಟ್ರೋಲ್ ಹಾಗೂ ಡೀಸೆಲ್ ದರಗಳನ್ನು ದಿನ ಬಿಟ್ಟು ದಿನ ಏರಿಕೆ ಮಾಡುತ್ತಿದ್ದಾರೆ. ಬರೀ ಬಾಯಿ ಮಾತಿನಲ್ಲೇ ದೇಶದ ಸಮಸ್ಯೆಗಳಿಗೆ ಪರಿಹಾರ ಹೇಳುವ ನಾಟಕ ಆಡುತ್ತಿದ್ದಾರೆಯೇ ವಿನಃ, ವಾಸ್ತವದಲ್ಲಿ ಯಾವುದೇ ನಿಜವಾದ ಪರಿಹಾರವನ್ನು ಮಾಡುತ್ತಿಲ್ಲ. ತಮ್ಮದೇ ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳಲು ವಿರೋಧ ಪಕ್ಷದವರು ತಮಗೆ ಸಹಕಾರ ನೀಡುತ್ತಿಲ್ಲ ಎಂದು ಸದಾ ಸುಳ್ಳು ಆರೋಪ ಮಾಡುವುದನ್ನೇ ರೂಢಿಸಿಕೊಂಡಿದ್ದಾರೆ ಎಂದು ಖರ್ಗೆ ಕಿಡಿಕಾರಿದರು.

ಆರ್ಥಿಕತೆ ಕುಸಿತ, ನಿರುದ್ಯೋಗ ತಾಂಡವ

ದೇಶದ ಪ್ರಸಕ್ತ ಆರ್ಥಿಕ ಪರಿಸ್ಥಿತಿಯ ಕುರಿತು ಕಳವಳ ವ್ಯಕ್ತಪಡಿಸಿದ ಅವರು, ರಾಷ್ಟ್ರದಲ್ಲಿ ರೂಪಾಯಿ ಮೌಲ್ಯ ದಿನದಿಂದ ದಿನಕ್ಕೆ ಪಾತಾಳಕ್ಕೆ ಕುಸಿಯುತ್ತಿದೆ. ಇನ್ನೊಂದೆಡೆ ನಿರುದ್ಯೋಗ ಸಮಸ್ಯೆ ದೇಶಾದ್ಯಂತ ತಾಂಡವವಾಡುತ್ತಿದೆ. ಗ್ರಾಮೀಣ ಭಾಗದ ಬಡವರಿಗೆ ಆಸರೆಯಾಗಿದ್ದ 'ಮನರೇಗಾ' (ಉದ್ಯೋಗ ಖಾತರಿ) ಸೇರಿದಂತೆ ಹಲವು ಪ್ರಮುಖ ಜನಕಲ್ಯಾಣ ಕಾರ್ಯಕ್ರಮಗಳಿಗೆ ಹಣ ನೀಡಲು ಈ ಕೇಂದ್ರ ಸರ್ಕಾರದ ಬಳಿ ದುಡ್ಡಿಲ್ಲದಂತಾಗಿದೆ ಎಂದು ಆರೋಪಿಸಿದರು.

ಸಂಪಾದಕೀಯ

'ಈ ಸಲವೂ' ಕಪ್ ಉಳಿಸಿಕೊಂಡ ಆರ್‌ಸಿಬಿ

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ತನ್ನ ಚೊಚ್ಚಲ ಐಪಿಎಲ್ ಪ್ರಶಸ್ತಿ ಗೆಲ್ಲಲು 17 ವರ್ಷ ಕಾಯಬೇಕಾಗಿ ಬಂದಿತ್ತು. ಪ್ರತಿಬಾರಿ ಮರೀಚಿಕೆಯಾಗಿ ಉಳಿಯುತ್ತಿದ್ದ ಪ್ರಶಸ್ತಿಯು ಕೊನೆಗೂ ಕಳೆದ ವರ್ಷ ಒಲಿಯುವುದರೊಂದಿಗೆ ಆರ್ ಸಿಬಿಯ ಕಾಯುವಿಕೆ ಕೊನೆ ಕಂಡಿತ್ತು. ಆದರೆ ಕೇವಲ ಒಂದೇ ವರ್ಷದಲ್ಲಿ ಮತ್ತೊಂದು ಐಪಿಎಲ್ ಪ್ರಶಸ್ತಿ ಗೆಲ್ಲುವಲ್ಲಿ ಆರ್‌ಸಿಬಿ ಈಗ ಸಫಲತೆ ಕಂಡಿದೆ. ಐಪಿಎಲ್ 2026ರ ಪ್ರಶಸ್ತಿಯನ್ನು ಕೂಡಾ ತಾನೇ ಗೆದ್ದಿದೆ. ಆ ಮೂಲಕ ಸತತ ಎರಡು ವರ್ಷ ಪ್ರಶಸ್ತಿ ಗೆದ್ದ ಮುಂಬೈ ಮತ್ತು ಚೆನ್ನೈ ತಂಡಗಳ ಸಾಧನೆಯನ್ನು ಆರ್‌ಸಿಬಿ ಸರಿಗಟ್ಟಿದೆ. ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ



ಸರ್ವಾಂಗೀಣ ಉತ್ಕೃಷ್ಟ ಪ್ರದರ್ಶನ ನೀಡಿದ ಆರ್‌ಸಿಬಿ ಅರ್ಹವಾಗಿಯೇ ಪ್ರಶಸ್ತಿ ಗೆಲ್ಲಬಲ್ಲ ತಂಡವಾಗಿತ್ತು. ನಿಜಕ್ಕೂ ಚಾಂಪ್ಯನ್ ಆಟ ಪ್ರದರ್ಶಿಸಿದ ಹಾಲಿ ಚಾಂಪ್ಯನ್ನರು ಚಾಂಪ್ಯನ್‌ಗಳಾಗಿಯೇ ಉಳಿದುದು ಅವರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಟೂರ್ನಿಯುದ್ದಕ್ಕೂ ಆರ್‌ಸಿಬಿ ಇತರರ ಮೇಲೆ ಪ್ರಾಬಲ್ಯವನ್ನು ಮೆರೆದಿತ್ತು. ಉಳಿದೆಲ್ಲ ತಂಡಗಳಿಗಿಂತ ಹೆಚ್ಚು ಸಂತುಲಿತ ಆಟವನ್ನು ಪ್ರದರ್ಶಿಸಿತ್ತು. ಲೀಗ್ ಹಂತದಲ್ಲೂ ಅಗ್ರಸ್ಥಾನಿಯಾಗಿಯೇ ಹೊರಹೊಮ್ಮಿತ್ತು. ಆ ನಿಟ್ಟಿನಲ್ಲಿ ಇತರೆಲ್ಲ ತಂಡಗಳ ಮೇಲಿನ ಆರ್‌ಸಿಬಿ ಪಾರಮ್ಯ ನಿಚ್ಚಳವಾಗಿದೆ ಹಾಗೂ ಪ್ರಶಸ್ತಿ ಲಭಿಸಿದ್ದು ಅತ್ಯಂತ ಅರ್ಹವಾಗಿದೆ.

ಐಪಿಎಲ್ ಟೂರ್ನಿಯ ಬಗ್ಗೆ ಹೇಳುವುದಾದರೆ, ಈ ಟೂರ್ನಿಯು ದೇಶದಲ್ಲಿನ ಹಲವಾರು ಕ್ರಿಕೆಟ್ ಪ್ರತಿಭೆಗಳನ್ನು ಅನಾವರಣಗೊಳಿಸಲು ನೆರವಾಗಿದೆ. ಈ ಬಾರಿಯೂ ಕೆಲವು ಹೊಸ ಆಟಗಾರರು ತಮ್ಮ ಪ್ರತಿಭಾ ಪ್ರದರ್ಶನ ಮಾಡಿದ್ದಾರೆ. ವೈಭವ್ ಸೂರ್ಯವಂಶಿ ಎಂಬ 15ರ ಹರಯದ ಆಟಗಾರನಂತೂ ಅತ್ಯದ್ಭುತ ಪ್ರದರ್ಶನ ನೀಡಿ, ಅತ್ಯಧಿಕ ರನ್, ಅತ್ಯಧಿಕ ಸಿಕ್ಸರ್‌ಗಳೊಂದಿಗೆ ಎಲ್ಲರ ಕಣ್ಮನ ಸೆಳೆದಿದ್ದಾನೆ. ಆ ಮೂಲಕ ಭಾರತಕ್ಕೆ ಭವಿಷ್ಯದಲ್ಲೊಬ್ಬ ಸುಪರ್ ಸ್ಟಾರ್ ದೊರಕುವ ಸಾಧ್ಯತೆಗಳನ್ನು ತೆರೆದಿಟ್ಟಿದ್ದಾನೆ. ಇದೇವೇಳೆ, ವಿರಾಟ್ ಕೊಹ್ಲಿಯಂಥವರು ತಮಗೆ ವಯಸ್ಸಾಗಿದ್ದರೂ ತಮ್ಮ ಕ್ರಿಕೆಟ್ ಕೌಶಲಕ್ಕೆ ವಯಸ್ಸಾಗಿಲ್ಲ ಎಂಬುದನ್ನೂ ತೋರಿಸಿಕೊಟ್ಟಿದ್ದಾರೆ. ಟೂರ್ನಿಯುದ್ದಕ್ಕೂ ಆರ್‌ಸಿಬಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಕೊಹ್ಲಿ ಫೈನಲ್ ಪಂದ್ಯದಲ್ಲಂತೂ ನಿರ್ಣಾಯಕ ನಿರ್ವಹಣೆ ತೋರಿದರು. ಆದರೆ ತನ್ಮಧ್ಯೆ, ಹಾರ್ದಿಕ್ ಪಾಂಡ್ಯಾ, ಬೂಮ್ರಾ, ರಿಷಬ್ ಪಂತ್, ರೋಹಿತ್ ಶರ್ಮಾರಂತಹ ಕೆಲವು ಹಿರಿಯ ಆಟಗಾರರ ನಿರುತ್ಸಾಹದ ನಿರ್ವಹಣೆಗೂ ಈ ಬಾರಿಯ ಐಪಿಎಲ್ ಸಾಕ್ಷಿಯಾಯಿತು.

ಕಳೆದ ವರ್ಷ ಆರ್‌ಸಿಬಿಯ ಗೆಲುವಿನ ಸಂಭ್ರಮವು ನಂತರ ವಿಜಯೋತ್ಸವದ ವೇಳೆ ನಡೆದ ಸಾವುನೋವುಗಳಿಂದ ಕಹಿಯಾಗಿತ್ತು. ಈ ಬಾರಿಯ ವಿಜಯವು ಸಂಯಮ, ಸಂಭ್ರಮದಿಂದ ಆಚರಿಸಲ್ಪಡುವಂತಾಗಲಿ. ಸಂಭ್ರಮದ ನೆಪದಲ್ಲಿ ಭಾನುವಾರ ರಾತ್ರಿ ಕೆಲವೆಡೆ ನಡೆದಂತೆ ಅಭಿಮಾನಿಗಳ ದುಂಡಾವರ್ತಿ ಸಲ್ಲದು.

ಯುದ್ಧದ ತೊಂಬತ್ತು ದಿನಗಳಲ್ಲಿ ನಾವು ಸಾಧಿಸಿದ್ದೇನು?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕಳೆದ ವಾರದ ಪ್ರಧಾನಿ ಮೋದಿಯವರು ಮುಗಿಸಿಬಂದ ಪ್ರವಾಸದ ಮಾಹಿತಿಗಳು ಇನ್ನೂ ನಮ್ಮ ಪ್ರಜೆಗಳಿಗೆ ತಲುಪದೇ ಇರುವುದೊಂದು ದುರಂತವೇ ಸರಿ. ತಮ್ಮ ಸಾಧನೆಗಳನ್ನು ಜನರಿಗೆ ಸರಿಯಾಗಿ ತಲುಪಿಸುವತ್ತ ಕೆಲಸ ಮಾಡದಿರುವುದು ಹಾಗೂ ವಿರೋಧಪಕ್ಷದವರು ಹರಡುತ್ತಿರುವ ತಪ್ಪುಮಾಹಿತಿಯನ್ನು ನಿರಾಕರಿಸಿ, ಸತ್ಯವನ್ನು ಎತ್ತಿಹಿಡಿಯದಿರುವುದು ಕೇಂದ್ರ ಸರ್ಕಾರ ಮತ್ತೆ ಮತ್ತೆ ಎಡವುತ್ತಿರುವ ಅಂಶಗಳು. ಈಗ ನೋಡಿ, ಇರಾನ್-ಅಮೇರಿಕಾ ಯುದ್ಧ ಪ್ರಾರಂಭವಾಗಿ ಮೂರು ತಿಂಗಳುಗಳೇ ಕಳೆದರೂ, ಭಾರತ ಇನ್ನೂ ಸುಭದ್ರವಾಗಿಯೇ ನಿಂತಿದೆ. ಹೇಗೆ, ಯಾಕೆ, ಇದರ ಹಿಂದೆ ಸರ್ಕಾರ ಮಾಡಿದ ಕೆಲಸಗಳೇನು ಎಂಬುದನ್ನು ಇಂದಿಗೂ ಸರ್ಕಾರ ತಾನಾಗಿಯೇ ಹೇಳಿಕೊಳ್ಳುತ್ತಿಲ್ಲ.

ಫೆಬ್ರವರಿ 28ರ ನಂತರ, ತಾನು ಸೃಷ್ಟಿಸಿದ ಅವಘಡಗಳ ಸರಮಾಲೆಯಿಂದಾಗಿ ಭಾರತ ಕುಸಿದೇ ಹೋಗಲಿದೆ ಎಂಬುದು ಟ್ರಂಪ್ ಆಲೋಚನೆಯಾಗಿತ್ತು. ವಿದೇಶೀತೈಲದ ಮೇಲೆಯೇ ಅವಲಂಬಿತವಾಗಿರುವ ಭಾರತದ ಮಾರುಕಟ್ಟೆಯನ್ನು, ಹೊರ್ಮುಝ್ ಜಲಸಂಧಿಯ ಮೇಲಿನ ನಿರ್ಬಂಧದ ಮೂಲಕ ಅಲ್ಲೋಲಕಲ್ಲೋಲ ಮಾಡಿಬಿಡುತ್ತೇವೆ. ತೈಲ ಬೆಲೆ ಮೇಲೇರಿದಂತೆ, ದೈನಂದಿನ ಖರ್ಚುವೆಚ್ಚಗಳೂ ಹೆಚ್ಚುತ್ತವೆ. ಇದರ ಜೊತೆಗೆ ರಸಗೊಬ್ಬರದ ಕೊರತೆ ಹಾಗೂ ರೂಪಾಯಿಯ ಅಪಮೌಲ್ಯವೂ ಸೇರಿ, ಜನರ ಅಸಮಾಧಾನ ಹೆಚ್ಚುತ್ತದೆ. ಮೋದಿ ಸರ್ಕಾರವನ್ನು ಮೂರ್ನಾಲ್ಕು ಕಡೆಗಳಿಂದ ಉಸಿರುಗಟ್ಟಿಸುತ್ತೇವೆ ಎಂಬ ಆಲೋಚನೆಯಲ್ಲಿದ್ದ ಅಮೇರಿಕಾದ ಪರೋಕ್ಷ ಬೆದರಿಕೆಗಳನ್ನು ಭಾರತ ಏಕಾಂಗಿಯಾಗಿ ನಿಭಾಯಿಸಿ ತೋರಿಸಿದೆ. ಇದರ ಜೊತೆಗೇ ಗಲ್ಫ್ ಮತ್ತು ಯೂರೋಪ್ ಪ್ರವಾಸದಲ್ಲಿ ನಡೆದ ಸಂಧಾನಗಳ ಮೂಲಕ ಭಾರತ ನೇರವಾಗಿ ಅಮೇರಿಕಾದ ಕಪಾಳದೆಡೆಗೇ ಕೈಮಾಡಿದೆ.

ಕಳೆದ ಅಕ್ಟೋಬರ್‌ನಲ್ಲಿ 'ರಷ್ಯನ್ ತೈಲವನ್ನು ಭಾರತ ಇನ್ನು ಆಮದು ಮಾಡಿಕೊಳ್ಳುವುದಿಲ್ಲ' ಎಂದು ಟ್ರಂಪ್ ಏಕಮುಖವಾಗಿ ಘೋಷಣೆ ಮಾಡಿ ಭಾರತಕ್ಕೆ ಮುಖಭಂಗ ಮಾಡಲು ಪ್ರಯತ್ನಿಸಿದ್ದ. ಭಾರತ ಇದನ್ನು ಅಲ್ಲಗಳೆದರೂ, ಸಮುದ್ರಮಾರ್ಗದಿಂದ ರಷ್ಯನ್ ತೈಲದ ಆಮದು ಕಡಿಮೆ ಮಾಡಿದ್ದು ಹೌದು. ಆದರೆ ಇದು ಟ್ರಂಪನ ಮಾತಿಗೋಸ್ಕರ ಅಲ್ಲ ಎನ್ನುವುದನ್ನು ನೇರವಾಗಿ ಹೇಳಲಿಲ್ಲ. ಬದಲಿಗೆ ಭಾರತ ತನ್ನ ತೈಲ ಆಮದಿಗಾಗಿ ಸದಾ ವಿವಿಧ ಮೂಲಗಳನ್ನು ಹುಡುಕುತ್ತಲೇ ಇದೆ. ಸೌದಿ ಅಥವಾ ಕತಾರ್‌ನಂತಹ ದೇಶಗಳೊಂದಿಗೆ ಕೈಜೋಡಿಸಿ ಮಾರುಕಟ್ಟೆಯನ್ನು ಏಕಸ್ವಾಮ್ಯಕ್ಕೆ ಒಪ್ಪಿಸುವ ಬದಲು, ಎಲ್ಲಿ ಕಡಿಮೆ ದರಕ್ಕೆ ತೈಲ ಸಿಗುತ್ತಿದೆಯೋ ಅಲ್ಲಿಂದ ಕೊಳ್ಳುತ್ತಿದೆ. ಯುಎಇ ಬಿಟ್ಟರೆ ಯಾವ ದೇಶದೊಂದಿಗೂ ಭಾರತ ಸದ್ಯಕ್ಕೆ ದೀರ್ಘಕಾಲದ ಒಪ್ಪಂದಗಳಿಗೆ ಕೈಹಾಕಿಲ್ಲ. ಅಮೇರಿಕಾದಿಂದ ತೈಲ ಆಮದು ಹೆಚ್ಚಿದ್ದು ಹೌದಾದರೂ, ರಷ್ಯಾದಿಂದ ಕೊಳ್ಳುತ್ತಿದ್ದ ತೈಲವನ್ನು ಭಾರತ ಸಮುದ್ರಮಾರ್ಗದಿಂದ ನೇರವಾಗಿ ತರಿಸಿಕೊಳ್ಳುವ ಬದಲು, ನೆಲಮಾರ್ಗದಿಂದ ಹಾಗೂ ಶಾಡೋ ಫ್ಲೀಟ್ ಮೂಲಕ ಹಡಗಿನಿಂದ ಹಡಗಿಗೆ ವರ್ಗಾಯಿಸುತ್ತಾ ಮೆಡಿಟರೇನಿಯನ್ ಸಮುದ್ರದ ಮೂಲಕ ತರಿಸಿಕೊಳ್ಳುತ್ತಿದೆ. ಒಟ್ಟಿನಲ್ಲಿ ಅರವತ್ತು ದಿನದ ಯುದ್ಧದ ನಂತರವೂ ಭಾರತದಲ್ಲಿ ತೈಲದ ಕೊರತೆಯುಂಟಾಗಲಿಲ್ಲ.

ಎಷ್ಟೋ ರಾಷ್ಟ್ರಗಳ ತೈಲದ ಸರಬರಾಜು ಅಲ್ಲೋಲಕಲ್ಲೋಲವಾಗಿ, ಬೆಲೆ ಎರಡು ಮೂರು ಪಟ್ಟು ಹೆಚ್ಚಿದರೂ, ರೇಷನ್ ಪದ್ಧತಿಗೆ ಮೊರೆಹೋದರೂ, ಭಾರತದಂತ ದೊಡ್ಡ ರಾಷ್ಟ್ರ ಮಿಸುಕಾಡಲಿಲ್ಲ. ಬರೋಬ್ಬರಿ ಎರಡು ತಿಂಗಳ ತನಕ ಸರ್ಕಾರ ತೈಲದ ಬೆಲೆಯೇರಿಸದೇ ಹಿಡಿದು ನಿಲ್ಲಿಸಿತು. ಕಿಡಿಗೇಡಿಗಳ ದೆಸೆಯಿಂದಾಗಿ ಅಡುಗೆ ಅನಿಲದ ಸರಬರಾಜು ವ್ಯತ್ಯಯವಾದರೂ, ಜನರು ದಂಗೆಯೇಳುವಷ್ಟು ಹಾಹಾಕಾರ ಮೂಡಲಿಲ್ಲ. ಮೊನ್ನೆಯಂತೂ ಭಾರತ ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋಗೆ ತಣ್ಣನೆಯ ಸ್ವಾಗತ ಕೋರಿ, ಮಾಧ್ಯಮಗಳೆದುರೇ ಭಾರತ ಸದಾ ದೇಶಮೊದಲು ಎಂಬ ನಿಯಮವನ್ನು ಮುಂದಿಟ್ಟುಕೊಂಡೇ ವ್ಯವಹಾರ ಮಾಡಲಿದೆ. ನಾವು ನಮ್ಮ ತೈಲವನ್ನು ಎಲ್ಲಿಂದ ಕೊಳ್ಳಬೇಕು ಎಂಬುದನ್ನು ಯಾರೂ ಹೇಳಬೇಕಿಲ್ಲ ಎಂದು ಎದೆಯುಬ್ಬಿಸಿ ಹೇಳಿಯೇ ಬಿಟ್ಟಿತು. ನಿಮ್ಮ ದಾರಿ ನಿಮಗೆ, ನಮ್ಮ ದಾರಿ ನಮಗೆ ಎಂದು ಬಹುಷಃ ಇದಕ್ಕಿಂದ ಸ್ಪಷ್ಟವಾಗಿ ಅಮೇರಿಕಾಕ್ಕೆ ಸಂದೇಶ ಕಳಿಸಲು ಸಾಧ್ಯವೇ ಇಲ್ಲ. ಖಾರಿಫ್ ಬೆಳೆಯ ಮಳೆಗಾಲ ಹತ್ತಿರಬಂದ ಸಮಯಕ್ಕೆ ಸರಿಯಾಗಿ, ಭಾರತದಲ್ಲಿ ಯೂರಿಯಾದ ಕೊರತೆಯನ್ನುಂಟುಮಾಡಲು ಅಮೇರಿಕಾ ಇನ್ನೊಂದು ಹಂತದ ಯೋಜನೆ ತಯಾರಿಸಿಟ್ಟಿತ್ತು. ಇರಾನ್ ಯುದ್ಧದ ನೆಪ ಹೇಳಿ ಕತಾರ್ ತನ್ನ ಎಲ್‌ಎನ್‌ಜಿ ರಫ್ತಿನ ಮೇಲೆ ಬಲವಂತದ ನಿರ್ಬಂಧ ಹೇರಿ, ದೇಶೀಯ ಯೂರಿಯಾ ಉತ್ಪಾದನೆಗೆ ಗರಿಷ್ಠ ಅನಿಲದ ಅಗತ್ಯವಿರುವ ಕ್ಷಣದಲ್ಲೇ ಪೂರೈಕೆಯನ್ನು ಕಡಿತಗೊಳಿಸಿತು. ತಕ್ಷಣವೇ ಕಾರ್ಯಪ್ರವೃತ್ತವಾದ ಭಾರತ ಸರ್ಕಾರ, ಜೂನ್‌ನಲ್ಲಿ ಬರಬೇಕಿದ್ದ ತನ್ನ 13.5 ಲಕ್ಷ ಟನ್‌ಗಳಷ್ಟು ಯೂರಿಯಾ ಆಮದನ್ನು ಬೇಗನೇ ತರಿಸಿಕೊಂಡಿದ್ದಲ್ಲದೇ, ಬಿಕ್ಕಟ್ಟು ಸಂಪೂರ್ಣವಾಗಿ ಉಲ್ಬಣಗೊಳ್ಳುವ ಮೊದಲು ಹೆಚ್ಚಿನ ಯೂರಿಯಕ್ಕಾಗಿ ಜಾಗತಿಕ ಟೆಂಡರ್ ಅನ್ನೂ ಕರೆಯಿತು.

ಏಪ್ರಿಲ್ ಆರಂಭದ ವೇಳೆಗೆ ಒಟ್ಟಾರೆ ರಸಗೊಬ್ಬರ ನಿಕ್ಷೇಪಗಳಲ್ಲಿ ವರ್ಷದಿಂದ ವರ್ಷಕ್ಕೆ ಶೇ. 36.5 ರಷ್ಟು ಭಾರಿ ಏರಿಕೆಯಾಗಿದೆ. ಯೂರಿಯಾ, ಡಿಎಪಿ ಮತ್ತು ಎನ್‌ಪಿಕೆ ದಾಸ್ತಾನುಗಳು ಹಿಂದಿನ ವರ್ಷಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿದೆ. ಕತಾರ್ ಬಾಗಿಲು ಮುಚ್ಚಿದರೇನು, ತಕ್ಷಣವೇ ಜೋರ್ಡಾನ್, ಮೊರಾಕ್ಕೊ, ಸೌದಿ ಅರೇಬಿಯಾ ಮತ್ತು ಓಮನ್ ಜೊತೆಗೆ ಕಿಟಕಿಗಳನ್ನು ತೆರೆದು, ದೀರ್ಘಾವಧಿಯ ಒಪ್ಪಂದಗಳ ಮೂಲಕ ಭಾರತ ತನ್ನ ರಸಗೊಬ್ಬರ ಪೂರೈಕೆ ಸರಪಳಿಯನ್ನು ಬಲಪಡಿಸುತ್ತಿದೆ. ಇದರ ನಡುವೆ, ತೈಲ ಆಮದಿಗೆ ಭಾರಿ ಡಾಲರ್ ಹೊರಹರಿವು ಅಗತ್ಯವಿರುವುದರಿಂದ, 2026ರಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು ಭಾರತೀಯ ಷೇರುಗಳಿಂದ ಸುಮಾರು 21 ಬಿಲಿಯನ್ ಹಿಂತೆಗೆದುಕೊಂಡದ್ದರಿಂದ ಮತ್ತು ಯುಎಸ್ ಫೆಡರಲ್ ರಿಸರ್ವ್ ನೀತಿ ಬದಲಾವಣೆಗಳಿಂದ ಬಲಗೊಂಡ ಡಾಲರ್‌ನಿಂದಾಗಿ, ನಮ್ಮ ಕರೆನ್ಸಿ ಕುಸಿತ ಮತ್ತದರ ಪರಿಣಾಮಗಳನ್ನು ಸಂಪೂರ್ಣವಾಗಿ ನಿಲ್ಲಿಸಲಾಗಲಿಲ್ಲ ಹೌದು. ಆದರೆ ಇದರ ಕಾರಣಗಳಲ್ಲಿ ಕೆಲವು ವಿದೇಶೀ ಮಾರುಕಟ್ಟೆಯ ಮೇಲೆ ಅವಲಂಬಿತವಾಗಿರುವುದರಿಂದ, ಸಂಪೂರ್ಣವಾಗಿ ತಡೆಗಟ್ಟುವುದು ಅಸಾಧ್ಯವಾದರೂ, ಇದಕ್ಕೆ ಪೂರಕವಾಗಿ ರಿಸರ್ವ್ ಬ್ಯಾಂಕ್ ತಕ್ಷಣವೇ ತೆಗೆದುಕೊಂಡ ಕೆಲವು ನಿರ್ಧಾರಗಳಿಂದಾಗಿ, ರೂಪಾಯಿ ಏಕಾಏಕಿ ಪಾತಾಳ ತಲುಪುವುದನ್ನು ನಿಲ್ಲಿಸಲು ಸಾಧ್ಯವಾಯ್ತು. ಮೊದಲನೆಯದಾಗಿ ರಿಸರ್ವ್ ಬ್ಯಾಂಕ್ ನಮ್ಮ ತೈಲಕಂಪನಿಗಳಿಗೆ ಸ್ಪಾಟ್ ಮಾರುಕಟ್ಟೆಯಲ್ಲಿ ಡಾಲರ್‌ಗಳನ್ನು ಖರೀದಿಸಬೇಡಿ ಎಂದು ಕೇಳಿಕೊಂಡು, ಅದಕ್ಕೆ ಬದಲಾಗಿ ತಾನೇ ವಿಶೇಷವಾದ ಮತ್ತು ಮೀಸಲಾದ ಗವಾಕ್ಷಿಯನ್ನು ಒದಗಿಸಿತು. ಇದರಿಂದಾಗಿ ರೂಪಾಯಿ ಸತತ ಎರಡು ಅವಧಿಗಳವರೆಗೆ ಬಲಗೊಂಡು, ಡಾಲರ್ ಎದುರು 93ಕ್ಕಿಂತ ಕಡಿಮೆ ದರದಲ್ಲಿ ಸ್ಥಿರವಾಗಿ ನಿಂತಿತು. ಈ ಕ್ರಮದಿಂದಾಗಿ ಮಾರುಕಟ್ಟೆಯಲ್ಲಿ ಡಾಲರ್‌ಗಿದ್ದ ಬೇಡಿಕೆಯ ಗಮನಾರ್ಹ ಭಾಗ ತೆರವಾಗಿದೆ ಎಂದು ಬ್ಯುಸಿನೆಸ್ ಸ್ಟ್ಯಾಂಡರ್ಡ್ ವರದಿಮಾಡಿದೆ. ಇದಲ್ಲದೇ, ಏಪ್ರಿಲ್ 2ರಂದು ನಡೆದ ರಷ್ಯಾ-ಭಾರತ IRIGC-TEC ಸಭೆಯಲ್ಲಿ, ರಷ್ಯಾದ ಉಪ ಪ್ರಧಾನಿ ಡೆನಿಸ್ ಮಾಂಟುರೊವ್ ಅವರು ಜೈಶಂಕರ್, ದೋವಲ್ ಮತ್ತು ಸೀತಾರಾಮನ್ ಅವರನ್ನು ಭೇಟಿಯಾಗಿ, ದ್ವಿಪಕ್ಷೀಯ ವ್ಯಾಪಾರದಲ್ಲಿ ಡಾಲರ್ ಅವಲಂಬನೆಯನ್ನು ಕಡಿಮೆ ಮಾಡುವ ಭಾಗವಾಗಿ ರೂಪಾಯಿ-ರೂಬಲ್ ಮತ್ತು ಪರ್ಯಾಯ ಪಾವತಿ ಅವಕಾಶಗಳ ಕುರಿತು ವಿಶಾಲ ಚರ್ಚೆಗಳನ್ನು ನಡೆಸಿದರು. ಭಾರತ ಬರುವ ದಿನಗಳಲ್ಲಿ ಇದೇ ನಿಯಮವನ್ನು ತನ್ನ ಇತರ ತೈಲ ಪೂರೈಕೆದಾರರೊಂದಿಗೂ ಚರ್ಚಿಸಲಿದೆ. ಇದರಿಂದ ಡಾಲರ್ ಮೇಲಿನ ಅವಲಂಬನೆಯನ್ನು ಸಂಪೂರ್ಣವಾಗಿಯಲ್ಲದಿದ್ದರೂ, ಅರ್ಧಕ್ಕೆ ಇಳಿಸುವ ಗುರಿಯನ್ನು ಹೊಂದಿದೆ.

ತನ್ನ ಅಲಿಪ್ತ ನೀತಿಯ ಮೂಲಕ ಭಾರತ ಇವತ್ತು ಯುದ್ಧಕಾಲದಲ್ಲೂ ಸಶಕ್ತವಾಗಿ ನಿಂತಿದೆ. ಮತ್ತಿದು ಭಾರತದ ವಿದೇಶಾಂಗ ನೀತಿಯ ಅತ್ಯುತ್ತಮ ಶಕ್ತಿಪರೀಕ್ಷೆ ಕೂಡ. ರಷ್ಯಾದ ಕಂಪನಿಗಳು ಭಾರತೀಯ ಮಾರುಕಟ್ಟೆಗೆ ತೈಲ ಮತ್ತು ಎಲ್‌ಎನ್‌ಜಿ ಪೂರೈಕೆ ಎರಡನ್ನೂ ಹೆಚ್ಚಿಸಲು ಸಜ್ಜಾಗಿವೆ ಎಂದು ರಷ್ಯಾದ ಪ್ರಧಾನಿಯೇ ಹೇಳಿದ್ದಾರೆ. ಮತ್ತೀ ಆಹ್ವಾನ ಭಾರತಕ್ಕೆ ಮಾತ್ರವೇ ಎಂದು ಕೂಡ ಅವರು ಹೇಳಿದ್ದಾರೆ ಎಂದರೆ ರಷ್ಯಾಕ್ಕೆ ನಮ್ಮ ಮೇಲಿರುವ ಪ್ರೀತಿ ಮತ್ತು ನಂಬಿಕೆ ಎಷ್ಟಿರಬಹುದು ಲೆಕ್ಕ ಹಾಕಿ. ಹಡಗುಗಳಿಗೆ ತನ್ನ ಜಲಸಂಧಿಯ ಮೂಲಕ ಸಾಗಲು ಇರಾನ್ ಅವಕಾಶ ಕೊಟ್ಟಿದ್ದು ಕೆಲವೇ ಕೆಲವು ದೇಶಗಳಿಗೆ, ಮತ್ತದರಲ್ಲಿ ಭಾರತವೂ ಒಂದು. ಭಾರತೀಯ ಹಡಗುಗಳು, ಅಧಿಕೃತ ಹಡಗು ಮಾರ್ಗಗಳ ಬದಲು ಇರಾನ್‌ನ ಮುಖ್ಯಭೂಮಿಗೆ ಹತ್ತಿರವಿರುವ ಮಾರ್ಗಗಳ ಮೂಲಕ ಕರಾವಳಿಯನ್ನು ಬಳಸಿಕೊಂಡೇ ಸಂಚರಿಸಲು ಇರಾನ್ ಅವಕಾಶ ಮಾಡಿಕೊಟ್ಟದ್ದು, ಭಾರತದ ಗುರುತ್ವ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. ರೂಬಿಯೊ ತನ್ನ ಭೇಟಿ ಅಷ್ಟೇನೂ ಫಲಪ್ರದವಾಗದಿದ್ದರೂ, ಭಾರತ-ಯುಎಸ್ ಸಂಬಂಧಗಳು ಹಿಂದೆಂದಿಗಿಂತಲೂ ಮುಖ್ಯ ಎಂದು ದೃಢಪಡಿಸಿ, ಮೋದಿಯನ್ನು ಶ್ವೇತಭವನಕ್ಕೆ ಆಹ್ವಾನಿಸಿ ಮತ್ತು ರಕ್ಷಣಾ ಸಹಕಾರದ ಬಗ್ಗೆ ಚರ್ಚಿಸಿದ. ಅಂದರೆ ಭಾರತವು ತನಗೆ ಬೇಕಾದಲ್ಲಿಂದ ತೈಲವನ್ನು ಖರೀದಿಸುತ್ತದೆ ಎಂಬ ತನ್ನ ಇಂಧನ ನೀತಿಯನ್ನು ಬಿಟ್ಟುಕೊಡದೆಯೂ ಈ ಸಂಬಂಧವನ್ನು ಉಳಿಸಿಕೊಂಡಿದೆ ಎಂಬುದು ಇದಕ್ಕೆ ಸಾಕ್ಷಿ. ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಭೇಟಿಯ ಮೂಲಕ ಕತಾರ್‌ನೊಂದಿಗೆ ಮಾತುಕತೆಯನ್ನು ಜೀವಂತವಾಗಿರಿಸಿ, ತನ್ನ ಪ್ರಮುಖ ಗಲ್ಫ್ ಎಲ್‌ಎನ್‌ಜಿ ಪೂರೈಕೆದಾರರೊಂದಿಗೆ ಸಂಬಂಧವನ್ನು ಕಾಯ್ದುಕೊಂಡಿದೆ. ಭಾರತವು ಸ್ವಾಯತ್ತತೆ ನಮ್ಮ ಇತಿಹಾಸ ಮತ್ತು ವಿಕಾಸದ ಒಂದು ಭಾಗವೇ ಆಗಿದೆ ಎಂದು ಹೇಳುತ್ತಲೇ ಬರುತ್ತಿರುವುದರಿಂದ, ಇದನ್ನು ಕೇಳಿಸಿಕೊಂಡೂ ಸಹ ದೇಶಗಳು ಭಾರತದ ಜೊತೆ ಇನ್ನೂ ಮಾತುಕತೆಯಲ್ಲಿವೆ ಎಂದರೆ, ನಮ್ಮ ಅಗತ್ಯ ಜಗತ್ತಿಗೆ ಎಷ್ಟಿದೆ ಎಂಬುದು ಸ್ಪಷ್ಟವಾಗಿ ನಿರೂಪಿತವಾಗಿದೆ ಎಂದೇ ಅರ್ಥ.

ಹಂಸಕ್ಷೀರ ನ್ಯಾಯ

ಅನಂತಶಾಸ್ತ್ರಂ ಬಹುಲಾಶ್ಚ ವಿದ್ಯಾ ಅಲ್ಪಶ್ಚಕಾಲೋ ಬಹುವಿಘ್ನತಾ ಚ।
ಯತ್ಸಾರಭೂತಂ ತದುಪಾಸನೀಯಂ ಹಂಸೋ ಯಥಾ ಕ್ಷೀರಮಿವಾಂಬುಮಧ್ಯಾತ್॥

-ಚಾಣಕ್ಯ ನೀತಿ

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಶಾಸ್ತ್ರಗಳು ಅನಂತ. ವಿದ್ಯೆಗಳೂ ಬಹಳಷ್ಟು. ಆದರೆ ನಮಗಿರುವುದು ಮಾತ್ರ ಅಲ್ಪಕಾಲ. ಅದರ ಜತೆಗೆ ವಿಘ್ನಗಳು ಬಹಳಷ್ಟು. ಆದುದರಿಂದ ಹಂಸವು ನೀರಿನೊಡನೆ ಬೆರೆತ ಹಾಲನ್ನು ಮಾತ್ರ ಹೀರುವಂತೆ ಮನುಷ್ಯನು ಸಾರಭೂತವಾದುದನ್ನು ತೆಗೆದುಕೊಳ್ಳಬೇಕು ಎಂಬುದು ಶ್ಲೋಕಾರ್ಥ.

ಸಂಸ್ಕೃತ ಸಾಹಿತ್ಯದಲ್ಲಿ 'ಹಂಸಕ್ಷೀರ ನ್ಯಾಯ' ಎಂಬ ಜನಪ್ರಿಯ ನ್ಯಾಯವಿದೆ. ಹೆಚ್ಚಿನವರಿಗೆ ಇದು ಗೊತ್ತು. ಸಾಕಷ್ಟು ಜನರು ಮಾತಿನ ಮಧ್ಯೆ ಇದನ್ನು ಬಳಸುತ್ತಾರೆ. ಹಾಲಿನೊಡನೆ ನೀರನ್ನು ಬೆರೆಸಿ ಹಂಸದ ಮುಂದೆ ಇರಿಸಿದರೆ ಅದು ಹಾಲನ್ನು ಮಾತ್ರ ಕುಡಿದು ನೀರನ್ನು ಅಲ್ಲಿಯೇ ಬಿಡುತ್ತದೆಯಂತೆ. ಸಾರವಾದದ್ದನ್ನು ಸ್ವೀಕರಿಸಿ ಅಸಾರವಾದುದನ್ನು ಬಿಡುವುದು ಹಂಸದ ಸ್ವಭಾವ. ಅಂತೆಯೇ ನಾವು ನಮ್ಮ ಜೀವನದಲ್ಲಿ ಸಾರವಾದುದನ್ನು ಸ್ವೀಕರಿಸಿ ಅಸಾರವಾದುದನ್ನು ಬಿಡಬೇಕು ಎಂಬುದು ಈ ಹೇಳಿಕೆಯ ಅರ್ಥ. ಹಂಸವು ಹಾಲು ಹೀರಿ ನೀರನ್ನು ಉಳಿಸುತ್ತದೆ ಎಂಬುದು ತಥಾಕಥಿತವಾಗಿ ರೂಢಿಯಲ್ಲಿ ಬಂದ ಕವಿಸಮಯ. ಹಂಸ ಹೀಗೆ ಮಾಡಿದ ದಾಖಲೆಯಿಲ್ಲ. ಆದರೂ ಸಾಹಿತ್ಯದ ಕಲ್ಪನಾಲೋಕದಲ್ಲಿ ರೂಢಿಯಲ್ಲಿದೆ. ಈ ನ್ಯಾಯದ ಸಂದೇಶವನ್ನೆ ಪ್ರಧಾನವಾಗಿ ಇರಿಸಿಕೊಂಡು ನಮ್ಮ ನಡೆ,ನುಡಿ, ಅಧ್ಯಯನ ಹೇಗಿರಬೇಕು ಎಂದು ಕವಿಯು ಹೇಳುತ್ತಾನೆ.

ಮನುಕುಲದ ಉನ್ನತಿಗಾಗಿ ಮಾರ್ಗದರ್ಶನ ಮಾಡುವ ಸಾವಿರಾರು ಗ್ರಂಥಗಳಿವೆ. ಈ ಎಲ್ಲ ಗ್ರಂಥಗಳೂ ಮನುಕುಲದ ಒಳಿತಿಗಾಗಿಯೇ ರಚಿಸಲ್ಪಟ್ಟಿವೆ. ಈ ಶಾಸ್ತ್ರಗ್ರಂಥಗಳ ಪರಮ ಗುರಿ ಮನುಕುಲದ ಒಳಿತೇ ಆಗಿದೆ. ಆದರೆ ಹೇಳುವ ವಿಧಾನದಲ್ಲಿ ವೈವಿಧ್ಯತೆಯಿದೆ. ಈ ಎಲ್ಲ ಗ್ರಂಥಗಳನ್ನು ಓದಿ ತಿಳಿದುಕೊಳ್ಳುವುದು ತೀರಾ ಕಷ್ಟ. ಆದರೆ ಸಾರವನ್ನರಿತು ಸ್ವೀಕರಿಸಬಹುದು, ಜೀವನದಲ್ಲಿ ಅಳವಡಿಸಿಕೊಳ್ಳಬಹುದು. ಆದ್ದರಿಂದ ಸಾರದತ್ತ ನಮ್ಮ ಗಮನವಿರಬೇಕು.

ಎಲ್ಲವನ್ನೂ ಅರಿಯುವುದಕ್ಕೆ ನಮಗಿರುವ ಕಾಲ ಸಾಲದು. ಒಂದು ಜನ್ಮದಲ್ಲಿ ಒಂದು ಶಾಸ್ತ್ರವನ್ನು ಸರಿಯಾಗಿ ತಿಳಿಯಬಹುದಂತೆ. ಸರಿಯಾದ ದಿಸೆಯಲ್ಲಿ ಪ್ರಾಮಾಣಿಕ ಪರಿಶ್ರಮ ವಹಿಸಿದರೆ ಮಾತ್ರ 'ಏಕಸ್ಮಿನ್ ಜನ್ಮನಿ ಏಕಮೇವ ಶಾಸ್ತ್ರಮ್'

ಕಾಲ ಅಲ್ಪ ಎಂಬುದು ಎಷ್ಟು ಸತ್ಯವೋ ವಿಘ್ನಗಳು ಬರುವುದೂ ಅಷ್ಟೇ ಸತ್ಯ. ಆದ್ದರಿಂದ ಅಲ್ಪಕಾಲದಲ್ಲಿ ಕಷ್ಟಕೋಟಲೆಗಳ ನಡುವೆ ಎಲ್ಲ ಶಾಸ್ತ್ರಗಳನ್ನು ಅಧ್ಯಯನ ಮಾಡಿ ಅರಿತುಕೊಳ್ಳುವುದು ತೀರಾ ಕಷ್ಟಸಾಧ್ಯವಾದ ಕೆಲಸ. ಶಾಸ್ತ್ರಗಳು ಅಪಾರ ಹಾಗೂ ತಿಳಿದುಕೊಳ್ಳಲು ಕಷ್ಟ ಎಂದುಕೊಂಡು ಬಿಡಲೂ ಸಾಧ್ಯವಿಲ್ಲ. ಆದ್ದರಿಂದ ನಾವು ಮಾಡಬೇಕಾದ ಕೆಲಸವೆಂದರೆ ಶಾಸ್ತ್ರಸಾರವನ್ನು ಗ್ರಹಿಸಬೇಕು. ಬೇಡವಾದುದನ್ನು ಬಿಟ್ಟು ಜೀವನೋನ್ನತಿಗೆ ಬೇಕಾದ ವಿಷಯಗಳ ಸಾರವನ್ನು ನಮ್ಮದಾಗಿಸಿಕೊಳ್ಳಬೇಕು. ಈ ಅಪೂರ್ವವಾದ ವಿಷಯವನ್ನು ತಿಳಿಸಲು ಕವಿಯು ಹಂಸಕ್ಷೀರ ನ್ಯಾಯವನ್ನು ಬಳಸಿಕೊಂಡು ಅರಿವು ಮೂಡಿಸಿದ್ದಾನೆ. ಇದನ್ನು ಎಲ್ಲ ರಂಗದಲ್ಲೂ ಅಳವಡಿಸಿಕೊಂಡು ಬದುಕನ್ನು ಎತ್ತರಿಸಿಕೊಳ್ಳಬಹುದಾಗಿದೆ.

ಗೋಹತ್ಯೆ ತಡೆಯಲು ದೇಶಾದ್ಯಂತ ಕೈಗೊಂಡ ಕ್ರಮಗಳು

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಬಕ್ರೀದ್‌ಗೆ ಮುಂಚಿತವಾಗಿ ದೇಶಾದ್ಯಂತ ಗೋಹತ್ಯೆ ವಿರೋಧಿ ಕಾನೂನುಗಳನ್ನು ಕಠಿಣವಾಗಿ ಜಾರಿಗೊಳಿಸುವಂತೆ ಕೋರಿ ಸಲ್ಲಿಸಲಾದ ತುರ್ತು ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿತ್ತು. ಇದಕ್ಕೆ ಪ್ರಮುಖ ಕಾರಣ ಹೆಚ್ಚಿನ ರಾಜ್ಯಗಳು ಈಗಾಗಲೇ ಗೋಹತ್ಯೆಯನ್ನು ನಿಯಂತ್ರಿಸುವ ಅಥವಾ ನಿಷೇಧಿಸುವ ಸ್ಥಳೀಯ ಕಾನೂನುಗಳನ್ನು ಹೊಂದಿವೆ ಎಂಬುದಾಗಿತ್ತು. ದೇಶದಲ್ಲಿ ಗೋವಿನ ಬಲಿ ಅಥವಾ ಪ್ರಾಣಿ ಬಲಿಯ ಮೇಲಿನ ಕಾನೂನುಗಳು ಮತ್ತು ನಿರ್ಬಂಧಗಳು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗಳಿವೆ. ಇದಕ್ಕೆಲ್ಲಾ ಕಾರಣ ಇಂದಿಗೂ ಗೋಹತ್ಯೆಯನ್ನು ನಿಯಂತ್ರಿಸುವ ಏಕರೂಪದ ರಾಷ್ಟ್ರೀಯ ಕಾನೂನು ರಚನೆಯಾಗದಿರುವುದಾಗಿದೆ. ಸಂವಿಧಾನದಡಿಯಲ್ಲಿ ಈ ವಿಷಯವು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುವುದರಿಂದ ಆಯಾ ರಾಜ್ಯಗಳಲ್ಲಿ ಈ ಕುರಿತಂತೆ ವಿಭಿನ್ನ ಕಾನೂನು ಚೌಕಟ್ಟುಗಳಿರುವುದು ಕಂಡುಬರುತ್ತದೆ.

ಬಕ್ರೀದ್‌ನಂದು ನಡೆಯುವ ಗೋವುಗಳ ಅಮಾನುಷ ಹತ್ಯೆಯನ್ನು ನಿಲ್ಲಿಸುವಂತೆ ಕೋರಿ ತಮಿಳುನಾಡಿನ ಹಿಂದೂ ಮಕ್ಕಳ್ ಕಚ್ಚಿಯ ಕೆ. ಸೂರ್ಯಪ್ರಶಾಂತ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್‌ಗೆ ಸಲ್ಲಿಸಿದ್ದರು. ಬಕ್ರೀದ್‌ನಂದು ಕೊಯಮತ್ತೂರಿನ ವಿವಿಧ ಪ್ರದೇಶಗಳಲ್ಲಿ ಗೋವುಗಳ ಹತ್ಯೆಗೆಂದೇ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಲಾಗಿದೆ ಎಂಬುದಾಗಿ ದೂರು ನೀಡಿದ್ದರು. ನ್ಯಾಯಮೂರ್ತಿಗಳು, ತಮಿಳುನಾಡು ನಗರ ಸ್ಥಳೀಯ ಸಂಸ್ಥೆಗಳ 2023ರ ನಿಯಮಗಳನ್ನು ಪರಿಶೀಲಿಸಿ ಮೇಕೆ ಮತ್ತು ಕುರಿಗಳಂತಹ ಪ್ರಾಣಿಗಳ ಹತ್ಯೆಗೆ ಪರವಾನಗಿ ಹೊಂದಿದ ಶೆಡ್ ಮತ್ತು ಕಟ್ಟಡಗಳನ್ನು ಹೊರತುಪಡಿಸಿ ಇನ್ನಿತರ ಯಾವ ಸ್ಥಳಗಳಲ್ಲಿ ಪ್ರಾಣಿವಧೆಗೆ ಅವಕಾಶ ನೀಡಕೂಡದು, ಗೋವು ಮತ್ತು ಕರುಗಳ ಹತ್ಯೆಯನ್ನು ರಾಜ್ಯಾದ್ಯಂತ ಸಂಪೂರ್ಣ ನಿಷೇಧಿಸಬೇಕು ಎಂಬುದಾಗಿ ಬಕ್ರೀದ್‌ನ ಮುನ್ನಾ ದಿನವಾದ ಮೇ 27, 2026 ರಂದು ಆದೇಶ ಹೊರಡಿಸಿದ್ದರು. ಗೋವುಗಳ ಬಲಿ ಅತ್ಯಗತ್ಯ ಧಾರ್ಮಿಕ ಆಚರಣೆಯಲ್ಲ ಎಂಬುದಾಗಿ ಸೂಚಿಸಿದ್ದರು. ರಾಜ್ಯಾದ್ಯಂತ ಗೋವುಗಳ ಹತ್ಯೆಯನ್ನು ನಿಷೇಧಿಸಲು 1976ರ ಆಗಸ್ಟ್ 30ರಂದು ಹೊರಡಿಸಲಾಗಿದ್ದ ಸರ್ಕಾರಿ ಆದೇಶ ಜಾರಿಗೊಳಿಸುವಂತೆ ಸೂಚನೆಯನ್ನು ನೀಡಿದ್ದರು. ರಾಜ್ಯದಲ್ಲಿ ಹಾಲು ಉತ್ಪಾದನೆ ಹೆಚ್ಚಿಸಿ ಗ್ರಾಮೀಣ ಆರ್ಥಿಕತೆ ಸುಧಾರಣೆಗೆ ಸಹಕಾರಿಯಾಗುವ ಉದ್ದೇಶದಿಂದ ನ್ಯಾಯಮೂರ್ತಿಗಳು ಈ ಆದೇಶ ಹೊರಡಿಸಿದ್ದರು.

ನ್ಯಾಯಮೂರ್ತಿಗಳಾದ ಜಿ.ಆರ್. ಸ್ವಾಮಿನಾಥನ್ ಮತ್ತು ವಿ. ಲಕ್ಷ್ಮೀ ನಾರಾಯಣನ್ ಅವರ ರಜಾ ದಿನದ ಪೀಠವು, ಮುಖ್ಯ ಕಾರ್ಯದರ್ಶಿ ಹಾಗೂ ಪೊಲೀಸ್ ಮಹಾನಿರ್ದೇಶಕರು/ಪೊಲೀಸ್ ಪಡೆಯ ಮುಖ್ಯಸ್ಥರಿಗೆ ಈ ಕುರಿತಂತೆ ನಿರ್ದೇಶನ ನೀಡುತ್ತಾ, ಬಕ್ರೀದ್ ಅಥವಾ ಇನ್ನಾವುದೇ ದಿನದಂದು ರಾಜ್ಯದಲ್ಲಿ ಗೋವು ಅಥವಾ ಕರುಗಳನ್ನು ಹತ್ಯೆ ಮಾಡದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಇಬ್ಬರು ಹಿರಿಯ ಅಧಿಕಾರಿಗಳು ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು, ಕೋರ್ಟ್ ಆದೇಶ ಪಾಲನೆಯಾಗಬೇಕು, ಯಾವುದೇ ಕಾರಣಕ್ಕೂ ಉಲ್ಲಂಘನೆಯಾಗಬಾರದು ಎಂಬುದಾಗಿ ನಿರ್ದೇಶನ ನೀಡಿತ್ತು. ಈ ಕುರಿತಂತೆ ಸರ್ಕಾರದಿಂದ ವರದಿಯನ್ನು ಪಡೆಯುವಂತೆಯೂ ನಿರ್ದೇಶಿಸಿತ್ತು. ತೀರ್ಪನ್ನು ನೀಡುವ ವೇಳೆ ನ್ಯಾಯಮೂರ್ತಿಗಳು ಗೋವುಗಳ ಮಹತ್ವವನ್ನು ತಿಳಿಸುತ್ತಾ ಗೋವುಗಳು ಹಾಲನ್ನು ನೀಡುವ ಹಾಗೂ ಭಾರ ಎಳೆಯುವ ಜಾನುವಾರುಗಳ ಹತ್ಯೆಯ ನಿಷೇಧಕ್ಕೆ ರಾಜ್ಯ ಸರ್ಕಾರ ಕ್ರಮ ವಹಿಸಬೇಕು. ಸಂವಿಧಾನ ರಚನಾ ಸಭೆಯ ಚರ್ಚೆಗಳ ಸಮಯದಲ್ಲಿಯೂ, ಗೋವು ಪೂಜ್ಯ ಪ್ರಾಣಿಯಾಗಿದ್ದು, ಶ್ರೀಕೃಷ್ಣನ ಕಾಲದಿಂದಲೂ ನಮ್ಮ ನಾಗರಿಕತೆಯೊಂದಿಗೆ ಸಂಬಂಧವನ್ನು ಹೊಂದಿದೆ, ಹಿಂದಿನ ಹಲವು ಮುಸ್ಲಿಂ ರಾಜರುಗಳು ತಮ್ಮ ಆಳ್ವಿಕೆಯಲ್ಲಿ ಗೋಹತ್ಯೆಯನ್ನು ನಿಷೇಧಿಸಿದ್ದರು, ಬಕ್ರೀದ್‌ನಲ್ಲಿ ಎಲ್ಲಾ ಮುಸ್ಲೀಮರು ಗೋವುಗಳನ್ನು ಬಲಿ ನೀಡುವುದಿಲ್ಲ ಎಂಬುದಾಗಿ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ಆದೇಶವನ್ನು ನೆನಪಿಸಿದ್ದರು.

ಈ ವರ್ಷ ದೆಹಲಿ ಸರ್ಕಾರ ಸಹ ಬಕ್ರೀದ್‌ಗೂ ಮುನ್ನ ಹಸುಗಳು, ಕರುಗಳು ಮತ್ತು ಒಂಟೆಗಳ ಬಲಿ ಅಥವಾ ಅಕ್ರಮ ಮಾರಾಟವನ್ನು ನಿಷೇಧಿಸುವ ಕಟ್ಟುನಿಟ್ಟಿನ ಆದೇಶವನ್ನು ನೀಡಿತ್ತು. ಎಲ್ಲಾ ಪ್ರಾಣಿ ಬಲಿಗಳನ್ನು ನಿರ್ದಿಷ್ಟ ನಿರ್ಬಂಧಗಳೊಂದಿಗೆ ತೆರೆದ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಮಾಡದೇ ಅದಕ್ಕೆಂದೇ ಗೊತ್ತುಪಡಿಸಿದ ಇಲ್ಲವೇ ಪರವಾನಗಿ ಪಡೆದ ಸ್ಥಳಗಳಲ್ಲಿ ಮಾತ್ರ ನಡೆಸಬೇಕೆಂದು ಸೂಚಿಸಿತ್ತು. ಹಾಗೆ ಮಾಡುವವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದು ಎಂಬುದಾಗಿ ಸಚಿವ ಕಪಿಲ್ ಮಿಶ್ರಾ ಹೇಳಿಕೆಯನ್ನು ನೀಡಿದ್ದರು. ದನಗಳ ಸಾಗಾಣಿಕೆ ಹಾಗೂ ಅಕ್ರಮ ಮಾರಾಟ ಮತ್ತು ಹತ್ಯೆಯನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲು ಸ್ಥಳೀಯ ಅಧಿಕಾರಿಗಳ ತಂಡವನ್ನು ರಚಿಸಲಾಗಿತ್ತು. ಇದೇ ರೀತಿಯ ಅಧಿಕಾರಿಗಳ ತಂಡವನ್ನು ಮಹಾರಾಷ್ಟ್ರ ಮತ್ತು ಅಸ್ಸಾಂ ರಾಜ್ಯಗಳು ಸಹ ಮಾಡಿತ್ತು.

ಮಹಾರಾಷ್ಟ್ರ ಈ ವರ್ಷ ಬಕ್ರೀದ್‌ಗೂ ಮುನ್ನ ತನ್ನ ಜಾನುವಾರು ವಧೆ ಕಾನೂನುಗಳನ್ನು ಗಮನಾರ್ಹವಾಗಿ ಬಿಗಿಗೊಳಿಸಿತ್ತು. ದನಗಳ ಅಕ್ರಮ ಸಾಗಾಣಿಕೆ, ಅನಧಿಕೃತ ಕಸಾಯಿಖಾನೆಗಳು ಮತ್ತು ಗೋಮಾಂಸ ಕಳ್ಳ ಸಾಗಾಣಿಕೆ ಜಾಲಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿತ್ತು.ಪಶ್ಚಿಮ ಬಂಗಾಳ ಸರ್ಕಾರವು ಈ ವರ್ಷ ಬಕ್ರೀದ್‌ಗೂ ಮುನ್ನ ಜಾನುವಾರು ಹತ್ಯೆಯನ್ನು ನಿಯಂತ್ರಿಸುವ ಹೊಸ ನಿರ್ದೇಶನಗಳನ್ನು ಹೊರಡಿಸಿತ್ತು. ಈ ಆದೇಶಗಳನ್ನು ಕಲ್ಕತ್ತಾ ಹೈಕೋರ್ಟ್ ಸಹ ಎತ್ತಿಹಿಡಿದು ಗೋಹತ್ಯೆ ಬಕ್ರೀದ್ ಅಥವಾ ಇಸ್ಲಾಂನ ಭಾಗವಲ್ಲ ಎಂಬುದಾಗಿ ಹೇಳಿತ್ತು. ಅಸ್ಸಾಂನಲ್ಲಿನ ಹಿಮಾಂತ ಬಿಸ್ವಾ ಶರ್ಮ ನೇತೃತ್ವದ ಬಿಜೆಪಿ ಸರ್ಕಾರ ಅಸ್ಸಾಂ ಗೋಸಂರಕ್ಷಣಾ ಕಾಯ್ದೆ, 2021ರ ನಿಬಂಧನೆಗಳನ್ನು ಬಲವಾಗಿ ಜಾರಿಗೊಳಿಸಿತ್ತು. ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ಗುಜರಾತ್, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದಂತಹ ರಾಜ್ಯಗಳು ದೇಶದಲ್ಲಿ ಅತ್ಯಂತ ಕಠಿಣವಾದ ಗೋಹತ್ಯೆ ವಿರೋಧಿ ಕಾನೂನುಗಳನ್ನು ಜಾರಿಗೊಳಿಸಿದ್ದವು. ಗುಜರಾತ್ ಮತ್ತು ಉತ್ತರ ಪ್ರದೇಶದಲ್ಲಿ ಅಕ್ರಮ ಗೋಹತ್ಯೆಗೆ ಜೀವಾವಧಿ ಶಿಕ್ಷೆಯವರೆಗೆ ವಿಸ್ತರಿಸಬಹುದಾದ ಶಿಕ್ಷೆ ಇರುವುದನ್ನು ಸರ್ಕಾರ ಎಚ್ಚರಿಸಿತ್ತು. ಹರಿಯಾಣ ತನ್ನ ಕಠಿಣ ಗೋಸಂರಕ್ಷಣಾ ಕಾನೂನಿನ ಅಡಿಯಲ್ಲಿ ಹಸುಗಳು, ಕರುಗಳು ಮತ್ತು ಎತ್ತುಗಳ ವಧೆ, ಮಾರಾಟ ಮತ್ತು ಸಾಗಾಣಿಕೆಯನ್ನು ನಿಷೇಧಿಸಿತ್ತು. ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಹರಿಯಾಣದಲ್ಲಿ ಪೊಲೀಸರು ಗಡಿ ತಪಾಸಣೆ ಮತ್ತು ಜಾನುವಾರು ಚಲನೆಯ ಮೇಲ್ವಿಚಾರಣೆಯನ್ನು ತೀವ್ರಗೊಳಿಸಿದ್ದರು. ಸ್ಥಳೀಯ ಆಡಳಿತಗಳು ಜನರು ಗೊತ್ತುಪಡಿಸಿದ ಸ್ಥಳಗಳಲ್ಲಿ ಮಾತ್ರ ಬಲಿ ನೀಡಬೇಕೆಂದು ಮತ್ತು ಅದರ ತ್ಯಾಜ್ಯಗಳು ಸಾರ್ವಜನಿಕರಿಗೆ ಕಿರಿಕಿರಿಯನ್ನುಂಟು ಮಾಡದಂತೆ ಮರೆಯಾಗಿರಬೇಕು ಎಂಬ ಸಲಹೆಗಳನ್ನು ನೀಡಿತ್ತು. ಕರ್ನಾಟಕದಲ್ಲಿ ದೇಶದ ಅತ್ಯಂತ ಕಠಿಣ ಜಾನುವಾರು ಹತ್ಯೆ ವಿರೋಧಿ ಕಾನೂನುಗಳಲ್ಲಿ ಒಂದಾದ ಕರ್ನಾಟಕ ವಧೆ ತಡೆ ಮತ್ತು ಜಾನುವಾರು ಸಂರಕ್ಷಣಾ ಕಾಯ್ದೆ 2020ರ ಜಾರಿಗೊಳಿಸುವಿಕೆಯನ್ನು ಅಧಿಕಾರಿಗಳು ಚುರುಕುಗೊಳಿಸಿದ್ದರು.

ಇಷ್ಟೆಲ್ಲಾ ಮುಂಜಾಗೃತ ಕ್ರಮಗಳನ್ನು ಕೈಗೊಂಡಿದ್ದರೂ ಪ್ರತಿವರ್ಷದಂತೆ ಈ ವರ್ಷವೂ ಬಕ್ರೀದ್‌ನಂದು ದೇಶಾದ್ಯಂತ ರಾಜಾರೋಷವಾಗಿ ಸಾರ್ವಜನಿಕ ಸ್ಥಳಗಳಲ್ಲಿಯೇ ಲಕ್ಷಾಂತರ ಗೋವುಗಳ ಹತ್ಯೆ ಹೇಗಾಯಿತು? ಬಹುತೇಕ ನಗರಗಳಲ್ಲಿ ಜಾನುವಾರುಗಳ ರಕ್ತದ ಹೊಳೆ ಹೇಗೆ ಹರಿಯಿತು? ರಕ್ತದ ಮಡುವಿನಲ್ಲಿಯೇ ಮತಾಂಧರು ಹೋಳಿ ಆಡಿದಾದ್ದರೂ ಹೇಗೆ? ಸಾವಿರಾರು ಗೋವುಗಳು ಪೊಲೀಸರ ಕಣ್ತಪ್ಪಿಸಿ ಆಯಾ ಪ್ರದೇಶಗಳಿಗೆ ಒಮ್ಮೆಲೆ ಬಂದದ್ದಾದರೂ ಹೇಗೆ? ಗೋರಕ್ಷಕರಿಗೆ ಕಂಡುಬರುವ ಅಕ್ರಮ ಗೋವುಗಳ ಸಾಗಾಣಿಕೆ ಮತ್ತು ಸಂಗ್ರಹಣೆ ಪೊಲೀಸ್ ಇಲಾಖೆಗಳಿಗೇಕೆ ಕಂಡುಬರುವುದಿಲ್ಲ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳದ ಹೊರತು ಗೋವುಗಳ ಹತ್ಯೆಯನ್ನು ಯಾವುದೇ ರೀತಿಯಲ್ಲೂ ತಡೆಯಲು ಸಾಧ್ಯವೇ ಇಲ್ಲ. ದೇಶದ ಈಗೀರುವ ಕೇಂದ್ರೀಯ ಹಾಗೂ ರಾಜ್ಯದ ಯಾವುದೇ ಕಾನೂನು ಸಹ ಈ ಅಕ್ರಮ ದಂಧೆಗೆ ಕಡಿವಾಣ ಹಾಕಲು ಶಕ್ತವಾಗುವುದಿಲ್ಲ. ದಿನದಿಂದ ದಿನಕ್ಕೆ ಗೋಹತ್ಯೆ ಎನ್ನುವುದು ಮತಾಂಧರಿಗೆ ಪ್ರತಿಷ್ಠೆಯ ಮತ್ತು ಸಂಸ್ಕೃತಿಯ ಪ್ರದರ್ಶನದ ವಿಚಾರವಾಗಿದೆ. ಮತ್ತೊಂದೆಡೆ ಇದೇ ಮತಾಂಧರು ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿಸಬೇಕು ಎಂಬುದಾಗಿ ದೇಶದ ಹಲವು ಕಡೆಗಳಲ್ಲಿ ರಸ್ತೆಗಿಳಿದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಇದು ಸಹ ಇವರುಗಳ ಕುತಂತ್ರದ ಒಂದು ಭಾಗವಾಗಿದ್ದು, ಸರ್ಕಾರ ಮತ್ತು ದೇಶವಾಸಿಗಳು ಎಚ್ಚರದಿಂದಿರಬೇಕು.

ಕಾಕ್ರೋಚ್ ಪಕ್ಷ: ಮೀಮ್‌ನಿಂದ ರಾಜಕೀಯ ಅಜೆಂಡಾದವರೆಗೆ

▸ ಪ್ರೇಮಶ್ರೀ ಜೋಡಿದಾರ್



ಒಂದು ಮೀಮ್ ಆಗಿ ಪ್ರಾರಂಭವಾದ ಕಾಕ್ರೋಚ್ ಜನತಾ ಪಾರ್ಟಿಯ ಕಾರ್ಯತಂತ್ರ ಕಂಡಷ್ಟೇ ಅಲ್ಲ. ಮೇಲ್ನೋಟಕ್ಕೆ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಲು ಯುವಕರಿಗೆ ವೇದಿಕೆಯನ್ನು ಒದಗಿಸುವಂತೆ ಕಂಡರೂ, ಇದರ ಹಿಂದಿರುವ ಉದ್ದೇಶವು ರಾಜಕೀಯ ಅಜೆಂಡಾವನ್ನು ಹೊಂದಿರುವುದರ ಕುರಿತು ಸಹ ಚರ್ಚೆಗಳು ಚಾಲ್ತಿಯಲ್ಲಿವೆ. ಸಿಜೆಪಿಯನ್ನು ಆರಂಭಿಸಿದ ಅಭಿಜೀತ್ ಡಿಪ್ಕೆ ಹಿಂದೆ ಆಮ್ ಆದ್ಮಿ ಪಾರ್ಟಿಯ ಸಾಮಾಜಿಕ ಜಾಲತಾಣದ ಮ್ಯಾನೇಜರ್ ಆಗಿ ಕೆಲಸ ಮಾಡಿದವನು. ಇಷ್ಟೇ ಅಲ್ಲದೆ, ಈತ ದೆಹಲಿ ಗಲಭೆ ಮತ್ತು ಭಾರತ್ ತುಕಡೇ ಘೋಷಣೆಗಳ ಆರೋಪದಡಿ ಯುಎಪಿಎ ಅಡಿಯಲ್ಲಿ ಬಂಧಿತನಾಗಿರುವ ಉಮರ್ ಖಾಲಿದ್‌ನ ಬೆಂಬಲಿಗ. ಹಾಗಾಗಿ ಈ ಅಭಿಯಾನ ಯುವಜನತೆಯನ್ನು ತಪ್ಪುದಾರಿಗೆಳೆಯುವ ಅಜೆಂಡಾವನ್ನು ಹೊಂದಿದೆಯೇ? ಈಗಾಗಲೇ ನಮ್ಮ ನೆರೆಹೊರೆ ದೇಶಗಳಲ್ಲಿ ನಡೆದ ಜೆನ್‌ಜಿಗಳ ಪ್ರತಿಭಟನೆಗಳ ಮಾದರಿಯಲ್ಲೇ ದೇಶದ ಸ್ಥಿರತೆಯನ್ನು ಕೆಡಿಸುವ ಅಪಾಯಕಾರಿ ಪ್ರಯತ್ನವೇ?

ದಿಕ್ಕು ತಪ್ಪಿಸುವ ಹುನ್ನಾರ

ಸಿಜೆಪಿ ಪಕ್ಷದ ಮೆಂಬರ್ ಆಗಲು ಜೆನ್‌ಜಿಗಳಿಗೆ ಈ ಪೇಜ್‌ನಲ್ಲಿ ಇಟ್ಟಿದ್ದ ಅರ್ಹತೆಗಳನ್ನು ನೋಡಿದರೆ ಗಾಬರಿ ಹುಟ್ಟುತ್ತದೆ. ಅಂದರೆ ಮೆಂಬರ್ ಆಗುವ ವ್ಯಕ್ತಿ ಅತ್ಯಂತ ಸೋಮಾರಿಯಾಗಿರಬೇಕು, ಆತ ಕೆಲಸವಿಲ್ಲದ ನಿರುದ್ಯೋಗಿಯಾಗಿರಬೇಕು, ದಿನಕ್ಕೆ ಕನಿಷ್ಠ 11 ಗಂಟೆಗಳ ಕಾಲ ಆನ್‌ಲೈನ್‌ನಲ್ಲಿರಬೇಕು ಎನ್ನುವ ಮಾನದಂಡಗಳು ಭಾರತದ ಶೇ.50ಕ್ಕೂ ಹೆಚ್ಚಿರುವ ಯುವಜನತೆಯನ್ನು ಹಾಳು ಮಾಡುವ ಕುತಂತ್ರವೇ ಎನ್ನುವ ಅನುಮಾನಗಳು ಹುಟ್ಟುತ್ತವೆ. ಸಿಜೆಐ ಸೂರ್ಯಕಾಂತ್ ಅವರು ನಕಲಿ ಪದವಿ ಪ್ರಮಾಣಪತ್ರಗಳನ್ನು ಇಟ್ಟುಕೊಂಡವರ, ಪಿಐಎಲ್, ಸಾಮಾಜಿಕ ಜಾಲತಾಣ ಮತ್ತು ಆರ್‌ಟಿಐಗಳ ದುರ್ಬಳಕೆ ಮಾಡುವವರ ಬಗ್ಗೆ ನೀಡಿದ್ದ ಹೇಳಿಕೆಯೊಂದನ್ನು ಉದ್ದೇಶಪೂರ್ವಕವಾಗಿ ತಿರುಚಿ, ಅದು ಇಡೀ ಜೆನ್‌ಜಿ ಯುವಕರು ಮತ್ತು ನಿರುದ್ಯೋಗಿಗಳ ವಿರುದ್ಧ ನೀಡಿದ ಹೇಳಿಕೆ ಎಂಬಂತೆ ಅದರಲ್ಲಿ ಬಿಂಬಿಸಲಾಗಿತ್ತು. ಆರಂಭದಲ್ಲಿ ಯಾವುದೇ ಪಕ್ಷದ ಪರವಿಲ್ಲದ, ತಟಸ್ಥ ವೇದಿಕೆಯಂತೆ ಈ ಪೇಜ್ ಕಾಣಿಸಿಕೊಂಡಿತ್ತು. ತದನಂತರ ಬಿಜೆಪಿ ಪಕ್ಷದ ಸಾಮಾಜಿಕ ಜಾಲತಾಣವನ್ನು ಅನ್‌ಫಾಲೋ ಮಾಡಲು ಕರೆ ನೀಡಲಾಯಿತು. ಆದರೆ ಕೇವಲ ಬಿಜೆಪಿಯ ಸಾಮಾಜಿಕ ಜಾಲತಾಣವನಷ್ಟೇ ಯಾಕೆ ಅನ್‌ಫಾಲೋ ಮಾಡಲು ಸೂಚಿಲಾಯಿತು? ಕೇವಲ ನಾಲ್ಕೈದು ದಿನಗಳಲ್ಲಿ ಮಿಲಿಯನ್‌ಗಟ್ಟಲೆ ಫಾಲೋವರ್ಸ್ ಪಡೆಯುವುದು ಮತ್ತು ವೆಬ್‌ಸೈಟ್ ತೆರೆಯುವುದು ಪ್ರಬಲ ಬೆಂಬಲವಿಲ್ಲದೆ ಅಸಾಧ್ಯ.



ಜೆನ್‌ಜಿಗಳೇ ಬಂಡವಾಳ

ಇತ್ತೀಚಿನ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಜೆನ್‌ಜಿ ಸಮುದಾಯವು ಹಲವು ರೀತಿಯ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಹಾಗೆಯೇ ಈ ಜೆನ್‌ಜಿಗಳ ಸಮಸ್ಯೆಗಳೇ ಇತ್ತೀಚಿನ ರಾಜಕೀಯ ಬೆಳವಣಿಗೆಗಳಿಗೆ ಪ್ರಮುಖ ಬಂಡವಾಳವಾಗಿವೆ. ಮುಖ್ಯವಾಗಿ ಉನ್ನತ ಶಿಕ್ಷಣ ಪಡೆದರೂ ಕಾಡುವ ನಿರುದ್ಯೋಗದ ಅಭದ್ರತೆ, ಜೊತೆಗೆ ದುಬಾರಿ ಜೀವನಶೈಲಿಯ ಒತ್ತಡದಿಂದಾಗಿ ಯುವ ಜನತೆಯಲ್ಲಿ ಆಳವಾದ ಆಕ್ರೋಶವು ಮನೆ ಮಾಡಿದೆ. ಈ ಆಕ್ರೋಶವು ಸಾಂಪ್ರದಾಯಿಕ ರಾಜಕೀಯ ಧೋರಣೆಗಳ ಮೇಲಿನ ಅಸಮಾಧಾನ ಮತ್ತು ಕೃತಕ ಬುದ್ಧಿಮತ್ತೆಯಿಂದ ಉದ್ಯೋಗ ಕಡಿತದ ಭೀತಿಯನ್ನು ಇನ್ನಷ್ಟು ಹೆಚ್ಚಿದೆ. ಇದರ ಬಗ್ಗೆ ಧ್ವನಿ ಎತ್ತಲು ಹೊಸ ಮತ್ತು ತಟಸ್ಥ ವೇದಿಕೆ ಸಿಕ್ಕಾಗ ಅವರು ಸುಲಭವಾಗಿ ಆಕರ್ಷಿತರಾಗುತ್ತಾರೆ. ಈ ಸೂಕ್ಷ್ಮ ಪರಿಸ್ಥಿತಿಯನ್ನು ಅರಿತಿರುವ ರಾಜಕೀಯ ಪಕ್ಷಗಳು, ಯುವಕರ ಈ ನೈಜ ಸಮಸ್ಯೆಗಳನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಅಸ್ತ್ರವಾಗಿ ಬಳಸಿಕೊಳ್ಳುತ್ತಿವೆ. ಹಿಂದೆ ಬಾಂಗ್ಲಾದೇಶ, ಶ್ರೀಲಂಕಾ ಮತ್ತು ನೇಪಾಳದಲ್ಲಿ ಯುವಜನತೆ ಸರ್ಕಾರಗಳ ವಿರುದ್ಧ ಬೀದಿಗಿಳಿದು ದಂಗೆಯೆಬ್ಬಿಸಿದ್ದರು. ಈ ದಂಗೆಗಳ ಹಿಂದೆ ಅಲ್ಲಿನ ವಿರೋಧ ಪಕ್ಷಗಳು ಮತ್ತು ಕೆಲವು ವಿದೇಶಿ ಶಕ್ತಿಗಳು ವ್ಯವಸ್ಥಿತವಾಗಿ ಕುತಂತ್ರವನ್ನು ನಡೆಸಿದವು ಎನ್ನುವ ಚರ್ಚೆಗಳಿವೆ. ಭಾರತದಲ್ಲಿಯೂ ಸಹ ವಿವಿಧ ರಾಜಕೀಯ ಪಕ್ಷಗಳು, ಕೇಂದ್ರ ಸರ್ಕಾರ ಹಾಗೂ ಬಿಜೆಪಿಯನ್ನು ವಿರೋಧಿಸಲು ಅದೇ ತಂತ್ರವನ್ನು ಯಾಕೆ ಅಳವಡಿಸಿರಬಾರದು ಎನ್ನುವ ಸಂಶಯಗಳೂ ಇಲ್ಲದಿಲ್ಲ. ಅದಕ್ಕೆ ಪೂರಕವೆಂಬಂತೆ ಮಹುವಾ ಮೊಯಿತ್ರಾ ವಿರೋಧ ಪಕ್ಷದಲ್ಲಿ ನಾವು ಪ್ರತಿದಿನ ಯಾವ ಸವಾಲುಗಳನ್ನು ಎದುರಿಸುತ್ತಿದ್ದೇವೆ ಎಂಬುದನ್ನು ಅರಿತುಕೊಳ್ಳಬೇಕು ಮತ್ತು ಎಲ್ಲಾ ಕಾಕ್ರೋಚ್‌ಗಳು ಒಂದಾಗಬೇಕೆಂದು ಹೇಳಿಕೆ ನೀಡಿದರು. ಶಶಿ ತರೂರ್, ಯುವಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಾರದು ಎಂದು ಬೆಂಬಲಿಸಿದರು. ಕನಿಮೋಳಿ, ನಾಲ್ಕೇ ದಿನದಲ್ಲಿ 15 ಮಿಲಿಯನ್ ಯುವಕರು ಸೈನ್ ಅಪ್ ಆಗುತ್ತಿದ್ದಾರೆಂದರೆ ಇದು ಕೇವಲ ಕಾಕ್ರೋಚ್ ಸಮಸ್ಯೆಯಲ್ಲ, ದೇಶ ಏನೋ ಹೇಳಲು ಪ್ರಯತ್ನಿಸುತ್ತಿದೆ. ಅದನ್ನು ನಾವೆಲ್ಲರೂ ಕೇಳಲೇಬೇಕು ಎಂದರು. ಮೆಹಬೂಬ ಮುಫ್ತಿ ಭಾರತಕ್ಕೆ ನಿಜವಾದ ಕ್ರಾಂತಿ ಬೇಕು, ಜೆನ್‌ಜಿ ಯುವಕರು ಬದಲಾವಣೆಯನ್ನು ಪ್ರಾರಂಭಿಸುತ್ತಿದ್ದಾರೆಂದು ಬಣ್ಣಿಸಿದರು. ಅಂದರೆ ವಿರೋಧ ಪಕ್ಷಗಳೇ ಈ ಆಂದೋಲನವನ್ನು ಪ್ರಾಯೋಜಿಸುತ್ತಿದೆಯೇ ಎಂಬ ಅನುಮಾನ ಹುಟ್ಟಿಸುತ್ತವೆ.

ಆಡಳಿತ ಪಕ್ಷದ ಮೇಲೆ ಎಷ್ಟೇ ವಿರೋಧವಿದ್ದರೂ, ಕೇವಲ ಬಿಜೆಪಿಯನ್ನು ವಿರೋಧಿಸುವ ಭರದಲ್ಲಿ ಈ ಆಂದೋಲನದ ಹಿಂದಿರುವ ವಿದೇಶಿ ಕೃತಕ ಟ್ರಾಫಿಕ್ (ಬಾಟ್ ಕ್ಯಾಂಪೇನ್) ಅನ್ನು ಅವರು ಪರಿಶೀಲಿಸಲಿಲ್ಲ. ಬಾಂಗ್ಲಾದೇಶ, ನೇಪಾಳದ ಮಾದರಿಯಲ್ಲಿ ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಹುನ್ನಾರದ ಸಾಧ್ಯತೆಗಳಿದ್ದರೂ, ವಿರೋಧ ಪಕ್ಷಗಳು ಇಂತಹ ದೇಶವಿರೋಧಿ ಆಂದೋಲನಗಳಿಗೆ ಬೆಂಬಲ ನೀಡಿದ್ದು ದೊಡ್ಡ ದುರಂತ. ಸಾಮಾನ್ಯವಾಗಿ ಜಿರಳೆಗಳು ಕೊಳಕು, ತ್ಯಾಜ್ಯ ಅಥವಾ ಹಾಳಾದ ವಸ್ತು ಇರುವ ಸ್ಥಳಗಳಿಗೆ ಆಕರ್ಷಿತವಾಗುತ್ತವೆ. ಅದೇ ರೀತಿ ಅನಪೇಕ್ಷಿತ ಅಂಶಗಳು ವ್ಯವಸ್ಥೆಯಲ್ಲಿ ಕಾಣಿಸಿಕೊಂಡಾಗ, ಅವುಗಳ ಉಪಸ್ಥಿತಿಯು ವ್ಯವಸ್ಥೆಯಲ್ಲಿನ ಲೋಪದೋಷಗಳು ಮತ್ತು ದೌರ್ಬಲ್ಯಗಳನ್ನು ಸೂಚಿಸುತ್ತದೆ. ಆದ್ದರಿಂದ ಅವುಗಳನ್ನು ತೆಗೆದುಹಾಕುವುದರ ಜೊತೆಗೆ ಅವುಗಳಿಗೆ ಅವಕಾಶ ಮಾಡಿಕೊಡುವ ಮೂಲ ಕಾರಣಗಳನ್ನು ಗುರುತಿಸಿ, ಸ್ವಚ್ಛಗೊಳಿಸುವ ಕಾರ್ಯ ಆಗಬೇಕಾಗಿದೆ. ಇಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಪ್ರಮುಖ ಅಂಶವೆಂದರೆ ಭಾರತದ ಜೆನ್‌ಜಿಗಳು ಕುರುಡಾಗಿ ಹಿಂಬಾಲಿಸುವ ಕುರಿಗಳಲ್ಲ. ಅವರು ಪ್ರಬುದ್ಧರು. ಈ ಆಂದೋಲನದ ಹಿಂದಿರುವ ರಾಜಕೀಯ ತಂತ್ರ, ನಿರ್ದಿಷ್ಟ ಪಕ್ಷಗಳ ಒಲವನ್ನು ಗಮನಿಸಿದ ಅವರು ಅದನ್ನು ತಿರಸ್ಕರಿಸುವ ಪ್ರಯತ್ನ ಮಾಡಿದರು. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ತಕ್ಷಣ ಎಲ್ಲವೂ ಸತ್ಯವಾಗುವುದಿಲ್ಲ.

ಅತಿ ರಾಸಾಯನಿಕದಿಂದ ಕೃಷಿ ರಕ್ಷಿಸಲು ಕೇಂದ್ರ ಕ್ರಮ

ರಾಷ್ಟ್ರವ್ಯಾಪಿ ಖೇತ್ ಬಚಾವೋ ಆರಂಭ

• **ರೈಸನ್(ಮ.ಪ್ರ.):** ಕೃಷಿ ಕ್ಷೇತ್ರ ಮತ್ತು ಭೂಮಿಯನ್ನು ಅತಿಯಾದ ರಾಸಾಯನಿಕದಿಂದ ಭೂಮಾತೆ ಮತ್ತು ಕೃಷಿಯನ್ನು ರಕ್ಷಿಸಿ ಹೊಲಗಳನ್ನು ಉಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರವು ಮಹತ್ವದ 'ಖೇತ್ ಬಚಾವೋ ಅಭಿಯಾನ'ವನ್ನು ಆರಂಭಿಸಿದ್ದು, ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರು ಸೋಮವಾರ ಮಧ್ಯಪ್ರದೇಶದ ರೈಸನ್ ಜಿಲ್ಲೆಯ ರಾಮಸಿಯಾ ಗ್ರಾಮದಲ್ಲಿ ಚಾಲನೆ ನೀಡಿದರು.

'ಖೇತ್ ಬಚಾವೋ ಅಭಿಯಾನ' ಭೂಮಾತೆಯನ್ನು ರಕ್ಷಿಸುವ ರಾಷ್ಟ್ರೀಯ ಸಂಕಲ್ಪವಾಗಿದೆ. ಈ ಅಭಿಯಾನವು ಜೂ.1ರಿಂದ 30ರವರೆಗೆ ದೇಶಾದ್ಯಂತ ನಡೆಯಲಿದ್ದು, ಕೃಷಿ ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯಗಳ ತಜ್ಞರು, ಕೃಷಿ ವಿಜ್ಞಾನ ಕೇಂದ್ರ ಅಧಿಕಾರಿಗಳು, ಸಾರ್ವಜನಿಕ ಪ್ರತಿನಿಧಿಗಳು ಹಳ್ಳಿಗಳಿಗೆ ಭೇಟಿ ನೀಡಿ ರೈತರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾಗಿರುವ ಚೌಹಾಣ್ ತಿಳಿಸಿದರು.

ಇದರಲ್ಲಿ ಸಮತೋಲಿತ ರಸಗೊಬ್ಬರ ಬಳಕೆ, ಮಣ್ಣಿನ ಪರೀಕ್ಷೆ, ಮಣ್ಣಿನ ಆರೋಗ್ಯ ಕಾರ್ಡ್‌ಗಳ ಬಳಕೆ, ನೈಸರ್ಗಿಕ ಕೃಷಿ, ಜಲಸಂರಕ್ಷಣೆ, ವೈಜ್ಞಾನಿಕ ಕೃಷಿ ವಿಧಾನಗಳ ಅನುಸರಣೆಯನ್ನು ಉತ್ತೇಜಿಸುವ ಉದ್ದೇಶ ಹೊಂದಲಾಗಿದೆ."ಈ ಭೂಮಿ ನಮ್ಮ ತಾಯಿ ಮತ್ತು ಭೂಮಿಯ ಆರೋಗ್ಯ ರಕ್ಷಿಸುವುದು ನಮ್ಮೆಲ್ಲರ ಸಮಗ್ರ ಹೊಣೆಗಾರಿಕೆ. ಮಣ್ಣಿನ ರಕ್ಷಣೆಯಾದರೆ , ಕೃಷಿ ಅಭಿವೃದ್ಧಿ ಹೊಂದುತ್ತದೆ. ರೈತರು ಬಲಿಷ್ಠರಾಗುತ್ತಾರೆ ಮತ್ತು ರಾಷ್ಟ್ರವೂ ಅಭಿವೃದ್ಧಿ ಹೊಂದುತ್ತದೆ ಎಂದು ಅವರು ವಿವರಿಸಿದರು.



ರೈತರಿಗೆ ಮನವಿ: ಅವ್ಯಾಹತವಾಗಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸಬೇಡಿ. ಬದಲಿಗೆ ವೈಜ್ಞಾನಿಕ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಮಣ್ಣಿನ ವಾಸ್ತವಿಕ ಅಗತ್ಯಗಳಿಗೆ ತಕ್ಕಂತೆ ಗೊಬ್ಬರ ಬಳಸಿ ಎಂದು ಅವರು ರೈತರಿಗೆ ಮನವಿ ಮಾಡಿಕೊಂಡರು. ಭವಿಷ್ಯದ ಪೀಳಿಗೆಯ ಉಜ್ವಲ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡ ಒಬ್ಬ ದೂರದೃಷ್ಟಿಯ ನಾಯಕನಾಗಿ ಪ್ರಧಾನಿ ನರೇಂದ್ರ ಮೋದಿಯವರು ಈ ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸಿದ್ದಾರೆ ಎಂದರು.

ಅತಿಯಾದ ರಾಸಾಯನಿಕಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿಯುತ್ತದೆ. ಇದರಿಂದಾಗಿ ಮಣ್ಣಿನಲ್ಲಿ ಅಗತ್ಯವಾಗಿ ಇರಬೇಕಾದ ಅಸಂಖ್ಯಾತ ಸೂಕ್ಷ್ಮ ಜೀವಿಗಳ ನಾಶವಾಗುತ್ತದೆ. ಇದರಿಂದ ಕೃಷಿ ಉತ್ಪಾದನೆಯ ಮೇಲೆ ನೇರ ಪರಿಣಾಮ ಬೀರಿ ಕೃಷಿ ವೆಚ್ಚವನ್ನು ಹೆಚ್ಚುವಂತೆ ಮಾಡುತ್ತದೆ ಎಂದು ಅವರು ಒತ್ತಿ ಹೇಳಿದರು. ಈ ಅಭಿಯಾನದ ವೇಳೆ ಮಣ್ಣಿನ ಪರೀಕ್ಷೆ ಮಾಡಿಸಿಕೊಳ್ಳುವ ಬಗ್ಗೆ, ಸಮತೋಲಿತ ಪೋಷಕಾಂಶ ನಿರ್ವಹಣೆ, ನೈಸರ್ಗಿಕ ಕೃಷಿ, ಆಧುನಿಕ ಬಿತ್ತನೆ ತಂತ್ರಗಳು , ಜಲಸಂರಕ್ಷಣೆ ಮತ್ತು ಆಧುನಿಕ ಕೃಷಿ ಪದ್ಧತಿಗಳ ಅನುಸರಣೆಯ ಬಗ್ಗೆ ರೈತರಲ್ಲಿ ಅರಿವು ಮೂಡಿಸಲಾಗುವುದು ಎಂದರು.

ಚಿನ್ನ ಕೇವಲ ಲೋಹವಲ್ಲ

ಭಾರತದಿಂದ ವಾರ್ಷಿಕ 700-800 ಟನ್ ಬಂಗಾರ ಆಮದು



ಭಾರತದ ಆರ್ಥಿಕತೆ ಮತ್ತು ಸಂಸ್ಕೃತಿಯಲ್ಲಿ ಹಳದಿ ಲೋಹವಾದ ಚಿನ್ನ ಅಪರೂಪದ ಮತ್ತು ವಿಶಿಷ್ಟ ಸ್ಥಾನ ಹೊಂದಿದೆ. ಅನೇಕ ಸಂದರ್ಭಗಳಲ್ಲಿ ಅತ್ಯಧಿಕ ಮೌಲ್ಯದ ಆಸ್ತಿಯಾಗಿ ಪರಿಗಣಿಸಲಾಗುತ್ತದೆ. ವಾರ್ಷಿಕವಾಗಿ ಸುಮಾರು 700- 800 ಟನ್ ಚಿನ್ನ ಆಮದು ಮಾಡಿಕೊಳ್ಳುವ ಭಾರತ, ವಿಶ್ವದ ಅತಿದೊಡ್ಡ ಗ್ರಾಹಕ. ಆದಾಗ್ಯೂ ಭಾರತದ ಸ್ವಂತ ಗಣಿಗಳು ವರ್ಷಕ್ಕೆ 1-2 ಟನ್‌ಗಳಷ್ಟು ಮಾತ್ರ ಚಿನ್ನ ಉತ್ಪಾದಿಸುತ್ತವೆ. ಇದರಿಂದಾಗಿ ಭಾರತ ತನ್ನ ಚಿನ್ನದ ಅಗತ್ಯದ ಶೇ.90ಕ್ಕಿಂತ ಹೆಚ್ಚು ಆಮದಿನ ಮೇಲೆ ಅವಲಂಬಿತವಾಗಿದೆ. ಹೆಚ್ಚುತ್ತಿರುವ ಜಾಗತಿಕ ಅನಿಶ್ಚಿತತೆಯ ನಡುವೆ ವಿದೇಶಿ ವಿನಿಮಯ ಸಂರಕ್ಷಿಸುವ ಸಲುವಾಗಿ ಅನಿವಾರ್ಯವಲ್ಲದ ಚಿನ್ನದ ಖರೀದಿಗಳನ್ನು ತಪ್ಪಿಸುವಂತೆ ಪ್ರಧಾನಿ ನರೇಂದ್ರ ಮೋದಿ ನಾಗರಿಕರಿಗೆ ಇತ್ತೀಚೆಗೆ ಕರೆ ನೀಡಿದ್ದರು. ಈ ಹಿನ್ನೆಲೆ ಭಾರತದ ಚಿನ್ನ ಆಮದು ಪ್ರಮಾಣ ಮತ್ತು ವಿದೇಶಿ ವಿನಿಮಯಗಳ ನಡುವಿನ ಸಂಬಂಧವೇನು? ಎಂಬಿತ್ಯಾದಿಗಳ ವಿಚಾರಗಳ ಮಾಹಿತಿ ಇಲ್ಲಿದೆ.

ವಿದೇಶಿ ವಿನಿಮಯ ಮೀಸಲು ಹೆಚ್ಚಳ

ಕಚ್ಚಾ ತೈಲ ಮತ್ತು ಎಲೆಕ್ಟ್ರಾನಿಕ್ಸ್ ವಸ್ತುಗಳ ನಂತರ ಭಾರತದ ಅತಿದೊಡ್ಡ ಆಮದು ವೆಚ್ಚಗಳಲ್ಲಿ ಚಿನ್ನ ಒಂದಾಗಿದೆ. ಉತ್ಪಾದನೆ ಮತ್ತು ರಫ್ತುಗಳನ್ನು ನೇರವಾಗಿ ಪೂರೈಸುವ ಕೈಗಾರಿಕಾ ಆಮದುಗಳಿಗಿಂತ ಭಿನ್ನವಾಗಿ, ಹೆಚ್ಚಿನ ಚಿನ್ನದ ಆಮದುಗಳು ಆಭರಣಗಳ ಬೇಡಿಕೆ, ಉಳಿತಾಯ ಮತ್ತು ಹೂಡಿಕೆಯ ಖರೀದಿಯಿಂದ ನಡೆಸಲ್ಪಡುತ್ತವೆ. ಅಂದರೆ ಭಾರತ ಪ್ರತಿ ತಿಂಗಳು ಚಿನ್ನ ಆಮದು ಮಾಡಿಕೊಳ್ಳಲು ಶತಕೋಟಿ ಡಾಲರ್‌ಗಳನ್ನು ಖರ್ಚು ಮಾಡುತ್ತದೆ. ಇದು ಚಾಲ್ತಿ ಖಾತೆ ಕೊರತೆ ಮತ್ತು ವಿದೇಶಿ ವಿನಿಮಯ ಮೀಸಲುಗಳ ಮೇಲೆ ಒತ್ತಡವನ್ನು ಸೃಷ್ಟಿಸುತ್ತದೆ. ತೈಲ ಬೆಲೆಗಳು ಏರುತ್ತಿರುವ ಮಧ್ಯೆ ಇದು ಕಳವಳಕಾರಿ ಅಂಶವಾಗಿ ಹೊರಹೊಮ್ಮುತ್ತದೆ. ಚಿನ್ನದ ಆಮದು ಭಾರತದ ಒಟ್ಟು ಆಮದಿನ ಸುಮಾರು ಶೇ.9ದಷ್ಟಿದೆ. ಇದು ದೇಶದ ಅತಿದೊಡ್ಡ ವಿದೇಶಿ ವಿನಿಮಯ ಹೊರಹರಿವುಗಳಲ್ಲಿ ಒಂದಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ, ನಾವು ವಿದೇಶಿ ವಿನಿಮಯವನ್ನು ಉಳಿಸಲು ಆದ್ಯತೆ ನೀಡಬೇಕಿದೆ.

ಆರ್ಥಿಕತೆ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ಕರೆನ್ಸಿ ಮೌಲ್ಯ ಕುಸಿತ: ಚಾಲ್ತಿ ಕೊರತೆ ಹೆಚ್ಚಾದಾಗ, ವಿದೇಶಿ ಕರೆನ್ಸಿಗೆ(ಉದಾಹರಣೆಗೆ ಅಮೆರಿಕ ಡಾಲರ್) ಬೇಡಿಕೆ ಹೆಚ್ಚಾಗಿ, ಭಾರತೀಯ ರೂಪಾಯಿ ಮೌಲ್ಯ ಕುಸಿಯುವುತ್ತದೆ.

ವಿದೇಶಿ ಮೀಸಲು ಹಣದ ಬಳಕೆ: ಈ ಕೊರತೆ ಸರಿದೂಗಿಸಲು ಸರ್ಕಾರ ತನ್ನಲ್ಲಿರುವ ವಿದೇಶಿ ವಿನಿಮಯ ಮೀಸಲು ಹಣ ಬಳಸಬೇಕಾಗುತ್ತದೆ ಅಥವಾ ವಿದೇಶದಿಂದ ಸಾಲ ಪಡೆಯಬೇಕಾಗುತ್ತದೆ

ಆಮದು ಕಡಿತದಿಂದ ವಿದೇಶೀ ವಿನಿಮಯ ಉಳಿತಾಯ ಹೇಗೆ?

ಚಿನ್ನದ ಆಮದಿನಲ್ಲಿ ಶೇ.10ರಷ್ಟು ಕಡಿತ ಚಾಲ್ತಿ ಖಾತೆಯನ್ನು ಜಿಡಿಪಿಯ ಸುಮಾರು ಶೇ.0.3ರಷ್ಟು ಸುಧಾರಿಸಬಹುದು. ಇದು ಬಾಹ್ಯ ಒತ್ತಡದ ಮೇಲೆ ಅಲ್ಪಮಟ್ಟಿನ ಪರಿಹಾರ ಬೀರುತ್ತದೆ. ಚಿನ್ನದ ಬೆಲೆಗಳು 2026 ಕ್ಯು1 ಮಟ್ಟದಲ್ಲಿಯೇ ಉಳಿದರೆ, ಭೌತಿಕ ಚಿನ್ನದ ಬೇಡಿಕೆಯಲ್ಲಿ ಶೇ.10ರಷ್ಟು ಕಡಿತ ವರ್ಷಕ್ಕೆ ಸುಮಾರು 13 ಶತಕೋಟಿ ಡಾಲರ್ ವಿದೇಶಿ ವಿನಿಮಯ ಉಳಿತಾಯಕ್ಕೆ ಕಾರಣವಾಗುತ್ತದೆ.

ದೇಶೀಯವಾಗಿ ಚಿನ್ನ ಉತ್ಪಾದನೆ ಕಡಿಮೆ

ಚಿನ್ನದ ಗಣಿಗಾರಿಕೆಯು ದೇಶದ ಒಟ್ಟು ಪೂರೈಕೆಯಲ್ಲಿ ಶೇ.1ಕ್ಕಿಂತಲೂ ಕಡಿಮೆ ಕೊಡುಗೆ ನೀಡುತ್ತದೆ. ಕೆಲವೇ ಕೆಲವು ಕಾರ್ಯನಿರತ ಗಣಿಗಳಿದ್ದು, ಅವುಗಳಲ್ಲಿ ಕರ್ನಾಟಕದ ಹಟ್ಟಿ ಅತ್ಯಂತ ಗಮನಾರ್ಹವಾದದ್ದು. ಆದಾಗ್ಯೂ, ರಾಷ್ಟ್ರೀಯ ಬೇಡಿಕೆಗೆ ಹೋಲಿಸಿದರೆ ಇದರ ಉತ್ಪಾದನೆಯು ಬಹಳ ಕಡಿಮೆಯಾಗಿದೆ. ಇದು ಮೂಲಭೂತ ಅಸಮತೋಲನವನ್ನು ಸೃಷ್ಟಿಸುತ್ತದೆ. ಭಾರತವು ಹೆಚ್ಚಿನ ಮಟ್ಟದಲ್ಲಿ ಚಿನ್ನವನ್ನು ಬಳಸುತ್ತದೆ. ಆದರೆ, ತನ್ನದೇ ಆದ ನೈಸರ್ಗಿಕ ಪೂರೈಕೆ ಹೊಂದಿಲ್ಲ.

ಆಮದುಗಳ ಪ್ರಾಬಲ್ಯ

ಭಾರತದ ಶೇ.85-90ರಷ್ಟು ಚಿನ್ನವು ವಿದೇಶದಿಂದ ಬರುತ್ತದೆ. ಈ ಅಂತರವನ್ನು ಪೂರೈಸಲು ಭಾರತವು ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿದೆ. ಭಾರತದಲ್ಲಿ ಬಳಸುವ ಸುಮಾರು ಶೇ.85-90ದಷ್ಟು ಚಿನ್ನವನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಅಂದರೆ ವಾರ್ಷಿಕವಾಗಿ ಸುಮಾರು 700-800 ಟನ್. ಮೌಲ್ಯದ ದೃಷ್ಟಿಯಿಂದ, ಭಾರತವು ಒಂದು ವರ್ಷದಲ್ಲಿ 50 ಶತಕೋಟಿ ಡಾಲರ್ ಮೌಲ್ಯದ ಚಿನ್ನ ಆಮದು ಮಾಡಿಕೊಳ್ಳುತ್ತದೆ. ಇದು ಈ ಅವಲಂಬನೆಯ ಪ್ರಮಾಣ ಎಷ್ಟು ಹೆಚ್ಚಿದೆ ಎನ್ನುವುದನ್ನು ತೋರಿಸುತ್ತದೆ.



ಸ್ವಿಸ್ ಅತಿದೊಡ್ಡ ಚಿನ್ನ ಪೂರೈಕೆದಾರ

ಸ್ವಿಟ್ಜರ್ಲೆಂಡ್ ಭಾರತದ ಅತಿದೊಡ್ಡ ಚಿನ್ನದ ಪೂರೈಕೆದಾರನಾಗಿದ್ದು, ಆಮದಿನ ಸುಮಾರು ಶೇ.35-40ರಷ್ಟು ಕೊಡುಗೆ ನೀಡುತ್ತದೆ. ಆದಾಗ್ಯೂ, ಸ್ವಿಟ್ಜರ್ಲೆಂಡ್ ಸ್ವತಃ ಪ್ರಮುಖ ಚಿನ್ನದ ಗಣಿಗಾರಿಕೆ ದೇಶವಲ್ಲ. ಬದಲಿಗೆ, ಇದು ಜಾಗತಿಕ ಸಂಸ್ಕರಣಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ದಕ್ಷಿಣ ಆಫ್ರಿಕಾ ಅಥವಾ ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಗಣಿಗಾರಿಕೆ ಮಾಡಲಾದ ಚಿನ್ನವನ್ನು ಸ್ವಿಟ್ಜರ್ಲೆಂಡ್‌ಗೆ ಕಳುಹಿಸಲಾಗುತ್ತದೆ. ಅಲ್ಲಿ ಅದನ್ನು ಶುದ್ಧೀಕರಿಸಲಾಗುತ್ತದೆ. ಉತ್ತಮ ಗುಣಮಟ್ಟದ ಚಿನ್ನವಾಗಿ ಪರಿವರ್ತಿಸಲಾಗುತ್ತದೆ. ಈ ಸಂಸ್ಕರಿಸಿದ ಚಿನ್ನವನ್ನು ನಂತರ ಭಾರತಕ್ಕೆ ರಫ್ತು ಮಾಡಲಾಗುತ್ತದೆ.



ಹಲವು ದೇಶಗಳ ಮೇಲೆ ಅವಲಂಬನೆ

ಭಾರತವು ಚಿನ್ನಕ್ಕಾಗಿ ಒಂದೇ ದೇಶವನ್ನು ಅವಲಂಬಿಸಿಲ್ಲ. ಸ್ವಿಟ್ಜರ್ಲೆಂಡ್ ಹೊರತಾಗಿ, ಪ್ರಮುಖ ಪೂರೈಕೆದಾರರಲ್ಲಿ ಯುಎಇ, ದಕ್ಷಿಣ ಆಫ್ರಿಕಾ, ಪೆರು ಮತ್ತು ಆಸ್ಟ್ರೇಲಿಯಾ ಸೇರಿವೆ. ವಾಸ್ತವವಾಗಿ, ಭಾರತವು ಹಲವು ದೇಶಗಳಿಂದ ಚಿನ್ನವನ್ನು ಆಮದು ಮಾಡಿಕೊಳ್ಳುತ್ತದೆ. ಒಂದು ಪ್ರದೇಶದಲ್ಲಿ ಅಡೆತಡೆಗಳು ಸಂಭವಿಸಿದರೂ ಪೂರೈಕೆ ಸ್ಥಿರವಾಗಿರುತ್ತದೆ. ಈ ವೈವಿಧ್ಯಮಯ ಸೋರ್ಸಿಂಗ್ ಅಪಾಯವನ್ನು ಕಡಿಮೆ ಮಾಡುತ್ತದೆ. ದೇಶಕ್ಕೆ ಚಿನ್ನದ ಸ್ಥಿರವಾದ ಒಳಹರಿವನ್ನು ಖಾತ್ರಿಪಡಿಸುತ್ತದೆ.

ಭಾರತಕ್ಕೆ ಹೇಗೆ ತಲುಪುತ್ತದೆ, ವಿನಿಮಯ ವ್ಯವಸ್ಥೆ ಹೇಗಿದೆ?

ಭಾರತದಲ್ಲಿ ಚಿನ್ನದ ಆಮದುಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲಾಗುತ್ತದೆ. ಅಧಿಕೃತ ಬ್ಯಾಂಕುಗಳು ಮತ್ತು ನಾಮನಿರ್ದೇಶಿತ ಏಜೆನ್ಸಿಗಳಿಗೆ ಮಾತ್ರ ಚಿನ್ನವನ್ನು ಆಮದು ಮಾಡಿಕೊಳ್ಳುವ ಅವಕಾಶವಿದೆ. ಆಮದು ಮಾಡಿಕೊಂಡ ನಂತರ, ಚಿನ್ನವನ್ನು ಆಭರಣ ವ್ಯಾಪಾರಿಗಳು, ಚಿನ್ನ ವ್ಯಾಪಾರಿಗಳು ಮತ್ತು ವ್ಯಾಪಾರಿಗಳಿಗೆ ಮಾರಾಟ ಮಾಡಲಾಗುತ್ತದೆ. ಗ್ರಾಹಕರನ್ನು ತಲುಪುವ ಮೊದಲು ಅದನ್ನು ಆಭರಣಗಳು, ನಾಣ್ಯಗಳು ಅಥವಾ ಬಾರ್‌ಗಳಾಗಿ ಪರಿವರ್ತಿಸಲಾಗುತ್ತದೆ. ಗಣಿಗಾರಿಕೆ ದೇಶದಿಂದ ಪ್ರಾರಂಭಿಸಿ, ಸಂಸ್ಕರಣ ಕೇಂದ್ರಕ್ಕೆ ಚಲಿಸುತ್ತದೆ. ಬ್ಯಾಂಕುಗಳ ಮೂಲಕ ಭಾರತವನ್ನು ಪ್ರವೇಶಿಸುತ್ತದೆ ಮತ್ತು ಅಂತಿಮವಾಗಿ ಆಭರಣ ವ್ಯಾಪಾರಿಗಳ ಮೂಲಕ ಗ್ರಾಹಕರನ್ನು ತಲುಪುತ್ತದೆ.

ಉಗ್ರ ಜಾಲಕ್ಕೆ ಯುವಕರ ಸೆಳೆತ

» ಪಾಕ್ ಬೆಂಬಲಿತ ಉಗ್ರ ಜಾಲದ ಸಂಪರ್ಕ ಆರೋಪ

» ಉತ್ತರ ಪ್ರದೇಶದ ಆಜಂಗಢದ ಯುವಕನ ಬಂಧನ

• **ಲಕ್ನೋ:** ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಹಾಗೂ ಪಾಕಿಸ್ತಾನ ಮೂಲದ ಕುಖ್ಯಾತ ಗ್ಯಾಂಗ್‌ಸ್ಟರ್ ಶಹಜಾದ್ ಭಟ್ಟಿ ಸಂಪರ್ಕ ಹೊಂದಿರುವ ಉಗ್ರ ಜಾಲದೊಂದಿಗೆ ನಂಟು ಹೊಂದಿದ್ದ ಆರೋಪದ ಮೇಲೆ ಉತ್ತರ ಪ್ರದೇಶ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಆಜಂಗಢ ಜಿಲ್ಲೆಯ ಶಂಕಿತ ಉಗ್ರನೊಬ್ಬನನ್ನು ಬಂಧಿಸಿದೆ.

ಬಂಧಿತನನ್ನು ಆಜಂಗಢ ಜಿಲ್ಲೆಯ ನಿಜಾಮಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಖುದಾದಾದ್‌ಪುರ ಗ್ರಾಮದ ಮೊಹಮ್ಮದ್ ಶೇಖ್ ಎಂದು ಗುರುತಿಸಲಾಗಿದೆ. ಭಾರತದಲ್ಲಿನ ಯುವಕ ರನ್ನು ಸಾಮಾಜಿಕ ಜಾಲತಾಣಗಳ ಮೂಲಕ ಉಗ್ರವಾದದತ್ತ ಸೆಳೆದು ರಾಷ್ಟ್ರವಿರೋಧಿ ಚಟುವ ಟಿಕೆಗಳಿಗೆ ಬಳಸಿಕೊಳ್ಳುವ ಪ್ರಯತ್ನಗಳ ಕುರಿತು ದೊರೆತ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಎಟಿಎಸ್ ಕಾರ್ಯಾಚರಣೆ ನಡೆಸಿದೆ. ಎಟಿಎಸ್ ಪ್ರಕಾರ, ಪಾಕಿಸ್ತಾನ, ಐಎಸ್‌ಐ ಮತ್ತು ವಿವಿಧ ಉಗ್ರ ಸಂಘಟನೆಗಳು ಸೇರಿಕೊಂಡು ಶಹಜಾದ್ ಭಟ್ಟಿ ಉಗ್ರ ಜಾಲದ ಮೂಲಕ ಭಾರತೀಯ ಯುವಕರನ್ನು ಸಂಪರ್ಕಿಸುತ್ತಿದ್ದವು. ಸಾಮಾಜಿಕ ಜಾಲತಾಣಗಳ ಮೂಲಕ ಅವರನ್ನು ಮತಾಂಧಗೊಳಿಸಿ, ಭವಿಷ್ಯದಲ್ಲಿ ಉಗ್ರ ಚಟುವಟಿಕೆಗಳಿಗೆ ಬಳಸುವ ಉದ್ದೇಶದಿಂದ ಸ್ಲೀಪರ್ ಸೆಲ್‌ಗಳಾಗಿ ರೂಪಿಸುವ ಯತ್ನ ನಡೆಸಲಾಗುತ್ತಿತ್ತು.

ಮಹಿಳಾ ರಾಜಕಾರಣಿಗೆ ಬೆದರಿಕೆ: ಎಟಿಎಸ್ ತನಿಖೆಯ ಪ್ರಕಾರ, ಶಹಜಾದ್ ಭಟ್ಟಿ ಜೊತೆಗೆ ಅಜ್ಜಲ್ ಗುರ್ಜರ್ ಹಾಗೂ ರಝಾ ಪಾಕಿಸ್ತಾನಿ ಎಂಬ ಇಬ್ಬರು ಸಹಚರರು ಶೇಖ್‌ನನ್ನು ನಿರ್ವಹಿಸುತ್ತಿದ್ದರು. ಈ ಜಾಲವು ಶೇಖ್‌ಗೆ ಮತ್ತೊಂದು ರಾಜ್ಯದ ಮಹಿಳಾ ರಾಜಕೀಯ ನಾಯಕರಿಗೆ ಬೆದರಿಕೆ ಒಡ್ಡುವ ಪರೀಕ್ಷಾತ್ಮಕ ಕಾರ್ಯಾಚರಣೆ (ಟ್ರಯಲ್ ಮಿಷನ್) ನೀಡಿತ್ತು ಎನ್ನಲಾಗಿದೆ.

ಶಸ್ತ್ರಾಸ್ತ್ರ ವಶ: ಬಂಧಿತನಿಂದ 9 ಎಂಎಂ ಪಿಸ್ತೂಲ್, ನಾಲ್ಕು ಜೀವಂತ ಕಾರ್ತೂಸ್‌ಗಳು ಹಾಗೂ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.

ಕಿರುಸುದ್ದಿ

ಜೆಇಇ ಪ್ರವೇಶ ಪರೀಕ್ಷೆ: ಶುಭಂಗೆ ಪ್ರಥಮ ಸ್ಥಾನ

• **ಹೊಸದಿಲ್ಲಿ:** ಐಐಟಿ ದಿಲ್ಲಿ ವಲಯದ ಶುಭಂ ಕುಮಾರ್ 360 ಅಂಕಗಳಿಗೆ 330 ಅಂಕಗಳನ್ನು ಪಡೆಯುವ ಮೂಲಕ ಜೆಇಇ-ಅಡ್ವಾನ್ಸ್ಡ್ 2026ರ ಐಐಟಿ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಕಬೀರ್ ಚಿಲ್ಲರ್ 329 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಹಾಗೂ ಜತಿನ್ ಚಹಾರ್ 319 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ಐಐಟಿ ದಿಲ್ಲಿ ವಲಯದವರೇ ಆದ ಆರೋಹಿ ದೇಶಪಾಂಡೆ 280 ಅಂಕಗಳನ್ನು ಗಳಿಸಿ, ಅಖಿಲ ಭಾರತ ಮಟ್ಟದಲ್ಲಿ 77ನೇ ಶ್ರೇಯಾಂಕದೊಂದಿಗೆ ಮಹಿಳಾ ಅಭ್ಯರ್ಥಿಗಳ ವಿಭಾಗದಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಮೇ 17ರಂದು ನಡೆದ ಎರಡೂ ಪತ್ರಿಕೆಗಳ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 1,87,389 ಅಭ್ಯರ್ಥಿಗಳಲ್ಲಿ 1,79,694 ಅಭ್ಯರ್ಥಿಗಳು ಹಾಜರಾಗಿದ್ದರು. ಒಟ್ಟು 56,880 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದು, ಇದರಲ್ಲಿ 46,773 ಪುರುಷ ಮತ್ತು 10,107 ಮಹಿಳಾ ಅಭ್ಯರ್ಥಿಗಳು ಸೇರಿದ್ದಾರೆ.

ವಾಣಿಜ್ಯ ಎಲ್‌ಪಿಜಿ ದರ 42 ರೂ. ಹೆಚ್ಚಳ

• **ಹೊಸದಿಲ್ಲಿ:** 19 ಕೆಜಿಯ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ 42 ರೂ. ಹೆಚ್ಚಳವಾಗಿದೆ. ಪರಿಷ್ಕೃ ತ ಬೆಲೆ ಸೋಮವಾರದಿಂದಲೇ ಜಾರಿಗೆ ಬಂದಿದೆ. ಗೃಹ ಬಳಕೆಯ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಈ ಪರಿಷ್ಕರಣೆಯ ನಂತರ 19 ಕೆಜಿ ತೂಕದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆ 3,071.50 ರೂ.ನಿಂದ 3,113.50 ರೂ.ಗೆ ಏರಿಕೆಯಾಗಿದೆ.

ಮಲೇಷ್ಯಾ ಮಕ್ಕಳಿಗಿಲ್ಲ ಸಾಮಾಜಿಕ ಮಾಧ್ಯಮ

• **ಕೌಲಾಲಂಪುರ್:** 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಮಾಧ್ಯಮ ಖಾತೆ ತೆರೆಯುವುದನ್ನು ಮಲೇಷ್ಯಾ ಸರ್ಕಾರ ನಿಷೇಧಿಸಿದೆ. ಈ ಮೂಲಕ ಮಕ್ಕಳಿಗೆ ಇರುವಂತಹ ಸಾಮಾಜಿಕ ಮಾಧ್ಯಮದ ಮೇಲಿನ ವ್ಯಸನ ಕಡಿಮೆ ಮಾಡಲು ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ನಿಯಮ ಪಾಲಿಸಲು ವಿಫಲವಾದ ಕಂಪನಿಗಳು 10 ಮಿಲಿಯನ್ ರಿಂಗ್‌ಗಿಟ್ ವರೆಗೆ(23 ಕೋಟಿ ರೂ.) ದಂಡ ಪಾವತಿಸಬೇಕಾಗುತ್ತದೆ. ಯಾರ ಮಕ್ಕಳು ಕಾನೂನನ್ನು ಉಲ್ಲಂಘಿಸುತ್ತಾರೋ ಅವರ ಪೋಷಕರಿಗೆ ದಂಡ ವಿಧಿಸಲಾಗುವುದಿಲ್ಲ. ಈ ಹೊಸ ನಿಯಮದ ಪ್ರಕಾರ 16 ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳು ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟಿಕ್ ಟಾಕ್ ಹಾಗೂ ಯೂಟ್ಯೂಬ್ ಸೇರಿದಂತೆ ಯಾವುದೇ ಸಾಮಾಜಿಕ ಮಾಧ್ಯಮದಲ್ಲಿ ಖಾತೆ ತೆರೆಯಲು ಅವಕಾಶವಿಲ್ಲ.

ಸುಪ್ರೀಂ ಕೋರ್ಟ್‌ಗೆ ಐದು ಹೊಸ ಜಡ್ಜ್‌ಗಳ ನೇಮಕ

• **ಹೊಸದಿಲ್ಲಿ:** ಸುಪ್ರೀಂ ಕೋರ್ಟ್‌ಗೆ ಸೋಮವಾರ ಐವರು ಹೊಸ ನ್ಯಾಯಮೂರ್ತಿಗಳನ್ನು ನೇಮಕ ಮಾಡಲಾಗಿದ್ದು, ಇದರೊಂದಿಗೆ ಸರ್ವೋಚ್ಚ ನ್ಯಾಯಾಲಯದ ಒಟ್ಟು ನ್ಯಾಯಮೂರ್ತಿಗಳ ಸಂಖ್ಯೆ 37ಕ್ಕೆ ಏರಿಕೆಯಾಗಿದೆ.

ಕೇಂದ್ರ ಕಾನೂನು ಸಚಿವಾಲಯದ ನ್ಯಾಯಾಂಗ ಇಲಾಖೆ ಸೋಮವಾರ ಮುಂಜಾನೆ ಪ್ರತ್ಯೇಕ ಅಧಿಸೂಚನೆಗಳನ್ನು ಹೊರಡಿಸಿದೆ. ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ವೆಂಕಟ ಸುಬ್ರಮಣಿ ಮೋಹನ ಮತ್ತು ವಿವಿಧ ಹೈಕೋರ್ಟ್‌ಗಳ ನಾಲ್ಕು ಮುಖ್ಯ ನ್ಯಾಯಮೂರ್ತಿಗಳಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ನೀಡಲಾಗಿದೆ. ಇವರಲ್ಲಿ ಮುಂಬೈ ಹೈಕೋರ್ಟ್ ನ್ಯಾಯಮೂರ್ತಿ ಚಂದ್ರಶೇಖರ್ ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್ ನ್ಯಾಯಮೂರ್ತಿ ಶೀಲ್ ನಾಗು, ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿ ಸಂಜೀವ್ ಸಚದೇವ ಮತ್ತು ಜಮ್ಮು-ಕಾಶ್ಮೀರ ಹಾಗೂ ಲಡಾಖ್ ಹೈಕೋರ್ಟ್‌ನ ನ್ಯಾಯಮೂರ್ತಿ ಅರುಣ್ ಪಲ್ಲಿ ಸೇರಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ಈಗ ಕೇವಲ ಒಂದು ನ್ಯಾಯಮೂರ್ತಿ ಹುದ್ದೆ ಖಾಲಿ ಉಳಿದಿದೆ. ಕಳೆದ ತಿಂಗಳು ಸರ್ಕಾರ ಸುಪ್ರೀಂ ಕೋರ್ಟ್‌ನ ಮಂಜೂರಾದ ನ್ಯಾಯಮೂರ್ತಿಗಳ ಸಂಖ್ಯೆಯನ್ನು(ಸಿಜೆಐ ಸೇರಿದಂತೆ) 34ರಿಂದ 38ಕ್ಕೆ ಹೆಚ್ಚಿಸಲು ಸುಗ್ರೀವಾಜ್ಞೆ ಮೂಲಕ ಕಾಯ್ದೆಗೆ ತಿದ್ದುಪಡಿ ತಂದಿತ್ತು. ಈ ಹೆಚ್ಚಳದಿಂದಾಗಿ ಒಟ್ಟು ಆರು ಹುದ್ದೆಗಳು ಖಾಲಿ ಇದ್ದವು.

ಸುಪ್ರೀಂ ಕೋರ್ಟ್ ಕೊಲಿಜಿಯಂ ಮೇ27ರಂದು ಈ ಐದು ಹೆಸರುಗಳನ್ನು ಶಿಫಾರಸು ಮಾಡಿತ್ತು. ಈ ಶಿಫಾರಸು ನಡೆದ ನಾಲ್ಕು ದಿನಗಳ ಒಳಗಾಗಿ ಕೇಂದ್ರ ಸರ್ಕಾರ ನೇಮಕ ಆದೇಶಗಳನ್ನು ಹೊರಡಿಸಿದೆ.

ಮೇನಲ್ಲಿ 1.94 ಲ.ಕೋ. ರೂ. ಜಿಎಸ್‌ಟಿ ಸಂಗ್ರಹ

• **ಹೊಸದಿಲ್ಲಿ:** ದೇಶದ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಸಂಗ್ರಹವು ಮೇ ತಿಂಗಳಲ್ಲಿ 1.94 ಲಕ್ಷ ಕೋಟಿ ರೂ.ಗೆ ತಲುಪಿದ್ದು, ಕಳೆದ ವರ್ಷದ ಇದೇ ಅವಧಿಯೊಂದಿಗೆ ಹೋಲಿಸಿದರೆ ಶೇ.3.2ರಷ್ಟು ಏರಿಕೆ ದಾಖಲಾಗಿದೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ, ಏಪ್ರಿಲ್ ತಿಂಗಳಲ್ಲಿ ದಾಖಲೆ ಮಟ್ಟದ 2.42 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾದ ಬಳಿಕ ಮೇ ತಿಂಗಳಲ್ಲಿ ಸಂಗ್ರಹದಲ್ಲಿ ಇಳಿಕೆ ಕಂಡುಬಂದಿದೆ. ಆದರೆ ವಾರ್ಷಿಕ ಆಧಾರದ ಮೇಲೆ ತೆರಿಗೆ ಆದಾಯದಲ್ಲಿ ಏರಿಕೆ ಮುಂದುವರಿದಿರುವುದು ಆರ್ಥಿಕ ಚಟುವಟಿಕೆಗಳು ಸ್ಥಿರವಾಗಿರುವುದನ್ನು ಸೂಚಿಸುತ್ತದೆ.

ಕಳೆದ ವರ್ಷದ ಮೇ ತಿಂಗಳಲ್ಲಿ 1.88 ಲಕ್ಷ ಕೋಟಿ ರೂ. ಜಿಎಸ್‌ಟಿ ಸಂಗ್ರಹವಾಗಿದ್ದರೆ, ಈ ಬಾರಿ ಅದು 1.94 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ತಜ್ಞರ ಪ್ರಕಾರ, ಏಪ್ರಿಲ್ ತಿಂಗಳಲ್ಲಿ ವಾರ್ಷಿಕ ಲೆಕ್ಕಪತ್ರ ಮುಕ್ತಾಯ ಹಾಗೂ ತೆರಿಗೆ ಪಾವತಿಗಳ ಪರಿಣಾಮವಾಗಿ ಸಂಗ್ರಹ ಹೆಚ್ಚಾಗಿದ್ದರಿಂದ, ಅದರ ನಂತರದ ತಿಂಗಳಲ್ಲಿ ಸಹಜ ಕುಸಿತ ಕಂಡುಬಂದಿದೆ.

ಆದಾಗ್ಯೂ, ದೇಶೀಯ ಬಳಕೆ, ಸೇವಾ ವಲಯದ ಚಟುವಟಿಕೆಗಳು ಹಾಗೂ ತೆರಿಗೆ ಅನುಸರಣೆ (ಕಾಂಪ್ಲಯನ್ಸ್) ಸುಧಾರಣೆಯಿಂದ ಜಿಎಸ್‌ಟಿ ಆದಾಯವು ಬಲಿಷ್ಠ ಮಟ್ಟದಲ್ಲೇ ಮುಂದುವರಿದಿದೆ. ಕೇಂದ್ರ ಹಣಕಾಸು ಸಚಿವಾಲಯದ ಅಂಕಿಅಂಶಗಳು, ಆರ್ಥಿಕ ಚೇತರಿಕೆ ಮತ್ತು ತೆರಿಗೆ ನೆಲೆಯ ವಿಸ್ತರಣೆಯ ಪರಿಣಾಮವಾಗಿ ಜಿಎಸ್‌ಟಿ ಆದಾಯದಲ್ಲಿ ಸ್ಥಿರ ಬೆಳವಣಿಗೆ ಮುಂದುವರಿಯುತ್ತಿರುವುದನ್ನು ತೋರಿಸಿವೆ.

ಅಮೆರಿಕ ಜತೆ ವ್ಯಾಪಾರ ಒಪ್ಪಂದ ಅಂತಿಮ ಹಂತ

• **ಹೊಸದಿಲ್ಲಿ:** ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತದ ಬಹುತೇಕ ಪ್ರಮುಖ ಅಂಶಗಳನ್ನು ಭಾರತ ಮತ್ತು ಅಮೆರಿಕ ಅಂತಿಮಗೊಳಿಸಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಸೋಮವಾರ ಪ್ರಕಟಿಸಿದ್ದಾರೆ.

ಪ್ರಸ್ತುತ ಮಾತುಕತೆ ಸಣ್ಣಪುಟ್ಟ ತಾಂತ್ರಿಕ ಮತ್ತು ಕಾನೂನು ಒಕ್ಕೂಟದ ಹೊಂದಾಣಿಕೆಗಳ ಮೇಲೆ ಕೇಂದ್ರೀಕೃತವಾಗಿವೆ. ಅಮೆರಿಕದ ಮುಖ್ಯ ಸಂಧಾನಕಾರ ಬ್ರೆಂಡನ್ ಲಿಂಚ್ ನೇತೃತ್ವದ ನಿಯೋಗ ಗುರುವಾರದವರೆಗೆ ಹೊಸದಿಲ್ಲಿಯಲ್ಲಿ ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ದರ್ಪಣ್ ಜೈನ್ ನೇತೃತ್ವದ ಭಾರತೀಯ ತಂಡದೊಂದಿಗೆ ಮಾತುಕತೆ ನಡೆಸಲಿದೆ. ಈ ಸಭೆ, ಮಧ್ಯಂತರ ಒಪ್ಪಂದದ ಪಠ್ಯವನ್ನು ಅಂತಿಮಗೊಳಿಸುವ ಮತ್ತು ಮಾರುಕಟ್ಟೆ ಪ್ರವೇಶ, ಕಸ್ಟಮ್ಸ್, ಹೂಡಿಕೆ ಉತ್ತೇಜನ ಹಾಗೂ ಆರ್ಥಿಕ ಭದ್ರತೆಯ ಕುರಿತು ಮಾತುಕತೆಗಳನ್ನು ಮುಂದುವರಿಸುವ ಗುರಿ ಹೊಂದಿದೆ, ಎಂದು ಸಚಿವರು ತಿಳಿಸಿದ್ದಾರೆ.

ಉಭಯ ದೇಶಗಳು ಫೆ.3ರಂದು ಒಪ್ಪಂದದ ಮೊದಲ ಹಂತದ ಚೌಕಟ್ಟನ್ನು ಘೋಷಿಸಿದ್ದವು ಮತ್ತು ಫೆ.7ರಂದು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದವು. ಮೂಲ ಚೌಕಟ್ಟಿನ ಪ್ರಕಾರ, ಅಮೆರಿಕ ಭಾರತದ ಮೇಲಿನ ಸುಂಕವನ್ನು ಶೇ.50ರಿಂದ ಶೇ.18 ಕ್ಕೆ ಇಳಿಸಲು ಒಪ್ಪಿಕೊಂಡಿತ್ತು. ಪ್ರತಿಯಾಗಿ ಭಾರತ, ಅಮೆರಿಕದ ಕೈಗಾರಿಕಾ, ಆಹಾರ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಸುಂಕವನ್ನು ಕಡಿಮೆ ಮಾಡುವ ಪ್ರಸ್ತಾಪ ಮಂಡಿಸಿತ್ತು. ಅಲ್ಲದೆ, ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ 500 ಬಿಲಿಯನ್ ಯುಎಸ್ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಖರೀದಿಸುವ ಉದ್ದೇಶವನ್ನು ಭಾರತ ವ್ಯಕ್ತಪಡಿಸಿತ್ತು.

ಇನ್ನೆರಡು ದಿನದಲ್ಲಿ ಕೇರಳಕ್ಕೆ ಮುಂಗಾರು ಪ್ರವೇಶ: ಐಎಂಡಿ

• **ಹೊಸದಿಲ್ಲಿ:** ನೈಋತ್ಯ ಮುಂಗಾರು ಇನ್ನೆರಡರಿಂದ ಮೂರು ದಿನಗಳಲ್ಲಿ ಕೇರಳ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ತಿಳಿಸಿದೆ.ಸಾಮಾನ್ಯವಾಗಿ ಮುಂಗಾರು ಜೂನ್ 1ರಂದು ಕೇರಳ ಪ್ರವೇಶಿಸುತ್ತದೆ. ಆದರೆ ಈ ಬಾರಿ ಆಗಮನದಲ್ಲಿ ಸ್ವಲ್ಪ ವಿಳಂಬವಾಗಿದ್ದು, ಮುಂದಿನ ಎರಡು-ಮೂರು ದಿನಗಳಲ್ಲಿ ಕೇರಳದ ಕೆಲವು ಭಾಗಗಳು, ತಮಿಳುನಾಡು, ಲಕ್ಷದ್ವೀಪ ದ್ವೀಪಗಳು ಹಾಗೂ ಅರಬ್ಬೀ ಸಮುದ್ರದ ನೈಋತ್ಯ ಮತ್ತು ಆಗ್ನೇಯ ಭಾಗಗಳಿಗೆ ಮುಂಗಾರು ಆಗಮಿಸುವ ವಾತಾವರಣವಿದೆ ಎಂದು ಅದು ಹೇಳಿದೆ. ಇದೇ ಅವಧಿಯಲ್ಲಿ ಬಂಗಾಳ ಕೊಲ್ಲಿಯ ನೈಋತ್ಯ, ಪಶ್ಚಿಮ-ಮಧ್ಯ, ಪೂರ್ವ-ಮಧ್ಯ ಹಾಗೂ ಈಶಾನ್ಯ ಭಾಗಗಳಲ್ಲಿಯೂ ಮುಂಗಾರು ವಿಸ್ತರಣೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಲಾಗಿದೆ.ಈ ಹಿಂದೆ ಐಎಂಡಿ ಮೇ 26ರಂದು ಕೇರಳಕ್ಕೆ ಮುಂಗಾರು ಪ್ರವೇಶಿಸಲಿದೆ ಎಂದು ಅಂದಾಜಿಸಿತ್ತು.

ಪ್ರಧಾನಿ ಮೋದಿಯವರಿಗೆ ಮ್ಯಾನ್ಮಾರ್ ಅಧ್ಯಕ್ಷ ಯು ಭರವಸೆ

ಭಾರತದ ಹಿತಾಸಕ್ತಿ ರಕ್ಷಣೆಗೆ ಬದ್ಧ

• **ಹೊಸದಿಲ್ಲಿ:** ಮ್ಯಾನ್ಮಾರ್‌ನ ಭೂಭಾಗವನ್ನು ಭಾರತದ ಭದ್ರತಾ ಹಿತಾಸಕ್ತಿಗಳಿಗೆ ಧಕ್ಕೆ ತರಲು ಬಳಸಲು ಅನುಮತಿಸುವುದಿಲ್ಲ ಎಂದು ದ್ವಿಪಕ್ಷೀಯ ಮಾತುಕತೆಯ ಸಂದರ್ಭದಲ್ಲಿ ಮ್ಯಾನ್ಮಾರ್ ಅಧ್ಯಕ್ಷ ಯು ಮಿನ್ ಆಂಗ್ ಹ್ಲೈಂಗ್, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ಭರವಸೆ ನೀಡಿದ್ದಾರೆ.

ವಾಣಿಜ್ಯ, ಹೂಡಿಕೆ, ರಕ್ಷಣೆ, ಇಂಧನ, ಆರೋಗ್ಯ, ಶಿಕ್ಷಣ ಮತ್ತು ಕೃತಕ ಬುದ್ಧಿಮತ್ತೆ(ಎಐ) ವಲಯಗಳಲ್ಲಿ ಬಾಂಧವ್ಯ ವೃದ್ಧಿಸಲು ಉಭಯ ನಾಯಕರು ವ್ಯಾಪಕ ಚರ್ಚೆ ನಡೆಸಿದರು. ಪರಮಾಧಿಕಾರ ಹೊಂದಿರುವ ಭೂಭಾಗಗಳನ್ನು ಪರಸ್ಪರರ ಭದ್ರತೆಗೆ ಧಕ್ಕೆ ತರುವಂತಹ ಚಟುವಟಿಕೆಗಳಿಗೆ ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯುವ ಅಗತ್ಯವನ್ನು ಉಭಯ ದೇಶಗಳು ಒತ್ತಿಹೇಳಿವೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ತಿಳಿಸಿದ್ದಾರೆ. ಪ್ರಧಾನಿ ಮೋದಿ, ಮ್ಯಾನ್ಮಾರ್‌ನ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಭಾರತದ ಬೆಂಬಲವನ್ನು ಪುನರುಚ್ಚರಿಸಿದ್ದಾರೆ.

ಡಿಸೆಂಬರ್ ಮತ್ತು ಜನವರಿಯಲ್ಲಿ ನಡೆದ ಸಂಸದೀಯ ಚುನಾವಣೆಗಳ ನಂತರ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಎರಡು ತಿಂಗಳ ಒಳಗಾಗಿ ಆಂಗ್ ಹ್ಲೈಂಗ್, ಐದು ದಿನಗಳ ಭಾರತ ಪ್ರವಾಸ ಕೈಗೊಂಡಿದ್ದಾರೆ. ಪ್ರಸ್ತುತ ನಡೆಯುತ್ತಿರುವ ಶಾಂತಿ



ಪ್ರಕ್ರಿಯೆಯ ಭಾಗವಾಗಿ ಪ್ರಧಾನಿ ಮೋದಿ, ಸಭೆಯಲ್ಲಿ ಆಂಗ್ ಸಾನ್ ಸೂಕಿ ಅವರ ವಿಷಯ ಪ್ರಸ್ತಾಪಿಸಿದ್ದಾರೆ ಎನ್ನಲಾಗಿದೆ.

ಮ್ಯಾನ್ಮಾರ್ ದೇಶ, ಭಾರತದ ಈಶಾನ್ಯ ರಾಜ್ಯಗಳಾದ ನಾಗಾಲ್ಯಾಂಡ್ ಮತ್ತು ಮಣಿಪುರ ಸೇರಿದಂತೆ ಒಟ್ಟು 1,640 ಕಿ.ಮೀ ಉದ್ದದ ಗಡಿ ಹಂಚಿಕೊಂಡಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರೂ ಭಾನುವಾರ ಅಧ್ಯಕ್ಷರನ್ನು ಭೇಟಿ ಮಾಡಿದ್ದರು. ಈ ನಿಯೋಗ, ವ್ಯಾಪಾರ ಸಂಬಂಧಿ ಮಾತುಕತೆಗಳಿಗಾಗಿ ಇಂದು ಮುಂಬೈಗೆ ಪ್ರಯಾಣಿಸಲಿದೆ.

ಬಕ್ರೀದ್ ವೇಳೆ ಪ್ರಾಣಿ ವಧೆಗೆ ಅಸಮಾಧಾನಗೊಂಡಿದ್ದ ಬಿಲಾಲ್

ಹಿಂದು ಧರ್ಮ ಸ್ವೀಕರಿಸಿದ ಮುಸ್ಲಿಂ

• **ಭೋಪಾಲ್:** ಸನಾತನದ ಧರ್ಮದ ಶ್ರೇಷ್ಠತೆ ಮತ್ತು ಪರಂಪರೆಗೆ ಎಷ್ಟು ಮೌಲ್ಯವಿದೆ ಎಂಬುದಕ್ಕೆ ಇಲ್ಲೊಂದು ಘಟನೆ ಸಾಕ್ಷಿಯಾಗಿದೆ. ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯ ಮುಸ್ಲಿಂ ವ್ಯಕ್ತಿಯೊಬ್ಬ ಸನಾತನ ಹಿಂದು ಧರ್ಮ ಸ್ವೀಕರಿಸಿ ಸನಾತನಿಯಾಗಿ ಬದಲಾಗಿದ್ದಾನೆ. ಬಕ್ರೀದ್ ವೇಳೆ ಪ್ರಾಣಿ ಬಲಿ ಅಭ್ಯಾಸದ ಬಗ್ಗೆ ತನಗಿದ್ದ ದೀರ್ಘಕಾಲದ ಅಸಮಾಧಾನದಿಂದ ತಾನು ಈ ನಿರ್ಧಾರಕ್ಕೆ ಬಂದಿರುವುದಾಗಿ ಆತ ಹೇಳಿದ್ದಾನೆ.

ಖಿರ್ಕಿಯಾದ ನಿವಾಸಿಯಾಗಿದ್ದ ಹಿಂದೆ ಬಿಲಾಲ್, ಪ್ರಸಿದ್ಧ ಮಹಾದೇವಗಢ ದೇವಾಲಯದಲ್ಲಿ ನಡೆದ ಧಾರ್ಮಿಕ ಸಮಾರಂಭದಲ್ಲಿ ಔಪಚಾರಿಕವಾಗಿ ಹಿಂದು ಧರ್ಮ ಸ್ವೀಕರಿಸಿದ್ದಾನೆ. ಬಳಿಕ ಆತ ತನ್ನ ಹೆಸರನ್ನು ವಿಶಾಲ್ ಎಂದು ಬದಲಾಯಿಸಿಕೊಂಡಿದ್ದಾನೆ.

ಚಿಕ್ಕ ವಯಸ್ಸಿನಿಂದಲೇ ರಾಜೇಶ್ ಸಾರಂಗ್ ಎಂಬ ವ್ಯಕ್ತಿ ಕೈಕೆಳಗೆ ಉದ್ಯೋಗದಲ್ಲಿದ್ದ ವಿಶಾಲ್‌ಗೆ ಅವರ ಸನ್ನಡತೆ ಮತ್ತು ತನ್ನನ್ನು ಅವರು ಕುಟುಂಬ ಸದಸ್ಯನಂತೆ ನೋಡಿಕೊಳ್ಳುತ್ತಿದ್ದ ರೀತಿ ಹಿಂದು ಧರ್ಮದ ಮೇಲಿದ್ದ ಒಲವನ್ನು ಮತ್ತಷ್ಟು ಹೆಚ್ಚಿದೆ. ಕುಟುಂಬದಂತಹ ವಾತ್ಸಲ್ಯ ಹಿಂದು ಪದ್ಧತಿಗಳು ಮತ್ತು ಸಂಪ್ರದಾಯಗಳಿಂದ ಪ್ರಭಾವಿತನಾಗಲು ಕಾರಣವಾಯಿತು ಎಂದು ವಿಶಾಲ್ ಹೇಳಿದ್ದಾನೆ.

ಸರ್ವೇ ಭವಂತು ಸುಖಿನಃದಿಂದ ಪ್ರಭಾವಿತ: ಇಸ್ಲಾಂ ತೊರೆಯುವ ತನ್ನ ನಿರ್ಧಾರದ ಬಗ್ಗೆ ಮಾತನಾಡಿದ ವಿಶಾಲ್, ಎಲ್ಲಾ ಜೀವಿಗಳ ಬಗ್ಗೆ ಸಹಾನುಭೂತಿಯನ್ನು ಉತ್ತೇಜಿಸುವ ಸರ್ವೇ ಭವಂತು ಸುಖಿನಃ(ಎಲ್ಲಾ ಜೀವಿಗಳು ಸಂತೋಷವಾಗಿರಲಿ) ತತ್ವದಿಂದ ತಾನು ವಿಶೇಷವಾಗಿ ಪ್ರಭಾವಿತನಾಗಿದ್ದೇನೆ ಎಂದೂ ಹೇಳಿದ್ದಾನೆ. ಹಿಂದು ಧರ್ಮ ಸ್ವೀಕರಿಸುವ ಇಚ್ಛೆ ಬಗ್ಗೆ ತಾನು ಸಾರಂಗ್ ಅವರಿಗೆ ತನ್ನ ಬಯಕೆಯನ್ನು ವ್ಯಕ್ತಪಡಿಸಿದ್ದೆ. ಅವರನ್ನು ಹಿಂದುಯೇತರರ ಘರ್ ವಾಪಸಿಗೆ ಅನುಕೂಲವಾಗುವಂತೆ ತಿಳಿದಿರುವ ಖಾಂಡ್ವಾದ ದೇವಾಲಯಕ್ಕೆ ತನ್ನನ್ನು ಕರೆದೊಯ್ಯುವಂತೆ ವಿನಂತಿಸಿದ್ದೇನೆ ಎಂದು ವಿಶಾಲ್ ಹೇಳಿದ್ದಾನೆ.

ಶಿವಾರಾಧನೆಗೈದ ವಿಶಾಲ್: ಹಿಂದು ಧರ್ಮ ಸ್ವೀಕರಿಸುವ ಸಮಾರಂಭದ ಭಾಗವಾಗಿ, ವಿಶಾಲ್ ಶಿವ ದೇವರನ್ನು ಪೂಜಿಸಿದ್ದಾನೆ. ದೇವಾಲಯದಲ್ಲಿ ಯಜ್ಞದಲ್ಲಿ (ಅಗ್ನಿ ಆಚರಣೆ) ಭಾಗವಹಿಸಿದ್ದು, ಬಳಿಕ ತನ್ನ ಕೇಶ ಮುಂಡನ ಮಾಡಿಸಿಕೊಂಡಿದ್ದಾನೆ.

ಬಂಟ್ವಾಳ ತಾಲೂಕಿನ ಕಾಡಬೆಟ್ಟು ಎಂಬಲ್ಲಿ ಧಾರ್ಮಿಕ ಕಾರ್ಯಕ್ರಮದಲ್ಲಿ ನಡೆದ ದುಷ್ಕೃತ್ಯ

ಮದ್ಯದ ಅಮಲಿನಲ್ಲಿ ಚಿಕ್ಕಪ್ಪನನ್ನೇ ಕೊಂದ ಯುವಕ

ಬಂಟ್ವಾಳ: ಮದ್ಯದ ಮತ್ತಿನಲ್ಲಿ ಸಂಬಂಧಿಗನ್ನೇ ಮತ್ತು ಕೊಲೆ ಮಾಡುವಂತ ಘಟನೆಗಳು ಇತ್ತೀಚಿನ ದಿನಮಾನದಲ್ಲಿ ಹೆಚ್ಚಾಗುತ್ತಿದ್ದು, ಬಂಟ್ವಾಳ ತಾಲೂಕಿನಲ್ಲಿ ಇಂತಹದ್ದೇ ಒಂದು ಕೃತ್ಯ ಭಾನುವಾರ ರಾತ್ರಿ ನಡೆದಿದೆ.

ಪಿಲಾತಬೆಟ್ಟು ಗ್ರಾಮದ ಕಾಡಬೆಟ್ಟು ಎಂಬಲ್ಲಿ ರಾತ್ರಿ ಕುಡಿತದಮತ್ತಿನಲ್ಲಿ ಮನೆಗೆ ಬಂದಿದ್ದ ಯುವಕನೋರ್ವ ತನ್ನ ಸ್ವಂತ ಚಿಕ್ಕಪ್ಪನನ್ನೇ ಬಿಯರ್ ಬಾಟಲಿಯಿಂದ ಕುತ್ತಿಗೆಗೆ ಇರಿದು ಭೀಕರವಾಗಿ ಕೊಲೆಗೈದಿದ್ದಾನೆ. ವಿಚಿತ್ರವೆಂದರೆ ಅಂದು ರಾತ್ರಿ ಮನೆಯಲ್ಲಿ ದೈವಗಳ ತಂಬಿಲ ಸೇವೆಯ ಧಾರ್ಮಿಕ ಕಾರ್ಯಕ್ರಮವಿದ್ದು, ಕುಟುಂಬದ ಸದಸ್ಯರುಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಈ ಘಟನೆ ನಡೆದಿದೆ.

ಕೊಲೆಗೀಡಾದವರನ್ನು ಮಧುಸೂಧನ (37) ಎಂದು ಗುರುತಿಸಲಾಗಿದ್ದು, ಅವರ ಅಣ್ಣ ಕೇಶವ ಪೂಜಾರಿಯ ಮಗ ರಾಹುಲ್ (23) ಈ ಕೃತ್ಯವೆಸಗಿದ ಆರೋಪಿಯಾಗಿದ್ದಾನೆ.



ಕೊಲೆಗೀಡಾದ ಮಧುಸೂದನ್

ಕೇಶವ ಪೂಜಾರಿಯವರ ಮನೆಯಲ್ಲಿ ಭಾನುವಾರ ರಾತ್ರಿ ದೈವಕ್ಕೆ ತಂಬಿಲ ಸೇವೆಯ ಕಾರ್ಯಕ್ರಮ ಇದ್ದುದರಿಂದ ರಾಹುಲ್ ಮತ್ತೆರದ ಮನೆಯ ಹೊರಗಡೆ ಕುಡಿದು ಗದ್ದಲ ಮಾಡುತ್ತಿದ್ದನು ಎನ್ನಲಾಗಿದೆ. ಇದನ್ನು ಮಧುಸೂದನ್ ಅವರು ಆಕ್ಷೇಪಿಸಿದ್ದರು. ಕೆಲಸದ ವಿಚಾರದಲ್ಲೂ ಇವರೊಳಗೆ ಸ್ವಲ್ಪ ಮಟ್ಟಿನ ತಗಾದೆಯ ಉಂಟಾಗಿತ್ತೆನ್ನಲಾಗಿದೆ. ಇದರಿಂದ ಕುಪಿತನಾದ ರಾಹುಲ್ ಬಿಯರ್ ಬಾಟಲಿನಿಂದ ಚಿಕ್ಕಪ್ಪ ಮಧುಸೂದನ್ ಅವರ ಕುತ್ತಿಗೆಯ ಭಾಗಕ್ಕೆ ಇರಿದು ಬಳಿಕ ಸ್ಥಳದಿಂದ ಪರಾರಿಯಾಗಿದ್ದಾನೆ. ಗಂಭೀರ ಸ್ವರೂಪದ ಗಾಯಗೊಂಡ ಮಧುಸೂದನ್ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅದಾಗಲೇ ಅವರು ಕೊನೆಯುಸಿರೆಳೆದಿದ್ದಾರೆ ಎಂದು ಅವರನ್ನು ಪರೀಕ್ಷಿಸಿದ ವೈದ್ಯರು ದೃಢಪಡಿಸಿದ್ದಾರೆ.



ಆರೋಪಿ ರಾಹುಲ್

ಮೃತ ಮಧುಸೂದನ್ ಅವಿವಾಹಿತರಾಗಿದ್ದು ವೃತ್ತಿಯಲ್ಲಿ ಇಲೆಕ್ಟ್ರಿಷಿಯನ್ ಆಗಿದ್ದರು. ಆರೋಪಿ ರಾಹುಲ್ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಿಕೊಂಡಿದ್ದನೆನ್ನಲಾಗಿದೆ. ಬಂಟ್ವಾಳ ಸರಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಈ ಬಗ್ಗೆ ಪ್ರಕರಣದಾಖಲಿಸಿರುವಪುಂಜಾಲಕಟ್ಟೆಪೊಲೀಸರು ಆರೋಪಿ ರಾಹುಲ್‌ನನ್ನು ಸೋಮವಾರ ವಶಕ್ಕೆ ಪಡೆದು ವಿಚಾರಣೆಗೆ ಗುರಿಪಡಿಸಿದ್ದಾರೆ ಎಂದು ತಿಳಿದು ಬಂದಿದೆ.

ಗಾಂಜಾ ಘಾಟು

ಕುಡಿತದ ಮತ್ತಿನಲ್ಲಿ ರಾಹುಲ್ ಚಿಕ್ಕಪ್ಪನನ್ನು ಬಿಯರ್ ಬಾಟ್ಲಿಯಿಂದ ಇರಿದು ಕೊಲೆಗೈದಿದ್ದಾನೆ ಎಂಬುದು ಮೇಲ್ನೋಟಕ್ಕೆ ಕಂಡುಬಂದರೆ, ಇದರ ಹಿಂದೆ ಸ್ಥಳೀಯವಾಗಿ ವ್ಯಾಪಕವಾಗಿ ನಡೆಯುತ್ತಿದೆಯೆನ್ನಲಾದ ಗಾಂಜಾ ಘಾಟಿನ ಬಗ್ಗೆಯೂ ಶಂಕೆಗಳು ವ್ಯಕ್ತವಾಗಿವೆ. ಆದರೆ ಪುಂಜಾಲಕಟ್ಟೆ ಪೊಲೀಸರು ಮತ್ತು ಗಾಂಜಾ ಘಾಟಿನ ಸಂಶಯವನ್ನು ಮಾಮೂಲಿಯಂತೆ ತಳ್ಳಿ ಹಾಕಿದ್ದಾರೆ. ಈ ಕೃತ್ಯ ಕುಡಿತದ ಮತ್ತಿನಲ್ಲೇ ನಡೆದಿದೆ ಎಂದು ಪೊಲೀಸರು ಖಚಿತಪಡಿಸಿದ್ದಾರೆ. ಪಿಲಾತಬೆಟ್ಟು ಸುತ್ತಮುತ್ತ ಗಾಂಜಾ ವ್ಯವಹಾರ ವ್ಯಾಪಕವಾಗಿ ನಡೆಯುತ್ತಿದೆ ಎಂದು ಸ್ಥಳೀಯ ಕೆಲ ಪ್ರಮುಖರು ಪೊಲೀಸರ ಗಮನಕ್ಕೆ ತಂದರೂ, ಈ ನಿಟ್ಟಿನಲ್ಲಿ ಪೊಲೀಸರು ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂದು ದೂರಲಾಗಿದೆ.

ಮಂಗಳೂರಿನ ಹವಾನಿಯಂತ್ರಿತ ನ್ಯಾಯಾಲಯ ಸಂಕೀರ್ಣ ಉದ್ಘಾಟನೆ

ಮಂಗಳೂರು: ಮಂಗಳೂರಿನ ಸಂಪೂರ್ಣ ಹವಾನಿಯಂತ್ರಿತ ನ್ಯಾಯಾಲಯ ಸಂಕೀರ್ಣ ಉದ್ಘಾಟನಾ ಕಾರ್ಯಕ್ರಮ 3ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ಮೂರನೇ ಮಹಡಿಯಲ್ಲಿ ಸೋಮವಾರ ನಡೆಯಿತು.

ಮಂಗಳೂರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಬಸವರಾಜ್ ಅವರು ಹವಾನಿಯಂತ್ರಿ ನ್ಯಾಯಾಲಯ ಸಂಕೀರ್ಣ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ದಕ್ಷಿಣ ಕನ್ನಡದಲ್ಲಿ ಬೇಸಗೆ ಹಾಗೂ ಮಳೆಗಾಲದಲ್ಲೂ ಎಸಿಯ ಆವಶ್ಯಕತೆ ಇದೆ. ಕೆಲಸ ಮಾಡುವ ಸ್ಥಳದಲ್ಲಿ ವಾತಾವರಣ ಉತ್ತಮವಾಗಿದ್ದರೆ, ಕೆಲಸ ಮಾಡಲು ಸಹಕಾರಿಯಾಗಲಿದೆ. ಜಿಲ್ಲೆಯ ಕೆಲ ನ್ಯಾಯಾಲಯದಲ್ಲಿ ಈಗಾಗಲೇ



ಹವಾನಿಯಂತ್ರಿತ ವ್ಯವಸ್ಥೆ ಇದೆ. ಅದರಂತೆ ಜಿಲ್ಲಾ ನ್ಯಾಯಾಲಯದಲ್ಲೂ ವ್ಯವಸ್ಥೆ ಮಾಡಲಾಗಿದೆ ಎಂದರು.3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗೋಪಾಲಕೃಷ್ಣ ಭಟ್, ಮಂಗಳೂರು ವಕೀಲರ ಸಂಘದ ಅಧ್ಯಕ್ಷ ಎಚ್.ವಿ.ರಾಘವೇಂದ್ರ, ಉಪಾಧ್ಯಕ್ಷ ಸುಜಿತ್ ಕುಮಾರ್, ಕಾರ್ಯದರ್ಶಿ ಶ್ರೀಧರ ಎಚ್., ಜೊತೆ ಕಾರ್ಯದರ್ಶಿ ಜ್ಯೋತಿ ಸುವರ್ಣ, ಕೋಶಾಧಿಕಾರಿ ಗಿರೀಶ್ ಶೆಟ್ಟಿ, ಪಬ್ಲಿಕ್ ಪ್ರಾಸಿಕ್ಯೂಟರ್ ಜುಡಿತಾ ಒಲ್ಗ ಮಾರ್ಗರೇಟ್ ಮತ್ತಿತರರು ಇದ್ದರು. ಮಂಗಳೂರಿನ ನ್ಯಾಯಾಲಯದ ಐದು ಕೋರ್ಟ್‌ಗಳಿಗೆ ಈಗಾಗಲೇ ಹವಾನಿಯಂತ್ರಿತ ವ್ಯವಸ್ಥೆ ಅಳವಡಿಸಲಾಗಿದ್ದು, 15 ಕೋರ್ಟ್‌ಗಳಿಗೆ ಮುಂದೆ ಎಸಿ ಅಳವಡಿಕೆ ನಡೆಯಲಿದೆ.

ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ, ಕೊಡಗು ಜಿಲ್ಲೆ
ಸಿ.ಆರ್.ಎಂ.ಸಿ. ನಂ.: 75/2026

ಅರ್ಜಿದಾರರು :
ಪಿ.ಕೆ. ಕಾವುಲ @ ಪಿ.ಕೆ. ಕಾವಾಲ
ತಂದೆ: ಪೌತಿ ಪಿ.ಬಿ. ಕುಲಿಯ
ಪ್ರಾಯ 56 ವರ್ಷ
ವಾಸ: ಕೊಣಂಜಗೇರಿ ಗ್ರಾಮ, ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ

V/s

ಎದುರುದಾರರು:
ತಹಶೀಲ್ದಾರರು,
ಜನನ ಮತ್ತು ಮರಣ ನೋಂದಾಣಾಧಿಕಾರಿ
ಮಡಿಕೇರಿ ತಾಲೂಕು,
ಕೊಡಗು ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಪಿ.ಕೆ. ಕಾವುಲರವರ ತಂದೆಯಾದ **ಪಿ.ಬಿ.ಕುಳಿಯ** ರವರು ದಿನಾಂಕ:02.04.2022 ರಂದು ಮಡಿಕೇರಿ ತಾಲೂಕಿನ ಕೊಣಂಜಗೇರಿ ಗ್ರಾಮದ ಅವರ ನಿವಾಸದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ **ದಿನಾಂಕ:24/06/2026ರಂದು ಬೆಳಿಗ್ಗೆ 11.00 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಡಿಕೇರಿ, ಕೊಡಗು ಜಿಲ್ಲೆ

ಸಹಿ/- ಪವನ್ ಕುಮಾರ್
ಅರ್ಜಿದಾರರ ಪರ ವಕೀಲರು
ಮಡಿಕೇರಿ
27/04/2026

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2026–27/ಐ.ಎಫ್.ಟಿ. ನಂ.28/879 ದಿನಾಂಕ: 25–05–2026

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ ರ ಪ್ರಕಾರ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿಯ ಹೆಸರು: ವಿತಾವಿಂಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗ ಕಟ್ಟಡದ ನವೀಕರಣ ಕಾಮಗಾರಿ ಮೊತ್ತ ರೂ. 1,40,65,056/– (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: 29–05–2026 ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ವಾಸಾಸಂಇ/ಬೆಳಗಾವಿ/351/ಅಡ್ವರ್ಟೈಸ್/2026–27

ಕರ್ನಾಟಕ ಸರಕಾರ ಧಾರ್ಮಿಕದತ್ತಿ ಇಲಾಖೆ
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಟೀಲು
ದೂರವಾಣಿ: 7411534591, 8904905361

ಅಲ್ಪಾವಧಿ ಟೆಂಡರು ಪ್ರಕಟಣೆ

ದಿನಾಂಕ: 01.06.2026

ಕರ್ನಾಟಕಲೋಕೋಪಯೋಗಿಇಲಾಖೆಯಲ್ಲಿನೋಂದಾಯಿತಅರ್ಹಗುತ್ತಿಗೆದಾರರಿಂದ ಕನಿಷ್ಠ ದರದ ಟೆಂಡರ್‌ಗಳನ್ನು ಕೆಳಗೆ ನಮೂದಿಸಿದ ಕಾಮಗಾರಿಗೆ ಮೊಹರು ಮಾಡಿದ ಐಟಂವಾರು ಟೆಂಡರುಗಳನ್ನು ಕೆಳಗಿನ ವಿವರಣೆಯಂತೆ ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ	ಇಎಂಡಿ
1.	ಶ್ರೀ ದೇವಳದ ಆರಾಧನಾ ಕಟ್ಟಡದ ಮೂರನೇ ಮಹಡಿಯಲ್ಲಿ ನೀರಿನ ಟ್ಯಾಂಕ್ ಇಡಲು ಚೆಕ್ಕರ್ ಪ್ಲೇಟ್ ಅಳವಡಿಕೆ ಹಾಗೂ ಶೀಟ್ ರೂಫಿಂಗ್ ಮೇಲ್ಛಾವಣಿ ಎತ್ತರಿಸುವ ಕಾಮಗಾರಿ ಕುರಿತು.	5,16,950.00	12,925.00
2.	ಶ್ರೀ ದೇವಳದ ಹಳೆ ಸಂಸ್ಕೃತ ಕಾಲೇಜು ಕಟ್ಟಡದಲ್ಲಿರುವ ಯಕ್ಷಗಾನ ಬಿಡಾರದ ವಿದ್ಯುದೀಕರಣ ಕಾಮಗಾರಿಯ ಕುರಿತು.	1,17,580.00	2,940.00
3.	ಶ್ರೀ ದೇವಳದ ಯಾತ್ರಿ ನಿವಾಸ ಕಟ್ಟಡದಲ್ಲಿ 2ನೇ ಮಹಡಿಯ ವಿದ್ಯುದೀಕರಣ ಕಾಮಗಾರಿ ಕುರಿತು.	3,87,092.00	9,677.00
4.	ಶ್ರೀ ದೇವಳದ ಓವರ್‌ಹೆಡ್ ಟ್ಯಾಂಕ್‌ನ ವಾಟರ್ ಪ್ಯೂರಿಫಿಕೇಶನ್‌ಪ್ಲಾಂಟ್‌ಗೆ ಹೊಸ ಮಿಡಿಯಾ ಅಳವಡಿಸಿ ಸರ್ವೀಸ್ ಮಾಡುವ ಕುರಿತು.	–	5,000.00

1) ಯಾವುದೇ ಮಾಹಿತಿಯನ್ನು ದೇವಳದ ಕಾಮಗಾರಿವಿಭಾಗದಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಪಡೆಯಬಹುದು. 2) ಖಾಲಿ ಟೆಂಡರ್ ಫಾರಂಗಳನ್ನು ಕೊಡುವ ದಿನಾಂಕ: 08.06.2026. 3) ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 09.06.2026 ರಂದು ಸಾಯಂ 5.00 ಗಂಟೆಯವರೆಗೆ. 4) ಸ್ವೀಕರಿಸಿದ ಟೆಂಡರುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 10.06.2026 ರಂದು ಸಾಯಂ 11.00 ಗಂಟೆಗೆ ಅಥವಾ ಸೂಚಿಸುವ ಮುಂದಿನ ದಿನಾಂಕದಂದು. 5)ಟೆಂಡರ್‌ನಲ್ಲಿ ಹಿಂದೂಯೇತರರು ಭಾಗವಹಿಸುವಂತಿಲ್ಲ.

ಸಹಿ/–ಅನುವಂಶಿಕ ಮೊಕ್ತೇಸರರು

ಅತಿಥಿ ಉಪನ್ಯಾಸಕರ ನೇಮಕ

• **ಕಾಸರಗೋಡು:** ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸರಕಾರಿ ಕಾಲೇಜಿನಲ್ಲಿ ಮಲೆಯಾಳ, ಹಿಂದಿ ಮತ್ತು ಕನ್ನಡ ವಿಷಯಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಜೂ.4ರಂದು ಸಂದರ್ಶನ ನಡೆಯಲಿದೆ. ಬೆಳಗ್ಗೆ 10.30ಕ್ಕೆ ಹಿಂದಿ, 11 ಗಂಟೆಗೆ ಮಲೆಯಾಳ ಮತ್ತು 11.30ಕ್ಕೆ ಕನ್ನಡ ವಿಷಯಗಳಿಗೆ ಸಂದರ್ಶನ ಏರ್ಪಡಿಸಲಾಗಿದೆ. ಕೋಝಿಕೋಡ್ ಕಾಲೇಜು ಶಿಕ್ಷಣ ಉಪನಿರ್ದೇಶಕರು ಪ್ರಕಟಿಸಿದ ಫಲಕದಲ್ಲಿ ಸೇರಿಸಲಾದವರು ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ 9188900214 ಕರೆ ಮಾಡಬಹುದು.

ಮಂಗಳೂರು ಮಹಾನಗರಪಾಲಿಕೆ

DMA/E Tender 58817/2026-27/EE-1 ದಿನಾಂಕ: 30.05.2026

ಟೆಂಡರ್ ಪ್ರಕಟಣೆ

E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ **ಪ್ರೀಮಿಯಂ ಎಫ್.ಎ.ಆರ್ ಅನುದಾನದ** ಕಾಮಗಾರಿ ಇಂಡೆಂಟ್ ನಂ.**DMA/2026-27/WORK INDENT NO.58817** ಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 16.06.2026 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಂಗಳೂರು ಮಹಾನಗರಪಾಲಿಕೆ
DIPR/DK/KSMCA/297/26-27 dt: 01.06.2026

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಯುಸೇಇ/ಕ್ರೀಚಪ್ರೋ/ಕ್ರೀವಿಕೆ/02/2026–27 ದಿನಾಂಕ: 01.06.2026

ಟೆಂಡರ್ ಪ್ರಕಟಣೆ 2ನೇ ಕರೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001, ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮೈಸೂರು ಜಿಲ್ಲೆಯಲ್ಲಿ ಕ್ರೀಡಾ ವಿಜ್ಞಾನ ಕೇಂದ್ರ ನಿರ್ವಹಣೆ ಮತ್ತು ಮಾನವ ಸಂಪನ್ಮೂಲಗಳ ಸೇವೆಯನ್ನು ಒದಗಿಸಲು ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮೈಸೂರು ಜಿಲ್ಲೆಯಲ್ಲಿ ಕ್ರೀಡಾ ವಿಜ್ಞಾನ ಕೇಂದ್ರ ನಿರ್ವಹಣೆ ಮತ್ತು ಮಾನವ ಸಂಪನ್ಮೂಲಗಳ ಸೇವೆಯನ್ನು ಒದಗಿಸಲು ಟೆಂಡರ್. ಇಎಂಡಿ ಮೊತ್ತ: ರೂ. 1,00,000/–. 1) ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ:16.06.2026. ಸಮಯ 16.30 ಗಂಟೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.06.2026. ಸಮಯ 17.00 ಗಂಟೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ–ನಿರ್ದೇಶಕರು (ಕ್ರೀಡಾ ಯೋಜನೆ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
DIPR/CP/926/Zen/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆ. ವಿಜಯನಗರ.

ಸಂಖ್ಯೆ:ಕಾ.ಅ/ಗ್ರಾ.ನೀ.ಸ&ನೈ.ವಿ/ಹೊ/ತಾಂಶಾ/ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ/2026–27/193 ದಿನಾಂಕ:29–05–2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ–01/2026–27

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಹೊಸಪೇಟೆರವರು ಓ&ಎಂ ಯೋಜನೆಯಡಿ ಹೂವಿನಹಡಗಲಿ ತಾಲ್ಲೂಕಿನ ರೂ.238.57 ಲಕ್ಷ 02 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000ರ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಅವಧಿ **ದಿನಾಂಕ: 29–05–2026** ರಿಂದ **15–06–2026** ರ ಸಾಯಂಕಾಲ 5.00 ಗಂಟೆಯವರೆಗೆ, ಪ್ರೀ ಬಿಡ್ ಮೀಟಿಂಗ್ **ದಿನಾಂಕ:10–06–2026** ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ **ದಿನಾಂಕ:16–06–2026** ರಂದು ಸಾಯಂಕಾಲ **5.05** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಖಾಲಿ ಟೆಂಡರ್ ಡಾಕ್ಯೂಮೆಂಟನ್ನು **http://kppp.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರ್,
ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/105

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ,
ಕೆ.ಆರ್. ವೃತ್ತ, ಬೆಂಗಳೂರು–560 001. ದೂರವಾಣಿ: 080–22133370
ಸಂಖ್ಯೆ: 617/2026–27 ದಿನಾಂಕ: 01.06.2026

ಟೆಂಡರ್ ಪ್ರಕಟಣೆ ಸಂಖ್ಯೆ: 04/2026–27

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನಂ.1 ದಕ್ಷಿಣ, ನಂ.2 ಉತ್ತರ & ದೊಡ್ಡಬಳ್ಳಾಪುರ,** ಉಪವಿಭಾಗಕ್ಕೆ ಸಂಬಂಧಿಸಿದಂತೆ **06 ಸಂಖ್ಯೆಯ (ರೂ. 120.00 ರಿಂದ 450.00 ಲಕ್ಷಗಳ)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 16.06.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 17.06.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು.
ವಾಸಾಸಂಇ/ಉನಿ–ಸಿ.ಪಿ/924/ಕೆಎಸ್‌ಎಂಸಿಎ/2026–27

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
Email.ID:eerdwsd.ckb2@gmail.com, ದೂರವಾಣಿ ಸಂಖ್ಯೆ: 08156– 270058
ಸಂಖ್ಯೆ:/ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ–1/2025–26
ದಿನಾಂಕ: 30.05.2026

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಪ್ರಕಟಣೆ ಸಂಖ್ಯೆ: 04/2026–27 Re-call Notification No:(2,4,5,6,10,11/2023–24)(12,13/2024–25), (10,14/2025–26) ದಿನಾಂಕ: 30.05.2026

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು 2025–26 ನೇ JJM ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು–23, ಗೌರಿಬಿದನೂರು –4, ಗುಡಿಬಂಡೆ–2, ಚಿಂತಾಮಣಿ–1, ಚಿಕ್ಕಬಳ್ಳಾಪುರ–1 & ಒಟ್ಟು 31 ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ **KW-I & KW-II-KW-III** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ **(Credit Card/Direct Debit/ NEFT & OTC ಮುಖೇನ)** ಅಥವ ಚಾಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 06.06.2026** ರಂದು **ಸಂಜೆ 5.00** ಗಂಟೆವರೆಗೆ. (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 08.06.2026** ರಂದು ಸಂಜೆ 5.30 ಗಂಟೆವರೆಗೆ. (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 10.06.2026 ಬೆಳಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 12.06.2026 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:82/ಕೆಎಸ್‌ಎಂಸಿಎ/2026–27

IN THE COURT OF THE PRINCIPAL CIVIL JUDGE AND J.M.F.C. ATMADIKERI
Crl.M.C No.155/2026

Petitioners:
Smt. Leena Rodrigues
And others

V/s

Respondents:
The Registrar of Births And Deaths

COURT NOTICE

The petitioners above named has filed the petition against respondent by seeking direction to the respondent to get register the date of death of their father **Mr. F.X. Rodrigues,** who died on 27/07/1997 to register the same in the registry of births and deaths which is to be maintained by the office of the respondent and to issue the death certificate of their father Mr.F.X.Rodrigues to the petitioners.

Therefore please take notice that, any person or persons have any interest or objections in the above case, may do so appearing before the above court personally or through their advocate at **11.00 A.M 20/07/2026,** failing which the above case will be heard and decide on merit by the court in the interest of justice and equity.

(By the order of the court)
Sd/- Chief Ministerial Officer
Principal Civil Judge & J.M.F.C at Madikeri

Mr. M.E.Mohankumar, B.Com., LL.B.,
Advocate, "POORNIMA"
#14/B, 9th Block of C.M.C,
Next to Madikeri Rural Police Station, F.M.K.M.C College Road, Madikeri-571 201, Kodagu
Mobile: 9845818970
(Advocate for petitioner)
Madikeri
29/05/2026

ಸಹಕಾರ ಸಂಘಗಳ ಸಹಾಯಕ ನಿಬಂಧಕರು(ನಿ–441)ಹಾಗೂ ವಸೂಲಾತಿ ಅಧಿಕಾರಿಗಳು,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮಲ್ಲೇಶ್ವರಂ ಬೆಂಗಳೂರು ಇವರ ನ್ಯಾಯಾಲಯದಲ್ಲಿ

ಸ್ಥಿರಾಸ್ತಿ ಏಲಂ/ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಂಪನಕಟ್ಟೆ,** ಮಂಗಳೂರು ಇದರ ಪ್ರಧಾನ ಶಾಖೆಯಿಂದ ಕೆಳಗೆ ನಮೂದಿಸಿದ ಬಾಕಿದಾರರು ಪಡಕೊಂಡ ಸಾಲವನ್ನು ಮರುಪಾವತಿ ಮಾಡದಿರುವುದರಿಂದ ಸದ್ರಿ ಸಾಲದ ವಸೂಲಿ ಬಗ್ಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಅಮಲ್ಜಾರಿ ಕ್ರಮಕೈಗೊಂಡು, ಸದ್ರಿ ನ್ಯಾಯಾಲಯದ ಆದೇಶದ ಮೇರೆಗೆ ಈ ಕೆಳಕಂಡ ಬಾಕಿದಾರರ ಸ್ಥಿರಾಸ್ತಿಯನ್ನು ಸಹಕಾರಿ ಸಂಘಗಳ ಕಾನೂನು ಮತ್ತು ನಿಯಮಗಳಿಗನುಸಾರವಾಗಿ ಈ ಕೆಳಗೆ ನಮೂದಿಸಿದ ತಾರೀಖು ಸಮಯದಲ್ಲಿ ಹರಾಜಾಗುವ ಸ್ಥಿರಾಸ್ತಿಯನ್ನು ಎಲ್ಲಿ ಹೇಗೆ ಯಾವ ಸ್ಥಿತಿಯಲ್ಲಿ ಇರುವುದೊ ಹಾಗೆಯೇ ಸಹಕಾರಿಯ ಕೇಂದ್ರ ಕಚೇರಿ **"ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ." ಎನ್.ಜಿ.ಓ. ಕಟ್ಟಡ ಮಿನಿ ವಿಧಾನ ಸೌಧದ ಹತ್ತಿರ ಪ್ರಧಾನ ಶಾಖೆಯಲ್ಲಿ** ಬಹಿರಂಗವಾಗಿ ಏಲಂ ಮಾಡಲಾಗುವುದು. ಆಸಕ್ತಿವುಳ್ಳ ಬಿಡ್ಡುದಾರರುಸದ್ರಿ ಏಲಂ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಅಮಲ್ಜಾರಿ ನಂಬ್ರ:ಕ.ರಾ.ಸೌ.ಸಂ.ಸ.ನಿ/ಸಿ.ಇ.ಪಿ/ವ.ಅ/ 72/2016–17		
ಸಾಲಗಾರರು		ಜಾಮೀನುದಾರರು
1.ದಿ.ಶ್ರೀ ತಿಮ್ಮಪ್ಪ ಪಾಲೀಸುದಾರ ಸದಾಶಿವ ತ/ಹೆ ದಿ. ನಾರಾಯಣ 3–160, ಸೈಟ್ ನಂ. 602, 3ನೇ ಬ್ಲಾಕ್‌ಕಾಟಿಪಳ್ಳ, ಸುರತ್ಕಲ್ ಮಂಗಳೂರು	2. ಶ್ರೀ. ಸುಭಾಷ್‌ಆರ್. ತ/ಹೆ ಎಮ್‌ರಮೇಶ್ 19/53 ವೆಂಕಟರಮಣ ಕಾಲೋನಿ ತಡಂಬೈಲ್ ಸುರತ್ಕಲ್ ಮಂಗಳೂರು–575014	3 ಶ್ರೀಮತಿ ರಜನಿ ಕೋಮ್‌ಎಮ್‌ರಮೇಶ್ 19/53 ವೆಂಕಟರಮಣ ಕಾಲೋನಿ ತಡಂಬೈಲ್ ಸುರತ್ಕಲ್ ಮಂಗಳೂರು–575014
ಹರಾಜಾಗುವ ಸ್ವತ್ತಿನ ವಿವರ: ಮಂಗಳೂರು ತಾಲೂಕು, ಸುರತ್ಕಲ್‌ಗ್ರಾಮದ ಬಾಬ್ತು ಜೇಲ್ಯಾರ್ ಮಧ್ಯ ಸ.ನಂ.298/2 ಖಾತ ನಂ.2099 ಕಿ.ಸಂ ಪರಿವರ್ತಿತ ವಿಸ್ತೀರ್ಣ 0.06 ಸೆಂಟ್ಸ್ ಜಾಗ ಇದಕ್ಕೊಪ್ಪಿದ ಮಾಮೂಲುದಾರಿ, ನೀರಿನ ಹಕ್ಕು ಸರ್ವಾದಿ.	**ಏಲಂ ದಿನಾಂಕ ಮತ್ತು ಸಮಯ:** **10.06.2026 ನೇ ಬುಧವಾರ ಪೂರ್ವಾಹ್ನ 11.00ಗೆ ಗಂಟೆಗೆ** ಸರಿಯಾಗಿ ಹರಾಜು ನಡೆಯುವುದು	**ವಸೂಲಾತಿಗೆ ಬಾಕಿ ಇರುವ ಮೊತ್ತ:** 29,57,568/–(ಇಪ್ಪತ್ತೊಂಬತ್ತು ಲಕ್ಷದ ಐವತ್ತೇಳು ಸಾವಿರದ ಐನೂರ ಅರುವತ್ತೆಂಟು ಮಾತ್ರ) ಹಾಗೂ ಮುಂದುವರಿದ ಬಡ್ಡಿ, ಇತರ ಖರ್ಚುವೆಚ್ಚಗಳು ಪ್ರತ್ಯೇಕ

ಶರತ್ತುಗಳು: 1. ಏಲಂನಲ್ಲಿ ಅತ್ಯಧಿಕ ಬಿಡ್ಡುದಾರರಿಗೆ ಮಾರಾಟದ ವಾಡಿಕೆಯಲ್ಲಿರುವ ಷರತ್ತುಗಳಿಗೆ ಒಳಪಟ್ಟು ಆಸ್ತಿಗಳನ್ನು ಮಾರಾಟ ಮಾಡಲಾಗುತ್ತದೆ. ಹರಾಜಿನ ಷರತ್ತುಗಳನ್ನು ಹರಾಜಿನ ಸಮಯದಲ್ಲಿ ತಿಳಿಸಲಾಗುವುದು. 2. ಹರಾಜು ಖಾಯಂ ಆದ ಕೂಡಲೇ ಹರಾಜಾದ ಮೊಬಲಗಿನ ಪೈಕಿ ಶೇಖಡಾ 25% ಮೊತ್ತವನ್ನು ಮುಂಗಡ ಪಾವತಿ ಮಾಡತಕ್ಕದ್ದು ಮತ್ತು ಬಿಡ್ಡು ಮಾಡಿದ ಉಳಿದ ಹಣದ ಮೊಬಲಗನ್ನು ಹರಾಜಾದ ದಿನಾಂಕದಿಂದ 45 ದಿನಗಳ ಒಳಗಾಗಿ ಸಹಕಾರಿಗೆ ಸಂದಾಯ ಮಾಡತಕ್ಕದ್ದು,ತಪ್ಪಿದಲ್ಲಿ ಪಾವತಿ ಮಾಡಿರುವ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 3. ಮಾರಾಟದ ಮುಕ್ತಾಯದ ನಂತರ ಅದರ ಮೇಲಿನ ಡಸ ಪೇಪರ್ ಶುಲ್ಕವನ್ನು ಪಾವತಿಸಿದರೆ ಮಾತ್ರ ಸಹಾಯಕ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾವಣೆ ಮಾಡಿ, ರಿಜಿಸ್ಟಾರು ಸಹಿ ಮತ್ತು ಮೊಹರು ಹಾಕಿದ ಮಾರಾಟದ ಪ್ರಮಾಣ ಪತ್ರವನ್ನು ಖರೀದಿದಾರರಿಗೆ ನೀಡಲಾಗುವುದು. 4. ಹೆಚ್ಚಿನ ಮಾಹಿತಿಗಾಗಿ **ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಕೇಂದ್ರ ಕಚೇರಿ ಮಿನಿ ವಿಧಾನ ಸೌಧದ ಹತ್ತಿರ ಹಂಪನಕಟ್ಟೆ ಮಂಗಳೂರು** ಇವರನ್ನು ಸಂಪರ್ಕಿಸಬಹುದು. 5. ಹರಾಜು ಪ್ರಕ್ರಿಯೆಯನ್ನು ಖಾಯಂ ಮಾಡುವ ಅಥವಾ ಮುಂದೂಡುವ ಯಾ ರದ್ದುಪಡಿಸುವ ಅಂತಿಮ ಅಧಿಕಾರವನ್ನು ಸಹಕಾರಿಯ ಮಾರಾಟಾಧಿಕಾರಿಯವರಿಗೆ ಕಾಯ್ದಿರಿಸಲಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಂಪನಕಟ್ಟೆ ಮಂಗಳೂರು–1	ಸಹಿ/– ಮಾರಾಟಾಧಿಕಾರಿ ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಂಪನಕಟ್ಟೆ, ಮಂಗಳೂರು–1	ಸಹಿ/– ಸಹಕಾರ ಸಂಘಗಳ ಸಹಾಯಕ ನಿಬಂಧಕರು(ನಿ.441) ಹಾಗೂ ವಸೂಲಾಧಿಕಾರಿಗಳು ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮಲ್ಲೇಶ್ವರಂ ಬೆಂಗಳೂರು–55

01.06.2026

ಪುತ್ತೂರು ಮಾರುಕಟ್ಟೆ ಧಾರಣೆ

01-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	415 - 450
ಚೋಲ್ ಅಡಿಕೆ	:	510 - 535
ಡಬಲ್ ಚೋಲ್	:	510 - 535
ಹೊಸ ಪಟೋರ	:	340 - 390
ಹಳೆ ಪಟೋರ	:	360 - 390
ಹೊಸ ಉಳ್ಳಿ	:	140 - 290
ಹಳೆ ಉಳ್ಳಿ	:	130 - 290
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	255 - 285
ಹಳೆ ಕರಿಗೋಟು	:	255 - 285
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 680

ರಬ್ಬರ್ ಧಾರಣೆ : ಗ್ರೇಡ್

ಆರ್ ಎಸ್ ಎಸ್ 1	-	251.50
ಆರ್ ಎಸ್ ಎಸ್ 2	-	211.00
ಸ್ಕ್ರಾಪ್ 1	-	144.00
ಸ್ಕ್ರಾಪ್ 2	-	140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-56) ಡ್ರಾ ಜೂನ್ 01ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BV 681771 (ERNAKULAM)

Consolation Prize Rs.5,000/-
BN 681771 BO 681771 BP 681771 BR 681771
BS 681771 BT 681771 BU 681771 BW 681771
BX 681771 BY 681771 BZ 681771

2nd Prize Rs.30,00,000/- [30 Lakhs]
BW 208082 (IDUKKI)

3rd Prize Rs.5,00,000/- [5 Lakhs]
BU 910419 (CHITTUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0392 0398 1866 2853 4455 4533 5910 6296 6607 7551
8179 8460 8489 9096 9592 9728 9758 9916 9962

5th Prize Rs.2,000/-
0879 1255 5418 6025 9366 9434

6th Prize Rs.1,000/-
0160 1177 1514 1568 1860 1916 1949 2009 2045 2227
2625 3555 3618 4560 4865 4960 7338 7577 7892 7955
8517 8960 9340 9738

7th Prize Rs.500/-
0042 0147 0445 0512 0567 0794 0847 1016 1170 1179
1387 1505 1552 1587 1740 1948 2603 2839 2889 3026
3259 3292 3311 3454 3687 3695 3742 3774 3840 3843
3946 4016 4270 4276 4622 4839 4844 5031 5336 5529
5534 5630 5839 5924 6033 6066 6161 6261 6385 6405
6749 6860 7093 7272 7302 7402 7499 7715 7818 7845
7941 7950 8246 8411 8536 8587 8629 8630 8700 9004
9060 9153 9463 9594 9713 9836

8th Prize Rs.200/-
0540 0578 0624 0662 0711 1011 1190 1333 1472 1502
1521 1569 1611 1804 1843 1900 2063 2068 2106 2478
2513 2660 2864 2911 2986 3034 3155 3630 3772 3842
4109 4207 4216 4293 4346 4413 4506 4540 4566 4609
4643 4678 4699 4861 5018 5054 5307 5323 5385 5405
5456 5666 5674 5738 5763 5770 5853 6012 6094 6178
6256 6382 6613 6658 6712 6870 6935 7063 7296 7305
7529 7536 7665 7732 7869 7934 8318 8389 8595 8626
8692 8725 8777 8959 8973 8974 9008 9064 9195 9254
9262 9271 9282 9383

9th Prize Rs.100/-
0092 0114 0138 0146 0185 0252 0261 0276 0313 0365
0440 0592 0606 0685 0791 0887 0932 0963 1020 1105
1139 1183 1242 1244 1256 1426 1451 1527 1622 1727
1750 1820 1938 1967 1989 2050 2239 2253 2261 2393
2505 2508 2583 2689 2828 2887 2965 3019 3103 3257
3284 3290 3300 3327 3407 3496 3509 3588 3590 3713
3883 3891 3989 3996 4011 4063 4091 4163 4198 4313
4334 4337 4355 4466 4537 4556 4639 4666 4741 4775
4926 5014 5017 5086 5203 5242 5355 5413 5498 5618
5647 5699 5711 5722 5765 5802 5804 5870 5934 6003
6054 6119 6131 6217 6326 6460 6621 6715 6768 6962
7001 7086 7126 7158 7184 7493 7542 7692 7833 7857
7886 8023 8095 8129 8131 8135 8217 8274 8284 8290
8336 8372 8420 8444 8673 8884 8952 9191 9351 9363
9453 9465 9508 9711

ಕಿರುಸುದ್ದಿ

ರೌಡಿ ಗಣೇಶ್ ವಿರುದ್ಧ ಗೂಂಡಾ ಕಾಯ್ದೆಯಡಿ ಬಂಧನ ಆದೇಶ

• **ಉಡುಪಿ:** ಮಣಿಪಾಲ ಪೊಲೀಸ್ ಠಾಣಾ ಸರಹದ್ದಿನ ರೌಡಿ ಗಣೇಶ್ ಎಂಬಾತನನ್ನು ಗೂಂಡಾ ಕಾಯ್ದೆಯ ಬಂಧಿಸಲು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರು ಜೂನ್ 1 ರಂದು ಆದೇಶ ಹೊರಡಿಸಿದ್ದಾರೆ. ಉಡುಪಿ ತಾಲೂಕಿನ 80 ಬಡಗುಬೆಟ್ಟು ಗ್ರಾಮದ ನೇತಾಜಿನಗರ ನಿವಾಸಿ ಗಣೇಶ್ (32) ಬಂಧನಕ್ಕೊಳಗಾದ ರೌಡಿಯಾಗಿದ್ದಾನೆ. ಈತನ ನಿರಂತರ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸುವ ಸಲುವಾಗಿ ಗೂಂಡಾ ಕಾಯ್ದೆ ಜಾರಿಗೊಳಿಸುವಂತೆ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಸಲ್ಲಿಸಿದ್ದ ವರದಿಯ ಆಧಾರದ ಮೇಲೆ ಜಿಲ್ಲಾಡಳಿತ ಈ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಆರೋಪಿ ಗಣೇಶ್ ವಿರುದ್ಧ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಕೊಲೆಯತ್ನ, ಹಲ್ಲೆ, ಅಕ್ರಮ ಕೂಟ ರಚನೆ, ಮಹಿಳೆಯ ಮೇಲಿನ ದೌರ್ಜನ್ಯ ಮತ್ತು ಕಳ್ಳತನ ಸೇರಿದಂತೆ ಒಟ್ಟು 9 ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 3 ಪ್ರಕರಣಗಳು ಈಗಾಗಲೇ ನ್ಯಾಯಾಲಯದಲ್ಲಿ ಖುಲಾಸೆಗೊಂಡಿದ್ದು, 4 ಪ್ರಕರಣಗಳು ನ್ಯಾಯಾಂಗ ವಿಚಾರಣೆಯಲ್ಲಿವೆ ಹಾಗೂ ಇನ್ನುಳಿದ 2 ಪ್ರಕರಣಗಳು ಸದ್ಯ ತನಿಖಾ ಹಂತದಲ್ಲಿವೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಬಂಧಿತ ಆರೋಪಿಯನ್ನು ಉಡುಪಿ ಜಿಲ್ಲಾಧಿಕಾರಿಗಳ ಕಟ್ಟುನಿಟ್ಟಿನ ಆದೇಶದನ್ವಯ ಕಲ್ಬುರ್ಗಿಯ ಕೇಂದ್ರ ಕಾರಾಗೃಹದಲ್ಲಿ ಇರಿಸಲು ಕ್ರಮ ಕೈಗೊಳ್ಳಲಾಗಿದೆ.

ರಕ್ಷಣಾ ಸಾಮಗ್ರಿಗಳ ಹಸ್ತಾಂತರ



• **ಉಪ್ಪಿನಂಗಡಿ:** ಮುಂಬರುವ ಮಳೆಗಾಲ ಹಾಗೂ ಸಂಭವನೀಯ ಪ್ರವಾಹ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಗೃಹ ರಕ್ಷಕದಳದ ಪ್ರಭಾರ ಸಮಾದೇಷ್ಟ ಅನಿಲ್ ಕುಮಾರ್ ಎಸ್. ಭೂಮರೆಡ್ಡಿ ಆದೇಶದಂತೆ ಗೃಹರಕ್ಷಕ ದಳದ ಕಚೇರಿಯಿಂದ ಉಪ್ಪಿನಂಗಡಿ ಗೃಹರಕ್ಷಕ ದಳದ ಪ್ರವಾಹ ರಕ್ಷಣಾ ತಂಡಕ್ಕೆ ರಬ್ಬರ್ ದೋಣಿ, ಲೈಫ್ ಜಾಕೆಟ್ ಹಾಗೂ ಲೈಫ್ ಬಾಯ್ ಸೇರಿದಂತೆ ವಿವಿಧ ರಕ್ಷಣಾ ಉಪಕರಣ ಹಸ್ತಾಂತರಿಸಲಾಯಿತು. ಜಿಲ್ಲಾ ಗೃಹರಕ್ಷಕ ದಳದ ಸಹಾಯಕ ಆಡಳಿತ ಅಧಿಕಾರಿ ಕವಿತಾ, ಬೋಧಕರಾದ ಉಮೇಶ್, ಪ್ರಥಮ ದರ್ಜೆ ಸಹಾಯಕ ಶ್ಯಾಮಲಾ ಶೆಟ್ಟಿ ಹಾಗೂ ವಿಶ್ವನಾಥ್, ಜಿಲ್ಲಾ ಕಚೇರಿ ಸಿಬ್ಬಂದಿ ಮೆಹಬೂಬ್, ಖತೀಜಮ್ಮ, ಮಂಜುಳಾ ಇದ್ದರು. ಉಪ್ಪಿನಂಗಡಿ ಗೃಹರಕ್ಷಕ ದಳದ ಪ್ರವಾಹ ರಕ್ಷಣಾ ತಂಡದ ಪರವಾಗಿ ಘಟಕಾಧಿಕಾರಿ ರಾಮಣ್ಣ ಆಚಾರ್ಯ, ಸೆಕ್ಷನ್ ಲೀಡರ್ ದಿನೇಶ್ ಬೊಳ್ಳಾರ್, ಸಹಾಯಕ ಸೆಕ್ಷನ್ ಲೀಡರ್ ಜನಾರ್ದನ ಆಚಾರ್ಯ, ವಸಂತ ಅವರು ಉಪಕರಣಗಳನ್ನು ಸ್ವೀಕರಿಸಿದರು.

ಉಪಮುಖ್ಯಮಂತ್ರಿ ಸ್ಥಾನ ನೀಡಲು ಆಗ್ರಹ

• **ಬಂಟ್ವಾಳ:** ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯ ಸಮಾನ ಪ್ರಾತಿನಿಧ್ಯ ಹಾಗೂ ಹಿಂದುಳಿದ ವರ್ಗಗಳ ರಾಜಕೀಯ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುವ ನಿಟ್ಟಿನಲ್ಲಿ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೂತನ ಸಚಿವ ಸಂಪುಟದಲ್ಲಿ ಹಿಂದುಳಿದ ವರ್ಗಗಳ ಕೋಟಾದಲ್ಲಿ ವಿಧಾನಪರಿಷತ್ ಸದಸ್ಯ ಬಿ ಕೆ ಹರಿಪ್ರಸಾದ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ನೇಮಿಸುವಂತೆ ಒಟ್ಟು 54 ಪ್ರಾಥಮಿಕ ಮೂರ್ತೆದಾರರ ಸೇವಾ ಸಹಕಾರಿ ಸಂಘದ ಪರವಾಗಿ ದಕ್ಷಿಣ ಕನ್ನಡ ಜಿಲ್ಲಾ ಮೂರ್ತೆದಾರರ ಸಹಕಾರಿ ಮಹಾಮಂಡಲ ಮನವಿ ಮೂಲಕ ಆಗ್ರಹಿಸಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಬಿಲ್ಲವರು ಬಹುಸಂಖ್ಯಾತರಾಗಿದ್ದು, ಈ ಸಮಾಜಕ್ಕೆ ಕಳೆದ ಹಲವಾರು ವರ್ಷಗಳಿಂದ ಸರಕಾರದಲ್ಲಿ ಸೂಕ್ತ ಪ್ರಾತಿನಿಧ್ಯ ದೊರಕಿರುವುದಿಲ್ಲ, ಹಾಗಾಗಿ ಬಿಲ್ಲವ ಸಮುದಾಯದ ನಾಯಕರಾದ ದೀರ್ಘಕಾಲದ ರಾಜಕೀಯ ಅನುಭವ ಹೊಂದಿರುವ ಬಿ. ಕೆ ಹರಿಪ್ರಸಾದ್ ಅವರನ್ನು ಹಿಂದುಳಿದ ಕೋಟಾದಡಿಯಲ್ಲಿ ಕರ್ನಾಟಕ ಸರಕಾರದ ಉಪಮುಖ್ಯಮಂತ್ರಿಯಾಗಿ ನೇಮಕ ಮಾಡುವ ಮೂಲಕ ಸೂಕ್ತ ಗೌರವ ನೀಡಬೇಕೆಂದು ದಕ್ಷಿಣ ಕನ್ನಡ ಜಿಲ್ಲಾ ಮೂರ್ತೆದಾರರ ಸಹಕಾರಿ ಮಹಾಮಂಡಲದ ಅಧ್ಯಕ್ಷ ಕೆ. ಸಂಜೀವ ಪೂಜಾರಿ ಮನವಿ ಮೂಲಕ ಒತ್ತಾಯಿಸಿದ್ದಾರೆ.

ಪೊನ್ನಂಪೇಟೆ ತಾಲೂಕು ಕನ್ನಡ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ ಟಿ.ಎಸ್.ಗೋಪಾಲ್ ಪ್ರತಿಪಾದನೆ

ಪ್ರಾದೇಶಿಕ ಭಾಷೆಯ ಜೊತೆಗೆ ಇತರ ಭಾಷೆ ಕಲಿಕೆ ತಪ್ಪಲ್ಲ



• **ಮಡಿಕೇರಿ:** ಮಕ್ಕಳಲ್ಲಿ ಕನ್ನಡ ಪ್ರೇಮವನ್ನು ಕಡ್ಡಾಯವಾಗಿ ಬೆಳೆಸಿ ಎಂದು ಪೊನ್ನಂಪೇಟೆ ತಾಲೂಕು ಕನ್ನಡ ಸಾಹಿತ್ಯ ಪ್ರಥಮ ಸಮ್ಮೇಳನ ಅಧ್ಯಕ್ಷ ಟಿ.ಎಸ್.ಗೋಪಾಲ್ ಅವರು ಕರೆ ನೀಡಿದರು.

ಪೊನ್ನಂಪೇಟೆ ತಾಲೂಕಿನ ಹುದಿಕೇರಿಯ ಜನತಾ ಪ್ರೌಢಶಾಲಾ ಮೈದಾನದ ಕೂರ್ಗ್ ಸ್ಟಾರ್ ಚೆಕ್ಕೇರ ಅಪ್ಪಯ್ಯ ವೇದಿಕೆಯಲ್ಲಿ ಸೋಮವಾರ ನಡೆದ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಗೆ ಸುಮಾರು 2 ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದ್ದು, ಕನ್ನಡ ಆದ ಪ್ರಾಚೀನ ಇತಿಹಾಸ ಹೊಂದಿದೆ. ದಕ್ಷಿಣ ಭಾರತದ ದ್ರಾವಿಡ ಭಾಷೆಯಲ್ಲಿ ಕನ್ನಡ ಸೊಗಡಾದ ಭಾಷೆಯಾಗಿದ್ದು, ಮಕ್ಕಳಿಗೆ ಕನ್ನಡ ಭಾಷೆಯನ್ನು ಸರಳೀಕರಿಸಿ ಕಲಿಸುವಂತಾಗಬೇಕು ಎಂದು ಸಲಹೆ ಮಾಡಿದರು.

ನಾಡಿನ ಭಾಷೆಯಾದ ಕನ್ನಡವನ್ನು ಹೆಚ್ಚು ಹೆಚ್ಚು ಕಲಿಯಬೇಕು. ಮಾತೃ ಭಾಷೆ ಜೊತೆಗೆ ನಾಡಿನ ಭಾಷೆಯನ್ನು ಕಲಿಸಬೇಕು ಎಂದು ಟಿ.ಎಸ್. ಗೋಪಾಲ್ ಅವರು ಹೇಳಿದರು.

ಪ್ರಾದೇಶಿಕ ಭಾಷೆ ಜೊತೆಗೆ ಇತರ ಭಾಷೆಗಳನ್ನು ಕಲಿಯುವುದರಲ್ಲಿ ಯಾವುದೇ ತಪ್ಪಿಲ್ಲ. ವರ್ತಮಾನದಲ್ಲಿ ಇಂಗ್ಲಿಷ್ ವ್ಯವಹಾರಿಕವಾಗಿ ಅಂತರರಾಷ್ಟ್ರೀಯ ಮಾನ್ಯತೆ ಗಳಿಸಿರುವ ಭಾಷೆಯಾಗಿದ್ದು, ಎಲ್ಲಾ ಭಾಷೆಯನ್ನು ಕಲಿಯುವಂತಾಗಬೇಕು. ಆದರೆ ಹೊರಗಿನಿಂದ ನಾಡಿಗೆ ಬಂದವರೂ ಸಹ ಕನ್ನಡ ಕಲಿಯುವಂತಾಗಬೇಕುಮತ್ತುಕಲಿಸುವಂತಾಗಬೇಕು ಎಂದು ಸಲಹೆ ಮಾಡಿದರು.

ಕನ್ನಡವನ್ನು ಸಲೀಸಾಗಿ ಮಾತನಾಡುವ ಮಕ್ಕಳು ಓದಿ ಬರೆಯಲು ಕಷ್ಟ ಪಡುತ್ತಿರುವ ಬಗ್ಗೆ ಕೇಳಿ ಬರುತ್ತಿದೆ. ಮನೆಯಲ್ಲಿಯೇ ಕನ್ನಡ ಕಲಿಯುವ ಕೆಲಸ ಆಗಬೇಕು. ಹ್ರಸ್ವ-ದೀರ್ಘ ಸ್ವರ, ಅಲ್ಪಪ್ರಾಣ-ಮಹಾಪ್ರಾಣ ಹೀಗೆ ಉಚ್ಚಾರಣೆಯ ಬಗ್ಗೆ ಮಾಹಿತಿ ನೀಡುವಂತಾಗಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿ, ಯುವಜನರು ಸಾಹಿತ್ಯ ಅಭಿಮಾನ ಬೆಳೆಸಿಕೊಳ್ಳಲು ಕನ್ನಡ ಸಾಹಿತ್ಯ ಸಮ್ಮೇಳನ ವೇದಿಕೆಯಾಗಿದೆ ಎಂದು ನುಡಿದರು.

> ದಕ್ಷಿಣ ಕೊಡಗಿನ ಭಾಗದಲ್ಲಿ ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವುದರಿಂದ ಕನ್ನಡ, ಕೊಡವ, ಮಲೆಯಾಳ, ಆದಿವಾಸಿ ಭಾಷೆಗಳನ್ನು ಮಾತನಾಡುತ್ತಾರೆ. ಜೊತೆಗೆ ಆದ್ಯ ಯನಕ್ಕೆ ಸಂಬಂಧಿಸಿದಂತೆ ಕನ್ನಡ, ಇಂಗ್ಲಿಷ್, ಹಿಂದಿಯನ್ನು ಸಹ ಕಲಿಯುತ್ತಾರೆ. ಮಕ್ಕಳಿಗೆ ಭಾಷೆ ಕಲಿಕೆಗೆ ಒತ್ತು ನೀಡಬೇಕು. ಆದರೆ ಕನ್ನಡ ಭಾಷೆಗೆ ಮೊದಲ ಆದ್ಯತೆ ನೀಡಬೇಕು.
> ■ ಟಿ.ಎಸ್.ಗೋಪಾಲ್

ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚೆರಿಯಪಂಡ ಸುರೇಶ್ ನಂಜಪ್ಪ ಮಾತನಾಡಿದರು. ತಾ.ಪಂ.ಇಒ ಕೆ.ಆರ್.ರಾಜೇಶ್ ಮಾತನಾಡಿದರು.

ತಹಶೀಲ್ದಾರ್ ಸಂಜನಾ, ಪೊಲೀಸ್ ಉಪ ಅಧೀಕ್ಷಕ ಮಹೇಶ್ ಕುಮಾರ್, ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಗೋಪಿ, ಪೊನ್ನಂಪೇಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೋಳೆರ ದಯಾ ಚಂಗಪ್ಪ, ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬಿ.ಎಂ.ವಾಸು ರೈ, ಪೊನ್ನಂಪೇಟೆ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಬಾಳೆಲೆ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಪ್ರಭು ಕುಮಾರ್, ಜಮ್ಮ ಅಯ್ಯಣ್ಣ ಚೆಕ್ಕೇರ ಸುರೇಶ್, ದಿವ್ಯಾ ಕಾವೇರಪ್ಪ, ಪುಟ್ಟರಾಜು, ಇತರರು ಇದ್ದರು.

ಹುದಿಕೇರಿಯ ಲಿಟ್ಲ್ ಫ್ಲವರ್ ಶಾಲೆಯ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಗೋಣಿಕೊಪ್ಪ ಕಾವೇರಿ ಕಾಲೇಜಿನ ವಿದ್ಯಾರ್ಥಿಗಳು ರೈತ ಗೀತೆ ಹಾಡಿದರು. ಸಮ್ಮೇಳನ ಸ್ವಾಗತ ಸಮಿತಿ ಉಪಾಧ್ಯಕ್ಷ ಬಾನಂಗಡ ಅರುಣ್ ಸ್ವಾಗತಿಸಿದರು. ಚಂದನಾ ಮತ್ತು ನೇಸಿ ಅವರು ನಿರೂಪಿಸಿದರು. ದಯಾ ಚಂಗಪ್ಪ ವಂದಿಸಿದರು. ಸಮ್ಮೇಳನಾಧ್ಯಕ್ಷರ ಮೆರವಣಿಗೆಯು ಮುಖ್ಯ ರಸ್ತೆಗಳ ಸಾಗಿತು. ವಿವಿಧ ಇಲಾಖೆಗಳು ಮಾಹಿತಿ ಗಮನ ಸೆಳೆಯಿತು.

ಪಟ್ಲ ಫೌಂಡೇಶನ್‌ನ ಮೂಡುಬಿದಿರೆ ಘಟಕದಿಂದ ಅಶಕ್ತರಿಗೆ ಧನಸಹಾಯ



• **ಮೂಡುಬಿದಿರೆ:** ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಮಂಗಳೂರು ಮೂಡುಬಿದಿರೆ ಘಟಕದ ವತಿಯಿಂದ ಸಂಕಷ್ಟದಲ್ಲಿರುವವರಿಗೆ ಸಹಾಯ ಹಸ್ತವನ್ನು ಭಾನುವಾರ ಸಮಾಜ ಮಂದಿರದಲ್ಲಿ ಹಸ್ತಾಂತರಿಸಲಾಯಿತು.

ಮೂಡುಬಿದಿರೆ ಘಟಕದ ಅಧ್ಯಕ್ಷ ದಿವಾಕರಶೆಟ್ಟಿಬಂಡಾಳಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಇತ್ತೀಚೆಗೆ ಪುಚ್ಚೆಮೊಗರಿನಲ್ಲಿ ಸಂಭವಿಸಿದ ದುರ್ಘಟನೆಯಲ್ಲಿ ಸಂಕಷ್ಟಕ್ಕೆ ಒಳಗಾದ ದೈವ ಪರಿಚಾರಕರಾದ ಸುನೀಲ್ ಶೆಟ್ಟಿ ಯಶೋಧರ, ದಿನೇಶ್ ಚಿಕಿತ್ಸಾ ವೆಚ್ಚ ಹಾಗೂ ಸದಾಶಿವ ಶೆಟ್ಟಿಗಾರ್ ವೈದ್ಯಕೀಯ ನೆರವಿಗೆ ಧನಸಹಾಯ ನೀಡಲಾಯಿತು.

ಮಾಸ್ತಿಕಟ್ಟೆ ನೆಲ್ಲಿಗುಡ್ಡೆ ನಿವಾಸಿಗಳಾದ ಹಿಂದುಳಿದ ವರ್ಗದ ತೀವ್ರ ಬಡತನದಲ್ಲಿರುವ ಮಮತಾ ಹರೀಶ್ ಅವರ ಮಗಳ ವಿವಾಹಕ್ಕಾಗಿ ಸಹಾಯಧನವನ್ನು ವಿತರಿಸಲಾಯಿತು.

ಮೂಡುಬಿದಿರೆ ಘಟಕದ ಗೌರವಾಧ್ಯಕ್ಷ ಶ್ರೀಪತಿ ಭಟ್, ಕೇಂದ್ರೀಯ ಘಟಕದ ಪ್ರೇಮನಾಥ್ ಮಾರ್ಲ ಕೆ. ಹಾಗೂ ನೀಲೇಶ್ ಶೆಟ್ಟಿ, ಪದಾಧಿಕಾರಿಗಳಾದ ಪ್ರದೀಪ್ ಜೈನ್ ಬಾವದಗುತ್ತು, ಪ್ರಜೀತ್ ಕಟ್ಟೆಮಾರ್, ಶಾಂತಾರಾಮ್ ಕುಡ್ವ, ಮನೋಜ್ ಕುಮಾರ್ ಶೆಟ್ಟಿ, ಅರುಣ್ ಕುಮಾರ್, ಸಂತೋಷ್ ಶೆಟ್ಟಿ ತಾಕೊಡೆ ಒರ್ಕ ಅಮ್ಮಿ ಕೋಟ್ಯಾನ್ ಇದ್ದರು. ಸಂಚಾಲಕ ರವಿಪ್ರಸಾದ್ ಕೆ. ಶೆಟ್ಟಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಶಾಂತಾರಾಮ ಶೆಟ್ಟಿ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ



• **ಮುಲ್ಕಿ:** ಪಂಜದಗುತ್ತು ಶಾಂತಾರಾಮ ಶೆಟ್ಟಿ ಯವರ ಶಿಕ್ಷಣ ಪ್ರೇಮಿಯಾಗಿದ್ದರಿಂದ ಗ್ರಾಮೀಣ ಪ್ರದೇಶದ ಪಂಜ ದಲ್ಲಿ ಪ್ರೌಢಶಾಲೆ ಪ್ರಾರಂಭಗೊಳ್ಳಲು ಕಾರಣವಾಯಿತು. ತನ್ನ ಜೀವಿತಾವಧಿಯುದ್ದಕ್ಕೂ ಶಿಕ್ಷಣ ವಂಚಿತರ ಬಗ್ಗೆ ಚಿಂತನೆ ಮಾಡಿದ ಅಪರೂಪದ ವ್ಯಕ್ತಿತ್ವದ ಪಂಜದಗುತ್ತು ಶಾಂತಾರಾಮ ಶೆಟ್ಟಿ ಅವರನ್ನು ಸ್ಮರಣೆ ಮಾಡುವುದು ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಯ ಆದ್ಯ ಕರ್ತವ್ಯ, ಸೊಸೈಟಿಯ ಪ್ರೇರಣೆ ಶಕ್ತಿಯಾಗಿದ್ದ ಪಂಜದಗುತ್ತು ಶಾಂತಾರಾಮ ಶೆಟ್ಟಿ ರವರ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಲು ಸಂತೋಷವಾಗುತ್ತದೆಎಂದುಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಚ್ ವಸಂತ್ ಬೆರ್ನಾರ್ಡ್ ಹೇಳಿದರು.

ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ವತಿಯಿಂದ ಪಂಜದಗುತ್ತು ಶಾಂತಾರಾಮ ಶೆಟ್ಟಿ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ದಿ. ಶಾಂತಾರಾಮ ಶೆಟ್ಟಿ ರವರ ಪುತ್ರಿ ಸರಿತಾ ಶೆಟ್ಟಿ, ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಹಾಗೂ ಸಹ ಶಿಕ್ಷಕ ಶರ್ಲಿ ಸಮುರಿಲು ಮತ್ತಿತರರಿದ್ದರು. ಮುಖ್ಯೋಪಾಧ್ಯಾಯ ಜೋಯಿಸಿ ಆಲ್ತೋತಸ್ ಸ್ವಾಗತಿಸಿ, ಪಂಚಾಯತ್‌ನ ಮಾಜಿ ಸದಸ್ಯ ಸುಮಿತ್ರ ರವರು ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಎಸ್‌ಡಿಎಂಸಿ ಅಧ್ಯಕ್ಷ ಪ್ರಭಾಕರ್ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುದರ್ಶನ್ ರವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶಾಲೆಯ ಶೇಕಡ 100 ಫಲಿತಾಂಶಕ್ಕೆ ಕಾರಣರಾದ ಸರಿತಾ ಶೆಟ್ಟಿ, ಎಸ್‌ಡಿಎಂಸಿ ಅಧ್ಯಕ್ಷ ಪ್ರಭಾಕರ್ ಹಾಗೂ ಶರ್ಲಿ ಸಮುರಿಲು ಅವರನ್ನು ಗೌರವಿಸಲಾಯಿತು. ಸಹಶಿಕ್ಷಕ ರಶ್ಮಿ ವಂದಿಸಿದರು. ಮಂಜುಳಾ ಶೆಟ್ಟಿ ನಿರೂಪಿಸಿದರು.

ಕೈಯೂರು ಅಂಗನವಾಡಿ ಕಟ್ಟಡ, ನೂತನ ಸಂಪರ್ಕ ರಸ್ತೆ ಉದ್ಘಾಟನೆ



• **ಬಂಟ್ವಾಳ:** ತಾಲೂಕಿನ ಮಂಚಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು 21 ಲ.ರೂ.ವೆಚ್ಚದಲ್ಲಿ ನಿರ್ಮಾಣವಾದ ಕೈಯೂರು ಅಂಗನವಾಡಿ ಕಟ್ಟಡ ಮತ್ತು ಸಂಪರ್ಕ ರಸ್ತೆಯನ್ನು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿ ಅವರು ಉದ್ಘಾಟಿಸಿದರು.

ಶಾಸಕರಅನುದಾನದಲ್ಲಿಕೈಯೂರು ಅಂಗನವಾಡಿ ಕಟ್ಟಡ ಮತ್ತು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಅವರ ಶಾಸಕರ ಅನುದಾನ 5 ಲ.ರೂ. ವೆಚ್ಚದಲ್ಲಿ ಕೆಯ್ಯೂರು ಸ್ಥಾನಮೂಲೆ ಕಾಂಕ್ರೀಟೀಕರಣಗೊಂಡು ಅಭಿವೃದ್ಧಿ ಪಡಿಸಲಾದ ಸಂಪರ್ಕ ರಸ್ತೆಯನ್ನು ಉದ್ಘಾಟಿಸಲಾಯಿತು.

ಈಸಂದರ್ಭ ಮಾಜಿ ಪಂಚಾಯತ್ ಸದಸ್ಯರುಗಳಾದ ಮೋಹನ್ ದಾಸ್ ಶೆಟ್ಟಿ, ಮೋಹನ್ ಪ್ರಭು ಕೆ, ಪ್ರಮೀಳ, ಉಷಾ ಶೆಟ್ಟಿ, ಮಂಚಿ ವ್ಯವಸಾಯ ಸಹಕಾರಿ ಸಂಘದ ಅಧ್ಯಕ್ಷ ಕೇಶವ ರಾವ್, ಪ್ರಭಾಕರ್ ಶೆಟ್ಟಿ, ಸಿಡಿಪಿಒ ಮುಮ್ತಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಿರ್ಮಲಾ,ಅಂಗನವಾಡಿ ಶಿಕ್ಷಕಿ ಚಂದ್ರಿಕಾ, ಅಂಗನವಾಡಿ ಸಹಾಯಕಿ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ಉಪ್ಪಿನಂಗಡಿ ನಾಗಮಂಡಲೋತ್ಸವ: ಲೆಕ್ಕಪತ್ರ ಮಂಡನೆ, ಅಭಿನಂದನೆ ಸಲ್ಲಿಕೆ



• **ಉಪ್ಪಿನಂಗಡಿ:** ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಪುತ್ತೂರು ಮತ್ತು ನಾಗಮಂಡಲೋತ್ಸವ ಸಮಿತಿ ಉಪ್ಪಿನಂಗಡಿ ಇದರ ವತಿಯಿಂದ ಉಪ್ಪಿನಂಗಡಿಯಲ್ಲಿ ನಡೆದ ನಾಗಮಂಡಲೋತ್ಸವ ಮತ್ತು ಧಾರ್ಮಿಕ ಕಾರ್ಯಕ್ರಮದ ಖರ್ಚು- ವೆಚ್ಚಗಳ ಲೆಕ್ಕಪತ್ರ ಮಂಡನೆ ಮತ್ತು ಕಾರ್ಯಕರ್ತರಿಗೆ ಅಭಿನಂದನಾ ಸಭೆಯು ಉಪ್ಪಿನಂಗಡಿಯ ಶ್ರೀ ಶಕ್ತಿ ಸಭಾ ಭವನದಲ್ಲಿ ನಾಗಮಂಡಲೋತ್ಸವ ಸಮಿತಿಯ ಅಧ್ಯಕ್ಷ ಚಂದಪ್ಪ ಮೂಲ್ಯ ಅಧ್ಯಕ್ಷತೆಯಲ್ಲಿ ನಡೆಯಿತು,

ಟ್ರಸ್ಟಿನ ಸಂಚಾಲಕ ಅರುಣ್ ಕುಮಾರ್ ಪುತ್ತಿಲ ಮಾತನಾಡಿ, ಸಮಸ್ತ ಹಿಂದೂ ಸಮಾಜದ ಏಳಿಗೆಗಾಗಿ ನಮ್ಮ ಧರ್ಮ ಮತ್ತು ಸಂಸ್ಕೃತಿಯನ್ನೂ ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಉಪ್ಪಿನಂಗಡಿ ಭಾಗದ ಹಿಂದೂ ಬಂಧುಗಳು ಸಹಕಾರ ದಿಂದ ಅತ್ಯಂತ ಯಶಸ್ವಿಯಾಗಿ ನಾಗಮಂಡಲೋತ್ಸವ ನಡೆಸಲಾಗಿದೆ. ಸಾರ್ವಜನಿಕ ಸೇವೆಗೆ ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ಗೆ ಉಪ್ಪಿನಂಗಡಿಯ ಉದ್ಯಮಿ ಸುಜೀರ್ ಗಣಪತಿ ನಾಯಕ್ ಹಾಗೂ ಪ್ರತಿಷ್ಠಿತ ಚಿನ್ನದ ಮಳಿಗೆ ಭೀಮಾ ಜ್ಯುವೆಲ್ಲರ್ಸ್‌ನವರು ತಲಾ ಒಂದೊಂದು ಆ್ಯಂಬುಲೆನ್ಸ್ ಅನ್ನು ನೀಡಿದ್ದು, ಅದನ್ನು ನಾಗಮಂಡಲೋತ್ಸವ ಕಾರ್ಯಕ್ರಮದಲ್ಲಿ ಲೋಕಾರ್ಪಣೆಗೊಳಿಸಲಾಗಿದೆ. ಇವರಿಂದ ಟ್ರಸ್ಟ್ ನಡೆಸುವ ಸಮಾಜಮುಖಿ ಕಾರ್ಯಗಳಿಗೆ ಶಕ್ತಿ ನೀಡುವ ಕೆಲಸವಾಗಿದೆ ಎಂದರು.

ನಾಗಮಂಡಲೋತ್ಸವ ಸಮಿತಿಯ ಅಧ್ಯಕ್ಷ ಚಂದಪ್ಪ ಮೂಲ್ಯ, ಟ್ರಸ್ಟಿನ ಅಧ್ಯಕ್ಷ ಶ್ರೀರಾಮ ಭಟ್ ಪಾತಾಳ, ಕಾರ್ಯಾಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಬೊಳ್ಳಾವು, ಕೋಶಾಧಿಕಾರಿ ಯತೀಶ್ ಶೆಟ್ಟಿ, ಉದ್ಯಮಿ ಸುಜೀರ್ ಗಣಪತಿ ನಾಯಕ್ ಇದ್ದರು. ಸಭೆಯಲ್ಲಿ ಸಮಿತಿಯ ಮಹೇಂದ್ರ ವರ್ಮ ಬಜತ್ತೂರು, ಜಯಂತ್ ಪೊರೋಳಿ, ಉಮೇಶ್, ಕೈಲಾರು ರಾಜಗೋಪಾಲ್ ಭಟ್, ಹರಿಕೃಷ್ಣ ಕಾಂಚನ, ನವೀನ್ ಕಲ್ಯಾಟೆ ರಮೇಶ್ ಬಂಡಾರಿ, ಟ್ರಸ್ಟಿನ ನಿರ್ದೇಶಕ ಉಮೇಶ್ ಕೊಡಿಬೈಲ್, ಅನಿಲ್ ತೆಂಕಿಲ, ರವಿಕುಮಾರ್ ರೈ, ಬಾಲಕೃಷ್ಣ ಶೆಟ್ಟಿ ಬಾರ್ಲ ಉಪಸ್ಥಿತರಿದ್ದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ನೆಕ್ಕಿಲಾಡಿ ಸ್ವಾಗತಿಸಿದರು. ಸಮಿತಿ ಸಂಚಾಲಕ ಧರ್ನಪ್ಪ ನಾಯ್ಕ್ ಬೊಳ್ಳಾವು ವಂದಿಸಿದರು.

ಪುಸ್ತಕ ವಿತರಣೆ, ಎಸ್ಸೆಸ್ಸೆಲ್ಸಿ, ಪಿಯು ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ



ಕಿನ್ನಿಗೋಳಿ: ಪಂಜ ಕೊಯಿಕುಡೆ ಹರಿಪಾದ ಶ್ರೀ ಜಾರಂತಾಯ ಯುವಕ ಮಂಡಲ ಮತ್ತು ಮಹಿಳಾ ಮಂಡಳಿಯ ವತಿಯಿಂದ ಸ್ಥಳೀಯ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ, ಎಸ್ಸೆಸ್ಸೆಲ್ಸಿ , ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಸಮಾಜ ಸೇವಕ ಪೇಪರ್ ಸೀಡ್ಸ್ ಸಂಸ್ಥೆಯ ನಿತಿನ್ ವಾಸ್ ಉದ್ಘಾಟಿಸಿದರು. ಹಳೆಯಂಗಡಿ ಪ್ರಿಯದರ್ಶಿನಿ ಕೊ. ಆಪರೇಟಿವ್ ಬ್ಯಾಂಕ್ ಸಿಇಒ ಸುದರ್ಶನ್, ಹರಿಪಾದೆ ಯುವಕ ಮಂಡಲದ ಅಧ್ಯಕ್ಷ ಸುಬ್ರಹ್ಮಣ್ಯ ಭಟ್, ನವೀನ್ ಶೆಟ್ಟಿನಲ್ಯಗುತ್ತು, ಮಾಧವ ಪೂಜಾರಿ ಭಂಡಾರ ಮನೆ, ಎಸ್. ಕೋಡಿ ಬಿಲ್ಲವ ಸಂಘದ ಕಟ್ಟಡ ಸಮಿತಿಯ ತಿಮ್ಮಪ್ಪ ಕೋಡಿಕಲ್, ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ಜಾರಂತಾಯ ಮಹಿಳಾ ಮಂಡಳಿಯ ಅಧ್ಯಕ್ಷೆ ರೇಖಾ , ಉಪಾಧ್ಯಕ್ಷ ಯಾಧವ ಸಾಲ್ಯಾನ್ ಮತ್ತಿತತರು ಉಪಸ್ಥಿತರಿದ್ದರು. ಸಂಸ್ಥೆಯ ಸದಸ್ಯ ಸದಾಶಿವ ಶೆಟ್ಟಿಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

> **ಪುಸ್ತಕ ವಿತರಣೆ, ಸಾಧಕರಿಗೆ ಸನ್ಮಾನ**
> ಈ ಸಂದರ್ಭದಲ್ಲಿ 1-7 ತರಗತಿವರೆಗಿನ ಸುಮಾರು 120 ವಿದ್ಯಾರ್ಥಿಗಳಿಗೆ ದಾನಿಗಳ ಸಹಕಾರದೊಂದಿಗೆ ಉಚಿತ ಪುಸ್ತಕಗಳನ್ನು ವಿತರಿಸಿದರು. 2024-24 ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.85 ಕ್ಕಿಂತಲೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಕಿನ್ನಿಗೋಳಿ: ನಾಲದೆ ಪಾಂಚಜನ್ಯ ಗೋಶಾಲೆಯಲ್ಲಿ ಗೋಗ್ರಾಸ ಸೇವೆ



• **ಕಿನ್ನಿಗೋಳಿ:** ಗೋಮಾತೆಯಲ್ಲಿ ನಾವು ದೈವತ್ವ ಕಾಣುವ ಸಮಾಜ ನಮ್ಮದು ಇದು ಸನಾತನ ಧರ್ಮದ ಮೂತತ್ವವು ಆಗಿದ್ದು, ಗೋಮಾತೆಯ ಸೇವೆ ಎಲ್ಲಾ ಕಡೆಗಳಲ್ಲು ನಡೆಯಬೇಕಾಗಿದೆ ಎಂದು ಕಿನ್ನಿಗೋಳಿ ನಾಲದೆಯ ಪಾಂಚಜನ್ಯ ಗೋಶಾಲೆಯ ಟ್ರಸ್ಟ್ ಮುಖ್ಯಸ್ಥ ಮುರಳೀದರ ಹೇಳಿದರು.

ಅವರು ಕಿನ್ನಿಗೋಳಿ ಸಮೀಪದ ನಾಲದೆ ಪಾಂಚಜನ್ಯ ಗೋಶಾಲೆ ಟ್ರಸ್ಟ್ ಆಶ್ರಯದಲ್ಲಿ ಅಧಿಕ ಮಾಸದ ಪ್ರಯುಕ್ತ ಈ ಪರ್ವ ಕಾಲದಲ್ಲಿ ಗೋವಿಗೆ ಗೋಗ್ರಾಸ ಸೇವೆಯ ಕಾರ್ಯಕ್ರಮದಲ್ಲಿ ಹೇಳಿದರು.

ಧಾರ್ಮಿಕಮುಖಂಡಪಾರ್ಥ ಸಾರಥಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಾಧವ ಶೆಟ್ಟಿಗಾರ್ ಕೆರೆಕಾಡು, ಉಮೇಶ್ ಪಂಜ ಇದ್ದರು. ಟ್ರಸ್ಟ್ ಕಾರ್ಯದರ್ಶಿ ಅರುಣ್ ಕುಮಾರ್ ಸ್ವಾಗತಿಸಿ, ಸಂಘಟಕ ಶ್ರೀಧರ್ ಸಂಯೋಜಿಸಿದರು. ನೂರಾರು ಮಂದಿ ಗೋಗ್ರಾಸ ಸೇವೆ ಸಲ್ಲಿಸಿದರು.

ಕಟ್ಟತ್ತಡ್ಕ ಎಕೆಜಿ ನಗರದ ಕ್ವಾರ್ಟರ್ಸ್‌ಗೆ ಎನ್‌ಐಎ ದಾಳಿ: ಆರ್‌ಸಿ ಬುಕ್, ಮೂರು ವಿಸಿಟಿಂಗ್ ಕಾರ್ಡ್ ವಶ

ಕುಂಬಳೆ: ಮಲಪ್ಪುರಂನ ಕೊಂಡೋಟಿಯಲ್ಲಿ ಉಗ್ರ ಸ್ಫೋಟ ಸಾಮರ್ಥ್ಯದ ಒಂದು ಲೋಡ್ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡ ಪ್ರಕರಣದ ತನಿಖೆಯ ಅಂಗವಾಗಿ ಕುಂಬಳೆ ಪೊಲೀಸ್ ಠಾಣೆ ವ್ಯಾಪ್ತಿಯ ಪುತ್ತಿಗೆ ಸಮೀಪದ ಕಟ್ಟತ್ತಡ್ಕ ಎಕೆಜಿ ನಗರದಲ್ಲೂ ಎನ್‌ಐಎ ಕ್ಷಿಪ್ರ ಹಾಗೂ ಸಮಗ್ರ ದಾಳಿ ನಡೆಸಿದೆ.

ಐದು ಮಂದಿ ಅಧಿಕಾರಿಗಳ ತಂಡವು ಕ್ವಾರ್ಟರ್ಸ್‌ವೊಂದರಲ್ಲಿ ತಪಾಸಣೆ ಕೈಗೊಂಡಿದೆ. ಪ್ರಕರಣಕ್ಕೆ ಸಂಬಂಧಿಸಿ ಎನ್‌ಐಎಯ ಕಸ್ಟಡಿಯಲ್ಲಿರುವ ಮುಹಮ್ಮದ್ ಸಲೀಂ ಎಂಬಾತನ ಪತ್ನಿ ಹಾಗೂ ಮಕ್ಕಳು ವಾಸಿಸುವ ಕ್ವಾರ್ಟರ್ಸ್ ಇದಾಗಿದೆ. ದಾಳಿಯಲ್ಲಿ ಪ್ರಕರಣದ ನಿರ್ಣಾಯಕ ದಾಖಲೆಯೆಂದು ತನಿಖಾ ತಂಡ ಅಂದಾಜಿಸಿದ ಆರ್‌ಸಿ ಬುಕ್ ಹಾಗೂ ಮೂರು ವಿಸಿಟಿಂಗ್ ಕಾರ್ಡ್‌ಗಳನ್ನು ಪತ್ತೆಹಚ್ಚಿ ವಶಕ್ಕೆ ತೆಗೆದುಕೊಂಡಿರುವುದಾಗಿ ತಿಳಿದುಬಂದಿದೆ.

ಸ್ಫೋಟಕ ವಸ್ತು ವಶ ಪ್ರಕರಣಕ್ಕೆ ಸಂಬಂಧಿಸಿ ಶನಿವಾರ ಚಿತ್ತಾರಿಕ್ಕಲ್ ಪೊಲೀಸ್ ಠಾಣೆ ವ್ಯಾಪ್ತಿಯ ಕಡುಮೇನಿ ಎಂಬಲ್ಲೂ ಎನ್‌ಐಎ ದಾಳಿ ನಡೆಸಿತ್ತು. ಕಲ್ಲು ಕೋರೆಯೊಂದರ ಮಾಲಕ ಸಜಿ ಎಂಬಾತನ ಮನೆ ಹಾಗೂ ಪರಿಸರ ಪ್ರದೇಶಗಳಲ್ಲಿ ಎನ್‌ಐಎ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ. ಇದೇ ರೀತಿಯ ತಪಾಸಣೆಯನ್ನು ಕಣ್ಣೂರು ಜಿಲ್ಲೆಯ ಚೆರುಪುಳದಲ್ಲೂ ನಡೆಸಲಾಗಿದೆ. ಕಲ್ಲಿಕೋಟೆ ಹಾಗೂ ಮಲಪ್ಪುರಂನ ಎರಡು ಕೇಂದ್ರಗಳಿಗೂ ಎನ್‌ಐಎ ದಾಳಿ ನಡೆಸಿದೆ.

ಫೆಬ್ರವರಿ 7ರಂದು ಪ್ರಕರಣಕ್ಕೆ ಕಾರಣವಾದ ಘಟನೆ ನಡೆದಿತ್ತು. ತಿರೂರಂಗಾಡಿ ಪೊಲೀಸ್ ಠಾಣೆ ವ್ಯಾಪ್ತಿಯ ಚೆಮ್ಮಾಡ್ – ತಲಪ್ಪಾರ ರಸ್ತೆಯಲ್ಲಿ ಇಂಡ್ಯನ್ ಆಯಿಲ್ ಪೆಟ್ರೋಲ್ ಸಂಸ್ಥೆಯ ಮುಂಭಾಗದಲ್ಲಿರುವ ಫರ್ಹ ಹೋಲೋ ಬ್ರಿಕ್ಸ್ ಕಂಪೆನಿಯ ಕಂಪೌಂಡ್‌ನೊಳಗೆ ನಿಲ್ಲಿಸಿದ್ದ ಲಾರಿಯಿಂದ ಸ್ಫೋಟಕ ವಸ್ತುಗಳನ್ನು ವಶಪಡಿಸಲಾಗಿತ್ತು. ಈ ಘಟನೆಯಲ್ಲಿ ಕಾನೂನು ವಿರುದ್ಧವಾಗಿ ಸ್ಫೋಟಕ ವಸ್ತುಗಳನ್ನು ಸಾಗಿಸಿದ ಲಾರಿ ಚಾಲಕ ಹಾಗೂ ಮತ್ತಿಬ್ಬರ ವಿರುದ್ಧ ತಿರೂರಂಗಾಡಿ ಪೊಲೀಸರು ಕೇಸು ದಾಖಲಿಸಿದ್ದರು. ಈರುಳ್ಳಿ ತುಂಬಿದ ಗೋಣಿ ಚೀಲಗಳ ಮಧ್ಯೆ 448 ಪೆಟ್ಟಿಗೆಗಳಲ್ಲಾಗಿ 89,600 ಜಿಲಾಟಿನ್ ಸ್ಟಿಕ್‌ಗಳು, 35 ಪೆಟ್ಟಿಗೆಗಳಲ್ಲಾಗಿ 10,500 ಶಾಕ್ ಟ್ಯೂಬ್‌ಗಳನ್ನು ಅಂದು ವಶಪಡಿಸಲಾಗಿತ್ತು. ಈ ಪ್ರಕರಣದಲ್ಲಿ ಎನ್‌ಐಎ ಸ್ವತಹ ಕೇಸು ದಾಖಲಿಸಿ ತನಿಖೆ ಆರಂಭಿಸಿತ್ತು. ಈ ತನಿಖೆಯ ಮುಂದುವರಿದ ಭಾಗವಾಗಿ ಪುತ್ತಿಗೆ ಕಟ್ಟತ್ತಡ್ಕ ಎಕೆಜಿ ನಗರದ ಕ್ವಾರ್ಟರ್ಸ್‌ಗೆ ದಾಳಿ ನಡೆಸಲಾಗಿದೆ.

ಸಿದ್ದಾಪುರ: ವನಸಿರಿ ವನಧನ ಯೋಜನೆಯಡಿ ಸಂಗ್ರಹಿಸಿದ ಜೇನು ಮಾರುಕಟ್ಟೆಗೆ ಬಿಡುಗಡೆ ಕಾರ್ಯಕ್ರಮ

ಸರ್ಕಾರಗಳ ಸ್ವ ಉದ್ಯೋಗ ಯೋಜನೆಗಳ ಸದ್ಬಳಸಿ: ಇಒ ರಾಜೇಶ್

• **ಮಡಿಕೇರಿ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ವನಸಿರಿ ವನಧನ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಸಿದ್ದಾಪುರ ಸಂಜೀವಿನಿ ಒಕ್ಕೂಟದ ಮಹಿಳೆಯರು ಸಂಗ್ರಹಿಸಿದ ಸುಮಾರು 25 ಲೀಟರ್ ಜೇನನ್ನು ತಾ.ಪಂ. ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಅವರು ಮಾರುಕಟ್ಟೆಗೆ ಬಿಡುಗಡೆ ಮಾಡಿದರು.

ಸಿದ್ದಾಪುರ ಗ್ರಾ.ಪಂ. ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಸ್ವಉದ್ಯೋಗ ಸೃಷ್ಟಿಯ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆ ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.

ಕೊಡಗು ಜಿಲ್ಲಾ ಪಂಚಾಯತ್‌ನ ಸಹಕಾರದೊಂದಿಗೆ ಮಹಿಳೆಯರಿಗೆ ವನ ಉತ್ಪನ್ನಗಳ ಸಂಗ್ರಹಣೆ ಮತ್ತು ಮೌಲ್ಯವರ್ಧನೆ ಕುರಿತ ಅಗತ್ಯ ತರಬೇತಿ ನೀಡಲಾಗಿದ್ದು, ಅದರ ಫಲವಾಗಿ ಮಹಿಳೆಯರು ಜೇನು ಸಂಗ್ರಹಣೆ ಮೂಲಕ ಸ್ವಾವಲಂಬಿ ಬದುಕಿನತ್ತ ಹೆಜ್ಜೆ ಇಟ್ಟಿರುವುದು ಶ್ಲಾಘನೀಯ ಎಂದು ಹೇಳಿದರು.



ಕೊಡಗು ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ವೀರಾಜಪೇಟೆ ತಾಲೂಕಿನ ಸಿದ್ದಾಪುರ ಸಂಜೀವಿನಿ ಒಕ್ಕೂಟವು ಸರ್ಕಾರಿ ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಂಡು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಸಾಧನೆ ಮಾಡಿ ಮಹಿಳಾ ದಿನಾಚರಣೆ ಪ್ರಶಸ್ತಿಯನ್ನು ಪಡೆದಿರುವುದನ್ನು ಅವರು ಸ್ಮರಿಸಿದರಲ್ಲದೆ, ಸಂಘಟನೆಯ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಯಶಸ್ಸು ಸಾಧಿಸುವಂತೆ ಶುಭ ಹಾರೈಸಿದರು. ಸಂಘಟನೆಯ ಅಧ್ಯಕ್ಷೆ ರೀನಾ ತುಳಸಿ ಮಾತನಾಡಿ, ಸಿದ್ದಾಪುರ ಸಂಜೀವಿನಿ ಒಕ್ಕೂಟವು ಈಗಾಗಲೇ ಮೀನು ಕೃಷಿ, ಹೊಲಿಗೆ ತರಬೇತಿ ಹಾಗೂ ಗೃಹೋಪಯೋಗಿ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟದ ಮೂಲಕ ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸುತ್ತಿದೆ ಎಂದು ತಿಳಿಸಿದರು.

ಮಹಿಳಾ ಸಂತೆಗಳಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದ್ದು, ಅಕ್ಕ ಕೆಫೆ ಕಟ್ಟಡ ಕಾಮಗಾರಿ ಶೀಘ್ರ ಪೂರ್ಣಗೊಂಡರೆ ಮಹಿಳೆಯರ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ದೊರೆಯಲಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ತಿಮ್ಮಯ್ಯ, ಜಿಲ್ಲಾ ವ್ಯವಸ್ಥಾಪಕಿ ಚಾಂದಿನಿ, ಇಂಡಸ್ಟ್ರೀ ಫೌಂಡೇಶನ್‌ನ ಕುಮಾರಿ ಲೇಖನಿ, ತಾಲೂಕು ವ್ಯವಸ್ಥಾಪಕ ಮಂಜುನಾಥ್, ಎಡಿವಿಕೆ ಸಮಿತಿ ಕಾರ್ಯದರ್ಶಿ ಇಂದಿರಾ ಹಾಗೂ ಯಮುನಾ, ಸುಮತಿ, ವಸಂತಿ ಸೇರಿದಂತೆ ಸಂಜೀವಿನಿ ಒಕ್ಕೂಟದ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಕಿರುಸುದ್ದಿ

ಜೂ.7ರಂದು ಬಪ್ಪನಾಡು ದೇವಳದಲ್ಲಿ ಸೀಯಾಳ ಅಭಿಷೇಕ



• **ಮೂಲ್ಕಿ:** ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಸೇವಾ ಯುವಕ ವೃಂದ, ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ವತಿಯಿಂದ ಬಪ್ಪನಾಡು ಶ್ರೀ ದುರ್ಗೆಗೆ ಒಂಭತ್ತು ಮಾಗಣೆಯ ಭಕ್ತಾದಿಗಳಿಂದ ಅತಿವೃಷ್ಟಿ ಹಾಗೂ ಅನಾವೃಷ್ಟಿ ನಿವಾರಣೆಗಾಗಿ ವರ್ಷಂಪ್ರತಿಯಂತೆ ಸೀಯಾಳ ಅಭಿಷೇಕವು ಜೂನ್ 7 ರಂದು ಬೆಳಗ್ಗೆ 7 ಗಂಟೆಗೆ ಜರಗಲಿರುವುದು. ಅಭಿಷೇಕಕ್ಕೆ ಸೀಯಾಳ ಸಮರ್ಪಿಸುವ ಭಕ್ತಾದಿಗಳು ಸೀಯಾಳವನ್ನು ಜೂನ್ 6 ರ ಶನಿವಾರ ಸಂಜೆ 7 ಗಂಟೆಯ ಒಳಗೆ ದೇವಳಕ್ಕೆ ತಲುಪಿಸಬೇಕಾಗಿ ಪ್ರಕಟಣೆ ತಿಳಿಸಿದೆ.

ಫಿಲೋಮಿನಾ ಕಾಲೇಜಿನ ಡಾ. ಕೆ. ಚಂದ್ರಶೇಖರ್ ಪ್ರೊಫೆಸರ್ ಆಗಿ ಪದೋನ್ನತಿ



• **ಪುತ್ತೂರು:** ನಗರದ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಕೆ. ಚಂದ್ರಶೇಖರ್ ಕರ್ನಾಟಕ ಸರ್ಕಾರದ ಕಾಲೇಜ್ ಶಿಕ್ಷಣ ಇಲಾಖೆಯಿಂದ ಪ್ರೊಫೆಸರ್ ಹುದ್ದೆಗೆ ಬಡ್ತಿ ಪಡೆದಿದ್ದಾರೆ. ಈ ಮೂಲಕ ಫಿಲೋಮಿನಾ ಕಾಲೇಜಿನಲ್ಲಿ ಪ್ರೊಫೆಸರ್ ಹುದ್ದೆಗೇರಿದ ಪ್ರಥಮ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಅವರು ತಮ್ಮ ಪಿಯುಸಿ ಹಾಗೂ ಬಿ.ಎಸ್ಸಿ. ಪದವಿಯನ್ನು ಸಂತ ಫಿಲೋಮಿನಾ ಕಾಲೇಜಿನಲ್ಲಿ ಪೂರೈಸಿ, ಮಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಹಾಗೂ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಉಪನ್ಯಾಸಕರ ಅರ್ಹತಾ ಪರೀಕ್ಷೆಯಲ್ಲಿ(ಎಸ್ಎಲ್ಇಟಿ) ಉತ್ತೀರ್ಣರಾದ ಅವರು, 2000ದಲ್ಲಿ ಫಿಲೋಮಿನಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. 'ಸ್ಟಡೀಸ್ ಆನ್ ಕಾನ್ಸನ್‌ಟ್ರೇಶನ್ ಆಫ್ ರೇಡಿಯೋನ್ಯೂಕ್ಲೈಡ್ಸ್ ಎಂಡ್ ಟ್ರೇಸ್ ಎಲಿಮೆಂಟ್ಸ್ ಇನ್ ಸಮ್ ಸೆಲೆಕ್ಟೆಡ್ ಮೆಡಿಸಿನಲ್ ಪ್ಲಾಂಟ್ಸ್' ಎಂಬ ಪ್ರಬಂಧಕ್ಕೆ ಅವರಿಗೆ ಪಿಎಚ್.ಡಿ ದೊರೆತಿದೆ. ಡಾ. ಚಂದ್ರಶೇಖರ್ ಅವರು 'ಸ್ಕೋಪಸ್' ಮತ್ತು 'ವೆಬ್ ಆಫ್ ಸೈನ್ಸ್' ನಂತಹ ಡೇಟಾಬೇಸ್‌ನಲ್ಲಿ ಅಡಕವಾಗಿರುವ ಪ್ರತಿಷ್ಠಿತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಅನೇಕ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಕಾಲೇಜಿನ ಎನ್ಎಸ್ಎಸ್ ಯೋಜನಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಅವರು, ಇತ್ತೀಚೆಗೆ ಮೈಸೂರು ವಿ.ವಿ.ಯಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಮಂಗಳೂರು ವಿ.ವಿ.ಯನ್ನು ಪ್ರತಿನಿಧಿಸಿದ್ದರು. ಅವರು ಬಂಟ್ವಾಳ ತಾಲೂಕಿನ ಪುಣಚ ಗ್ರಾಮದ ಲಕ್ಷ್ಮಿ ಮತ್ತು ದಿ.ಮಹಾಲಿಂಗ ಮೂಲ್ಯ ಅವರ ಪುತ್ರ.

ಬೆಳ್ಳೂರಿನಲ್ಲಿ ಬೀದಿನಾಯಿಗಳ ಉಪಟಳ: ಮೂವರಿಗೆ ಕಡಿತದಿಂದ ಗಾಯ

• **ಮುಲ್ಕೇರಿಯ:** ನಾಟೆಕಲ್ಲಿನಲ್ಲಿ ನಾಯಿಯೊಂದು ಬಾಲಕ ಸಹಿತ ಮೂವರಿಗೆ ಕಚ್ಚಿ ಗಾಯಗೊಳಿಸಿದ ಘಟನೆ ನಡೆದಿದೆ. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೂವರಿಗೆ ಭಾನುವಾರ ಬೆಳಗ್ಗೆ ಬೀದಿನಾಯಿಗಳು ಕಚ್ಚಿ ಗಾಯಗೊಳಿಸಿವೆ. ಗಾಯಾಳುಗಳು ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದಿದ್ದಾರೆ. ಇದೇ ವೇಳೆ ಕಚ್ಚಿದ ಒಂದು ನಾಯಿ ಹುಚ್ಚುನಾಯಿಯಾಗಿರಬಹುದೆಂದು ಸಂಶಯಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಅದನ್ನು ನಾಗರಿಕರು ಓಡಿಸಿ ಹೊಡೆದು ಕೊಂದಿದ್ದಾರೆ. ಇದೇ ವೇಳೆ ನಾಟೆಕಲ್ಲು ಪರಿಸರದಲ್ಲಿ ಬೀದಿನಾಯಿಗಳ ಉಪಟಳ ತೀವ್ರಗೊಂಡಿದ್ದುದಾಗಿ ದೂರಲಾಗಿದೆ. ಬೀದಿ ನಾಯಿಗಳಿಗೆ ಕಡಿವಾಣ ಹಾಕದಿದ್ದಲ್ಲಿ ಶಾಲಾ ಮಕ್ಕಳು ಇನ್ನಷ್ಟು ಭಯಪಡುವ ಸಾಧ್ಯತೆ ಇದೆ ಎಂದು ನಾಗರಿಕರು ತಿಳಿಸಿದ್ದಾರೆ.

ರಿಕ್ಷಾದಿಂದ ಎಸೆಯಲ್ಪಟ್ಟ ಮಹಿಳೆ, ಮಗುವಿಗೆ ಗಾಯ

• **ಬಂಟ್ವಾಳ:** ಆಟೋ ರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದ ವೇಳೆ ರಸ್ತೆ ಉಬ್ಬಿನಲ್ಲಿ ಹಿಡಿತ ತಪ್ಪಿ ಮಹಿಳೆ ಹಾಗೂ ಮಗು ಹೊರಕ್ಕೆಸೆಯಲ್ಪಟ್ಟು ಗಾಯಗೊಂಡ ಘಟನೆ ಪಾಣೆಮಂಗಳೂರು ಕಲ್ಲುರ್ಟಿ ದೈವಸ್ಥಾನದ ಬಳಿ ಸಂಭವಿಸಿದೆ. ಗಾಯಗೊಂಡವರನ್ನು ಸಜಿಪಮೂಡ್ನೂರು ಗ್ರಾಮದ ನಿವಾಸಿ ಸಫಿಯಾ ಹಾಗೂ ಅವರ ಮೊಮ್ಮಗಳಾದ ಫಾತಿಮತ್ ನಿಶಾ (4) ಎಂದು ಹೆಸರಿಸಲಾಗಿದೆ. ಪಾಣೆಮಂಗಳೂರು ಕಲ್ಲುರ್ಟಿ ದೈವಸ್ಥಾನದ ಬಳಿ ಸರ್ವಿಸ್ ರಸ್ತೆಯ ಉಬ್ಬಿನಲ್ಲಿ ಘಟನೆ ನಡೆದಿದೆ. ಇವರಿಗೆ ಬಿ ಸಿ ರೋಡಿನ ಖಾಸಗಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಬಗ್ಗೆ ಬಂಟ್ವಾಳ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪೆರುವಾಯಿ ಕಡಿದಾದ ರಸ್ತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ಕಳೆಕೊಂಡ ಪಿಕಪ್ ಹೊಳೆಗೆ ನುಗ್ಗಿದೆ. ಪೆರುವಾಯಿ ಬೆರಿಪದವು ಸಂಪರ್ಕ ರಸ್ತೆಯ ಕಿರಿದಾದ ಸೇತುವೆ ಸಮೀಪದಲ್ಲಿ ಅಪಘಾತವಾಗಿದೆ. ಪಿಕಪ್ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿ ಪೆರುವಾಯಿ ನದಿಗೆ ಬಿದ್ದಿದೆ. ಚಾಲಕ ಗಾಯಗೊಂಡಿದ್ದು, ಪಿಕಪ್ ಮುಂಭಾಗ ಹಾನಿಯಾಗಿದೆ. ಸೇತುವೆ ಅಗಲೀಕರಣ ಆಗಬೇಕೆಂಬ ಬೇಡಿಕೆ ಹಲವು ವರ್ಷಗಳಿಂದ ಕೇಳಿ ಬಂದಿದೆ.

ಗೋಶಾಲೆ ಹೆಸರಲ್ಲಿ ಹಸು, ಹೋರಿ ಪಡೆದು ಮಾರಾಟ

ಹಿಂದು ಜಾಗರಣಾ ವೇದಿಕೆ ದೂರು

• **ಬಂಟ್ವಾಳ:** ಸಾರ್ವಜನಿಕರಿಂದ ಚಿಕಿತ್ಸೆಗೆಂದು ಮತ್ತು ಸಂತಾನಾಭಿವೃದ್ಧಿಗೆ ತನ್ನಲ್ಲಿ ಗೋಶಾಲೆ ಇದೆ ಎಂದು ನಂಬಿಸಿ ಹಸುಗಳನ್ನು ಮತ್ತು ಹೋರಿಗಳನ್ನು ಪಡೆದುಕೊಂಡು ಮಾರಾಟ ಮಾಡಿರುವ ಕುರಿತಾಗಿ ಎರಡು ಮನೆಯ ಸಂತ್ರಸ್ತರು ಬಂಟ್ವಾಳ ಗ್ರಾಮಾಂತರ ಠಾಣೆಗೆ ದೂರು ನೀಡಿ 6 ದಿನ ಕಳೆದರೂ ಪ್ರಕರಣ ದಾಖಲು ಮಾಡದ ಹಿನ್ನೆಲೆಯಲ್ಲಿ ಹಿಂದು ಜಾಗರಣ ವೇದಿಕೆ ಮಂಗಳೂರು ಗ್ರಾಮಾಂತರ ಜಿಲ್ಲಾ ಪ್ರಮುಖರು ಸೋಮವಾರ ಬಂಟ್ವಾಳ ಉಪವಿಭಾಗದ ಅಧೀಕ್ಷಕರನ್ನು ಭೇಟಿಯಾಗಿ ದೂರು ಸಲ್ಲಿಸಿ ತುರ್ತಿಗೆ ಒತ್ತಾಯಿಸಿದ್ದಾರೆ.

ಕಾವಳಮುಡೂರು ಗ್ರಾಮದ ಕೆದ್ದೇಳ ನಿವಾಸಿ ಪ್ರಶಾಂತ ನಾಯ್ಕ ಎಂಬಾತ ಹಸುಗಳಿಗೆ ಮೇವು ಸಾಗಿಸುವ ಮತ್ತು ಪಶು ವೈದ್ಯಾಧಿಕಾರಿಗಳ ಜೊತೆ ನಿಕಟ ಸಂಪರ್ಕವನ್ನಿರಿಸಿಕೊಂಡು ಗ್ರಾಮೀಣ ಪ್ರದೇಶದ ರೈತರ ಸಂಪರ್ಕಿಸಿ ಅವರಲ್ಲಿ ಗರ್ಭ ಧಾರಣೆಗೆ ಸಮಸ್ಯೆ ಇರುವ ಮತ್ತು ಗಂಡು ಕರುಗಳನ್ನು ಸಂತಾನ ಅಭಿವೃದ್ಧಿಗೆಂದು ತನ್ನಲ್ಲಿ ಗೋಶಾಲೆ ಇದ್ದು, ಅಲ್ಲಿ ಚಿಕಿತ್ಸೆ ಮತ್ತು ಆರೈಕೆ ಮಾಡುವುದಾಗಿ ನಂಬಿಸಿ, ಬಳಿಕ ರೈತರಿಗೆ ವಾಪಸು ಕೊಡದೆ ಮೋಸ ಮಾಡಿದ್ದಾನೆಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಪ್ರಕರಣದಿಂದ ಮನನೊಂದಿರುವ ಸ್ಥಳೀಯ ಎರಡು ಮನೆಯ ಸಂತ್ರಸ್ತರು ಈಗಾಗಲೇ ಬಂಟ್ವಾಳ ಗ್ರಾಮಾಂತರ ಠಾಣೆಗೆ ದೂರು ನೀಡಿ 6 ದಿನಗಳಾದರೂ ಪ್ರಕರಣ ದಾಖಲು ಮಾಡಲಾಗಿಲ್ಲ ಎಂದು ಮನವಿಯಲ್ಲಿ ಆರೋಪಿಸಲಾಗಿದೆ. ಪ್ರಶಾಂತ ನಾಯ್ಕ ಹಸುಗಳನ್ನು ಕಸಾಯಿಖಾನೆಗೆ ಮಾರಿದ ಸಂಶಯವಿದ್ದು, ಇದಕ್ಕೆ ಪಶುವೈದ್ಯಾಧಿಕಾರಿಯ ಯಾವುದೇ ದಾಖಲೆ ಇಲ್ಲದೆ ಪಶುಗಳಿಗೆ ಚಿಕಿತ್ಸೆ ನೀಡುತ್ತಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಹಿ.ಜಾ.ವೇ.ಯ ನಿಯೋಗ ಬಂಟ್ವಾಳ ಉಪವಿಭಾಗದ ಅಧೀಕ್ಷಕರನ್ನು ಆಗ್ರಹಿಸಿದೆ.

ಈ ಸಂದರ್ಭ ಹಿಂದು ಜಾಗರಣ ವೇದಿಕೆಯ ನ್ಯಾಯ ಜಾಗರಣ ಪ್ರಮುಖ್ ವಕೀಲರಾದ ಪ್ರಶಾಂತ್ ಕೆಂಪುಗುಡ್ಡೆ, ಪ್ರಾಂತ ಕಾರ್ಯಕಾರಿಣಿ ಸದಸ್ಯ ಪ್ರಶಾಂತ್ ಕೆಂಪುಗುಡ್ಡೆ, ಜಿಲ್ಲಾ ಸಂಯೋಜಕ ನರಸಿಂಹ ಮಾಣಿ, ಪ್ರಮುಖರಾದ ಪುಷ್ಪರಾಜ್ ಕಮ್ಮಾಜೆ, ಅನೂಪ್ ಮಯ್ಯ ಉಪಸ್ಥಿತರಿದ್ದರು.

ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026

ಸರಕಾರದ ಆಡಳಿತವೇ ಸ್ತಬ್ಧ



• **ಮಂಗಳೂರು:** ರಾಜ್ಯ ಕಾಂಗ್ರೆಸ್ ಸರಕಾರದ ಅಧಿಕಾರ ಹಸ್ತಾಂತರ ಪ್ರಹಸನದಿಂದ ಇಡೀ ಆಡಳಿತವೇ ಸ್ತಬ್ಧಗೊಂಡಿದೆ. 'ಇನ್ನೆಂದಿಗೂ ಇಂತಹ ಸರಕಾರ ಬೇಡ' ಎಂದು ಕಾಂಗ್ರೆಸ್ ಸರಕಾರದ ಬಗ್ಗೆ ಜನರು ಮಾತನಾಡುತ್ತಿದ್ದಾರೆ. ರಾಜ್ಯದಲ್ಲಿ ನಿಂತು ಹೋಗಿರುವ ಆಡಳಿತದ ವೈಫಲ್ಯಗಳನ್ನು ಜನರಿಗೆ ಮನದಟ್ಟು ಮಾಡುವುದು ಬಿಜೆಪಿ ಕಾರ್ಯಕರ್ತರ ಕರ್ತವ್ಯ ಎಂದು ಉಡುಪಿ– ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026 ಅಂಗವಾಗಿ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲೆ ವತಿಯಿಂದ ನಗರದ ಸಂಘನಿಕೇತನದಲ್ಲಿ ಸೋಮವಾರ ಎರಡು ದಿನಗಳ ದ.ಕ. ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದುಳಿದ ವರ್ಗ, ದಲಿತರ ಬಗ್ಗೆ ಕಾಂಗ್ರೆಸ್ ಸದಾ ಮಾತನಾಡುತ್ತಿದೆ. ಆದರೆ, ರಾಜ್ಯದಲ್ಲಿ 1.5 ಲಕ್ಷ ದಲಿತ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಸ್ಟೆಲ್ ಇಲ್ಲದೆ ಪರದಾಡುತ್ತಿದ್ದಾರೆ. ಕೆಲವರು ಶಾಲೆ ಬಿಟ್ಟು ಹೋಗಿದ್ದಾರೆ. ಪರಿಶಿಷ್ಟ ಜಾತಿ, ಪಂಗಡದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರ ಸರಕಾರ ಎಸ್‌ಸಿ ಎಸ್‌ಟಿಗಳ ಆರೋಗ್ಯ, ಶಿಕ್ಷಣಕ್ಕಾಗಿ ಮೀಸಲಿಟ್ಟ 60 ಸಾವಿರ ಕೋಟಿ ರೂ. ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿದೆ. ಕರಾವಳಿಯ ಕಡಲತಡಿಯ ಮೀನುಗಾರಿಕೆ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರ ಸರಕಾರ 22 ಸಾವಿರ ಕೋಟಿ ರೂ. ಬಿಡುಗಡೆ ಮಾಡಿತ್ತು. ಆದರೆ, ಈ ಯೋಜನೆಗಳು ರಾಜ್ಯ ಸರಕಾರಕ್ಕೆ ಹಣ ಮಾಡುವ ದಂಧೆಯಾಗಿದೆ. ಕೇಂದ್ರ ಸರಕಾರದ ಅನುದಾನವನ್ನು ರಾಜ್ಯ ಸರಕಾರ ತನ್ನ ಹಣವೆಂದು ಬಿಂಬಿಸಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದೆ. ಈ ವಿಚಾರಗಳ ಬಗ್ಗೆ ಜನಪರ ಹೋರಾಟಗಳ ಮೂಲಕ ಬಿಜೆಪಿ ಕಾರ್ಯಕರ್ತರು ಜನತೆಗೆ ಸತ್ಯ ತಿಳಿಸಬೇಕು ಎಂದರು.

> **ಕಾಕ್ರೋಚ್ ಪಾರ್ಟಿ ಹೆಸರಿನಲ್ಲಿ ಪ್ರಸ್ತುತ ಬಿಜೆಪಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನ ನಡೆಸಲಾಗುತ್ತಿದೆ. ಜಿರಳೆಗಳಿಗೆ ಹೆದರುವ ಕಾಲ ಇದಲ್ಲ. ದೇಶದ ಚಿನ್ನವನ್ನು ವಿದೇಶಕ್ಕೆ ಅಡವಿಟ್ಟ ಕಾಲವೊಂದಿತ್ತು. ಇಂದು ಭಾರತ 60 ರಾಷ್ಟ್ರಗಳಿಗೆ ಸಾಲ ನೀಡುತ್ತಿದೆ. ಜಿರಳೆ, ಹೆಗ್ಗಣ, ಸೊಳ್ಳೆಗಳಿಗೆ ಹೆದರುವ ಕಾಲ ಇದಲ್ಲ.**
> ■ **ಕೋಟ ಶ್ರೀನಿವಾಸ ಪೂಜಾರಿ, ಸಂಸದರು, ಉಡುಪಿ ಜಿಲ್ಲೆ**

ದೇಶದಲ್ಲಿ ನೋಂದಾಯಿತ ರಾಜಕೀಯ ಪಕ್ಷಗಳು 23 ಸಾವಿರಕ್ಕೂ ಹೆಚ್ಚು ಇತ್ತು. ಈ ಪೈಕಿ ದೇಶ ಮೊದಲು ಎಂಬ ನೆಲೆಯಲ್ಲಿ ಕಾರ್ಯಕರ್ತರಿಗೆ ಪ್ರಶಿಕ್ಷಣ ವರ್ಗ ನಡೆಸುವುದು ಬಿಜೆಪಿ ಮಾತ್ರ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಸೂಚನೆಯಂತೆ ಪ್ರತಿ ಮಂಡಲ, ಜಿಲ್ಲೆಯಲ್ಲಿ ಪ್ರಶಿಕ್ಷಣ ವರ್ಗ ನಡೆಸಲಾಗುತ್ತಿದೆ ಎಂದು ಹೇಳಿದರು.

ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, 2014ರ ಬಳಿಕ ಭಾರತ ಬದಲಾಗಿದೆ. ಜನರ ಸಮಸ್ಯೆಗಳಿಗೆ ಉತ್ತರವಾಗಿ ಬಿಜೆಪಿ ದೇಶದಲ್ಲಿದೆ. ಬಿಜೆಪಿ ಗೆಲ್ಲಲು ಸಾಧ್ಯವೇ ಇಲ್ಲ ಎಂಬಂತಿದ್ದ ಪಶ್ಚಿಮ ಬಂಗಾಳದಲ್ಲಿ ಈಗ ಬಿಜೆಪಿ ಅಧಿಕಾರದಲ್ಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಮೇಲಿನ ಜನರ ಆಕ್ರೋಶಕ್ಕೆ ವೇದಿಕೆಯಾಗಿ ಬಿಜೆಪಿ ಕಾರ್ಯನಿರ್ವಹಿಸಬೇಕು. ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತಕ್ಕೆ ಪೂರಕವಾಗಿ ವಿಕಸಿತ ಕರ್ನಾಟಕ ನಿರ್ಮಾಣಕ್ಕೆ 2028ರಲ್ಲಿ ರಾಜ್ಯದಲ್ಲಿ ಬಿಜೆಪಿ ಸರಕಾರ ರಚನೆಗೊಳ್ಳಬೇಕು ಎಂದರು.

ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಶಾಸಕರಾದ ರಾಜೇಶ್ ನ್ಯಾಕ್, ಡಾ. ವೈ. ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ, ಯಶ್‌ಪಾಲ್ ಸುವರ್ಣ, ಕಿಶೋರ್ ಕುಮಾರ್ ಪುತ್ತೂರು, ಪ್ರಶಿಕ್ಷಣ ವಿಭಾಗ ಸಂಚಾಲಕ ಉದಯಕುಮಾರ್ ಶೆಟ್ಟಿ, ವಿಭಾಗ ಸಹಪ್ರಭಾರಿ ಜಯಂತ್ ಕೋಟ್ಯಾನ್ ಉಪಸ್ಥಿತರಿದ್ದರು.

ಜಿಲ್ಲಾ ಪ್ರಶಿಕ್ಷಣ ಮಹಾ ಅಭಿಯಾನ ಸಂಚಾಲಕ ಹಾಗೂ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯತೀಶ್ ಆರ್ವಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಪ್ರಶಿಕ್ಷಣ ಸಹ ಸಂಚಾಲಕ ನಿತೀಶ್‌ಕುಮಾರ್ ಶಾಂತಿವನ ವಂದಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಪುಷ್ಪಾನಂದ ಫೌಂಡೇಶನ್ ವತಿಯಿಂದ 20 ಸಾವಿರ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ವಿತರಣೆ

ಸದೃಢ ರಾಷ್ಟ್ರ ನಿರ್ಮಾಣಕ್ಕೆ ಶಿಕ್ಷಣವೇ ಅಡಿಪಾಯ: ಯಶ್‌ಪಾಲ್ ಸುವರ್ಣ



• **ಉಡುಪಿ:** ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ವಿದ್ಯಾವಂತ ಯುವ ಜನತೆಯ ಕೊಡುಗೆ ಅಪಾರವಾಗಿದ್ದು, ಸದೃಢ ಭಾರತ ನಿರ್ಮಾಣಕ್ಕೆ ಗುಣಮಟ್ಟದ ಶಿಕ್ಷಣವೇ ಅಡಿಪಾಯವಾಗಿದೆ ಎಂದು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಹೇಳಿದರು.

2026–27ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಪುಷ್ಪಾನಂದ ಫೌಂಡೇಶನ್ ವತಿಯಿಂದ ಉಡುಪಿ ವಿಧಾನಸಭಾ ಕ್ಷೇತ್ರದ ಸರಕಾರಿ ಹಾಗೂ ಅನುದಾನಿತ ಶಾಲೆಗಳ 20 ಸಾವಿರ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ವಿತರಣೆ ಕಾರ್ಯಕ್ರಮಕ್ಕೆ ಒಳಕಾಡು ಸರಕಾರಿ ಸಂಯುಕ್ತ ಪ್ರೌಢಶಾಲೆ ಯಲ್ಲಿ ಚಾಲನೆ ನೀಡಿ ಮಾತನಾಡಿದರು.

ಉಡುಪಿ ಜಿಲ್ಲೆಯ ಶೈಕ್ಷಣಿಕ ಸಾಧನೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಾಲಾಭಿವೃದ್ಧಿ ಸಮಿತಿ ಹಾಗೂ ಖಾಸಗಿ ದಾನಿಗಳ ಕೊಡುಗೆ ಅಪಾರವಾಗಿದ್ದು, ಮುಂದಿನ ದಿನಗಳಲ್ಲಿಯೂ ಉಡುಪಿ ಜಿಲ್ಲೆ ಶೈಕ್ಷಣಿಕವಾಗಿ ಅಗ್ರ ಸ್ಥಾನವನ್ನು ಅಲಂಕರಿಸಲಿ ಎಂದು ಶಾಸಕ ಯಶ್‌ಪಾಲ್ ಸುವರ್ಣ ಶುಭ ಹಾರೈಸಿದರು.

ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಡೆಕಾರು, ಒಳಕಾಡು ಸರಕಾರಿ ಸಂಯುಕ್ತ ಪ್ರೌಢಶಾಲೆ, ಗಾಂಧಿ ಶತಾಬ್ಧಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮಲ್ಪೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಸಿಹಿತಿಂಡಿ ವಿತರಿಸಿ, ವಿದ್ಯಾರ್ಥಿಗಳೊಂದಿಗೆ ಬಿಸಿಯೂಟ ಸೇವಿಸಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯ ಪದಾಧಿಕಾರಿಗಳು, ಶಿಕ್ಷಣ ಇಲಾಖೆಯ

ಶಾರದಾವಿದ್ಯಾನಿಕೇತನ ಪಿ.ಯು. ಕಾಲೇಜ್ ಪೋಷಕರಿಗೆ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

ಮಕ್ಕಳಿಗೆ ನಿರಂತರ ಪ್ರೋತ್ಸಾಹ ಅಗತ್ಯ



• **ಮಂಗಳೂರು:** ಶಾರದಾ ವಿದ್ಯಾನಿಕೇತನ ಪಿ.ಯು. ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗಾಗಿ ಮಾರ್ಗದರ್ಶನ ಕಾರ್ಯಕ್ರಮವು ಶಾರದಾ ವಿದ್ಯಾನಿಕೇತನ ಕ್ಯಾಂಪಸ್‌ನ ಭೂವರಾಹ ಸಭಾಂಗಣದಲ್ಲಿ ನಡೆಯಿತು.

ಶಾರದಾ ಗ್ರೂಪ್ ಆಫ್ ಇನ್ಸಿಟಿಟ್ಯೂಷನ್‌ನ ಅಧ್ಯಕ್ಷ ಡಾ.ಎಂ. ಬಿ. ಪುರಾಣಿಕ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರಿ ಸಾಧನೆಗಾಗಿ ಕಠಿಣ ಪರಿಶ್ರಮ ಹಾಗೂ ದೃಢಸಂಕಲ್ಪದೊಂದಿಗೆ ಅಧ್ಯಯನ ನಡೆಸಬೇಕು. ಸಂಸ್ಥೆ ನೀಡುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕೆಂದು ಕರೆ ನೀಡಿದರು.

ನಿರ್ದೇಶಕ ಸಮೀರ್ ಪುರಾಣಿಕ್ ಮಾತನಾಡಿ, ಪೋಷಕರು ತಮ್ಮ ಮಕ್ಕಳಿಗೆ ನಿರಂತರ ಪ್ರೋತ್ಸಾಹ ಹಾಗೂ ಮಾನಸಿಕ ಬಲ ತುಂಬಬೇಕು. ಮಕ್ಕಳ ಶಿಕ್ಷಣ ಯಾತ್ರೆಯಲ್ಲಿ ಪೋಷಕರ ಬೆಂಬಲ ಅತ್ಯಂತ ಮುಖ್ಯವಾಗಿದ್ದು, ಅವರಿಗೆ ಧೈರ್ಯ ತುಂಬಿ ಗುರಿಯತ್ತ ಮುನ್ನಡೆಯಲು ನೆರವಾಗಬೇಕು ಎಂದರು.

ಪ್ರಾಂಶುಪಾಲ ವಿನಾಯಕ ಬಿ.ಜಿ, ಹೊಸಶೈಕ್ಷಣಿಕ ವರ್ಷದ ವ್ಯವಸ್ಥೆ, ಕಾಲೇಜಿನ ಕಾರ್ಯವಿಧಾನ, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಹಾಗೂ ದಾಖಲೆಗಳ ಸಿದ್ಧತೆಯಲ್ಲಿ ಪೋಷಕರ ಪಾತ್ರದ ಮಹತ್ವದ ಕುರಿತು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶಾರದಾ ವಿದ್ಯಾನಿಕೇತನ ಶಾಲೆಯ ಪ್ರಾಂಶುಪಾಲೆ ಸುಷ್ಮಾ ದಿನಕರ್, ಶಾರದಾ ವಿದ್ಯಾನಿಕೇತನ ಡೇಸ್ಕೂಲ್ ಪ್ರಾಂಶುಪಾಲ ಮೋಹನದಾಸ್, ಪ್ರವೇಶ ವ್ಯವಸ್ಥಾಪಕ ವಿವೇಕ್ ತಂತ್ರಿ, ಆಡಳಿತ ವ್ಯವಸ್ಥಾಪಕ ಪ್ರಫುಲ್ ಹಾಗೂ ಉಪಪ್ರಾಂಶುಪಾಲ ಸುರೇಶ್ ಭಟ್ ಉಪಸ್ಥಿತರಿದ್ದರು.

ಭೌತಶಾಸ್ತ್ರ ವಿಭಾಗದ ಅಕ್ಷತಾ ಪ್ರಾರ್ಥಿಸಿದರು. ರಸಾಯನ ಶಾಸ್ತ್ರ ವಿಭಾಗದ ಸೌಮ್ಯಾ ಕಾರ್ಯಕ್ರಮ ನಿರೂಪಿಸಿದರು. ಇಂಗ್ಲಿಷ್ ವಿಭಾಗದ ಆಶೋಕ್ ವಂದನಾರ್ಪಣೆ ಸಲ್ಲಿಸಿದರು.

ಬೈಂದೂರು–ಕೊಲ್ಲೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಸಂಸದರಿಂದ ವೀಕ್ಷಣೆ

ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ಕ್ರಾಂತಿ



• **ಬೈಂದೂರು:** ಶಿವಮೊಗ್ಗ ಕ್ಷೇತ್ರದ ದಶಕಗಳ ಕನಸಾಗಿದ್ದ ಶಿವಮೊಗ್ಗ – ಶೃಂಗೇರಿ – ಮಂಗಳೂರು ನೂತನ ರೈಲುಮಾರ್ಗ ನಿರ್ಮಾಣದ ಮಹತ್ವಾಕಾಂಕ್ಷಿ ಯೋಜನೆಗೆ ಈಗ ಮತ್ತಷ್ಟು ವೇಗ ಸಿಕ್ಕಿದೆ. ಈ ಬೃಹತ್ ಯೋಜನೆಗೆ ಸಂಬಂಧಿಸಿ ದಂತೆ ಅಂತಿಮ ಸ್ಥಳ ಸಮೀಕ್ಷೆ ಮತ್ತು ವಿಸ್ತೃತ ಯೋಜನಾ ವರದಿ ತಯಾರಿಕೆಗೆ ಅಧಿಕೃತ ಅನುಮೋದನೆ ದೊರೆತಿದ್ದು, ಶೀಘ್ರದಲ್ಲಿಯೇ ಟೆಂಡರ್ ಕರೆಯಲು ಇಲಾಖೆಯು ಸಂಪೂರ್ಣ ಸಿದ್ಧತೆ ನಡೆಸಿದೆ ಎಂದು ಸಂಸದ ಬಿ. ವೈ. ರಾಘವೇಂದ್ರ ತಿಳಿಸಿದ್ದಾರೆ.

ಇತ್ತೀಚಿಗೆ ಬೈಂದೂರು–ಕೊಲ್ಲೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವೀಕ್ಷಣೆಗೆ ಆಗಮಿಸಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ರೈಲುಮಾರ್ಗದ ಒಟ್ಟು ಉದ್ದ: 332 ಕಿ.ಮೀ. ಆಗಿದ್ದು, ಅಂದಾಜು ವೆಚ್ಚ ರೂ.3,300 ಕೋಟಿಯಾಗಿದೆ. ಈ ರೈಲ್ವೆಮಾರ್ಗದಿಂದ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಹಾವೇರಿ ಮತ್ತು ಚಿತ್ರದುರ್ಗ ನೇರ ಲಾಭ ಪಡೆಯುವ ಜಿಲ್ಲೆಗಳಾಗಿದ್ದು, ಹೊಸನಗರ, ತೀರ್ಥಹಳ್ಳಿ, ಶೃಂಗೇರಿ ಹಾಗೂ ಕಾರ್ಕಳ ಪ್ರಮುಖ ಸಂಪರ್ಕ ತಾಲೂಕುಗಳಾಗಿವೆ. ಈ ರೈಲ್ವೆ ಮಾರ್ಗವು ಮಲೆನಾಡು ಮತ್ತು ಕರಾವಳಿಯ ನಡುವೆ ವಾಣಿಜ್ಯ ವ್ಯವಹಾರ, ಕೃಷಿ ಉತ್ಪನ್ನಗಳ ಸುಲಭ ಸಾಗಣೆ ಹಾಗೂ ಪ್ರವಾಸೋದ್ಯಮದ ಅಭಿವೃದ್ಧಿಗೆ ಹೊಸ ಕ್ರಾಂತಿಯನ್ನೇ ಸೃಷ್ಟಿಸಲಿದೆ ಎಂದರು.

ಮಲೆನಾಡು ಭಾಗದ ಜನರ ದೀರ್ಘಕಾಲದ ಬೇಡಿಕೆಯನ್ನು ಈಡೇರಿಸಲು ಮತ್ತು ಈ ಬೃಹತ್ ಯೋಜನೆಗೆ ಅನುಮೋದನೆ ನೀಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಕ್ಷೇತ್ರದ ಸಮಸ್ತ ಜನತೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಶಾಸಕ ಗುರುರಾಜ ಗಂಟಿಹೊಳೆ, ರಾಷ್ಟ್ರೀಯ ಹೆದ್ದಾರಿ ಇಲಾಖಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಇದ್ದರು.

ಕಾಫಿ ತೋಟಗಳಿಗೆ ಲಗ್ಗೆ | ನಿದ್ದೆಗೆಡಿಸಿರುವ ಹೊಸ ಕೀಟ | ಚಿಕಿತ್ಸೆಗಿಂತ ತಡೆಗಟ್ಟುವಿಕೆಯೇ ಉತ್ತಮ ಪರಿಹಾರ : ತಜ್ಞರ ಅಭಿಪ್ರಾಯ

ಕಾಫಿ ಬೆಳೆಗಾರರಿಗೆ ಸವಾಲಾಗಿರುವ ಬ್ಲ್ಯಾಕ್ ಕಾಫಿ ಟ್ವಿಗ್ ಬೋರರ್ ಕಾಟ

• **ಮಡಿಕೇರಿ:** ಬಿಳಿ ಕಾಂಡ ಕೊರಕ ಹಾಗೂ ಸ್ಟೆಮ್ ಬೋರರ್'ನಿಂದ ಕಂಗಾಲಾಗಿರುವ ಕಾಫಿ ಬೆಳೆಗಾರರಿಗೆ ಇದೀಗ ಕಪ್ಪು ರೆಕ್ಕೆ ಬೋರರ್ (ಬ್ಲ್ಯಾಕ್ ಕಾಫಿ ಟ್ವಿಗ್ ಬೋರರ್) ಎಂಬ ಹೊಸ ಕೀಟವೊಂದು ಸವಾಲಾಗಿ ಪರಿಣಮಿಸಿದೆ.

ರೊಬಸ್ಟಾ ಮತ್ತು ಅರೇಬಿಕಾ ಕಾಫಿ ತೋಟಗಳೆರಡರಲ್ಲೂ ಈ ಬೋರರ್ ಕಾಣಿಸಿಕೊಳ್ಳುತ್ತಿದ್ದು, ಬೆಳೆಗಾರರು ನಿದ್ದೆಗೆಡುವಂತೆ ಮಾಡಿದೆ.

ಕಾಫಿ ಬೆಳೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಆತಂಕ ಉಂಟುಮಾಡುತ್ತಿರುವ ಕೀಟಗಳಲ್ಲಿ ಬೋರರ್ ಬಿಳಿ ಕಾಂಡಕೊರಕ ಹಾಗೂ ಸ್ಟೆಮ್ ಬೋರರ್ ಪ್ರಮುಖವಾಗಿದೆ. ಇದೀಗ ಆ ಸಾಲಿಗೆ ಕಪ್ಪು ರೆಕ್ಕೆಯ ಟ್ವಿಗ್ ಬೋರರ್ ಕೂಡಾ ಸೇರಿಕೊಂಡಿದೆ.

ದಕ್ಷಿಣ ಏಷ್ಯಾ ಮೂಲದ ಈ ಸಣ್ಣ ಕೀಟವು ಈಗ ಆಫ್ರಿಕಾ, ಹವಾಯಿ, ಲ್ಯಾಟಿನ್ ಅಮೆರಿಕಾ ಸೇರಿದಂತೆ ಅನೇಕ ಕಾಫಿ ಉತ್ಪಾದನಾ ಪ್ರದೇಶಗಳಿಗೆ ವ್ಯಾಪಿಸಿ ಕಾಫಿ ಬೆಳೆಗಳಿಗೆ ಭಾರೀ ಹಾನಿ ಉಂಟುಮಾಡುತ್ತಿದೆ. ಈ ಕೀಟವು ಮುಖ್ಯವಾಗಿ ರೊಬಸ್ಟಾ ಕಾಫಿ ಗಿಡಗಳನ್ನು ಹೆಚ್ಚು ಹಾನಿಗೊಳಪಡಿಸಿದರೂ, ಅರೇಬಿಕಾ ಕಾಫಿ ಸೇರಿದಂತೆ 200ಕ್ಕೂ ಹೆಚ್ಚು ಸಸ್ಯ ಜಾತಿಗಳ ಮೇಲೆ ದಾಳಿ ಮಾಡಬಲ್ಲದು. ಮಾತ್ರವಲ್ಲದೆ, ತೀವ್ರ ಸೋಂಕಿನ ಸಂದರ್ಭಗಳಲ್ಲಿ ಕಾಫಿ ಉತ್ಪಾದನೆಯಲ್ಲಿ 20 ರಿಂದ 50 ಶೇಕಡಾ ನಷ್ಟ ಉಂಟು ಮಾಡಲಿವೆ ಎನ್ನಲಾಗಿದೆ.

ಕೀಟದ ಜೀವನ ಚಕ್ರ

ವಯಸ್ಕ ಹೆಣ್ಣು ಹುಳು ಸುಮಾರು 1.4 ರಿಂದ 1.7 ಮಿ.ಮೀ ಉದ್ದವಿದ್ದು ಕಪ್ಪು ಬಣ್ಣದಲ್ಲಿರುತ್ತದೆ. ಗಂಡು ಹುಳುಗಳು ಸಣ್ಣ ಗಾತ್ರದ್ದಾಗಿದ್ದು ಹಾರಲು ಸಾಧ್ಯವಿಲ್ಲ. ಹೆಣ್ಣು ಹುಳುಗಳು ಮಾತ್ರ ಕಾಫಿ ಗಿಡಗಳ ಸಣ್ಣ ಕೊಂಬೆಗಳಿಗೆ ರಂಧ್ರ ಮಾಡಿ ಒಳನುಗ್ಗುತ್ತವೆ. ನಂತರ ಅವು ವಿಶೇಷ ಶಿಲೀಂಧ್ರಗಳನ್ನು ಒಳಗೆ ಪರಿಚಯಿಸುತ್ತವೆ. ಈ ಶಿಲೀಂಧ್ರಗಳ ಬೆಳವಣಿಗೆಯಿಂದ ಕೊಂಬೆಯೊಳಗಿನ ನೀರಿನ ಹರಿವು ತಡೆಯಲ್ಪಟ್ಟು ಕೊಂಬೆಗಳು ಒಣಗಲು ಆರಂಭವಾಗುತ್ತವೆ. ಸಾಮಾನ್ಯವಾಗಿ 3 ರಿಂದ 5 ವಾರಗಳಲ್ಲಿ ಈ ಕೀಟದ ಸಂಪೂರ್ಣ ಜೀವನ ಚಕ್ರ ಪೂರ್ಣಗೊಳ್ಳುತ್ತದೆ.

ಕಾಫಿ ಗಿಡದಲ್ಲಿ ಕಾಣುವ ಲಕ್ಷಣಗಳು

ಕೀಟದ ದಾಳಿಯನ್ನು ಆರಂಭಿಕ ಹಂತದಲ್ಲೇ ಗುರುತಿಸುವುದು ಅತ್ಯಂತ ಮುಖ್ಯ. ಪ್ರಮುಖವಾಗಿ ಕೊಂಬೆಗಳಲ್ಲಿ ಸುಮಾರು 1 ಮಿ.ಮೀ ಗಾತ್ರದ ಸಣ್ಣ ರಂಧ್ರಗಳು ಕಾಣಿಸಿಕೊಳ್ಳುತ್ತವೆ. ರಂಧ್ರದ ಬಳಿ ಮರದ



ಪುಡಿ ಅಥವಾ ಅಂಟು ದ್ರವ ಕಾಣುತ್ತದೆ. ಕೆಲವು ದಿನಗಳಲ್ಲಿ ಎಲೆಗಳು ಹಳದಿಯಾಗುತ್ತವೆ. ಬಳಿಕ ಕೊಂಬೆಗಳು ಒಣಗಿ ಸಾಯುತ್ತದೆ. ಒಳಭಾಗದಲ್ಲಿ ಕಪ್ಪು ಬಣ್ಣದ ಶಿಲೀಂಧ್ರದ ಗುರುತು ಕಾಣಿಸಿಕೊಳ್ಳುತ್ತದೆ. ಸೋಂಕಿತ ಕೊಂಬೆಗಳು ಸಾಮಾನ್ಯವಾಗಿ 5 ರಿಂದ 14 ದಿನಗಳೊಳಗೆ ಒಣಗುತ್ತವೆ.

ಆರ್ಥಿಕ ನಷ್ಟ

ಈ ಕೀಟದ ದಾಳಿಯಿಂದ ಹಣ್ಣಿನ ಕೊಂಬೆಗಳು ನಾಶವಾಗುತ್ತವೆ. ಉತ್ಪಾದನೆ ಕಡಿಮೆಯಾಗುತ್ತದೆ. ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇತರ ರೋಗಗಳಿಗೂ ಗಿಡಗಳು ಸುಲಭವಾಗಿ ತುತ್ತಾಗುತ್ತವೆ.

ಸೋಂಕು ಹೆಚ್ಚಾಗಲು ಕಾರಣಗಳು

ಕೆಲವು ಪರಿಸ್ಥಿತಿಗಳು ಈ ಕೀಟದ ವೃದ್ಧಿಗೆ ಅನುಕೂಲಕರವಾಗಿರುತ್ತವೆ.

ಅತಿಯಾದ ಗಿಡಗಳ ಸಾಂದ್ರತೆ. ಸರಿಯಾದ ಪ್ರೂನಿಂಗ್ ಇಲ್ಲದಿರುವುದು. ದಟ್ಟ ನೆರಳು, ನೀರಿನ ಕೊರತೆ, ಪೋಷಕಾಂಶಗಳ ಕೊರತೆ, ದುರ್ಬಲ ಹಾಗೂ ಒತ್ತಡದಲ್ಲಿಸ್ಯಗಳಿರುವುದು ಸುತ್ತಮುತ್ತ ಪರ್ಯಾಯ ಆತಿಥೇಯ ಸಸ್ಯಗಳಿರುವುದು ಸೋಂಕು ಹೆಚ್ಚಾಗಲು ಪ್ರಮುಖ ಕಾರಣ ಎನ್ನಲಾಗಿದೆ.

ಸಮಗ್ರ ಕೀಟ ನಿರ್ವಹಣೆ

1. ಸ್ವಚ್ಛತಾ ಪ್ರೂನಿಂಗ್, ಸೋಂಕಿತ ಕೊಂಬೆಗಳನ್ನು ತಕ್ಷಣ ಕತ್ತರಿಸಿ ಸುಡುವುದು ಅಥವಾ ಆಳವಾಗಿ ಹೂಳುವುದು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ.

ಗಿಡಗಳ ಆರೋಗ್ಯ ಕಾಪಾಡುವುದು, ಸಮರ್ಪಕ ಗೊಬ್ಬರ ಬಳಕೆ, ಬೇಸಿಗೆಯಲ್ಲಿ ನೀರಾವರಿ, ಸರಿಯಾದ ಅಂತರದಲ್ಲಿ ನೆಡುವಿಕೆ, ಸಮತೋಲಿತ ನೆರಳು ನಿರ್ವಹಣೆ. ಆರೋಗ್ಯಕರ ಗಿಡಗಳು ಈ ಕೀಟದ ದಾಳಿಗೆ ಕಡಿಮೆ ಒಳಗಾಗುತ್ತವೆ.

ಎಥನಾಲ್ ಆಕರ್ಷಕ ಬಲೆಗಳು: ಕಡಿಮೆ ವೆಚ್ಚದಲ್ಲಿ ತಯಾರಿಸಬಹುದಾದ ಎಥನಾಲ್ ಆಧಾರಿತ ಬಲೆಗಳು ಉತ್ತಮ ಫಲಿತಾಂಶ ನೀಡುತ್ತವೆ.

ಪ್ರತಿ ಎಕರೆಗೆ 7 ರಿಂದ 15 ಬಲೆಗಳು. ಪ್ಲಾಸ್ಟಿಕ್ ಬಾಟಲಿ ಮತ್ತು ಸಾಬೂನು ನೀರಿನ ಬಳಕೆ. ಎಥನಾಲ್ ಅಥವಾ ಸ್ಥಳೀಯ ಮದ್ಯ ಆಕರ್ಷಕವಾಗಿ ಬಳಸಬಹುದು ಸಮುದಾಯ ಮಟ್ಟದಲ್ಲಿ ಈ ಬಲೆಗಳನ್ನು ಬಳಸಿದರೆ ಉತ್ತಮ ನಿಯಂತ್ರಣ ಸಾಧ್ಯ.

ರಾಸಾಯನಿಕ ನಿಯಂತ್ರಣ

ರಾಸಾಯನಿಕಗಳನ್ನು ಕೊನೆಯ ಆಯ್ಕೆಯಾಗಿ ಮಾತ್ರ ಬಳಸಬೇಕು. ಕೆಲವು ಸಂದರ್ಭಗಳಲ್ಲಿ ಇಮಿಡಾಕ್ಲೋಪ್ರಿಡ್ ಪರಿಣಾಮಕಾರಿ ಎಂದು ಕಂಡುಬಂದಿದ್ದರೂ, ಇದರ ಅತಿಯಾದ ಬಳಕೆಯಿಂದ ಪರಿಸರ ಮತ್ತು ಉಪಯುಕ್ತ ಕೀಟಗಳಿಗೆ ಹಾನಿಯಾಗುವ ಸಾಧ್ಯತೆ ಇದೆ.

> **ಕೊನೆಯ ಮಾತು**
>
> ಬ್ಲ್ಯಾಕ್ ಕಾಫಿ ಟ್ವಿಗ್ ಬೋರರ್ ಸಣ್ಣ ಕೀಟವಾದರೂ ಕಾಫಿ ತೋಟಗಳಿಗೆ ದೊಡ್ಡ ಅಪಾಯವಾಗಿದೆ. ಆರಂಭಿಕ ಹಂತದಲ್ಲೇ ಗುರುತಿಸಿ, ಸೋಂಕಿತ ಕೊಂಬೆಗಳನ್ನು ತೆರವುಗೊಳಿಸಿ ಹಾಗೂ ಸಮಗ್ರ ಕೀಟ ನಿರ್ವಹಣಾ ಕ್ರಮಗಳನ್ನು ಅನುಸರಿಸಿದರೆ ಉತ್ಪಾದನಾ ನಷ್ಟವನ್ನು ಗಣನೀಯವಾಗಿ ಕಡಿಮೆ ಮಾಡಬಹುದು. 'ತಡೆಗಟ್ಟುವಿಕೆ ಚಿಕಿತ್ಸೆಗಿಂತ ಉತ್ತಮ' ಎಂಬುದು ಈ ಕೀಟದ ನಿರ್ವಹಣೆಯಲ್ಲಿ ಅತ್ಯಂತ ಮುಖ್ಯವಾದ ತತ್ವವಾಗಿದೆ.

> **ಕರ್ನಾಟಕದ ಕಾಫಿ ಬೆಳೆಗಾರರಿಗೆ ಸಲಹೆಗಳು**
>
> ತೋಟಗಳನ್ನು ವಾರಕ್ಕೊಮ್ಮೆ ಪರಿಶೀಲಿಸಿ. ಒಣಗುತ್ತಿರುವ ಕೊಂಬೆಗಳನ್ನು ತಕ್ಷಣ ತೆಗೆದುಹಾಕಿ. ಬೇಸಿಗೆಯಲ್ಲಿ ನೀರಿನ ಕೊರತೆ ಆಗದಂತೆ ನೋಡಿಕೊಳ್ಳಿ. ದಟ್ಟ ನೆರಳನ್ನು ನಿಯಂತ್ರಿಸಿ. ಎಥನಾಲ್ ಬಲೆಗಳನ್ನು ಅಳವಡಿಸಿ. ನೆರೆಹೊರೆಯ ರೈತರೊಂದಿಗೆ ಸಮನ್ವಯವಾಗಿ ನಿಯಂತ್ರಣ ಕ್ರಮ ಕೈಗೊಳ್ಳಿ.

2025ರಲ್ಲಿ ಚೊಚ್ಚಲ ಕಿರೀಟ | 2026ರಲ್ಲಿ ಚಾಂಪಿಯನ್ ಪಟ್ಟ ಭದ್ರ

ಮುಂದಿನ ಸಲವೂ ಕಪ್ ನಮ್ದೇ ?



ಬಹುಮಾನದ ಮೊತ್ತ

ಚಾಂಪಿಯನ್ ಆರ್‌ಸಿಬಿಗೆ	ರನ್ನರ್‌ಅಪ್ ಗುಜರಾತ್‌ಗೆ
20 ಕೋಟಿ. ರೂ.	12.5 ಕೋಟಿ. ರೂ.

ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಐಪಿಎಲ್ 2026ರಲ್ಲೂ ಚಾಂಪಿಯನ್ ಆಗಿ ಇತಿಹಾಸ ಬರೆದಿದೆ. 2025ರಲ್ಲಿ ಮೊದಲ ಬಾರಿ ಟ್ರೋಫಿ ಗೆದ್ದು 18 ವರ್ಷದ ಕಾಯುವಿಕೆಗೆ ತೆರೆ ಎಳೆದಿದ್ದ ಆರ್‌ಸಿಬಿ, 2026ರಲ್ಲಿ ಮತ್ತೊಮ್ಮೆ ಪ್ರಶಸ್ತಿ ಗೆದ್ದು ಸತತ ಎರಡನೇ ಐಪಿಎಲ್ ಕಿರೀಟ ಮುಡಿಗೇರಿಸಿದೆ. ಚೊಚ್ಚಲ ಕಪ್ ಗೆದ್ದು, ಮುಂದಿನ ವರ್ಷವೂ ಕಪ್ ತನ್ನಲ್ಲೇ ಉಳಿಸಿಕೊಂಡ ಮೊದಲ ತಂಡವೆಂಬ ಸಾಧನೆಗೈದಿದೆ. ನಾಯಕ ರಜತ್ ಪಾಟಿದಾರ್ ನೇತೃತ್ವ, ಕೋಚ್ ಆಂಡಿ ಫ್ಲವರ್ ಅವರ ತಂತ್ರಗಾರಿಕೆ, ವಿರಾಟ್ ಕೊಹ್ಲಿಯ ಅನುಭವ, ಯುವ ಆಟಗಾರರ ನಿರ್ಭೀತ ಆಟ ಹಾಗೂ ಸಮತೋಲಿತ ಬೌಲಿಂಗ್ ದಾಳಿಯ ನೆರವಿನಿಂದ ಸಂಪೂರ್ಣ ಋತುವಿನಲ್ಲಿ ಪ್ರಭುತ್ವ ಸಾಧಿಸಿತು. ಫೈನಲ್‌ನಲ್ಲಿ ವಿರಾಟ್ ಕೊಹ್ಲಿ ಅಜೇಯ 75 ರನ್‌ಗಳ ಅಮೋಘ ಇನ್ನಿಂಗ್ಸ್ ಆಡಿ ಸಿಕ್ಸರ್ ಮೂಲಕ ಬೆಂಗಳೂರಿನ ಚಾಂಪಿಯನ್ ಪಟ್ಟವನ್ನು ಕಾಪಾಡಿದರು. ಪ್ರತಿ ಬಾರಿ ಅಭಿಮಾನಿಗಳ ಈ ಸಲ ಕಪ್ ನಮ್ದೇ ಎಂಬ ಅಭಿಮಾನದ ಮಂತ್ರವು ಸತ್ಯವಾಗಿದೆ. 2009, 2011 ಮತ್ತು 2016ರ ಫೈನಲ್ ಸೋಲುಗಳ ನೋವಿನಿಂದ ಹೊರಬಂದು, 2025 ಮತ್ತು 2026ರಲ್ಲಿ ಸತತ ಪ್ರಶಸ್ತಿ ಗೆಲ್ಲುವ ತನ್ನ ಹಣೆಬರಹ ಬದಲಿಸಿಕೊಂಡಿದೆ. ಆರ್‌ಸಿಬಿ ಕೇವಲ ಚಾಂಪಿಯನ್ ತಂಡವಲ್ಲ, ಐಪಿಎಲ್‌ನ ಹೊಸ ರಾಜವಂಶವಾಗಿದೆ. ಈಗ ಅಭಿಮಾನಿಗಳ ಪ್ರಶ್ನೆ ಒಂದೇ, ಆರ್‌ಸಿಬಿ ಹ್ಯಾಟ್ರಿಕ್ ಕಪ್ ಗೆಲ್ಲಬಹುದೇ?



ಹೊಸ ಅಧ್ಯಾಯದ ನಾಯಕ ರಜತ್


2025ರಲ್ಲಿ ನಾಯಕತ್ವ ವಹಿಸಿಕೊಂಡ ರಜತ್ ಪಾಟಿದಾರ್ ಮೊದಲ ವರ್ಷವೇ ಆರ್‌ಸಿಬಿಗೆ ಚೊಚ್ಚಲ ಕಿರೀಟ ತಂದುಕೊಟ್ಟಿದ್ದರು. ಹಲವರು ಅದನ್ನು ಒಂದು ಅದ್ಭುತ ಕ್ಷಣ ಎಂದುಕೊಂಡಿದ್ದರೂ, 2026ರಲ್ಲಿ ಮತ್ತೊಮ್ಮೆ ಟ್ರೋಫಿ ಗೆದ್ದು ಅದು ಕೇವಲ ಅದೃಷ್ಟವಲ್ಲ ಎಂಬುದನ್ನು ಸಾಬೀತು ಪಡಿಸಿದರು. ಮೈದಾನದಲ್ಲಿ ಶಾಂತ ಸ್ವಭಾವ, ಸ್ಪಷ್ಟ ನಿರ್ಧಾರಗಳು, ಆಟಗಾರರ ಮೇಲಿನ ವಿಶ್ವಾಸ ಅವರ ದೊಡ್ಡ ಶಕ್ತಿಯಾಯಿತು. ಕ್ವಾಲಿಫೈಯರ್-1ರಲ್ಲಿ ಗುಜರಾತ್ ವಿರುದ್ಧ ಕೇವಲ 33 ಎಸೆತಗಳಲ್ಲಿ ಅಜೇಯ 93 ರನ್ ಸಿಡಿಸಿ ತಂಡವನ್ನು ಫೈನಲ್‌ಗೆ ಕೊಂಡೊಯ್ದ ಪ್ರದರ್ಶನ ಈ ಋತುವಿನ ದೊಡ್ಡ ಟರ್ನಿಂಗ್ ಪಾಯಿಂಟ್.

ವಿರಾಟ್ ಕೊಹ್ಲಿ ಎಂಬ ಶಾಶ್ವತ ಶಕ್ತಿ

ಐಪಿಎಲ್ ಆರಂಭದಿಂದಲೇ ಆರ್‌ಸಿಬಿಯೊಂದಿಗೆ ಇರುವ ವಿರಾಟ್ ಕೊಹ್ಲಿ, 2026ರಲ್ಲೂ ತಂಡದ ಬೆನ್ನೆಲುಬಾಗಿದ್ದರು. ಈ ಋತುವಿನಲ್ಲಿ ಅವರು 165.84ರ ಸ್ಟ್ರೈಕ್‌ರೇಟ್ ಮತ್ತು 56.25ರ ಸರಾಸರಿಯಲ್ಲಿ 675 ರನ್‌ಗಳನ್ನು ಕಲೆಹಾಕಿ ತಂಡದ ಪರ ಅತಿ ಹೆಚ್ಚು ರನ್ ಗಳಿಸಿದ್ದಾರೆ. ಫೈನಲ್‌ನಲ್ಲಿ ಅಜೇಯ 75 ರನ್‌ಗಳ ಇನ್ನಿಂಗ್ಸ್ ಆಡಿ ಮತ್ತೊಮ್ಮೆ ದೊಡ್ಡ ಪಂದ್ಯಗಳ ಆಟಗಾರ ಎಂಬ ಖ್ಯಾತಿ ಉಳಿಸಿಕೊಂಡರು. ಒಂಬತ್ತು ಶತಕಗಳು, 68 ಅರ್ಧಶತಕಗಳು ಮತ್ತು 9,300ಕ್ಕೂ ಅಧಿಕ ಐಪಿಎಲ್ ರನ್‌ಗಳೊಂದಿಗೆ ಕೊಹ್ಲಿ ಲೀಗ್ ಇತಿಹಾಸದ ಅತ್ಯಂತ ಯಶಸ್ವಿ ಬ್ಯಾಟರ್ ಆಗಿ ತಮ್ಮ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿದರು. ಕಳೆದ ಆವೃತ್ತಿಯಲ್ಲೂ 657 ರನ್ ಕಲೆಹಾಕಿ ಗೆಲುವಿನ ಹೀರೋ ಆಗಿದ್ದರು.



ಬ್ಯಾಕ್‌ರೂಮ್ ಹೀರೋಗಳು



ಆ್ಯಂಡಿ ಫ್ಲವರ್, ಮುಖ್ಯ ತರಬೇತುದಾರ

ಆರ್‌ಸಿಬಿಯ ಪರಿವರ್ತನೆಯ ಹಿಂದಿನ ಪ್ರಮುಖ ವ್ಯಕ್ತಿ ಎಂದರೆ ಮುಖ್ಯ ಕೋಚ್ ಆಂಡಿ ಫ್ಲವರ್. 2024ರಲ್ಲಿ ಜವಾಬ್ದಾರಿ ವಹಿಸಿಕೊಂಡ ಅವರು ಮೂರು ವರ್ಷಗಳಲ್ಲಿ ಎರಡು ಟ್ರೋಫಿಗಳನ್ನು ತಂದುಕೊಟ್ಟಿದ್ದಾರೆ. ಆಧುನಿಕ ಕ್ರಿಕೆಟ್ ಕಂಡ ಶ್ರೇಷ್ಠ ಕೋಚ್ ಎಂಬ ಪ್ರಸಿದ್ಧಿ ಪಡೆದಿರುವ ಫ್ಲವರ್ 3 ಆ್ಯಶಸ್, 1 ಟಿ20, 1 ಏಕದಿನ ವಿಶ್ವಕಪ್, 1 ದಿ ಹಂಡ್ರೆಡ್ ಮತ್ತು 2 ಐಪಿಎಲ್ ಕಪ್ ಗೆಲ್ಲಿಸಿಕೊಟ್ಟಿದ್ದಾರೆ.

ಮೊ ಬೋಬಾಟ್, ಕ್ರಿಕೆಟ್ ನಿರ್ದೇಶಕ

ಐಪಿಎಲ್ 2024ರಲ್ಲಿ ಆರ್‌ಸಿಬಿ ಕ್ರಿಕೆಟ್ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ ಮೊ ಬೋಬಾಟ್, ದೀರ್ಘಾವಧಿ ಯೋಜನೆ ರೂಪಿಸಿ ಸಮತೋಲಿತ ತಂಡ ಕಟ್ಟಿದರು. ಇವರು ಜಿಟಿ ವಿರುದ್ಧ ಕ್ವಾಲಿಫೈಯರ್-1ಕ್ಕೂ ಮುಂಚಿತವಾಗಿ ಮಾತನಾಡಿದ ಕೆಲವು ಅಂಶಗಳು ಪಂದ್ಯದಲ್ಲಿ ಸಾಬೀತಾಗಿದ್ದವು. ಇಂಗ್ಲೆಂಡ್ ತಂಡದ ಏಕದಿನ, ಟಿ20 ಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆರ್‌ಸಿಬಿ ಸತತ 2ನೇ ಕಪ್ ಗೆಲುವಿನಲ್ಲಿ ಬೋಬಾಟ್ ಪಾತ್ರವೂ ಪ್ರಮುಖ.

ದಿನೇಶ್ ಕಾರ್ತಿಕ್, ಮೆಂಟರ್ ಮತ್ತು ಬ್ಯಾಟಿಂಗ್ ಕೋಚ್

ಕಳೆದ ವರ್ಷ ಆರ್‌ಸಿಬಿ ಚೊಚ್ಚಲ ಕಪ್ ಗೆಲುವಿನ ರೂವಾರಿಗಳಲ್ಲಿ ಒಬ್ಬರಾಗಿದ್ದ ಜಿತೇಶ್ ಶರ್ಮಾ, ತಮ್ಮ ಆಟದ ಬದಲಾವಣೆಗೆ ಸಂಪೂರ್ಣ ಶ್ರೇಯ ದಿನೇಶ್ ಕಾರ್ತಿಕ್ ಅವರಿಗೆ ನೀಡಿದ್ದರು. ಕಾರ್ತಿಕ್ ಯುವ ಆಟಗಾರರಲ್ಲಿ ಆತ್ಮವಿಶ್ವಾಸ ತುಂಬಿದರು. ಅತಿಯಾದ ಬೋಧನೆ ಮಾಡದೆ ಆಟಗಾರರಿಗೆ ತಮ್ಮ ಸ್ವತಂತ್ರ ಚಿಂತನೆಗೂ ಅವಕಾಶ ನೀಡಿದ ಕಾರ್ತಿಕ್ ಅದ್ಭುತ ಬ್ಯಾಟಿಂಗ್ ಕೋಚ್ ಆಗಿ ಸಾಬೀತಾಗಿದ್ದಾರೆ. ಇವರು ಆರ್‌ಸಿಬಿ ಹಣೆಬರಹ ಬದಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಮಾಲೋಲನ್ ರಂಗರಾಜನ್

ಸ್ಪಿನ್ ಬೌಲಿಂಗ್ ಕೋಚ್ (ಆರ್‌ಸಿಬಿ ಮಹಿಳಾ ತಂಡದ ಮುಖ್ಯ ಕೋಚ್), ಆಟಗಾರರ ಗುರುತಿಸುವ ಮ್ಯಾನೇಜರ್.
ರಂಗರಾಜನ್ ಆರ್‌ಸಿಬಿಗಾಗಿ ಪ್ರತಿಭೆಗಳನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ತಮಿಳುನಾಡು ಮಾಜಿ ಸ್ಪಿನ್ನರ್ ಈಗ ಆರ್‌ಸಿಬಿ ಪುರುಷರ ಮತ್ತು ಮಹಿಳಾ ತಂಡಗಳ ಪ್ರಮುಖ ಅಂಗವಾಗಿದ್ದಾರೆ.

ಓಂಕಾರ್ ಸಾಳ್ವಿ, ಬೌಲಿಂಗ್ ಕೋಚ್

ಆರ್‌ಸಿಬಿ ಬೌಲಿಂಗ್ ವಿಭಾಗದ ರೂಪಾಂತರದ ಸಂಪೂರ್ಣ ಶ್ರೇಯ ಬೌಲಿಂಗ್ ತರಬೇತುದಾರ ಓಂಕಾರ್ ಸಾಳ್ವಿ ಅವರಿಗೆ ಸಲ್ಲುತ್ತದೆ. ರಣಜಿ ಟ್ರೋಫಿ ದಿನಗಳಿಂದಲೇ ನಾಯಕ ಪಾಟಿದಾರ್ ಮತ್ತು ಓಂಕಾರ್ ಒಡನಾಟ ಹೊಂದಿದ್ದಾರೆ. ಪ್ರತಿ ಬೌಲರ್ ಪ್ರದರ್ಶನದ ಮೇಲೆ ಸಾಳ್ವಿ ಗಮನಹರಿಸುತ್ತಾರೆ.



ಗೆಲುವಿನ ರೂವಾರಿಗಳು (ಪಂದ್ಯಶ್ರೇಷ್ಠ)

ಜೇಕಬ್ ಡಫಿ
(ಮಾ.28: ಸನ್‌ರೈಸರ್ಸ್ ವಿರುದ್ಧ)
6 ಪಂದ್ಯ, 9 ವಿಕೆಟ್, ಅತ್ಯುತ್ತಮ ಸನ್‌ರೈಸರ್ಸ್ ವಿರುದ್ಧ 22ಕ್ಕೆ 3.

ಟಿಮ್ ಡೇವಿಡ್
(ಏ.5: ಚೆನ್ನೈ ವಿರುದ್ಧ)
15 ಇನ್ನಿಂಗ್ಸ್, 305 ರನ್, ಅತ್ಯುತ್ತಮ ಚೆನ್ನೈ ವಿರುದ್ಧ 70*

ಫಿಲ್ ಸಾಲ್ಟ್
(ಏ.12: ಮುಂಬೈ ವಿರುದ್ಧ)
6 ಇನ್ನಿಂಗ್ಸ್, 202 ರನ್, ಅತ್ಯುತ್ತಮ ಮುಂಬೈ ವಿರುದ್ಧ 78.

ಜೋಶ್ ಹೆಜೆಲ್‌ವುಡ್
(ಏ.15: ಲಖನೌ ವಿರುದ್ಧ)
ಏ.27: ದಿಲ್ಲಿ ವಿರುದ್ಧ ಜೋಶ್ ಹೆಜೆಲ್‌ವುಡ್. 13 ಪಂದ್ಯ, 15 ವಿಕೆಟ್, ಅತ್ಯುತ್ತಮ ದಿಲ್ಲಿ ವಿರುದ್ಧ 12ಕ್ಕೆ 4

ವಿರಾಟ್ ಕೊಹ್ಲಿ
(ಏ.24: ಗುಜರಾತ್ ವಿರುದ್ಧ, ಮೇ 13: ಕೋಲ್ಕತ ವಿರುದ್ಧ, ಮೇ 31: ಫೈನಲ್, ಗುಜರಾತ್ ವಿರುದ್ಧ)
16 ಇನ್ನಿಂಗ್ಸ್, 675 ರನ್, ಅತ್ಯುತ್ತಮ ಕೋಲ್ಕತ ವಿರುದ್ಧ ಅಜೇಯ 105 ರನ್. ಫೈನಲ್‌ನಲ್ಲಿ ಗುಜರಾತ್ ವಿರುದ್ಧ ಅಜೇಯ 75 ರನ್.

ಭುವನೇಶ್ವರ್ ಕುಮಾರ್
(ಮೇ 10: ಮುಂಬೈ ವಿರುದ್ಧ)
16 ಪಂದ್ಯ, 28 ವಿಕೆಟ್, ಅತ್ಯುತ್ತಮ ಮುಂಬೈ ವಿರುದ್ಧ 23ಕ್ಕೆ 4.

ವೆಂಕಟೇಶ್ ಅಯ್ಯರ್
(ಮೇ 17: ಪಂಜಾಬ್ ವಿರುದ್ಧ)
6 ಇನ್ನಿಂಗ್ಸ್, 209 ರನ್, ಅತ್ಯುತ್ತಮ ಪಂಜಾಬ್ ವಿರುದ್ಧ 73*

ರಜತ್ ಪಾಟಿದಾರ್
(ಮೇ 26: ಕ್ವಾಲಿಫೈಯರ್-1, ಗುಜರಾತ್ ವಿರುದ್ಧ)
14 ಇನ್ನಿಂಗ್ಸ್, 501 ರನ್, ಕ್ವಾಲಿಫೈಯರ್-1ರಲ್ಲಿ ಜಿಟಿ ವಿರುದ್ಧ ಅಜೇಯ 93 ರನ್.



675 ರನ್ ಸ್ಕೋರ್ ಮಾಡಿದ ವಿರಾಟ್ ಕೊಹ್ಲಿ

28 ವಿಕೆಟ್ ಭುವನೇಶ್ವರ್ ಕುಮಾರ್ ಪಡೆದ ವಿಕೆಟ್





ವಿರಾಟ್ ಕೊಹ್ಲಿ ಆರ್‌ಸಿಬಿ ಡ್ರೆಸ್ಸಿಂಗ್ ಕೊಠಡಿಯ ಹಾರ್ಟ್‌ಬೀಟ್
■ **ಆ್ಯಂಡಿ ಫ್ಲವರ್,** ಮುಖ್ಯ ಕೋಚ್

2025ರ ಚೊಚ್ಚಲ ಕಪ್ ಗೆದ್ದಿದ್ದರಿಂದ ಈ ಬಾರಿ ಒತ್ತಡ ಕಡಿಮೆ, ಮೈದಾನದಲ್ಲಿ ಗೆಲ್ಲುತ್ತೇವೆಂಬ ಆತ್ಮವಿಶ್ವಾಸ ಹೆಚ್ಚಿತ್ತು
■ **ವಿರಾಟ್ ಕೊಹ್ಲಿ,** ಐಕಾನ್ ಆಟಗಾರ

ಇಲ್ಲಿಗೆ ಫೈನಲ್ ಆಡಲು ಬಂದಾಗ ಕಳೆದ ವರ್ಷ ಪ್ರಶಸ್ತಿ ಗೆದ್ದ ನೆನಪುಗಳಿದ್ದವು. ಆದರೆ ನಾವು ಪ್ರಸ್ತುತ ಆಟದ ಮೇಲೆ ಗಮನಹರಿಸಿದ್ದೆವು. ಈ ವರ್ಷ ನಾವೆಲ್ಲೇ ಹೋದರೂ ಅಭಿಮಾನಿಗಳು ತವರಿನ ಅಂಗಣದ ಅನುಭವ ಸೃಷ್ಟಿಸಿದ್ದರು.
■ **ರಜತ್ ಪಾಟಿದಾರ್,** ನಾಯಕ

ಚೊಚ್ಚಲ ಕಪ್ ಬಳಿಕ ಪಟ್ಟ ಉಳಿಸಿಕೊಂಡ ಮೊದಲ ತಂಡ

18 ವರ್ಷ ಬಳಿಕ ಕಪ್ ಗೆದ್ದ ಆರ್‌ಸಿಬಿ, 2026ರಲ್ಲಿ ಕಪ್ ತನ್ನಲ್ಲೇ ಉಳಿಸಿದೆ.

ಕಪ್ ಉಳಿಸಿಕೊಂಡ 3ನೇ ಚಾಂಪಿಯನ್

ಚೆನ್ನೈ (2010, 2011), ಮುಂಬೈ (2019, 2020), ಆರ್‌ಸಿಬಿ (2025, 2026).

ಸತತ 2 ಆವೃತ್ತಿಗಳಲ್ಲಿ ಕಪ್ ಗೆದ್ದ ನಾಯಕರು

ಎಂಎಸ್ ಧೋನಿ (2010, 2011), ರೋಹಿತ್ ಶರ್ಮಾ (2019, 2020), ರಜತ್ ಪಾಟಿದಾರ್ (2025, 2026).



15ರ ಪೋರ, 5 ಪ್ರಶಸ್ತಿ ಗೆದ್ದ ವೀರ!

15ನೇ ವಯಸ್ಸಿನಲ್ಲೇ ವೈಭವ್ ಸೂರ್ಯವಂಶಿ ದೇಶದಲ್ಲಿ ದೊಡ್ಡ ಸಂಚಲನ ಸೃಷ್ಟಿಸಿದ್ದಾರೆ. ರಾಜಸ್ಥಾನ ರಾಯಲ್ಸ್ ಪ್ರತಿನಿಧಿಸಿದ ಅವರು 16 ಪಂದ್ಯಗಳಲ್ಲಿ 776 ರನ್ ಗಳಿಸಿ ಕಿತ್ತಳೆ ಕ್ಯಾಪ್ ಗೆದ್ದರು. 237ಕ್ಕೂ ಹೆಚ್ಚು ಸ್ಟ್ರೈಕ್ ರೇಟ್‌ನೊಂದಿಗೆ ಬ್ಯಾಟಿಂಗ್ ಮಾಡಿ 72 ಸಿಕ್ಸರ್‌ಗಳನ್ನು ಸಿಡಿಸಿ ದಾಖಲೆ ಬರೆದರು. ಭಯವಿಲ್ಲದ ಆಕ್ರಮಣಕಾರಿ ಶೈಲಿ ಮತ್ತು ನಿರಂತರ ಪ್ರದರ್ಶನದಿಂದ ಕ್ರಿಕೆಟ್ ಜಗತ್ತಿನ ಗಮನ ಸೆಳೆದರು. ಕೇವಲ ರನ್‌ಗಳಷ್ಟೇ ಅಲ್ಲ, ಹೊಸ ತಲೆಮಾರಿನ ಭಾರತೀಯ ಕ್ರಿಕೆಟ್‌ನ ಭರವಸೆಯ ತಾರೆಯಾಗಿ ತಮ್ಮನ್ನು ಸಾಬೀತುಪಡಿಸಿದರು. ಇವರು ಐಪಿಎಲ್ 2026ರಲ್ಲಿ 5 ಪ್ರಶಸ್ತಿಗಳನ್ನು ಬಾಚಿಕೊಂಡರು.

ಪ್ರಶಸ್ತಿ ವಿಜೇತರು

ಉದಯೋನ್ಮುಖ ಆಟಗಾರ: ವೈಭವ್ ಸೂರ್ಯವಂಶಿ (ರಾಜಸ್ಥಾನ)
ಸೂಪರ್ ಸ್ಟ್ರೈಕರ್: ವೈಭವ್ ಸೂರ್ಯವಂಶಿ (ರಾಜಸ್ಥಾನ)
ಸೂಪರ್ ಸಿಕ್ಸರ್: ವೈಭವ್ ಸೂರ್ಯವಂಶಿ (ರಾಜಸ್ಥಾನ)
ಅತ್ಯಧಿಕ ಬೌಂಡರಿ: ಸಾಯಿ ಸುದರ್ಶನ್ (ಗುಜರಾತ್)
ಹಸಿರು ಡಾಟ್ ಬಾಲ್ಸ್: ಮೊಹಮ್ಮದ್ ಸಿರಾಜ್ (ಗುಜರಾತ್), 172 ಡಾಟ್ ಬಾಲ್ಸ್ (ನೆಟ್ಟ ಗಿಡಗಳು 3,268)
ಅತ್ಯುತ್ತಮ ಕ್ಯಾಚ್: ಮನೀಶ್ ಪಾಂಡೆ (ಆರ್‌ಸಿಬಿ-ಕೆಕೆಆರ್ - ಟಿಮ್ ಡೇವಿಡ್ ಅವರ ಕ್ಯಾಚ್)
ಫೇರ್‌ಪ್ಲೇ: ಪಂಜಾಬ್ ಕಿಂಗ್ಸ್
ನೇರಳೆ ಟೋಪಿ: ಕಗಿಸೋ ರಬಾಡ (ಗುಜರಾತ್), 29 ವಿಕೆಟ್.
ಕಿತ್ತಳೆ ಟೋಪಿ: ವೈಭವ್ ಸೂರ್ಯವಂಶಿ (ರಾಜಸ್ಥಾನ), 776 ರನ್
ಅತ್ಯಧಿಕ ಮೌಲ್ಯದ ಆಟಗಾರ: ವೈಭವ್ ಸೂರ್ಯವಂಶಿ (ರಾಜಸ್ಥಾನ)
ಶ್ರೇಷ್ಠ ಪಿಚ್ (ಕನಿಷ್ಠ 5+ ಪಂದ್ಯಗಳು): ಬಂಗಾಳ ಕ್ರಿಕೆಟ್ ಅಸೋಸಿಯೇಷನ್
ಶ್ರೇಷ್ಠ ಪಿಚ್ (4ಕ್ಕಿಂತ ಕಡಿಮೆ ಪಂದ್ಯ): ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್



ಮೃತ ಅಭಿಮಾನಿಗಳಿಗೆ 2ನೇ ಕಪ್ ಸಮರ್ಪಣೆ

ಈ ಬಾರಿಯ ಆರ್‌ಸಿಬಿ ಟ್ರೋಫಿಯನ್ನು 2025ರ ಚೊಚ್ಚಲ ಐಪಿಎಲ್ ಕಪ್ ಸಂಭ್ರಮಾಚರಣೆ ವೇಳೆ ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟ 11 ಅಭಿಮಾನಿಗಳಿಗೆ ಸಮರ್ಪಿಸಿದರು. ಅವರೂ ನಮ್ಮ ಕುಟುಂಬದ ಸದಸ್ಯರು ಎಂದು ಹೇಳಿದ ಪಾಟಿದಾರ್, ಆರ್‌ಸಿಬಿ ಗೆಲುವಿಗೆ ಭಾವನಾತ್ಮಕ ಅರ್ಥ ನೀಡಿದ್ದಾರೆ.

ವಿಕ್ಟರಿ ಪರೇಡ್ ಇಲ್ಲ: ಆರ್‌ಸಿಬಿ

ಬೆಂಗಳೂರು: 2025ರ ಕಪ್ ಕಾಲ್ತುಳಿತ ದುರಂತ ಹಿನ್ನೆಲೆ ಮುನ್ನೆಚ್ಚರಿಕಾ ಕ್ರಮವಾಗಿ ಆರ್‌ಸಿಬಿ ಈ ಬಾರಿ ವಿಕ್ಟರಿ ಪರೇಡ್ ನಡೆಸದಿರಲು ನಿರ್ಧರಿಸಿದೆ. ಸಾರ್ವಜನಿಕ ಸಂಭ್ರಮಾಚರಣೆ ಇಲ್ಲವೆಂದೂ, ತಮ್ಮ ತಮ್ಮ ಮನೆಯೊಳಗೆ ಸಂಭ್ರಮಾಚರಣೆ ನಡೆಸಬೇಕೆಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರು ಸಲಹೆ ನೀಡಿದ್ದರು. ಆದರೂ ಆರ್‌ಸಿಬಿ ಫೈನಲ್‌ನಲ್ಲಿ ಗೆದ್ದಾಕ್ಷಣ ಅಭಿಮಾನಿಗಳು ರಸ್ತೆಗಿಳಿದು ಸಂಭ್ರಮಿಸಿದ್ದಾರೆ. ಭಾನುವಾರ ರಾತ್ರಿ ವಿಕ್ಟರಿ ಪರೇಡ್ ಇರುವುದಿಲ್ಲ ಎಂದು ಆರ್‌ಸಿಬಿ ಸ್ಪಷ್ಟಪಡಿಸಿದೆ.

ವಿಶ್ವಕಪ್ ನೇರಪ್ರಸಾರ ಹಕ್ಕು ಖರೀದಿಸಿದ ಝೀ

ಹೊಸದಿಲ್ಲಿ: ಫೀಫಾ ವಿಶ್ವಕಪ್ 2026ರ ನೇರಪ್ರಸಾರದ ಹಕ್ಕನ್ನು ಝೀ ಎಂಟರ್‌ಟೈನ್‌ಮೆಂಟ್ ಅಂದಾಜು 320 ಕೋಟಿ ರೂ.ಗೆ ಖರೀದಿಸಿದ್ದು, ಕೊನೆಗೂ ಭಾರತದಲ್ಲಿ ಯಾರು ನೇರಪ್ರಸಾರ ಮಾಡಲಿದ್ದಾರೆಂಬ ಮಾಹಿತಿ ಹೊರಬಿದ್ದಿದೆ. ಇದು ಭಾರತೀಯ ಫುಟ್ಬಾಲ್ ಅಭಿಮಾನಿಗಳಲ್ಲಿ ನಿರಾಳತೆ ಮೂಡಿಸಿದೆ. ಕ್ರೀಡಾ ನೇರಪ್ರಸಾರದಿಂದ ದಶಕಗಳ ಕಾಲ ದೂರ ಉಳಿದಿದ್ದ ಝೀ ತನ್ನ ಹೊಸ ಯೂನಿಟ್8 ಸ್ಪೋರ್ಟ್ಸ್ ಟಿವಿ ವಾಹಿನಿ ಪರಿಚಯಿಸಲು ಸಕಲ ಸಿದ್ಧತೆ ಮಾಡಿಕೊಂಡಿದೆ. ಝೀ-5ನಲ್ಲೂ ಪ್ರಸಾರವಾಗಲಿದೆ.

ಫ್ರೆಂಚ್ ಓಪನ್: 2ನೇ ಸುತ್ತಿಗೆ ಮಾಯಾ

ಪ್ಯಾರಿಸ್: ಫ್ರೆಂಚ್ ಓಪನ್ 2026 ಕಿರಿಯ ಬಾಲಕಿಯರ ವಿಭಾಗದಲ್ಲಿ ಮಿಂಚಿದ ಭಾರತದ ಮಾಯಾ ರಾಜೇಶ್ವರನ್ 2ನೇ ಸುತ್ತನ್ನು ಪ್ರವೇಶಿಸಿದ್ದಾರೆ. ಮಾಯಾ ಚೀನಾದ ಯಿಹಾನ್ ಕ್ಯೂರನ್ನು 6-4, 2-6, 6-1ರಿಂದ ಮಣಿಸಿದ್ದಾರೆ.
ಹೊರಬಿದ್ದ ಸ್ವಿಯಾಟೆಕ್: ಭಾನುವಾರ ತಡರಾತ್ರಿ ಉಕ್ರೇನ್‌ನ ಮಾರ್ತಾ ವಿರುದ್ಧ 5-7, 1-6 ನೇರ ಸೆಟ್‌ಗಳಿಂದ ಸೋತ ನಾಲ್ಕು ಬಾರಿಯ ಚಾಂಪಿಯನ್ ಪೋಲೆಂಡ್ ಆಟಗಾರ್ತಿ ಇಗಾ ಹೊರಬಿದ್ದಿದ್ದಾರೆ.

ಜೂ.6ರಿಂದ ಆಫ್ಘಾನ್ ಸರಣಿ


ಮುಂಬೈ: ಐಪಿಎಲ್ ಮುಕ್ತಾಯಗೊಂಡಿದ್ದು, ಶುಬ್ಮನ್ ಗಿಲ್ ನೇತೃತ್ವದ ಭಾರತ ತಂಡ ಜೂ.6ರಿಂದ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಹಾಗೂ ಮೂರು ಏಕದಿನ ಪಂದ್ಯಗಳ ತವರಿನ ಸರಣಿಯಲ್ಲಿ ವ್ಯಸ್ತವಾಗಲಿದೆ. ಜೂ.6ರಂದು 10ರವರೆಗೆ ಚಂಡೀಗಢದಲ್ಲಿ ಭಾರತ ಏಕೈಕ ಟೆಸ್ಟ್ ಪಂದ್ಯ ಆಡಲಿದೆ. ಟೆಸ್ಟ್ ಮತ್ತು ಟಿ20 ನಿವೃತ್ತಿ ಪಡೆದ ತಾರಾ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಏಕದಿನಗಳಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಜೂ.13ರಿಂದ ಏಕದಿನ ಸರಣಿ ಆರಂಭವಾಗಲಿದೆ.

ಗುಜರಾತ್ ಬಸ್‌ನಲ್ಲಿ ಬೆಂಕಿ!

ಅಹಮದಾಬಾದ್: ಐಪಿಎಲ್ ಫೈನಲ್ ಸೋತ ಬಳಿಕ ಟೈಟಾನ್ಸ್ ತಂಡ ಪ್ರಯಾಣಿಸುತ್ತಿದ್ದ ಟೀಮ್ ಬಸ್‌ನಲ್ಲಿ ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದು, ಬೆಂಕಿ ಕಾಣಿಸಿಕೊಂಡಿತು. ತಕ್ಷಣ ಎಲ್ಲಾ ಆಟಗಾರರನ್ನು ಸುರಕ್ಷಿತ ಸ್ಥಳಾಂತರ ಮಾಡಿದ್ದರಿಂದ, ಯಾವುದೇ ಹಾನಿಯಾಗಿಲ್ಲ. ಸ್ಟೇಡಿಯಂನಿಂದ ಹೋಟೆಲ್‌ಗೆ ಮರಳುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಪರ್ಯಾಯ ಬಸ್ ವ್ಯವಸ್ಥೆ ಮಾಡಿ ಆಟಗಾರರನ್ನು ಕಳುಹಿಸಲಾಗಿದೆ ಎಂದು ವರದಿಯಾಗಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6002

ಎಡದಿಂದ ಬಲಕ್ಕೆ
3.ಬಡ್ಡಿ ಕೊಡಲು ಒಡ್ಡಿದ ಆಕ್ಷೇಪಣೆ (2)
4.ವಿಷ್ಣು ಆದಿಶೇಷನ ಮೇಲೆ ಮಲಗಿರುವ ಭಂಗಿ (6)
7.ಕಡಲು ಹೀಗೆ ಟಿಸಿಲೊಡೆದಿದೆಯೆ? (3)
8.ಚಪಾತಿ ಮಾಡಲು ನಾದಿದ ಹಿಟ್ಟು (3)
9.ಎಳೆಯುತ್ತಿರುವ ದೇವರ ರಥ (2)
10.ಯೋಗ್ಯ ವ್ಯಕ್ತಿಯೀತ (2)
12.ಪ್ರಾಣಿಗಳ ಮೈಮೇಲಿನ ಚರ್ಮ (3)
14.ನರಗಳನ್ನು ಸರಿಪಡಿಸಿಕೊಂಡದ್ದು ಈ ಪಟ್ಟಣದಲ್ಲಿ (3)
15.ಜೀವನವನ್ನು ನಡೆಸುವ ವಿಧಾನ (6)
18.ಕೊರೆದು ಮಾಡಿದ ತೂತು (2)

ಮೇಲಿನಿಂದ ಕೆಳಕ್ಕೆ
1.ಹತ್ತವರ ತಂದೆ ತಲೆಕೆಳಗಾಗಿದ್ದಾನೆ (2)
2.ಇದ್ದಕ್ಕಿದ್ದಂತೆ ಕಾಣದಂತೆ ಹೋಗು (2)
3.ವಿನಿಮಯದ ಸಮಾನಪದ (6)
5.ಬಾಲ್ಯ ಕಳೆದ ಯುವಕ (3)
6.ಅಸಲಿನ ಇನ್ನೊಂದು ಪ್ರತಿ (3)
8.ಅತಿ ಪ್ರೀತಿಯ ಸಂತಾನವನ್ನು ಹೀಗೆನ್ನಬಹುದು (6)
11.ಫಲವತ್ತಲ್ಲದ್ದು ತಲೆಕೆಳಗಾಗಿದೆ (3)
13.ದಪ್ಪಗಿರುವ ಗಂಡುಕೋತಿ (3)
16.ಈತ ಕೆಟ್ಟ ಸ್ವಭಾವದವನು (2)
17.ಋಷಿ ಪದದ ತದ್ಭವರೂಪ (2)

6001 ಉತ್ತರ

ಎಡದಿಂದ ಬಲಕ್ಕೆ:
2.ಆತ್ಮದ್ರೋಹ 5.ಗೆಡ್ಡೆ
5.ಕ್ರಮೇಣ 6.ಗೋಲಿಬಾರು
8.ದಾರಿತಪ್ಪು 10.ಅದಾಲತ್ತು
12.ರಸಾಯನ 14.ತೋರಿಕೆ
16.ಕೋಣೆ 17.ತಕರಾರು

ಮೇಲಿನಿಂದ ಕೆಳಕ್ಕೆ :
1.ಕೋಣ 2.ಆಕ್ರಮಿತ
3.ಹರಿಗೋಲು
4.ಬಾಡಿಗೆ 7.ರುಷುವತ್ತು
8.ದಾಹೋತ್ತರ 9.ಜನಮತ
11.ದಾರಿತೋರು 13.ಸಾರಣೆ
15.ಕೆಡು


ಕೆನರಾ ಶಾಲೆ ಡೊಂಗರಕೇರಿ


ಉಡುಪಿ, ಗಂಗೊಳ್ಳಿ


ಕಟೀಲು

ಕಿರುಸುದ್ದಿ

ಶಿರೂರು ಸಂಕದಗುಂಡಿ ಹೊಳೆಯಲ್ಲಿ ಮುಳುಗಿ ವಿದ್ಯಾರ್ಥಿ ಮೃತ್ಯು

ಬೈಂದೂರು: ಪ್ರವಾಸಕ್ಕೆ ಬಂದಿರುವ ಹಾವೇರಿ ಮೂಲದ ವಿದ್ಯಾರ್ಥಿಯೊಬ್ಬ ಈಜಲು ತೆರಳಿ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಸೋಮವಾರ ಬೆಳಿಗ್ಗೆ ಶಿರೂರು ಸಂಕದಗುಂಡಿ ಹೊಳೆಯಲ್ಲಿ ನಡೆದಿದೆ. ಆಯುಷ್ (16) ಮೃತಪಟ್ಟ ದುರ್ದೈವಿ. ಹಾವೇರಿ ಸಮೀಪದ ಕೃಷಿ ನಗರದ ಒಟ್ಟು 7 ಜನ ಮುರುಡೇಶ್ವರ, ಕನ್ಯಾಕುಮಾರಿ ಪ್ರವಾಸಕ್ಕೆ ಹೊರಟಿದ್ದರು ಮುರುಡೇಶ್ವರ ಪ್ರವಾಸ ಮುಗಿಸಿ ಶಿರೂರು ಸಂಕದಗುಂಡಿ ಹೊಳೆ ಬಳಿ ವಿಶ್ರಾಂತಿಗಾಗಿ ವಾಹನ ನಿಲ್ಲಿಸಿದ್ದರು. ಈ ಸಂದರ್ಭದಲ್ಲಿ ಮನೆಯವರೆಲ್ಲಾ ಊಟದ ತಯಾರಿಯಲ್ಲಿರುವ ವೇಳೆ ಇಬ್ಬರು ಮಕ್ಕಳು ಪಕ್ಕದಲ್ಲಿರುವ ನದಿಗೆ ಸ್ನಾನಕ್ಕೆ ತೆರಳಿದ್ದರು. ಸಂಕದಗುಂಡಿ ಹೊಳೆಯ ಆಳ ಇರುವ ಜಾಗದಲ್ಲಿ ಈಜಲು ತೆರಳಿದ ಕಾರಣ ನೀರಿನ ಆಳ ತಿಳಿಯದೆ ಮುಳುಗಿದ್ದಾನೆ. ತಕ್ಷಣ ಇನ್ನೊಬ್ಬ ಸಹೋದರ ಮನೆಯವರಿಗೆ ವಿಷಯ ತಿಳಿಸಿದ್ದು, ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಈತನನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ಈ ಹಿಂದೆ ಕೂಡ ಈ ಹೊಳೆಯಲ್ಲಿ ಅನೇಕ ಬಾರಿ ಅವಘಡ ನಡೆದಿತ್ತು. ಮೃತ ಬಾಲಕನ ತಂದೆ ತಾಯಿ ಗುಜರಾತ್‌ನಲ್ಲಿ ಸಣ್ಣ ವ್ಯವಹಾರ ನಡೆಸುತ್ತಿದ್ದು, ಆಯುಷ್ ಅಲ್ಲಿಯೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಯಾಗಿದ್ದಾನೆ. ತಾಯಿ ಹಾಗೂ ಇನ್ನೋರ್ವ ಸಹೋದರ ಸೇರಿ ಒಟ್ಟು 7 ಜನ ಪ್ರವಾಸಕ್ಕೆ ಹೊರಟಿದ್ದರು. ನದಿಯಲ್ಲಿ ಆಳ ಇರುವ ಕಾರಣ ಅಗ್ನಿಶಾಮಕ ದಳ ಮತ್ತು ಸ್ಥಳೀಯರ ಸುಮಾರು ಒಂದು ಗಂಟೆಗಳ ಕಾಲ ಶೋಧ ಕಾರ್ಯದ ನಂತರ ಶವವನ್ನು ನೀರಿನಿಂದ ಮೇಲಕ್ಕೆತ್ತಲಾಯಿತು. ಬೈಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಕನ ಮೃತದೇಹ ಪತ್ತೆ : ಮೂವರು ಪೊಲೀಸ್ ವಶಕ್ಕೆ



ಮೃತ: ಯತೀಶ

ಬೆಳ್ತಂಗಡಿ: ಗುರುವಾಯನಕೆರೆ ಸನಿಹದಲ್ಲಿ ಅಸಹಜ ಸ್ಥಿತಿಯಲ್ಲಿ ವ್ಯಕ್ತಿಯ ಮೃತದೇಹ ಪತ್ತೆಯಾದ ಪ್ರಕರಣ ಒಂದು ಕೊಲೆ ಪ್ರಕರಣ ಎಂಬುದು ಪೊಲೀಸ್ ತನಿಖೆಯಲ್ಲಿ ಬಹಿರಂಗಗೊಂಡಿದ್ದು ಯತೀಶ್‌ನನ್ನು ಕೊಲೆ ಮಾಡಿದ ಮೂವರು ಆರೋಪಿಗಳನ್ನು ಬೆಳ್ತಂಗಡಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕೊಲೆ ಪ್ರಕರಣದ ಆರೋಪಿಗಳು ಬೆಳ್ತಂಗಡಿ ಮಿತ್ತಬಾಗಿಲು ನಿವಾಸಿ ಯಶೋಧರ (35), ಕಡಬ ಚಾರ್ವಾಕ ನಿವಾಸಿ ಮೋಹನ್ (30) ಹಾಗೂ ಬೆಳ್ತಂಗಡಿ ಪಡಂಗಡಿ ನಿವಾಸಿ ಇಬ್ರಾಹಿಂ (54) ಎಂಬವರಾಗಿದ್ದಾರೆ. ಜೂ. 1ರಂದು ಬೆಳಿಗ್ಗೆ ಬಂಟ್ವಾಳ ತಾಲೂಕಿನ ಪೆರ್ನೆ ನಿವಾಸಿ ಯತೀಶ್ ಎಂಬಾತನ ಮೃತದೇಹ ಬೆಳ್ತಂಗಡಿ ಗುರುವಾಯನಕೆರೆ, ಅಲಾದಿಕೊಟ್ಟಿಗೆ ಎಂಬಲ್ಲಿ ಪತ್ತೆಯಾಗಿತ್ತು. ಘಟನೆಯ ಬಗ್ಗೆ ತನಿಖೆ ಆರಂಭಿಸಿದ ಬೆಳ್ತಂಗಡಿ ಪೊಲೀಸರು ಸ್ಥಳದಲ್ಲಿರುವ ಸಿಸಿಟಿವಿಗಳನ್ನು ಪರಿಶೀಲಿಸಿದಾಗ, ಯತೀಶನಿಗೆ ಯಶೋಧರ, ಮೋಹನ್ ಹಾಗೂ ಇಬ್ರಾಹಿಂ ಹಲ್ಲೆ ಮಾಡುತ್ತಿರುವುದು ಕಂಡುಬಂದಿದ್ದು, ಆರೋಪಿಗಳ ಹಲ್ಲೆಯಿಂದಾಗಿ ಯತೀಶ ಮೃತಪಟ್ಟಿರುವುದಾಗಿ ಅನುಮಾನಿಸಲಾಗಿದ್ದು ಪೊಲೀಸರು ಕೂಡಲೇ ಮೂವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಅಪ್ರಾಪ್ತ ವಯಸ್ಸಿನ ಬಾಲಕಿ ಆತ್ಮಹತ್ಯೆ

ಬೆಳ್ತಂಗಡಿ : ಅಪ್ರಾಪ್ತ ವಯಸ್ಸಿನ ಬಾಲಕಿಯೋರ್ವಳು ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಳ್ತಂಗಡಿ ತಾಲೂಕಿನ ಉಜಿರೆಯ ಶಿವಾಜಿನಗರದಲ್ಲಿ ಜೂ.1 ರಂದು ಬೆಳಗ್ಗೆ ನಡೆದಿದೆ. ಉಜಿರೆಯ ಖಾಸಗಿ ಶಾಲೆಯ 9 ನೇ ತರಗತಿಯ ವಿದ್ಯಾರ್ಥಿನಿ ಶಾಲೆಗೆ ಹೊರಡುವ ವೇಳೆ ಈ ಘಟನೆ ನಡೆದಿರುವುದಾಗಿ ತಿಳಿದು ಬಂದಿದ್ದು ಆತ್ಮಹತ್ಯೆಗೆ ಕಾರಣವೇನು ಎಂಬುದು ತಿಳಿದುಬಂದಿಲ್ಲ. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಆತ್ಮಹತ್ಯೆ ಪ್ರಕರಣ ದಾಖಲಾಗಿದೆ.

ರೈಲಿನಲ್ಲಿ ಸಾಗಿಸುತ್ತಿದ್ದ 300 ಪ್ಯಾಕೆಟ್ ತಂಬಾಕು ಉತ್ಪನ್ನ ವಶ

ಕಾಸರಗೋಡು: ಕಾಸರಗೋಡು ರೈಲ್ವೆ ಪೊಲೀಸ್ ಠಾಣೆಯ ಎಸ್‌ಐ ಸುನೀಲ್ ಕುಮಾರ್ ನೇತೃತ್ವದ ಪೊಲೀಸರ ತಂಡವು ಭಾನುವಾರ ಸಂಜೆ ನಡೆಸಿದ ಕಾರ್ಯಾಚರಣೆಯಲ್ಲಿ ರೈಲಿನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಕೇರಳದಲ್ಲಿ ನಿಷೇಧ ಹೇರಲಾಗಿರುವ 300 ಪ್ಯಾಕೆಟ್ ತಂಬಾಕು ಉತ್ಪನ್ನಗಳನ್ನು ಪತ್ತೆಹಚ್ಚಿ ವಶಪಡಿಸಿಕೊಂಡಿದೆ. ಇದಕ್ಕೆ ಸಂಬಂಧಿಸಿ ಹೊಸದುರ್ಗ ಕೊಳವಯಲ್‌ನ ಅಶ್ರಫ್ ಪಾಲಾಯಿ (43) ಎಂಬಾತನ ವಿರುದ್ಧ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಮಂಗಳೂರಿನಿಂದ ತಿರುವನಂತಪುರಕ್ಕೆ ತೆರಳುತ್ತಿದ್ದ ಮಾವೇಲಿ ಎಕ್ಸ್‌ಪ್ರೆಸ್ ರೈಲನ್ನು ತಪಾಸಣೆ ನಡೆಸಿದಾಗ ಅದರಲ್ಲಿ ತಂಬಾಕು ಉತ್ಪನ್ನ ಪತ್ತೆಹಚ್ಚಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳಲ್ಲಿ ಮಕ್ಕಳಿಗೆ ವಿವಿಧ ರೀತಿಯ ಸ್ವಾಗತ | ಸಿಹಿ ತಿಂಡಿ ವಿತರಣೆ

ಶಾಲಾರಂಭ: ಪುಟಾಣಿಗಳ ಸಂಭ್ರಮ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಸೋಮವಾರ ಶಾಲಾರಂಭದ ಸಂಭ್ರಮ ಕಳೆಗಟ್ಟಿತ್ತು.

ಬೇಸಿಗೆ ರಜೆ ಮುಗಿಸಿದ ಮಕ್ಕಳು ಮತ್ತೆ ಶಾಲೆಯತ್ತ ಹೆಜ್ಜೆ ಹಾಕಿದರು. ಬಹುತೇಕ ಮಕ್ಕಳು ಖುಷಿಯಿಂದ ಶಾಲೆಯತ್ತ ಬಂದರೆ, ರಜೆಯ ಮಜಾ ಇನ್ನು ಸಿಗದು ಎಂಬ ಬೇಸರದಿಂದಲೇ ಕೆಲವು ಮಕ್ಕಳು ಶಾಲೆಯತ್ತ ಮುಖ ಮಾಡಿದ್ದರು. ಬಣ್ಣ ಬಳಿದು, ತಳಿರು ತೋರಣಗಳಿಂದ ಸಿಂಗಾರಗೊಂಡ ಶಾಲೆಗಳಲ್ಲಿ ಶಿಕ್ಷಕರು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರು ವಿದ್ಯಾರ್ಥಿಗಳನ್ನು ಎದಿರುಗೊಂಡರು.

ಮಕ್ಕಳಿಗೆ ಆರತಿ ಬೆಳಗಿ, ಪನ್ನೀರ ಸಿಂಚನ, ಹೂವು ನೀಡಿ ಶಾಲೆಗೆ ಸ್ವಾಗತಿಸಲಾಯಿತು. ಬಹುತೇಕ ಶಾಲೆಗಳಲ್ಲಿ ಹಬ್ಬದ ಸಡಗರ ಮನೆಮಾಡಿತ್ತು. ಬಲೂನು ಹಾರಿಸಿ, ಮೆರವಣಿಗೆ, ಜಾಥಾ ನಡೆಸಿ ಮೊದಲ ದಿನ ಮಕ್ಕಳಿಗೆ ಸಂತಸದ ವಾತಾವರಣ ಕಲ್ಪಿಸಲಾಯಿತು. ಮೊದಲ ದಿನ ರಜೆಯ ದಿನಗಳ ಬಗ್ಗೆ ಮಕ್ಕಳು ಪರಸ್ಪರ ಸಂತಸದ ಸಮಯಗಳನ್ನು ವಿನಿಮಯ ಮಾಡಿಕೊಂಡರು. ಮೊದಲ ಬಾರಿ ಶಾಲೆಯ ಮೆಟ್ಟಿಲು ಹತ್ತಿದ ಒಂದನೇ ತರಗತಿ ಮಕ್ಕಳು ಖುಷಿ ಮತ್ತು ಅವ್ಯಕ್ತ ಭಯದೊಂದಿಗೆ ಶಾಲೆಗೆ ಬಂದಿದ್ದರು. ಮಕ್ಕಳನ್ನು ಬರಮಾಡಿಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಶೇಷ ಸಿದ್ಧತೆ ನಡೆಸಿತ್ತು.

ಶಾಲಾ ಆರಂಭದ ಮೊದಲ ದಿನವೇ ಪ್ರತಿ ಶಾಲೆಯಲ್ಲಿ ಪೋಷಕರ- ಶಿಕ್ಷಕರ ಸಭೆ ನಡೆಯಿತು. ಪೋಷಕರು ಸಭೆಯಲ್ಲಿ ವಿವಿಧ ಸಲಹೆ ಸೂಚನೆ ನೀಡಿದರು. ಎಲ್ಲ ಶಾಲೆಗಳಲ್ಲಿ ಶಾಲಾರಂಭದ ದಿನವೇ ಬಿಸಿಯೂಟ ಆರಂಭಗೊಂಡಿತು. ಮೊದಲ ದಿನ ಸಿಹಿಯೂಟ ಬಡಿಸಲಾಯಿತು. ಎಲ್ಲ ಸರಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರವನ್ನೂ ವಿತರಿಸಲಾಯಿತು.

ಆಂಗ್ಲ ಮಾಧ್ಯಮ ಆರಂಭ

ದಕ್ಷಿಣ ಕನ್ನಡ ಜಿಲ್ಲೆಯ1014 ಸರಕಾರಿ ಶಾಲೆಗಳಲ್ಲಿ ಸೋಮವಾರ ಒಂದರಿಂದ ಐದನೇ ತರಗತಿವರೆಗೆ ಕನ್ನಡದ ಜತೆ ಆಂಗ್ಲಮಾಧ್ಯಮ ಆರಂಭಗೊಂಡಿತು. ಆಂಗ್ಲ ಮಾಧ್ಯಮಕ್ಕಾಗಿ ಶಾಲಾ ಶಿಕ್ಷಕರ ಜತೆ ಅತಿಥಿ ಶಿಕ್ಷಕರನ್ನೂ ನೇಮಿಸಿಕೊಳ್ಳಲಾಗಿದೆ.



ಜಿಲ್ಲೆಯ ಸರಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇಲ್ಲ

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಸೇರಿದಂತೆ ಒಟ್ಟು 1054 ಶಾಲೆಗಳಲ್ಲಿ ಸೋಮವಾರ ಶಾಲಾ ಪ್ರಾರಂಭೋತ್ಸವ ನೆರವೇರಿದೆ. ಎಲ್ಲ ಶಾಲೆಗಳಲ್ಲಿ ಬಿಸಿಯೂಟ ಆರಂಭಿಸಲಾಗಿದೆ. ಸಮವಸ್ತ್ರ, ಪಠ್ಯಪುಸ್ತಕ ವಿತರಿಸಲಾಗಿದೆ. ಅತಿಥಿ ಶಿಕ್ಷಕರ ನೇಮಕಾತಿ ಆದೇಶ ಮೂರು ದಿನದ ಹಿಂದೆಯೇ ಬಂದಿದ್ದು, ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 1265 ಮಂದಿ, ಪ್ರೌಢಶಾಲೆಗಳಲ್ಲಿ 320 ಮಂದಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದ್ದು, ಸೋಮವಾರ ಅವರೆಲ್ಲರೂ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಜಿಲ್ಲೆಯ ಯಾವುದೇ ಸರಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇಲ್ಲ ಎಂದು ಡಿಡಿಪಿಐ ಶಶಿಧರ ಜಿ.ಎಸ್. ತಿಳಿಸಿದ್ದಾರೆ.

ಚೇತನಾ ಬಾಲವಿಕಾಸ ಕೇಂದ್ರ, ವಿಶೇಷ ಮಕ್ಕಳ ಶಾಲೆ



ಮಂಗಳೂರು: ಸೇವಾಭಾರತಿ ಸಂಸ್ಥೆಯ ಅಂಗಸಂಸ್ಥೆಯಾದ ವಿ.ಟಿ. ರಸ್ತೆಯಲ್ಲಿರುವ ಚೇತನಾ ಬಾಲ ವಿಕಾಸ ಕೇಂದ್ರ ವಿಶೇಷ ಮಕ್ಕಳ ಶಾಲೆಯ 2026-27ನೇ ನೂತನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವವು ಸೋಮವಾರ ಜರುಗಿತು. ನಾದಸ್ವರ ಹಾಗೂ ಚೆಂಡೆ ವಾದನಗಳೊಂದಿಗೆ ವಿಠೋಭಾ ದೇವಸ್ಥಾನದಿಂದ ಚೇತನಾ ಶಾಲೆಯವರೆಗೆ ನಡೆದ ಆಕರ್ಷಕ ಮೆರವಣಿಗೆಯಲ್ಲಿ ಭಿನ್ನ ಸಾಮರ್ಥ್ಯದ ಮಕ್ಕಳು, ಪೋಷಕರು ಬಹಳ ಉತ್ಸಾಹದಿಂದ ಪಾಲ್ಗೊಂಡಿದ್ದರು. ಮುಖ್ಯಅತಿಥಿಯಾಗಿದ್ದ ದಾನಿಗಳಾದ ರಾಧಾಧರ್ಮರಾಜ್ ಅವರು ಶಾಲಾ ಆವರಣದ ಬಾಗಿಲನ್ನು ರಿಬ್ಬನ್ ಬಿಡಿಸಿ ತೆರೆದು ಮಕ್ಕಳನ್ನು ಶಾಲೆಗೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯಿನಿ ಸುಪ್ರೀತಾ, ಸೇವಾ ಭಾರತಿ ಸಂಸ್ಥೆಯ ವಿಶ್ವಸ್ಥರಾದ ಗಜಾನನ ಪೈ, ಹಿರಿಯ ಸ್ವಯಂಸೇವಕರಾದ ಉಮೇಶ್ ಶೆಣೈ ಹಾಗೂ ಇತರ ವಿಶ್ವಸ್ಥರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕಿ ಚಂಪಾ ಅವರು ನಡೆಸಿಕೊಟ್ಟರು. ತದನಂತರ, ಶಾಲಾ ಶಿಕ್ಷಕಿಯರು ಮಕ್ಕಳಿಗೆ ಆರತಿ ಬೆಳಗಿ, ತಿಲಕ ಇಟ್ಟು, ಸಿಹಿತಿಂಡಿ ನೀಡುವುದರ ಮೂಲಕ ಸಾಂಪ್ರದಾಯಿಕವಾಗಿ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಸೇವಾ ಭಾರತಿ ಸಂಸ್ಥೆಯ ಸ್ವಯಂ ಸೇವಕರು, ಕಚೇರಿ ಸಿಬ್ಬಂದಿ, ಶಾಲಾ ಶಿಕ್ಷಕಿಯರು ಹಾಗೂ ಶಿಕ್ಷಕೇತರರು, ಸಿಬ್ಬಂದಿ ವರ್ಗದವರು, ಪೋಷಕರು ಭಾಗವಹಿಸಿದ್ದರು.

ಅರಿಶಿನ-ಕುಂಕುಮದ ಹಸ್ತದ ಅಚ್ಚು, ಅದ್ದೂರಿ ಮೆರವಣಿಗೆ

ಉಡುಪಿ: ಸಾಂಪ್ರದಾಯಿಕ ಸ್ವಾಗತ

ಉಡುಪಿ: ತಾಲೂಕಿನ ದೊಡ್ಡಣಗುಡ್ಡೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹೊಸಶೈಕ್ಷಣಿಕವರ್ಷದಪ್ರಾರಂಭೋತ್ಸವವು ಅತ್ಯಂತ ಸಾಂಪ್ರದಾಯಿಕ ಹಾಗೂ ಆಕರ್ಷಕ ಶೈಲಿಯಲ್ಲಿ ಜರುಗಿತು. ಮಕ್ಕಳನ್ನು ಶಾಲೆಗೆ ಸೆಳೆಯುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ವಿಭಿನ್ನ ಕಾರ್ಯಕ್ರಮವು ಸಾರ್ವಜನಿಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಶಾಲಾ ಆರಂಭದ ಮೊದಲ ದಿನವಾದ ಸೋಮವಾರವಿದ್ಯಾರ್ಥಿಗಳನ್ನುಮೊದಲು ಅದ್ದೂರಿ ಜಾಥಾದ ಮೂಲಕ ಅತ್ಯಂತ ಸಡಗರದಿಂದ ಶಾಲೆಗೆ ಕರೆತರಲಾಯಿತು. ಬಳಿಕ ಗಣ್ಯರ ಉಪಸ್ಥಿತಿಯಲ್ಲಿ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ತರಗತಿ ಕೋಣೆಯೊಳಗೆ ಪ್ರವೇಶಿಸುವ ಮುನ್ನ ಶಾಲಾ ಶಿಕ್ಷಕಿಯರು ವಿದ್ಯಾರ್ಥಿಗಳಿಗೆ ಆರತಿ ಎತ್ತಿ, ಪ್ರೀತಿಯಿಂದ ಸ್ವಾಗತಿಸಿದ್ದು ವಿಶೇಷವಾಗಿತ್ತು.

ಗಮನ ಸೆಳೆದ ಅರಿಶಿನ-ಕುಂಕುಮದ ಹಸ್ತದ ಅಚ್ಚು

ಪ್ರಾರಂಭೋತ್ಸವದ ಪ್ರಮುಖ ಆಕರ್ಷಣೆಯಾಗಿ, ಆಗಮಿಸಿದ ಎಲ್ಲಾ ಪುಟ್ಟ ಮಕ್ಕಳ ಹಸ್ತಗಳನ್ನು ಅರಿಶಿನ ಮತ್ತು ಕುಂಕುಮದಪವಿತ್ರ ನೀರಿನಲ್ಲಿ ಅದ್ದಿ, ಶಾಲಾ ಗೋಡೆಯ ಮೇಲೆ ಹಾಕಲಾಗಿದ್ದ ಬಿಳಿ ಹಾಳೆಯ ಮೇಲೆ ಅಚ್ಚೊತ್ತಿಸಲಾಯಿತು. ಮಕ್ಕಳ ಈ ಹಸ್ತದ ಮುದ್ರೆಗಳು ಶಾಲಾ ಆವರಣಕ್ಕೆ ಹೊಸ ಕಳೆಯನ್ನು ತಂದುಕೊಟ್ಟವು. ಸಭಾ ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಇದೇ ವೇಳೆ ಶಾಲೆಯಲ್ಲಿ ಸಿದ್ಧಪಡಿಸಲಾಗಿದ್ದ ಆಕರ್ಷಕ ಸೆಲ್ಫಿ ಕಾರ್ನರ್‌ನಲ್ಲಿ ಮಕ್ಕಳು ಅತ್ಯಂತ ಖುಷಿಯಿಂದ ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು.

ಸಮಾರಂಭದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ಜಾಹಿದಾ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರೋಹಿತ್ ಕರಂಬಳ್ಳಿ, ನಿಕಟಪೂರ್ವ ಅಧ್ಯಕ್ಷ ಪರೀಕ್ಷಿತ್ ಶೇಟ್, ಶಾಲೆಯ ಪ್ರಮುಖ ಕೊಡುಗೈ ದಾನಿ ಕೆ.ಎಂ. ಉಡುಪ ಅವರ ಪತ್ನಿ ಶಾಂತಾ ಉಡುಪ, ಜಯಂಟ್ಸ್ ಗ್ರೂಪ್ ಅಧ್ಯಕ್ಷ ವಿನಯಕುಮಾರ್ ಪೂಜಾರಿ, ಗೃಹ ಮಂಡಳಿ ಅಧ್ಯಕ್ಷ ಸುಬ್ರಮಣ್ಯ ಶೇರಿಗಾರ್, ಸದಸ್ಯ ರಾಮ್ ಭಟ್ ಹಾಗೂ ಒನ್ ಗುಡ್ ಸ್ಟೆಪ್ ಸಂಸ್ಥೆಯ ಸೃಜನ ಉಪಸ್ಥಿತರಿದ್ದರು.

ಶಾಲೆಯ ಮುಖ್ಯ ಶಿಕ್ಷಕಿ ನಿರ್ಮಲಾ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಶಿಕ್ಷಕಿ ರಮಣಿ ಧನ್ಯವಾದ ಸಮರ್ಪಿಸಿದರು.



ಮುಚ್ಚುವ ಹಂತದಲ್ಲಿದ್ದ ಶಾಲೆಗೆ ಮರುಜೀವ

ಕೇವಲ 9 ವಿದ್ಯಾರ್ಥಿಗಳಿದ್ದು, ಇನ್ನೇನು ಮುಚ್ಚುವ ಹಂತಕ್ಕೆ ತಲುಪಿದ್ದ ಈ ಸರ್ಕಾರಿ ಶಾಲೆಯ ಚಿತ್ರಣವನ್ನು ಮುಖ್ಯ ಶಿಕ್ಷಕಿ ನಿರ್ಮಲಾ ಅವರು ಸಂಪೂರ್ಣವಾಗಿ ಬದಲಾಯಿಸಿದ್ದಾರೆ. ಅವರು ಶಾಲೆಗೆ ಅಧಿಕಾರ ವಹಿಸಿಕೊಂಡ ಬಳಿಕ ಪೋಷಕರ ಮನೆ ಮನೆಗೆ ಭೇಟಿ ನೀಡಿ, ಸರ್ಕಾರಿ ಶಾಲೆಯ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಿದ್ದರು. ಅವರ ಅವಿರತ ಶ್ರಮ ಹಾಗೂ ಹಳೆ ವಿದ್ಯಾರ್ಥಿ ಸಂಘದ ನಿರಂತರ ಸಹಕಾರದ ಫಲವಾಗಿ, ಈ ಬಾರಿ ಶಾಲೆಗೆ ದಾಖಲಾದ 35 ಹೊಸ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು ಮಕ್ಕಳ ಸಂಖ್ಯೆ 75 ಕ್ಕೆ ಏರಿಕೆಯಾಗಿದೆ. ಖಾಸಗಿ ಶಾಲೆಗಳಿಗೂ ಪೈಪೋಟಿ ನೀಡುವಂತೆ ಈ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಇಡೀ ಜಿಲ್ಲೆಗೆ ಮಾದರಿಯಾಗಿದೆ.

ಶಿರ್ವ: ದೇವರ ಅವಭೃತ ಹೊಳೆ ನೀರಿನಲ್ಲಿ ದನದ ಅವಶೇಷ ಪತ್ತೆ

ಶಿರ್ವ: ಇಲ್ಲಿನ ಕಲ್ಲೊಟ್ಟು ಸೇತುವೆ ಕೆಳಭಾಗದಲ್ಲಿ ಹರಿಯುವ ಪಾಪನಾಶಿನಿ ಹೊಳೆಗೆ ಕಿಡಿಗೇಡಿಗಳು ದನದ ರುಂಡ ಹಾಗೂ ಕಳೇಬರವನ್ನು ಎಸೆದಿರುವುದು ಸೋಮವಾರ ಬೆಳಗ್ಗೆ ಪತ್ತೆಯಾಗಿದೆ.

ಹೊಳೆಯಲ್ಲಿ ದನದ ರುಂಡ ಪತ್ತೆಯಾಗುತ್ತಿದ್ದಂತೆ ಸ್ಥಳಕ್ಕೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಆಗಮಿಸಿ, ಪೊಲೀಸರಿಗೆ ಮಾಹಿತಿಯನ್ನು ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಶಿರ್ವ ಠಾಣಾ ಪಿಎಸ್‌ಐ ಮಂಜುನಾಥ್ ಮರಬದ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಕಾಪು ಪಶು ಆಸ್ಪತ್ರೆಯ ಉಪ ನಿರ್ದೇಶಕರು ಹಾಗೂ ಉಡುಪಿಯ ಜಿಲ್ಲಾ ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿಗಳು ಅವಶೇಷಗಳ ತಪಾಸಣೆ ನಡೆಸಿದಾಗ, ಹೊಳೆಯ ದಕ್ಷಿಣ ಬದಿಯ ನೀರಿನಲ್ಲಿ ಚರ್ಮ ರಹಿತವಾದ, ಹಲ್ಲು ಮತ್ತು ಮೂಗಿನ ಹೊಳ್ಳೆಗಳನ್ನೊಳಗೊಂಡ ಜಾನುವಾರಿನ ತಲೆಯ ಮೇಲ್ದವಡೆಯ ಭಾಗ ಪತ್ತೆಯಾಗಿದೆ. ಇದು ಹಸುವಿನ ತಲೆಯ ಭಾಗವಾಗಿರಬಹುದು ಎಂದು ಪಶು ವೈದ್ಯಾಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೆ, ಸ್ವಲ್ಪ ದೂರದ ನೀರಿನಲ್ಲಿ ಜಾನುವಾರಿನ ಕಾಲಿನ ಎರಡು ಗೊರಸುಗಳು, ಮಾಂಸದ ಮುದ್ದೆ ಹಾಗೂ ಹೊಟ್ಟೆಯ ಒಳಗಿನ ತ್ಯಾಜ್ಯ ಭಾಗಗಳು ಪತ್ತೆಯಾಗಿದ್ದು, ಇವು ಕೂಡ ಹಸುವಿನದ್ದೇ ಅವಶೇಷಗಳು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಈ ಕುರಿತು ಶಿರ್ವ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ (ಪಿಎಸ್‌ಐ) ಮಂಜುನಾಥ ಮರಬದ ಅವರು ನೀಡಿದ ದೂರಿನ ಮೇರೆಗೆ, ಆರೋಪಿಗಳ ವಿರುದ್ಧ ಶಿರ್ವ ಠಾಣೆಯಲ್ಲಿ ಕಾನೂನು ಕ್ರಮ ಕೈಗೊಂಡು ತನಿಖೆ ಮುಂದುವರಿಸಲಾಗಿದೆ.

ರುಂಡ ಪತ್ತೆಯಾದ ಸ್ಥಳದಿಂದ 100 ಮೀ ದೂರದಲ್ಲಿ ಶಿರ್ವ ವಿಷ್ಣುಮೂರ್ತಿ ದೇವರು, ಸೂಡ ಸುಬ್ರಹ್ಮಣ್ಯ ದೇವರ ಜಳಕವೂ ನಡೆಯುತ್ತದೆ. ಮಟ್ಟಾರು ಗಣೇಶೋತ್ಸವ ಸಮಿತಿಯ ಗಣೇಶ ವಿಸರ್ಜನೆ ಸೇರಿದಂತೆ ಅನೇಕ ವಿಗ್ರಹಗಳನ್ನು ಇದೇ ಹೊಳೆಯಲ್ಲಿ ವಿಸರ್ಜನೆ ಮಾಡಲಾಗುತ್ತದೆ.



ಬಕ್ರೀದ್ ಆಚರಣೆಯಲ್ಲಿ ಗೋ ಹತ್ಯೆ ನಡೆಯುತ್ತದೆ. ಈ ಬಗ್ಗೆ ಜಿಲ್ಲಾ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕೆಂದು ಈ ಹಿಂದೆಯೇ ಮನವಿ ಮಾಡಲಾಗಿತ್ತು. ಆದರೆ ದೇವರ ಜಳಕದ ಹೊಳೆಯಲ್ಲಿ ಗೋವಿನ ಕಳೇಬರ ದೊರಕಿರುವುದು ಖಂಡನಾರ್ಹ. ಇಲಾಖೆ ಈ ಬಗ್ಗೆ ತನಿಖೆ ನಡೆಸಿ, ಆರೋಪಿಗಳನ್ನು ಶೀಘ್ರವಾಗಿ ಪತ್ತೆ ಹಚ್ಚಬೇಕು.

■ ಉಮೇಶ್ ನಾಯ್ಕ್ ಸೂಡ, ಹಿಂಜಾವೇ ಮುಖಂಡ

ಕಾರ್ಕಳ ಆನೆಕೆರೆಯಲ್ಲಿ ಹುಟ್ಟಿ ಮೂರು ತಾಲೂಕುಗಳನ್ನು ಹಾದು ಹೋಗುವ ಪವಿತ್ರ ನದಿ ಪಾಪನಾಶಿನಿ ಹೊಳೆ. ಈ ಹೊಳೆಯಲ್ಲಿ 5 ದೇವರುಗಳು ವರ್ಷವು ಜಾತ್ರಾ ಮಹೋತ್ಸವದ ವೇಳೆ ಜಳಕಕ್ಕೆ ಬರುತ್ತಾರೆ. ಆದರೆ ಇಂತಹ ಪವಿತ್ರ ನದಿಗೆ ಗೋವಿನ ಕಳೇಬರವನ್ನು ಎಸೆದಿರುವುದನ್ನು ಸಹಿಸಲು ಸಾಧ್ಯವಿಲ್ಲ. ಇಲಾಖೆ ತಕ್ಷಣ ಜಾಗೃತವಾಗಿ ಆರೋಪಿಗಳನ್ನು ಬಂಧಿಸಬೇಕು.

■ ಗುಂಡು ಭಟ್ರು, ಸ್ಥಳೀಯರು

ಕಾಸರಗೋಡು ಜಿಲ್ಲಾ ಪಂಚಾಯತ್ ನೇತೃತ್ವದಲ್ಲಿ ಶಾಲಾ ಪ್ರವೇಶೋತ್ಸವ, ವಿಜಯೋತ್ಸವ

ಕಾಸರಗೋಡು: ಕಾಸರಗೋಡು ಜಿಲ್ಲಾ ಪಂಚಾಯತ್‌ನ ಆಶ್ರಯದಲ್ಲಿ ಚಾಯೋತ್ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಸೋಮವಾರ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಶಾಲಾ ಪ್ರವೇಶೋತ್ಸವ ಮತ್ತು ವಿಜಯೋತ್ಸವವು ಸಂಭ್ರಮ ಸಡಗರಗಳೊಂದಿಗೆ ಹಾಗೂ ವಿಜೃಂಭಣೆಯಿಂದ ಜರಗಿತು.

ಗೋಡೆಯ ಮೇಲೆ ಅಕ್ಷರಗಳನ್ನು ಬರೆದು ಶಾಲಾ ಅಂಗಳವನ್ನು ಬಲೂನ್‌ಗಳಿಂದ ಅಲಂಕರಿಸಿ ಸಿಹಿತಿಂಡಿಗಳೊಂದಿಗೆ ಹಬ್ಬದ ವಾತಾವರಣದಲ್ಲಿ ಶಾಲಾ ಪ್ರವೇಶೋತ್ಸವವನ್ನು ನಡೆಸಲಾಯಿತು. ಹೊಸ ಶೈಕ್ಷಣಿಕ ವರ್ಷಕ್ಕೆ ಪ್ರವೇಶಿಸುವ ನವಾಗತ ಮಕ್ಕಳನ್ನು ಸ್ವಾಗತಿಸುವುದರ ಜೊತೆಗೆ ಶಾಲೆ ಮತ್ತು ಹೆಚ್ಚಿನ ಯಶಸ್ಸನ್ನು ಸಾಧಿಸಿದ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಪುರಸ್ಕರಿಸಲಾಯಿತು.

ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕ್ಕಾಪಿಲ್ ಸಮಾರಂಭವನ್ನು ಉದ್ಘಾಟಿಸಿ, ಮಕ್ಕಳಿಗೆ ಶುಭಹಾರೈಸಿ ಮಾತನಾಡಿದರು. ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಅಧ್ಯಕ್ಷತೆ ವಹಿಸಿದ್ದರು. ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಮಂದಿ ವಿದ್ಯಾರ್ಥಿಗಳು ಹಾಜರಾಗಿ ಉತ್ತೀರ್ಣರಾದ ಜಿಲ್ಲೆಯ ಅತ್ಯುತ್ತಮ ಸರಕಾರಿ ಶಾಲೆಗಾಗಿ ಜಿಲ್ಲಾ ಪಂಚಾಯತ್ ನೀಡುವ ಪ್ರಶಸ್ತಿಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಕಾರ್ಯಕ್ರಮದಲ್ಲಿ ಚಾಯೋತ್ ಜಿಎಚ್‌ಎಸ್‌ಎಸ್‌ಗೆ ಪ್ರದಾನ ಮಾಡಿದರು. ಪ್ಲಸ್ ಟು ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಪಡೆದ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿಗಳು ಬಹುಮಾನಗಳನ್ನು ವಿತರಿಸಿ ಶುಭಕೋರಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಪಡೆದ ವಿದ್ಯಾರ್ಥಿಗಳನ್ನು ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕ್ಕಾಪಿಲ್ ಸನ್ಮಾನಿಸಿದರು. ನಂತರ ಜಿಲ್ಲಾ ಪಂಚಾಯತ್ ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಮನು ಅವರು ನೂತನ ವಿದ್ಯಾರ್ಥಿಗಳಿಗೆ ಅಧ್ಯಯನ ಕಿಟ್‌ಗಳನ್ನು ನೀಡಿದರು. ಶಾಲೆಯ ಮಕ್ಕಳು ಪ್ರದರ್ಶಿಸಿದ ಸ್ವಾಗತ ನೃತ್ಯವು ಆಕರ್ಷಕವಾಗಿ ಮೂಡಿಬಂತು.



ಪ್ರಸಿದ್ಧ ನಾಟಕ ಮತ್ತು ಜಾನಪದ ಗೀತೆ ಕಲಾವಿದ ಸತೀಶನ್ ವೇಲುತ್ತೋಳಿ ಮಕ್ಕಳೊಂದಿಗೆ ಸಂವಾದ ನಡೆಸಿದರು. ಜನಪ್ರತಿನಿಧಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಇದೇ ವೇಳೆ ಎಲ್‌ಎಸ್‌ಎಸ್, ಯುಎಸ್‌ಎಸ್ ಮತ್ತು ಎನ್‌ಎಂಎಂಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮಕ್ಕಳನ್ನು ಪುರಸ್ಕರಿಸಲಾಯಿತು.

ಗ್ರಾಮ ಪಂಚಾಯತ್ ಅಧ್ಯಕ್ಷ ಎಂ.ರಾಜನ್, ಗ್ರಾಮ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಎನ್.ಟಿ.ಶ್ಯಾಮಲಾ, ಎಸ್‌ಎಸ್‌ಕೆ ಜಿಲ್ಲಾ ಸಂಯೋಜಕ ಬಿಜುರಾಜ್, ವಿದ್ಯಾಕಿರಣಂ ಜಿಲ್ಲಾ ಸಂಯೋಜಕ ಪಿ.ಪ್ರಕಾಶನ್, ಬಿಪಿಸಿ ಶೈಜು ಬಿರಿಕುಳಂ, ಶಾಲಾ ಮುಖ್ಯ ಶಿಕ್ಷಕ ಸುನೀಲ್ ಕುಮಾರ್ ಎಂ., ಪಿಟಿಎ ಅಧ್ಯಕ್ಷ ಪಿ.ಮನೋಹರನ್, ಎಸ್‌ಎಂಸಿ ಅಧ್ಯಕ್ಷ ಕೆ.ಸತ್ಯನ್, ಎಂಪಿಟಿಎ ಅಧ್ಯಕ್ಷೆ ಧನ್ಯಾ ಪಿ., ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಕುಮಾರನ್, ಆಚರಣಾ ಸಮಿತಿ ಸಂಚಾಲಕ ಕೆ.ಕೆ.ಶಶಿ, ಶಾಲಾ ನಾಯಕಿ ಶಿವಾನಂದ ಎಸ್. ತಂಬಾನ್ ಮಾತನಾಡಿದರು. ಶಾಲಾ ಪ್ರಾಂಶುಪಾಲೆ ಸೀಮಾ ಕೆ.ಟಿ. ಸ್ವಾಗತಿಸಿ, ಸಿಬ್ಬಂದಿ ಕಾರ್ಯದರ್ಶಿ ಸುನೀಲ್‌ಕುಮಾರ್ ಪಿ.ವಿ. ವಂದಿಸಿದರು.

» ಗೋಡೆಯ ಮೇಲೆ ಅಕ್ಷರಗಳನ್ನು ಬರೆದು ಶಾಲಾ ಅಂಗಳವನ್ನು ಬಲೂನ್ ಗಳಿಂದ ಅಲಂಕರಿಸಿ ಸಿಹಿತಿಂಡಿಗಳೊಂದಿಗೆ ಹಬ್ಬದ ವಾತಾವರಣದಲ್ಲಿ ಶಾಲಾ ಪ್ರವೇಶೋತ್ಸವವನ್ನು ನಡೆಸಲಾಯಿತು.

» ಪ್ಲಸ್ ಟು ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಪಡೆದ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿಗಳು ಬಹುಮಾನಗಳನ್ನು ವಿತರಿಸಿದರು.

» ಪ್ರಸಿದ್ಧ ನಾಟಕ ಮತ್ತು ಜಾನಪದ ಗೀತೆ ಕಲಾವಿದ ಸತೀಶನ್ ವೇಲುತ್ತೋಳಿ ಮಕ್ಕಳೊಂದಿಗೆ ಸಂವಾದ ನಡೆಸಿದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 33° 26°
ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 02, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಸರಕಾರದಿಂದ ಕೆಪಿಎಸ್ ಶಾಲೆಗಳ ಮಂಜೂರು: ಶಾಸಕ ಅಶೋಕ್ ರೈ


ಪುಟ 4
ಆರೋಗ್ಯ ಕೇಂದ್ರ ಮೇಲ್ದರ್ಜೆಯ ಬೇಡಿಕೆ ಮತ್ತೆ ಮುನ್ನೆಲೆಗೆ

ಚೆಂಡೆ ವಾದ್ಯ ಮೇಳದೊಂದಿಗೆ ಶಾಲಾ ಮಕ್ಕಳನ್ನು ಭರ್ಜರಿಯಾಗಿ ಸ್ವಾಗತಿಸಿದ ಶಾಲಾ ಆಡಳಿತ ಮಂಡಳಿ




ನಾಡಿನಾದ್ಯಂತ ಶಾಲಾ ಪ್ರಾರಂಭೋತ್ಸವ ಸಂಭ್ರಮದಿಂದ ನಡೆದಿದ್ದು, ವಿಟ್ಲ ಬಸವನಗುಡಿ ವಿಟ್ಠಲ್ ಜೇಸೀಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಮಕ್ಕಳನ್ನು ಆರತಿ ಬೆಳಗಿ ಚೆಂಡೆ ವಾದ್ಯ ಮೇಳದೊಂದಿಗೆ ಭರ್ಜರಿಯಾಗಿ ಸ್ವಾಗತಿಸಲಾಯಿತು. (ಚಿತ್ರ.1)ವಿಟ್ಲದ ಪಿಎಂಶ್ರೀ ಸರ್ಕಾರಿ ಪ್ರಾಥಮಿಕ ವಿಭಾಗದ ಪ್ರಾರಂಭೋತ್ಸವ ಅಂಗವಾಗಿ ಮಕ್ಕಳನ್ನು ಶಿಕ್ಷಕರು ಉಯ್ಯಾಲೆಯಲ್ಲಿ ತೂಗುವ ಮೂಲಕ ಸ್ವಾಗತಿಸಿದರು. (ಚಿತ್ರ.2)

ಸುತ್ತ ಮುತ್ತ

ಟವರಿಗೆ ಅಳವಡಿಸಿದ್ದ ಸಾವಿರಾರು ಮೌಲ್ಯದ ಬ್ಯಾಟರಿ ಕಳವು

ಬಂಟ್ವಾಳ: ಸಂಸ್ಥೆಯೊಂದರ ಟವರಿಗೆ ಅಳವಡಿಸಿದ್ದ ಸಾವಿರಾರು ರೂ. ಮೌಲ್ಯದ ಬ್ಯಾಟರಿ ಕಳವುಗೈದ ಘಟನೆ ನಾವೂರು ಗ್ರಾಮದ ಪರ್ಲ ಎಂಬಲ್ಲಿ ಬೆಳಕಿಗೆ ಬಂದಿದೆ. ಈ ಬಗ್ಗೆ ಸಂಸ್ಥೆಯ ಸೆಕ್ಯೂರಿಟಿ ಸುಪರ್ ವೈಸರ್, ಕಾವೂರು ನಿವಾಸಿ ದಿನೇಶ ಕೆ. ಬಂಟ್ವಾಳ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಪರ್ಲ ಎಂಬಲ್ಲಿ ನಿರ್ಮಿಸಲಾಗಿರುವ ಟವರಿಗೆ ವಿದ್ಯುತ್ ಬದಲಿ ವ್ಯವಸ್ಥೆಗಾಗಿ 24 ಬ್ಯಾಟರಿ ಅಳವಡಿಸಿದ್ದು, ಮೇ 31ಕ್ಕೆ ಬೆಳಗ್ಗಿನ ಜಾವ ನೆಟ್ ವರ್ಕ್ ಸಮಸ್ಯೆಯಾಗಿದ್ದು 5.30ರ ಸಮಯಕ್ಕೆ ಟವರ್ ಟೆಕ್ನಿಷಿಯನ್ ಗಣೇಶ್ ಭಟ್ ಅವರನ್ನು ಟವರ್‌ಗೆ ಕಳಿಸಿ ಪರಿಶೀಲನೆ ನಡೆಸಿದಾಗ ಕಬ್ಬಿಣದ ಕಪಾಟಿನ ಬಾಗಿಲುಗಳು ತೆರೆದ ಸ್ಥಿತಿಯಲ್ಲಿದ್ದು, ಒಳಗೆ ನೋಡಿದಾಗ 24 ಬ್ಯಾಟರಿಗಳಲ್ಲಿ 16 ಬ್ಯಾಟರಿಗಳು ಕಾಣೆಯಾಗಿರುವುದು ಗಮನಕ್ಕೆ ಬಂದಿದೆ. ಕಳವಾಗಿರುವ ಬ್ಯಾಟರಿಗಳ ಮೌಲ್ಯ 50 ಸಾವಿರ ರೂಪಾಯಿ ಎಂದು ಅಂದಾಜಿಸಲಾಗಿದೆ.

ದ್ವಿಚಕ್ರ ವಾಹನದ ಮೇಲೆ ಒಂಟಿ ಸಲಗ ದಾಳಿ: ಸವಾರ ಅಪಾಯದಿಂದ ಪಾರು

ಬೆಳ್ತಂಗಡಿ: ದಿಡುಪೆಯಲ್ಲಿ ದ್ವಿಚಕ್ರ ವಾಹನದ ಮೇಲೆ ಒಂಟಿ ಸಲಗವೊಂದು ದಾಳಿ ಮಾಡಿರುವ ಘಟನೆ ಮೇ 31 ರಂದು ರಾತ್ರಿ ನಡೆದಿದೆ. ಮಲವಂತಿಗೆ ಗ್ರಾಮದ ದಿಡುಪೆಯ ನೆಕ್ಕಿಲೊಟ್ಟು ನಾರಾಯಣ ಗೌಡ ಎಂಬುವರು ಸ್ಥಳೀಯ ಕಾರ್ಯಕ್ರಮಕ್ಕೆ ಹೋಗಿ ವಾಪಸ್ಸು ತನ್ನ ಮನೆಗೆ ದ್ವಿಚಕ್ರ ವಾಹನದೊಂದಿಗೆ ಹಿಂದಿರುಗುತ್ತಿದ್ದ ವೇಳೆ ರಾತ್ರಿ 8.45ಕ್ಕೆ ನೇಲ್ಯಡ್ಕ ರಸ್ತೆ ಬಳಿ ಒಂಟಿ ಸಲಗವೊಂದು ಎದುರಾಗಿದ್ದು ಕಾಡಾನೆ ಏಕಾಏಕಿ ವಾಹನದ ಮೇಲೆ ಎರಗಿ ಸ್ಕೂಟರ್‌ನ್ನು ಜಖಂಗೊಳಿಸಿದೆ. ಆನೆ ಎದುರಾಗುತ್ತಿದ್ದಂತೆ ಬೈಕ್ ಸವಾರ ಸ್ಥಳದಲ್ಲೇ ವಾಹನ ಬಿಟ್ಟು ಓಡಿ ಹೋಗಿ ಜೀವ ರಕ್ಷಿಸಿಕೊಂಡಿದ್ದಾರೆ.

ಮನೆ ಅಂಗಳದಲ್ಲಿ ಕಟ್ಟಿ ಹಾಕಿದ ಸಾಕುನಾಯಿ ನಿಗೂಢ ಸಾವು

ಮುಳ್ಳೇರಿಯ: ಮನೆ ಅಂಗಳದಲ್ಲಿ ಕಟ್ಟಿ ಹಾಕಲಾದ ಸಾಕುನಾಯಿಯನ್ನು ಪ್ರಾಣಿಯೊಂದು ಕಚ್ಚಿ ಕೊಂದು ಹಾಕಿದ ಘಟನೆ ನಡೆದಿದೆ. ಮುಳ್ಳೇರಿಯ ಸಮೀಪದ ನಾಟೆಕಲ್ಲು ಬಳಿಯ ಜಾಲಮೂಲೆ ಎಂಬಲ್ಲಿನ ಈ ಘಟನೆ ನಡೆದಿದೆ. ಸೋಮವಾರ ಬೆಳಗ್ಗೆ ಮನೆಮಂದಿ ಎದ್ದು ನೋಡಿದಾಗ ನಾಯಿ ಸಾವಿಗೀಡಾಗಿರುವುದು ಗೋಚರಿಸಿದೆ. ನಾಯಿಯ ದೇಹದಲ್ಲಿ ಪ್ರಾಣಿಯ ಕಡಿತದಿಂದ ಉಂಟಾದ ಗಾಯಗಳು ಕಂಡುಬಂದಿವೆ. ಈ ಬಗ್ಗೆ ಮನೆಯವರು ನೀಡಿದ ಮಾಹಿತಿಯಂತೆ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ಆರಂಭಿಸಿದ್ದಾರೆ. ಕಾರಡ್ಕ ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ಉಷಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ದ.ಕ.ದ ಗ್ರಾಮೀಣ ಭಾಗಕ್ಕೆ ವರ್ಷಧಾರೆ
ಬಿರುಗಾಳಿ ಆಪತ್ತು
ಮರಗಳು ಧರಾಶಾಹಿ, ಮನೆಗಳಿಗೆ ಹಾನಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಭಾನುವಾರ ಹಾಗೂ ಸೋಮವಾರ ಸಂಜೆ ಸುರಿದ ಬಿರುಗಾಳಿ ಸಹಿತ ಧಾರಕಾರ ಮಳೆಯಿಂದ ಇದರಿಂದ ಹಲವೆಡೆ ಮರಗಳು, ವಿದ್ಯುತ್ ಕಂಬಗಳು ಧರಾಶಾಹಿಯಾಗಿದ್ದು, ಹಲವೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ.

ಕಳೆದ 24 ಗಂಟೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳದಲ್ಲಿ 52 ಮಿಲಿ ಮೀಟರ್ ಮಳೆಯಾಗಿದ್ದು, ಬಂಟ್ವಾಳ ತಾಲೂಕಿನ ಮಂಚಿಯಲ್ಲಿ 45 ಮಿ.ಮೀ, ಬಾಳ್ತಿಲದಲ್ಲಿ 39 ಮಿಲಿ ಮೀಟರ್ ಮಳೆಯಾಗಿದೆ. ಬೆಳ್ತಂಗಡಿ ತಾಲೂಕಿನಲ್ಲೂ ಉತ್ತಮ ಮಳೆಯಾಗಿದೆ.

ಪುತ್ತೂರಿನಲ್ಲಿ ಭೀಕರ ಗಾಳಿ

ಮಳೆಗಾಲ ಅಧಿಕೃತವಾಗಿ ಆರಂಭವಾಗುವ ಜೂನ್ ತಿಂಗಳ ಮೊದಲ ದಿನವೇ ಪುತ್ತೂರಿನಲ್ಲಿ ಭಾರೀ ಗಾಳಿ ಸಹಿತ ಮಳೆಯಾಗಿದೆ. ಅಪರಾಹ್ನ 3ಕ್ಕೆ ಆರಂಭಗೊಂಡ ಗುಡುಗು, ಗಾಳಿ ಸಹಿತ ಭಾರೀ ಮಳೆ ಅರ್ಧ ಗಂಟೆಗಳ ಕಾಲ ಸುರಿದಿದೆ. ಪುತ್ತೂರು ಸಂತೆ ನಡೆಯುವ ಸೋಮವಾರ ದಿನವೂ ಆದ ಕಾರಣ ಜನಜೀವನ ಅಸ್ತವ್ಯಸ್ತಗೊಂಡಿತು. ಶಾಲಾ ಆರಂಭೋತ್ಸವವೂ ನಡೆದ ಕಾರಣ ಭಾರೀ ಮಳೆ ಮೊದಲ ದಿನವೇ ಮಕ್ಕಳಿಗೆ ಆತಂಕ ಸೃಷ್ಟಿಸಿತು. ಆದರೆ ಯಾವುದೇ ಅನಾಹುತಗಳು ಸಂಭವಿಸಿಲ್ಲ.

ಪುಟ 4



ಮುಂಗಾರು ಮಾರುತ ಮತ್ತಷ್ಟು ದುರ್ಬಲ?

ನಿರೀಕ್ಷೆಯಂತೆ ಮುಂಗಾರು ಮಾರುತಗಳ ಪ್ರವೇಶ ತಡವಾಗುತ್ತಿದ್ದು, ಅರಬ್ಬಿ ಸಮುದ್ರದಲ್ಲಿ ಮುಂಗಾರು ಮಾರುತಗಳ ಚಲನೆ ಏರ್ಪಟ್ಟಿದೆ. ಪ್ರಾರಂಭಿಕ ಹಂತದಲ್ಲಿ ಇದು ದುರ್ಬಲವಾಗುವ ಸಾಧ್ಯತೆ ಇದೆ.

ಉಡುಪಿ ಜಿಲ್ಲೆಯಲ್ಲಿ ಮೋಡದ ವಾತಾವರಣ

ಉಡುಪಿ: ಜಿಲ್ಲೆಯಾದ್ಯಂತ ಸೋಮವಾರ ಬೆಳಗ್ಗೆಯಿಂದಲೇ ಕಾರ್ಮೋಡ ಕವಿದ ವಾತಾವರಣ ವಿತ್ತಾದರೂ, ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ. ಉಡುಪಿ, ಮಣಿಪಾಲ, ಕಾಪು ಮತ್ತು ಕುಂದಾಪುರ ಸೇರಿದಂತೆ ಪ್ರಮುಖ ಭಾಗಗಳಲ್ಲಿ ಗರಿಷ್ಠ ತೇವಾಂಶದಿಂದಾಗಿ ಸೆಖೆಯ ಬೇಗೆ ಹೆಚ್ಚಾಗಿತ್ತು. ಮೋಡಗಳು ಇದ್ದರೂ ಸಾಧಾರಣ ಹನಿಗಳಷ್ಟೇ ಬಿದ್ದಿದ್ದು, ಕರಾವಳಿ ಜನತೆ ಭಾರಿ ಮಳೆಗಾಗಿ ಕಾಯುತ್ತಿದ್ದಾರೆ. ಕೃಷಿಕರು ಮುಂಗಾರು ಬಿತ್ತನೆಗೆ ಅಗತ್ಯವಿರುವ ಪೂರ್ಣ ಪ್ರಮಾಣದ ಮಳೆಯ ನಿರೀಕ್ಷೆಯಲ್ಲಿದ್ದಾರೆ.

ಮುಂಗಾರು ಪ್ರವೇಶ ತಡವಾದ ಹಿನ್ನೆಲೆ
ಬಿಳಿಯೂರು ಅಣೆಕಟ್ಟು ಗೇಟ್ ಸದ್ಯಕ್ಕೆ ತೆರೆಯಲ್ಲ!
ಇಲಾಖಾ ಇಂಜಿನಿಯರ್ ಮಾಹಿತಿ

ಉಪ್ಪಿನಂಗಡಿ: ಮಳೆಗಾಲ ಸಮೀಪಿಸಿದರೂ ಮುಂಗಾರು ಮಾರುತದ ನಿಖರತೆ ಲಭಿಸದ ಕಾರಣ ಬಿಳಿಯೂರಿನ ಅಣೆಕಟ್ಟಿನ ಗೇಟು ತೆರೆಯುವ ಪ್ರಕ್ರಿಯೆ ಮತ್ತಷ್ಟು ತಡವಾಗುವ ಸಾಧ್ಯತೆ ಇದೆ.

ಈ ಬಗ್ಗೆ ಸಣ್ಣ ನೀರಾವರಿ ಹಾಗೂ ಅಂತರ್ಜಲ ಇಲಾಖಾ ಇಂಜಿನಿಯರ್ ಶಿವಪ್ರಸನ್ನ 'ಹೊಸ ದಿಗಂತ'ದೊಂದಿಗೆ ಮಾತನಾಡಿ, ಮಳೆ ಮಾರುತಗಳ ನಿಖರತೆ ಖಚಿತವಾದ ಬಳಿಕವೇ ಬಿಳಿಯೂರು ಅಣೆಕಟ್ಟಿನ ಗೇಟು ತೆರೆಯಲಾಗುವುದೆಂದು ತಿಳಿಸಿದ್ದಾರೆ.

ಪ್ರಸಕ್ತ ನೇತ್ರಾವತಿ ನದಿಗೆ ಕಟ್ಟಲಾದ ಬಿಳಿಯೂರು ಅಣೆಕಟ್ಟು ಸಮತೋಲನ ಜಲಾಶಯವಾಗಿ ಬಳಕೆಯಾಗುತ್ತಿದ್ದು, ಮಂಗಳೂರಿನ ಕುಡಿಯುವ ನೀರು ಸರಬರಾಜು ಮಾಡುವ ತುಂಬೆ ಜಲಾಶಯದಲ್ಲಿ ನೀರು ಕಡಿಮೆಯಾದರೆ ಬಳಕೆಗೆಂದು ಮೀಸಲಿರಿಸಲಾಗಿದೆ. ಈ ಬಾರಿ ನೀರಿನ ಕೊರತೆ ಕಾಣಿಸದೇ ಇರುವುದರಿಂದ ಈ ವರೆಗೆ ಬಿಳಿಯೂರು ಜಲಾಶಯದಿಂದ ನೀರು ಬಿಡುಗಡೆಗೊಳಿಸಿಲ್ಲ. ಒಂದುವೇಳೆ ಮುಂಗಾರು ವಿಳಂಬವಾಗಿ ನೀರಿನ ಸಮಸ್ಯೆ ಎದುರಾದಲ್ಲಿ ಬಳಸುವ ಸಲುವಾಗಿ ಬಿಳಿಯೂರು ಅಣೆಕಟ್ಟಿನ ನೀರನ್ನು ಸದ್ಯಕ್ಕೆ ಉಳಿಸಿಕೊಳ್ಳಲಾಗಿದೆ.

ಪುಟ 4



ನದಿ ಪರಿಸರದ ಗ್ರಾಮದಲ್ಲಿ ಅಂತರ್ಜಲ ಈಗ ಭರಪೂರ

ಬಿಳಿಯೂರು ಅಣೆಕಟ್ಟಿನಿಂದಾಗಿ ಸಂಗ್ರಹವಾಗುತ್ತಿರುವ ಹಿನ್ನೀರು ಉಪ್ಪಿನಂಗಡಿ ಗ್ರಾಮದಂಚಿನವರೆಗೆ ಆವರಿಸಿದ್ದರಿಂದ ಈ ಭಾಗದಲ್ಲಿ ಅಂತರ್ಜಲ ಭರಪೂರ ಸಂಗ್ರಹವಾಗುತ್ತಿದೆ. ಭೂಮಿಯೊಡಲಿನ ಅಂತರ್ಜಲದ ಸೆಲೆಗಳೆಲ್ಲವೂ ಜೀವಂತಿಕೆ ಪಡೆದಿದ್ದು, ಪರಿಸರದ ಕೊಳವೆ ಬಾವಿ, ಬಾವಿ, ಕೆರೆಗಳೆಲ್ಲವೂ ಬೇಸಗೆಯಲ್ಲೂ ಜಲಮಟ್ಟ ಕಾಯ್ದುಕೊಂಡಿದೆ.

ರಜೆ ಮುಗಿದರೂ ಪ್ರವಾಸಿಗರ ಪ್ರವಾಹ
ಕೊಡಗು ಜಿಲ್ಲೆಯ ಪ್ರವಾಸಿ ತಾಣಗಳು ಫುಲ್ ರಶ್, ಟ್ರಾಫಿಕ್ ದಟ್ಟಣೆ

ಮಡಿಕೇರಿ: ಬೇಸಿಗೆ ರಜೆ ಮುಗಿದು ಶಾಲೆಗಳು ಪುನರಾರಂಭಗೊಂಡಿದ್ದರೂ, ಕೊಡಗು ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಕಡಿಮೆಯಾಗಿಲ್ಲ. ಸಾಮಾನ್ಯವಾಗಿ ವಾರಾಂತ್ಯದ ದಿನಗಳಲ್ಲಿ ಕೊಡಗಿನ ಪ್ರವಾಸಿ ತಾಣಗಳು ಪ್ರವಾಸಿಗರಿಂದ ತುಂಬಿ ತುಳುಕುತ್ತಿದ್ದವು. ಆದರೆ ಇದೀಗ ನಿತ್ಯವೂ ಪ್ರವಾಸಿಗರ ಆಗಮನವಾಗುತ್ತಿದೆ.

ಪರಿಣಾಮವಾಗಿ ಪ್ರವಾಸಿ ಕೇಂದ್ರಗಳು ಮಾತ್ರವಲ್ಲದೆ, ರಸ್ತೆಗಳಲ್ಲೂ ವಾಹನ ದಟ್ಟಣೆ ಅಧಿಕಗೊಂಡಿದೆ. ಅದರಲ್ಲೂ ಮೈಸೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿ 275ರ ಕುಶಾಲನಗರ, ಸುಂಟಿಕೊಪ್ಪ ಪಟ್ಟಣಗಳಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗುತ್ತಿದ್ದು ಮಡಿಕೇರಿ ನಗರದ ಜನರಲ್ ತಿಮ್ಮಯ್ಯ ವೃತ್ತ, ಮಂಗೇರಿರ ಮುತ್ತಣ್ಣ ವೃತ್ತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ಪಾಡಂತೂ ಹೇಳತೀರದಾಗಿದೆ.



ರಾಜಾಸೀಟ್‌ನಲ್ಲಿ ಜನವೋ ಜನ!

ಭಾನುವಾರವಂತೂ ಮಡಿಕೇರಿಯ ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟ್‌ನಲ್ಲಿ ಕಾಲಿಡಲು ಸಾಧ್ಯವಿಲ್ಲದಷ್ಟು ಪ್ರವಾಸಿಗರು ತುಂಬಿದ್ದರು. ಅಲ್ಲದೇ ನಗರದ ಹಲವು ರಸ್ತೆಗಳು ಕೂಡ ಟ್ರಾಫಿಕ್ ದಟ್ಟಣೆಯಿಂದ ಕೂಡಿತ್ತು. ಪೊಲೀಸ್ ಸಿಬ್ಬಂದಿಗಳು ಇದ್ದರೂ ಜನರ ನಿಯಂತ್ರಣ ಕಷ್ಟವಾಗಿತ್ತು.

ವಂದೇ ಭಾರತ್ ರೈಲಿನ ಪ್ರಾಯೋಗಿಕ ಸಂಚಾರ ರದ್ದು
ರೈಲ್ವೆ ಕಚೇರಿಯಿಂದ ಅಧಿಕೃತ ಮಾಹಿತಿ

ಮಂಗಳೂರು: ಜೂ.3ರಂದು ನಿಗದಿಯಾಗಿದ್ದ ಬಹು ನಿರೀಕ್ಷಿತ ಬೆಂಗಳೂರು – ಮಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಪ್ರಾಯೋಗಿಕ ಸಂಚಾರವನ್ನು ದಕ್ಷಿಣ ಪಶ್ಚಿಮ ರೈಲ್ವೆ ಇಲಾಖೆ ರದ್ದುಗೊಳಿಸಿದೆ.



ಈ ಕುರಿತು ದಕ್ಷಿಣ ಪಶ್ಚಿಮ ರೈಲ್ವೆಯ ಮುಖ್ಯ ಪ್ರಯಾಣಿಕ ಸಂಚಾರ ವ್ಯವಸ್ಥಾಪಕರ ಕಚೇರಿಯಿಂದ ಅಧಿಕೃತ ಆದೇಶ ಹೊರಡಿಸಲಾಗಿದ್ದು ಸಂಬಂಧಪಟ್ಟ ಎಲ್ಲ ವಿಭಾಗಗಳಿಗೆ ಮಾಹಿತಿ ರವಾನಿಸಲಾಗಿದೆ. ಇದರಿಂದಾಗಿ ಟ್ರಯಲ್ ರನ್‌ಗೆ ಸಂಬಂಧಿಸಿದಂತೆ ನಿಗದಿಪಡಿಸಲಾಗಿದ್ದ ಎಲ್ಲ ಕಾರ್ಯಾಚರಣೆಗಳು ಮತ್ತು ಮರು ನಿಗದಿತ ನಿಲ್ದಾಣ ವ್ಯವಸ್ಥೆಗಳನ್ನು ಕೂಡ ರದ್ದುಗೊಳಿಸಲಾಗಿದೆ. ದಕ್ಷಿಣ ಪಶ್ಚಿಮ ರೈಲ್ವೆಯ ಮೇ 31 ರ ಸಂದೇಶದ ಪ್ರಕಾರ, ಜೂನ್ 3ಕ್ಕೆ ಯಶವಂತಪುರ – ಮಂಗಳೂರು – ಯಶವಂತಪುರ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಟ್ರಯಲ್ ರನ್ ನಡೆಸುವ ಪ್ರಸ್ತಾವನೆಯನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ತಿಳಿಸಲಾಗಿದೆ. ಪ್ರಾಯೋಗಿಕ ಸಂಚಾರ ರದ್ದತಿಗೆ ಕಾರಣ ತಿಳಿಸಿಲ್ಲ.

ಗಂಗೊಳ್ಳಿ ಬಂದರಿನಲ್ಲಿ ಲಂಗರು ಹಾಕಿದ ಬೋಟ್‌ಗಳು | ಮುಂದಿನ 61 ದಿನ ಯಾಂತ್ರೀಕೃತ ಮೀನುಗಾರಿಕಾ ಚಟುವಟಿಕೆಗಳಿಗೆ ನಿಷೇಧ
ಈ ಬಾರಿಯೂ ಮೀನುಗಾರಿಕಾ ವಲಯಕ್ಕೆ ಹವಾಮಾನ, ಮತ್ಸ್ಯ ಕ್ಷಾಮದ ಹೊಡೆತ!

ಗಂಗೊಳ್ಳಿ: ಜೂನ್ 10ಂದ ಮುಂದಿನ 61 ದಿನ ಯಾಂತ್ರೀಕೃತ ಮೀನುಗಾರಿಕೆಗೆ ನಿಷೇಧ ಇರುವುದರಿಂದ ಉಡುಪಿ ಜಿಲ್ಲೆಯ ಪ್ರಮುಖ ಬಂದರು ಪ್ರದೇಶವಾದ ಗಂಗೊಳ್ಳಿಯಲ್ಲಿ ಅನೇಕ ಸಮಸ್ಯೆಗಳ ನಡುವೆ ಪ್ರಸಕ್ತ ಸಾಲಿನ ಮೀನುಗಾರಿಕಾ ಋತು ನಿರಾಶಾದಾಯಕ ಅಂತ್ಯ ಕಾಣುವಂತಾಗಿದೆ.

ಕರ್ನಾಟಕದ ಕರಾವಳಿ ಭಾಗಗಳಲ್ಲಿ ಪ್ರತಿ ಬಾರಿ ಆಗಸ್ಟ್ ತಿಂಗಳಿನಿಂದ ಆರಂಭವಾಗುವ ಮೀನುಗಾರಿಕೆ ಮೇ ತಿಂಗಳ ಅಂತ್ಯಕ್ಕೆ ಕೊನೆಗೊಳ್ಳಲಿದೆ. ಪ್ರಸಕ್ತ ಮೀನುಗಾರಿಕಾ ಋತುವಿನಲ್ಲಿ ಮೀನುಗಾರರು ಅನೇಕ ಸಮಸ್ಯೆಗಳನ್ನು ಎದುರಿಸಿದ್ದು, ಹವಾಮಾನ ವೈಪರೀತ್ಯ, ಮತ್ಸ್ಯಕ್ಷಾಮ ಮೊದಲಾದ ಕಾರಣಗಳಿಂದ ಮೀನುಗಾರರು ನಿರಾಶೆಯಲ್ಲಿಯೇ ಮೀನುಗಾರಿಕಾ ಋತುವನ್ನು ಅಂತ್ಯಗೊಳಿಸಿದ್ದಾರೆ.



ಗಂಗೊಳ್ಳಿ ಬಂದರಿನಲ್ಲಿ ಸುಮಾರು 70ಕ್ಕೂ ಅಧಿಕ ಆಳ ಸಮುದ್ರ ಮೀನುಗಾರಿಕಾ ಬೋಟುಗಳು, 40ಕ್ಕೂ ಮಿಕ್ಕಿ ಪರ್ಸಿನ್ ಬೋಟುಗಳು, 70ಕ್ಕೂ ಮಿಕ್ಕಿ ಫಿಶಿಂಗ್ ಬೋಟುಗಳು ಮತ್ತು 250ಕ್ಕೂ ಮಿಕ್ಕಿ ಮೀನುಗಾರಿಕಾ ದೋಣಿಗಳು ಮೀನುಗಾರಿಕೆ ನಡೆಸುತ್ತಿದೆ. ಗಂಗೊಳ್ಳಿ ಬಂದರಿನಲ್ಲಿ ಬೋಟುಗಳು ಸಂಖ್ಯೆ ಅಧಿಕವಾಗಿರುವ ಹಿನ್ನಲೆಯಲ್ಲಿ ಬಂದರಿನಲ್ಲಿ ಸ್ಥಳಾವಕಾಶದ ಕೊರತೆ ಕಾಡುತ್ತಿದೆ. ಹೀಗಾಗಿ ಗಂಗೊಳ್ಳಿಯ ಬೋಟುಗಳು ಬೇರೆ ಬೇರೆ ಬಂದರಿನಲ್ಲಿ ವ್ಯವಹಾರ ನಡೆಸುವ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ.

ಪುಟ 4

ಈ ಋತುವಿನಲ್ಲಿ ಹೆಚ್ಚಿನ ಆರ್ಥಿಕ ನಷ್ಟ

ಈ ಬಾರಿ ಆರಂಭದಲ್ಲಿ ಉತ್ತಮ ಮೀನುಗಾರಿಕೆ ನಡೆದಿದ್ದು, ಕೊನೆಯ 4 ತಿಂಗಳು ಮೀನುಗಾರಿಕೆ ಬಹುತೇಕ ಸಗಿತಗೊಂಡಿದೆ. ಅಲ್ಲದೆ ಮೀನಿಗೆ ಸರಿಯಾದ ದರ ದೊರೆತಿಲ್ಲ, ಹವಾಮಾನ ವೈಪರೀತ್ಯ, ಮತ್ಸ್ಯಕ್ಷಾಮ ಮೊದಲಾದ ಕಾರಣ ಗಳಿಂದ ಈ ಬಾರಿಯ ಋತು ಮೀನುಗಾರರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ.

● ರಾಮಪ್ಪ ಖಾರ್ವಿ, ಮೀನುಗಾರ ಮುಖಂಡ, ಗಂಗೊಳ್ಳಿ

ಮಳೆಗಾಲದಲ್ಲಿ ಅನ್ಯ ಕೆಲಸದತ್ತ ಚಿತ್ತ

ಕಳೆದ ನಾಲ್ಕೈದು ತಿಂಗಳಿನಿಂದ ಸರಿಯಾಗಿ ಮೀನುಗಾರಿಕೆ ನಡೆಯದಿರುವುದರಿಂದ ಆರ್ಥಿಕ ಸಮಸ್ಯೆ ಎದುರಾಗಿದೆ. ಬೋಟುಗಳನ್ನು ಈಗಾಗಲೇ ದಡಕ್ಕೆ ಸೇರಿಸುವ ಕಾರ್ಯ ನಡೆಸಲಾಗುತ್ತಿದ್ದು, ಬೋಟ್ ಕೆಲಸ ಬಿಟ್ಟರೆ ಮಳೆಗಾಲದಲ್ಲಿ ಆರ್ಥಿಕ ಗಳಿಕೆಗೆ ಬೇರೆ ಉದ್ಯೋಗವಿಲ್ಲ. ಆದ್ದರಿಂದ ಬೇರೆ ಕೆಲಸ ಹಿಡಿಯಬೇಕಿದೆ.

● ರಾಘವೇಂದ್ರ ಖಾರ್ವಿ, ಸ್ಥಳೀಯ ಮೀನುಗಾರ, ಗಂಗೊಳ್ಳಿ

ದುರಸ್ತಿಯಾಗದ ಜೆಟ್ಟಿ

ಕುಸಿದು ಬಿದ್ದಿರುವ ಜೆಟ್ಟಿ ಪುನರ್ ನಿರ್ಮಾಣ 4 ವರ್ಷ ಕಳೆದರೂ ಆರಂಭಗೊಂಡಿಲ್ಲ. ಹೀಗಾಗಿ ಬಂದರಿನ 200 ಮೀಟರ್ ಉದ್ದದ ಜೆಟ್ಟಿಯಲ್ಲಿ ಮೀನುಗಾರಿಕೆ ಚಟುವಟಿಕೆ ನಡೆಸಲು ಸಾಧ್ಯವಾಗುತ್ತಿಲ್ಲ. ಬಂದರಿನಲ್ಲಿ ಬೋಟುಗಳು ಮತ್ತು ದೋಣಿಗಳು ತಂಗಲು ಸ್ಥಳಾವಕಾಶದ ಕೊರತೆ ಕಾಣುತ್ತಿದೆ. ಅಳಿವೆ ಪ್ರದೇಶದಲ್ಲಿ ಹೂಳೆತ್ತುವ ಕಾರ್ಯ ಸಮರ್ಪಕವಾಗಿ ನಡೆಯದಿರುವುದರಿಂದ ಅಳಿವೆ ಮೀನುಗಾರರಿಗೆ ಕಂಟಕವಾಗಿ ಪರಿಣಮಿಸುವ ಸಾಧ್ಯತೆ ಇದೆ. ಬಹುನಿರೀಕ್ಷಿತ ಹೂಳೆತ್ತುವ ಕಾರ್ಯವೂ ನಡೆದಿಲ್ಲ.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಮಂಗಳವಾರ 02, ಜೂನ್ 2026

ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಬಿಜೈ ಉಪಕೇಂದ್ರ ದಿಂದ ಹೊರಡುವ 11ಕೆವಿ ವಿವೇಕನಗರ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ವಿವೇಕನಗರ, ಶ್ರೀದೇವಿ ಕಾಲೇಜ್ ರಸ್ತೆ, ಕೆ.ಎಸ್.ಆರ್.ಟಿ.ಸಿ, ಸಿ.ಜಿ ಕಾಮತ್ ರಸ್ತೆ, ಜೈಲ್ ರಸ್ತೆ, ಎಂ.ಜಿ ರಸ್ತೆ, ಲಾಲ್ ಬಾಗ್ ರಸ್ತೆ, ಬಳ್ಳಾಲ್‌ಬಾಗ್, ಮಾನಸ ಟವರ್ ಎದುರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.3ಕ್ಕೆ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಮೆಡ್‌ಲ್ಯಾಂಡ್ ಆಸ್ಪತ್ರೆಯಲ್ಲಿ ಹಲವು ಶಸ್ತ್ರಚಿಕಿತ್ಸೆ ಸೇವೆಗಳು ಲಭ್ಯ


ಪುತ್ತೂರು: ಆರೋಗ್ಯ ಕ್ಷೇತ್ರದಲ್ಲಿ ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಮೆಡ್ ಲ್ಯಾಂಡ್ ಆಸ್ಪತ್ರೆ, ಇದೀಗ ಅಪೆಂಡಿಕ್ಸ್, ಹರ್ನಿಯಾ ಹಾಗೂ ಪಿತ್ತ ಕೋಶ ಸಂಬಂಧಿತ ಶಸ್ತ್ರಚಿಕಿತ್ಸೆಗಳನ್ನು ಅತ್ಯಾಧುನಿಕ ಲ್ಯಾಪರೋಸ್ಕೋಪಿಕ್(ಕೀ ಹೋಲ್) ವಿಧಾನದಲ್ಲಿ ಯಶಸ್ವಿಯಾಗಿ ನಡೆಸುತ್ತಿದೆ.

ಗುಣಮಟ್ಟದ ಚಿಕಿತ್ಸೆ

ಈ ನೂತನ ತಂತ್ರಜ್ಞಾನದ ಮೂಲಕ ರೋಗಿಗಳಿಗೆ ಕಡಿಮೆ ನೋವು, ಅತಿ ಕಡಿಮೆ ರಕ್ತಸ್ರಾವ, ಶೀಘ್ರ ಗುಣಮುಖತೆ ಹಾಗೂ ಕಡಿಮೆ ಅವಧಿಯ ಆಸ್ಪತ್ರೆ ವಾಸದ ಅನುಕೂಲ ದೊರೆಯುತ್ತಿದೆ. ಶಸ್ತ್ರಚಿಕಿತ್ಸೆಯ ನಂತರ ರೋಗಿಗಳು ಬೇಗನೆ ತಮ್ಮ ದೈನಂದಿನ ಚಟುವಟಿಕೆಗಳಿಗೆ ಮರಳಬಹುದಾಗಿದೆ. ಮೆಡ್ ಲ್ಯಾಂಡ್ ಆಸ್ಪತ್ರೆಯ ಅನುಭವಿ ಶಸ್ತ್ರಚಿಕಿತ್ಸಕರ ತಂಡ ಹಾಗೂ ಸುಸಜ್ಜಿತ ವೈದ್ಯಕೀಯ ಸೌಲಭ್ಯಗಳು ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸುತ್ತಿವೆ. ಆಧುನಿಕ ವೈದ್ಯಕೀಯ ಉಪಕರಣಗಳು ಮತ್ತು ಸುರಕ್ಷಿತ ಚಿಕಿತ್ಸಾ ವಿಧಾನಗಳ ನೆರವಿನಿಂದ ಯಶಸ್ವಿ ಶಸ್ತ್ರಚಿಕಿತ್ಸೆಗಳು ನಿರಂತರವಾಗಿ ನಡೆಯುತ್ತಿವೆ. ಅಪೆಂಡಿಕ್ಸ್, ಹರ್ನಿಯಾ ಅಥವಾ ಪಿತ್ತಕೋಶದ ಸಮಸ್ಯೆಗಳಿಂದ ಬಳಲುತ್ತಿರುವವರು ಹೆಚ್ಚಿನ ಮಾಹಿತಿಗಾಗಿ ಹಾಗೂ ತಜ್ಞ ವೈದ್ಯರ ಸಲಹೆಗಾಗಿ ಮೆಡ್ ಲ್ಯಾಂಡ್ ಆಸ್ಪತ್ರೆಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದೈವಾರಾಧನೆಯಿಂದ ಬದುಕಿನಲ್ಲಿ ಸಾಮರಸ್ಯದ ಬದುಕು:ಶ್ರೀಕಾಂತ್ ಶೆಟ್ಟಿ





ಸುರತ್ಕಲ್: ಗೋವಿಂದ ದಾಸ ಕಾಲೇಜಿನ ಎ.ವಿ. ಹಾಲ್‌ನಲ್ಲಿ 30ನೇ ತಿಂಗಳಿನ ಮಂಥನ ಕಾರ್ಯಕ್ರಮ ಶನಿವಾರ ನಡೆಯಿತು. ಮುಖ್ಯ ವಕ್ತಾರರಾಗಿ ಭಾಗವಹಿಸಿ ವಾಗ್ಮಿ ಶ್ರೀಕಾಂತ್ ಶೆಟ್ಟಿ ಕಾರ್ಕಳ ಭಾಗವಹಿಸಿ, 'ದೈವಾರಾಧನೆ–ಸಾಮಾಜಿಕ ಸಾಮರಸ್ಯ' ಎಂಬ ವಿಚಾರದ ಬಗ್ಗೆ ಮಾತನಾಡಿದರು. ದೈವಾರಾಧನೆ ಸಾಮಾಜಿಕ ಬದುಕಿನಲ್ಲಿ ಹೇಗೆ ಬೆಳೆದು ಬಂತು ಮತ್ತು ಅದು ಸಾಮಾಜಿಕ ಸಾಮರಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಯಾವ ರೀತಿಯ ಚಿಂತನೆಯನ್ನು ಜನರ ಮನಸ್ಸಿನಲ್ಲಿ ಮೂಡಿಸುತ್ತೆ ಎಂಬುದನ್ನು ಹಲವಾರು ಉಲ್ಲೇಖಗಳು ಮತ್ತು ಉದಾಹರಣೆಗಳ ಮೂಲಕ ವಿವರಿಸಿದರು. ದೈವವನ್ನು ಬಿಟ್ಟು ದೇವರಿಲ್ಲ ದೇವರನ್ನು ಬಿಟ್ಟು ದೈವವಿಲ್ಲ, ಆ ಶಕ್ತಿಯ ಮಧ್ಯೆ ಯಾವ ರೀತಿಯ ಗೌರವದ ನಡವಳಿಕೆಗಳು ಇದೆಯೋ ಅದು ಆ ಶಕ್ತಿಯನ್ನು ನಂಬುವ ಜನ ಸಮುದಾಯಗಳಲ್ಲಿ ಪ್ರತಿಫಲನವಾಗಬೇಕು. ದೈವದ ಕೊಡಿಯಡಿಯಲ್ಲಿ ಎಲ್ಲರೂ ಸಮಾನರು ಎಂಬ ಚಿಂತನೆ ಸಾಮಾಜಿಕ ಬದ್ಧತೆಗೆ ನಾಂದಿಯಾಗುತ್ತದೆ ಎಂದು ವಿವರಿಸಿದರು. ವೇದಿಕೆಯಲ್ಲಿ ಶ್ರೀರಂಗ ಮಾಳಿಗೆ ಉಪಸ್ಥಿತರಿದ್ದರು. ನವೀನ್ ಬರ್ಕೆ ಸ್ವಾಗತಿಸಿ, ಯಜ್ಞೇಶ್ ಐತಾಳ್ ವಂದಿಸಿದರು. ಪ್ರಣವ್ ಭಟ್ ಪ್ರಾರ್ಥಿಸಿದರು. ಸಂಜಯ್ ನಿರೂಪಿಸಿದರು.

ಜೂ.4ರಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಅಭಿನಂದನ್, ಟಾಲ್‌ಗೇಟ್, ತಾರೆತೋಟ, ನಂತೂರು ಬಸ್‌ಸ್ಟ್ಯಾಂಡ್, ಕರಾವಳಿ ಲೇನ್, ಕೊಚ್ಚಿನ್ ಬೇಕರಿ, ಜೋಗಿಮಠ, ಸರ್ಕ್ಯೂಟ್ ಹೌಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.4ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ತಿಳಿಸಿದೆ.

ಪುತ್ತೂರು ತಾಲೂಕು ಮಟ್ಟದ ಶಾಲಾ ಪ್ರಾರಂಭೋತ್ಸವದಲ್ಲಿ ಶಾಸಕ ಅಶೋಕ್

ಸರಕಾರದಿಂದ ಕೆಪಿಎಸ್ ಶಾಲೆಗಳ ಮಂಜೂರು



ಪುತ್ತೂರು: ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಸರಕಾರ ಗ್ರಾಮೀಣ ಭಾಗಗಳಿಗೆ ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್)ಗಳನ್ನು ಮಂಜೂರು ಮಾಡುತ್ತಿದೆ. ಪುತ್ತೂರಿನ ಬೆಟ್ಟಂಪಾಡಿ, ಕೋಡಿಂಬಾಡಿ, ಬಜತ್ತೂರು, ನೆಟ್ಟಣಿಗೆಮುಡ್ನೂರು ಸೇರಿ ಒಟ್ಟು 4 ಕೆಪಿಎಸ್ ಶಾಲೆಗಳು ಅನುಷ್ಠಾನಗೊಳ್ಳಲಿದೆ. ಒಂದು ಹೆಚ್ಚುವರಿ ಕೆಪಿಎಸ್ ಶಾಲೆಯನ್ನೂ ಕೇಳಲಾಗಿದೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಅವರು ಸೋಮವಾರ ಪುತ್ತೂರು ನಗರದ ಸಾಮೆತ್ತಡ್ಕ ಸರಕಾರಿ ಹಿ.ಪ್ರಾ.ಶಾಲೆಯಲ್ಲಿ ದ.ಕ. ಜಿ.ಪಂ. ಶಾಲಾ ಶಿಕ್ಷಣ ಇಲಾಖೆ, ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಕಚೇರಿಯ ಸಹಯೋಗದಲ್ಲಿ ತಾಲೂಕು ಮಟ್ಟದ ಶಾಲಾ ಪ್ರಾರಂಭೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು.

ಈ ವೇಳೆ ಶಾಲೆಗೆ ನವ ಮಂಗಳೂರು ಬಂದರು ಪ್ರಾಧಿಕಾರ(ಎನ್.ಎಂ.ಪಿ.ಎ)ದ ವತಿಯಿಂದ ನಿರ್ಮಾಣಗೊಂಡ ತರಗತಿ ಕೊಠಡಿ ಹಾಗೂ ಮಕ್ಕಳ ಪ್ಲೇ ಏರಿಯಾವನ್ನು ಉದ್ಘಾಟಿಸಿದರು. ಮಕ್ಕಳನ್ನು ರಜೆಯಲ್ಲಿ ಕಳೆದ ಸಂತೋಷವನ್ನು ಶಾಲೆಯಲ್ಲೂ ಕಳೆಯಬೇಕು ಎಂಬ ಉದ್ದೇಶದಿಂದ ಮೊದಲ ದಿನ ಪ್ರಾರಂಭೋತ್ಸವವನ್ನು ಮಾಡಲಾಗುತ್ತದೆ. ಮಕ್ಕಳು 40 ಶೇ. ದಷ್ಟು ಶಾಲೆಯಲ್ಲಿ ಕಲಿತರೆ 60 ಶೇ. ದಷ್ಟು ಮನೆಯಲ್ಲಿ ಕಲಿಯಲಿದೆ. ಹೀಗಾಗಿ ಪೋಷಕರು ಕೂಡ ಮಕ್ಕಳ ಶಿಕ್ಷಣದ ಕುರಿತು ಕಾಳಜಿ ವಹಿಸಬೇಕಿದೆ.

ಪ್ರತಿ ಗ್ರಾಮಕ್ಕೆ ಕೆಪಿಎಸ್ ಶಾಲೆಗಳನ್ನು ನೀಡುವ ಯೋಚನೆ ಸರಕಾರದ ಮುಂದಿದ್ದು, ಆದರ ಮೂಲಕ ಮಕ್ಕಳಿಗೆ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣದ ಜತೆಗೆ ಶಾಲಾ ವಾಹನದಲ್ಲೇ ಕರೆದುಕೊಂಡು ಬರುವ ಯೋಚನೆ ಇರುತ್ತದೆ. ಶಿಕ್ಷಕರ ಕೊರತೆ ನೀಗಿಸುವ ನಿಟ್ಟಿನಲ್ಲಿ ಮುಂದಿನ 6 ತಿಂಗಳೊಳಗೆ ರಾಜ್ಯದಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿ ನಡೆಯಲಿದ್ದು, ಪ್ರಸ್ತುತ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೀಡಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದರು.

ಸಮಾರಂಭದಲ್ಲಿ ಪುತ್ತೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯೆ ನಳಿನಿ ಶೆಟ್ಟಿ, ಶಾಲಾ ಸ್ಥಾಪಕಾಧ್ಯಕ್ಷ ಸಾಮೆತಡ್ಕ ಗೋಪಾಲಕೃಷ್ಣ ಭಟ್, ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಮೋನಪ್ಪ ಎಂ., ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಸಿ., ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ನವೀನ್ ಸ್ಟೀಪನ್ ವೇಗಸ್, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕಿ ಸಿಲ್ವಿಯಾ ಅಸುಂತಾ ಕ್ಯಾಸ್ಟಲಿನೊ, ಎಸ್‌ಡಿಎಂಸಿ ಅಧ್ಯಕ್ಷ ಶಿವಪ್ರಸಾದ್ ಕೆಮ್ಮಿಂಜೆ, ಸಿಆರ್‌ಪಿ ಶಶಿಕಲಾ, ಪ್ರಮುಖರಾದ ದಿನೇಶ್ ಕಾಮತ್, ಮುಖ್ಯ ಶಿಕ್ಷಕಿ ಜಲಜಾಕ್ಷಿ ಉಪಸ್ಥಿತರಿದ್ದರು.

ತಿರುವೈಲು ಶಾಲೆಗೆ 1 ಲ.ರೂ. ವೆಚ್ಚದ ಪೀಠೋಪಕರಣ ಕೊಡುಗೆ: ಘೋಷಣೆ



ಕೈಕಂಬ: ವಾಮಂಜೂರು ತಿರುವೈಲಿನ ದ.ಕ. ಜಿ.ಪಂ ಮಾದರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ನಡೆಯಿತು.

ಶಾಲಾ ಆಟದ ಮೈದಾನದಲ್ಲಿ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ, ಹಳೆ ವಿದ್ಯಾರ್ಥಿ ಸಂಘದವರು ಹಾಗೂ ವಿದ್ಯಾಬೋಧಿನಿ ಎಜ್ಯುಕೇಶನ್ ಟ್ರಸ್ಟ್ ಪದಾಧಿಕಾರಿಗಳು ವಿದ್ಯಾರ್ಥಿಗಳಿಗೆ ಹೂವಿನ ಮಳೆಗರೆದು, ಪೆನ್ಸಿಲ್–ಪೆನ್ನು ತುಂಬಿದ ಪೌಚ್ ನೀಡಿ ಸ್ವಾಗತಿಸಿದರು.

ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕುರ್ಚಿ–ಬೆಂಚುಗಳ ಕೊರತೆ ಇರುವ ತಿರುವೈಲು ಶಾಲೆಗೆ, ವಿದ್ಯಾಬೋಧಿನಿ ಎಜ್ಯುಕೇಶನ್ ಟ್ರಸ್ಟ್ ಮತ್ತು ನಿವೃತ್ತ ದೈಹಿಕ ಶಿಕ್ಷಕ ಗೋಪಾಲ ಯು. ಅವರ ಮನವಿ ಮೇರೆಗೆ ಮಂಗಳೂರಿನ ಧ್ವನಿ ಮತ್ತು ಬೆಳಕು ಮಾಲಕರ ಅಸೋಸಿಯೇಶನ್‌ನ ವಾಮಂಜೂರು ವಲಯವು ಒಂದು ಲಕ್ಷ ರೂ ವೆಚ್ಚದ ಹೊಸ ಕುರ್ಚಿ ಹಾಗೂ ಬೆಂಚು ಕೊಡುಗೆಯಾಗಿ ನೀಡಿತು.

ಶಾಲಾ ವತಿಯಿಂದ ಸನ್ಮಾನಗೊಂಡ ಅಸೋಸಿಯೇಶನ್ ಅಧ್ಯಕ್ಷ ಚಂದ್ರಹಾಸ ಅವರು ಮಾತನಾಡಿದರು. ಪುತ್ತೂರಿನಿಂದ ತಿರುವೈಲು ಶಾಲೆಗೆ ವರ್ಗಗೊಂಡು ಬಂದಿರುವ ಮುಖ್ಯಶಿಕ್ಷಕ ನಿಂಗರಾಜು ಕೆ. ಪಿ. ಅವರು ಅಧ್ಯಕ್ಷತೆ ವಹಿಸಿದ್ದರು. ತಿರುವೈಲು ವಾರ್ಡ್‌ನ ನಿಕಟಪೂರ್ವ ಕಾರ್ಪೊರೇಟರ್ ಹೇಮಲತಾ ಆರ್. ಸಾಲ್ಯಾನ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರಾಕೇಶ್ ಶೆಟ್ಟಿ, ವಿದ್ಯಾಬೋಧಿನಿ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷ ರಘು ಸಾಲ್ಯಾನ್, ನಿವೃತ್ತ ದೈಹಿಕ ಶಿಕ್ಷಕ ಗೋಪಾಲ ಯು, ಧ್ವನಿ ಮತ್ತು ಬೆಳಕು ಮಾಲಕರ ಸಂಘದ ಸದಸ್ಯರು, ಹಳೆ ವಿದ್ಯಾರ್ಥಿ ಸಂಘದವರು, ಶಿಕ್ಷಕರು, ಸಿಬ್ಬಂದಿ ವರ್ಗ, ಮಕ್ಕಳ ಪೋಷಕರು, ವಿದ್ಯಾರ್ಥಿಗಳು ಹಾಗೂ ಶಾಲಾ ಹಿತೈಷಿಗಳು ಇದ್ದರು. ರಘು ಸಾಲ್ಯಾನ್ ಪ್ರಸ್ತಾವಿಸಿದರು. ಎಸ್‌ಡಿಎಂಸಿ ಉಪಾಧ್ಯಕ್ಷೆ ರೇಷ್ಮಾ ನಿರೂಪಿಸಿದರು.

ನಿವೇದಿತಾ ಶಿಶು ಮಂದಿರದಲ್ಲಿ ಮೊದಲ ದಿನ ಆರತಿ ಬೆಳಗಿ ಸ್ವಾಗತ!



ಕುಂದಾಪುರ: ಕುಂದಾಪುರ ವಲಯದ ಬಹುತೇಕ ಎಲ್ಲ ಶಾಲೆಗಳಲ್ಲಿ ಮಕ್ಕಳನ್ನು ಮೊದಲ ದಿನ ಅದ್ದೂರಿಯಾಗಿ, ಬರಮಾಡಿಕೊಳ್ಳಲಾಯಿತು. ಚಿಣ್ಣರಿಗೆ ಆರತಿ ಬೆಳಗಿ, ಗುಲಾಬಿ ಹೂವುಗಳನ್ನು ನೀಡಿ, ಸ್ವಾಗತ ಕೋರಲಾಯಿತು.

ಕಳೆದ ಒಂದೂವರೆ ತಿಂಗಳಿನಿಂದ ವಿದ್ಯಾಮಂದಿರಗಳಲ್ಲಿ ನಿಶ್ಯಬ್ಧವಾಗಿದ್ದ ಘಂಟೆಗಳ ಸದ್ದು ಶಾಲಾರಂಭದೊಂದಿಗೆ ಮತ್ತೆ ಮೊಳಗಿತು. ಶಾಲೆಗಳನ್ನು ತಳಿರು ತೋರಣ, ಬಲೂನ್ ಗಳಿಂದ ಸಿಂಗರಿಸಿ, ಮೊದಲ ದಿನ ಆಗಮಿಸಿದ ಮಕ್ಕಳಿಗೆ ಸಾಂಪ್ರದಾಯಿಕ ಸ್ವಾಗತ ನೀಡಲಾಯಿತು. ಮಧ್ಯಾಹ್ನ ಸಿಹಿ ಊಟ ಉಣ ಬಡಿಸಲಾಯಿತು. ಕುಂದಾಪುರ ವಲಯದ 119 ಪ್ರಾಥಮಿಕ ಶಾಲೆ, 15 ಅನುದಾನಿತ, 20 ಸರಕಾರಿ ಪ್ರೌಢಶಾಲೆಗಳು, 7 ಅನುದಾನ ಪ್ರೌಢಶಾಲೆಗಳು, 2 ಅನುದಾನ ರಹಿತ ಕಿ.ಪ್ರಾ. ಶಾಲೆ, 9 ಅನುದಾನ ರಹಿತ ಹಿ.ಪ್ರಾ. ಶಾಲೆಗಳು, 20 ಅನುದಾನ ರಹಿತ ಪ್ರೌಢಶಾಲೆಗಳು, 4 ವಸತಿ ಶಾಲೆಗಳ ಸಹಿತ ಎಲ್ಲ 195 ಶಾಲೆಗಳು ಆರಂಭಗೊಂಡಿವೆ.

ಕುಂದಾಪುರ ವಲಯದ ಬಹುತೇಕ ಎಲ್ಲ ಶಾಲೆಗಳಲ್ಲಿಯೂ ಪ್ರಾರಂಭೋತ್ಸವದೊಂದಿಗೆ, ಪೋಷಕರ ಮಹಾಸಭೆ, ದಾಖಲಾತಿ ಆಂದೋಲನ, ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ, ಎಸೆಸೆಲ್ಸಿಯಲ್ಲಿ ಉತ್ತಮ ಅಂಕ ಪಡೆದವರಿಗೆ ಸಮ್ಮಾನ, ಇನ್ನುಳಿದ ತರಗತಿಗಳಲ್ಲಿ ಗರಿಷ್ಠ ಅಂಕ ಪಡೆದವರಿಗೆ ಪ್ರತಿಭಾ ಪುರಸ್ಕಾರ, ಇನ್ನು ದಾನಿಗಳಿಂದ ಬ್ಯಾಗ್, ಪುಸ್ತಕ, ಕೊಡೆ ವಿತರಣೆಯೂ ನೆರವೇರಿತು. ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದದವರು, ಎಸ್‌ಡಿಎಂಸಿ, ಹಳೆ ವಿದ್ಯಾರ್ಥಿ ಸಂಘ, ಊರವರು, ವಿದ್ಯಾಭಿಮಾನಿಗಳು, ಪಾಲ್ಗೊಂಡಿದ್ದರು.

ಪುಣ್ಯಕೋಟಿ ನಗರ: ಶಾರದಾಗಣಪತಿ ವಿದ್ಯಾಲಯದಲ್ಲಿ 'ಮಾತೃವಂದನಾ'



ಕೊಣಾಜೆ: ಕೈರಂಗಳ ಗ್ರಾಮದ ಪುಣ್ಯಕೋಟಿ ನಗರ ಶ್ರೀ ಶಾರದಾ ಗಣಪತಿ ವಿದ್ಯಾಕೇಂದ್ರದಲ್ಲಿ ನೂತನವಾಗಿ ಶಾಲೆಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ಮಾತೃವಂದನಾ ಕಾರ್ಯಕ್ರಮ ಸೋಮವಾರ ನಡೆಯಿತು.

ಬಾಲಗೋಕುಲ ಶಿಕ್ಷಕಿ ಬಾಲಗೋಕುಲ ಶಿಕ್ಷಕಿ ಮಂಜುಳಾ ಎಸ್ ಕಾರಂತ ಅವರು ಮಾತೃವಂದನೆಯ ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. ನಿವೃತ್ತ ಶಿಕ್ಷಕಿ ಜಯಲಕ್ಷ್ಮಿ ಕಾರಂತ ಮಾತನಾಡಿದರು.

ಶಾರದಾ ಗಣಪತಿ ವಿದ್ಯಾಕೇಂದ್ರದ ಸಂಚಾಲಕ ಟಿ.ಜಿ.ರಾಜಾರಾಂ ಭಟ್ ಮಾತನಾಡಿ, ವಿದ್ಯಾಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಯಕ್ಷಗಾನ, ಭರತನಾಟ್ಯ ಸೇರಿದಂತೆ ಒಟ್ಟು 23 ಸಹಪಠ್ಯ ಚಟುವಟಿಕೆ ಕಲಿಸಲಾಗುತ್ತಿದೆ. ಇದಕ್ಕಾಗಿ ತಿಂಗಳಿಗೆ ಎರಡುವರೇ ಲಕ್ಷ ರೂ. ಖರ್ಚು ಮಾಡುತ್ತಾ ಇದ್ದೇವೆ. ಅನ್ನಪೂರ್ಣೇಶ್ವರಿ ಯೋಜನೆಯ ಮೂಲಕ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆಯನ್ನು ಕೂಡಾ ಮಾಡಲಾಗಿದೆ. ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಯೊಂದಿಗೆ ಅನೇಕ ಉನ್ನತ ಹಂತದ ಉದ್ಯೋಗಗಳಲ್ಲಿದ್ದಾರೆ, ಕೆಲವರು ಸೇನೆಗೆ ಸೇರಿದ್ದಾರೆ, ನಮ್ಮ ವಿದ್ಯಾರ್ಥಿಗಳು ರಾಷ್ಟ್ರೀಯ ಕಬಡ್ಡಿಪಟುವಾಗಿ, ವಾಲಿಬಾಲ್ ಪಟುವಾಗಿ ಮಿಂಚುತ್ತಿರುವುದನ್ನು ನೋಡಿದರೆ ಹೆಮ್ಮೆಯೆನಿಸುತ್ತದೆ ಎಂದರು. ಪುರೋಹಿತರಾದ ಸುಬ್ರಹ್ಮಣ್ಯ ಕಾರಂತ ಅವರು ಮಾತೃವಂದನೆ ಗೀತೆಗಳನ್ನು ಹಾಡುವ ಮಾತೃವಂದನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ನಿವೃತ್ತ ಅಧ್ಯಾಪಕಿ ಗೀತಾ ಕೆ. ಭಟ್, ಪ್ರಾಂಶುಪಾಲರಾದ ಚಂದ್ರಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಶಾಲಾ ಶಿಕ್ಷಕ ಕಿರಣ್ ಕುಮಾರ್ ಸೇರಾಜೆ ಸ್ವಾಗತಿಸಿ, ಸಹ ಶಿಕ್ಷಕಿ ರಮ್ಯಾ ವಂದಿಸಿದರು. ಶಿಕ್ಷಕ ಶ್ರೀನಿವಾಸ ಭಟ್ ಸೇರಾಜೆ ನಿರೂಪಿದರು.

ದಡ್ಡಲಕಾಡು ಪಿಎಂಶ್ರೀ ಸರಕಾರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪ್ರಾರಂಭೋತ್ಸವ



ಬಂಟ್ವಾಳ: ಶಾಲೆಯಿಂದ ಯಾರೂ ವಂಚಿತರಾಗಬಾರದು. ಜತೆಗೆ ಅತ್ಯಾಧುನಿಕ ಸೌಕರ್ಯದ ಶಿಕ್ಷಣ ಸರಕಾರಿ ಶಾಲೆಯ ಮೂಲಕ ಮಕ್ಕಳಿಗೆ ಸುಲಭವಾಗಿ ದೊರೆಯಬೇಕು ಎಂಬುದೇ ದಡ್ಡಲಕಾಡು ಶಾಲೆಯ ಆಶಯ ಎಂದು ಶ್ರೀ ದುರ್ಗಾ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಪ್ರಕಾಶ್ ಅಂಚನ್ ಹೇಳಿದರು.

ಬಂಟ್ವಾಳ ತಾಲೂಕಿನ ದಡ್ಡಲಕಾಡು ಪಿಎಂಶ್ರೀ ಸರಕಾರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸೋಮವಾರ ಶಾಲಾ ಪ್ರಾರಂಭೋತ್ಸವದದಲ್ಲಿ ಭಾಗವಹಿಸಿ ಅವರು ಮಾತನಾಡಿ, ಎಲ್ಲರಿಗೂ ಶಿಕ್ಷಣ ಸಿಗಬೇಕು. ಯಾರೂ ಕೂಡ ಶಿಕ್ಷಣದಿಂದ ದೂರ ಉಳಿಯಬಾರದು ಎಂಬ ಕಾಳಜಿಯಿಂದ ದಡ್ಡಲಕಾಡು ಶಾಲೆ ಯಶಸ್ವಿಯಾಗಿ ಶಿಕ್ಷಣ ಸೇವೆ ನಡೆಸುತ್ತಿದೆ ಎಂದರು.

ಇದೇ ವೇಳೆ ಎಸೆಸೆಲ್ಸಿಯಲ್ಲಿ ಶೇ.100 ಫಲಿತಾಂಶ ದಾಖಲಾದ ಹಿನ್ನೆಲೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸಮ್ಮಾನಿಸಲಾಯಿತು. ಪ್ರೌಢಶಾಲಾ ವಿಭಾಗದ ಎಸ್ ಡಿಎಂಸಿ ಅಧ್ಯಕ್ಷ ಶೇಖರ್ ಅಂಚನ್, ಪ್ರಾಥಮಿಕ ವಿಭಾಗದ ಎಸ್ ಡಿಎಂಸಿ ಅಧ್ಯಕ್ಷ ಬಾಲಕೃಷ್ಣ ಗೌಡ, ಪ್ರಮುಖರಾದ ರಾಜೇಶ್ ನೆಕ್ಕರೆ, ರಾಮಚಂದ್ರ ಪೂಜಾರಿ ಕರೆಂಕಿ, ಪ್ರೌಢಶಾಲಾ ವಿಭಾಗದ ಮುಖ್ಯಸ್ಥ ಶೈಲೇಂದ್ರ ಕುಮಾರ್, ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಜಯಶ್ರೀ, ಸಂಸ್ಥೆಯ ಹಿರಿಯ ಶಿಕ್ಷಕಿ ಹಿಲ್ಡಾ ಫೆರ್ನಾಂಡೀಸ್, ಶಿಕ್ಷಕರಾದ ವಿಕ್ರಂ ಉಪಸ್ಥಿತರಿದ್ದರು. ಶಿಕ್ಷಕಿ ವಿನಯ ಪ್ರಾರ್ಥಿಸಿದರು. ದೀಕ್ಷಿತಾ ಅವರು ಸಮ್ಮಾನಿತರ ವಿವರ ವಾಚಿಸಿದರು. ಭವ್ಯ ಹಾಗೂ ಅನುಶ್ರೀ ನಿರೂಪಿಸಿದರು. ಸಭಾ ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಶಾಲೆಗೆ ಆಗಮಿಸುತ್ತಿದ್ದಂತೆ ವಿದ್ಯಾರ್ಥಿಗಳಿಗೆ ಶಿಕ್ಷಕರು ಭವ್ಯ ಸ್ವಾಗತ ಕೋರಿದರು. ಪನ್ನೀರಿನ ಜತೆಗೆ ಪುಷ್ಪ ಅರ್ಚನೆ ಮಾಡಿ ಮಕ್ಕಳನ್ನು ಬರಮಾಡಿಕೊಳ್ಳಲಾಯಿತು.

ಅಡ್ಯನಡ್ಕ ಜನತಾ ಪ್ರೌಢ ಶಾಲೆಯಲ್ಲಿ ಪ್ರಾರಂಭೋತ್ಸವದ ಸಂಭ್ರಮ

ನೂತನ ಆಂಗ್ಲ ಮಾಧ್ಯಮ ಪ್ರೌಢಶಾಲೆ ಉದ್ಘಾಟನೆ

ಪುತ್ತೂರು: ಅಡ್ಯನಡ್ಕದ ಜನತಾ ಪ್ರೌಢ ಶಾಲೆಯಲ್ಲಿ ಪ್ರಾರಂಭೋತ್ಸವ ಹಾಗೂ ನೂತನವಾಗಿ ಆರಂಭಗೊಂಡ ಜನತಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಉದ್ಘಾಟನೆ ಕಾರ್ಯಕ್ರಮ ಜೂ.1ರಂದು ಜರುಗಿತು.



ಅಡ್ಯನಡ್ಕ ಎಜುಕೇಶನಲ್ ಸೊಸೈಟಿಯ ಸಂಸ್ಥಾಪಕ ನಾಯ ಕೃಷ್ಣ ಭಟ್ ಹಾಗೂ ವಾರಣಾಶಿ ಸುಬ್ರಾಯ ಭಟ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಜನತಾ ವಿದ್ಯಾ ಸಂಸ್ಥೆಗಳ ಸಂಚಾಲಕಿ ಡಾ. ಅಶ್ವಿನಿ ಕೃಷ್ಣಮೂರ್ತಿ ಶುಭಾಶಂಸನೆಗೈದರು. ಅಡ್ಯನಡ್ಕ ಎಜುಕೇಶನಲ್ ಸೊಸೈಟಿ ಅಧ್ಯಕ್ಷ ಗೋವಿಂದ ಪ್ರಕಾಶ್ ಸಾಯ, ಆಡಳಿತಾಧಿಕಾರಿ ರಮೇಶ ಎಂ. ಬಾಯಾರು ಶುಭ ಹಾರೈಸಿದರು. ಆಡಳಿತ ಮಂಡಳಿಯ ಕೋಶಾಧಿಕಾರಿ ಕೇಶವ ಭಟ್ ಚವರ್ಕಾಡು, ಸದಸ್ಯರಾದ ಗೋವಿಂದರಾಯ ಶೆಣೈ ಎ., ಉಪೇಂದ್ರ ಪೈ ಅಡ್ಯನಡ್ಕ, ಸಚ್ಚಿದಾನಂದ ಶಾಸ್ತ್ರಿ ನೆಕ್ಕರೆ, ಅಬ್ದುಲ್ ಕರೀಮ್ ಕುದ್ದುಪದವು, ಜನತಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರವಿಕುಮಾರ್ ಆರ್. ಎಸ್., ಜನತಾ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಹರಿಣಾಕ್ಷಿ ಎ., ಜನತಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಪ್ರಶಾಂತ ಎಂ. ಇದ್ದರು. ಜನತಾ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಟಿ.ಆರ್. ನಾಯ್ಕ್ ಸ್ವಾಗತಿಸಿ, ಜನತಾ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯಿನಿ ಅನಿತಾ ವಂದಿಸಿದರು. ಕನ್ನಡ ಅಧ್ಯಾಪಕ ಶಿವಕುಮಾರ್ ಸಾಯ ನಿರ್ವಹಿಸಿದರು.

ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ಸಂಭ್ರಮ



ಉಪ್ಪಿನಂಗಡಿ: ಇಲ್ಲಿನ ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ಜೂ.1ರಂದು ಶಾಲಾ ಪ್ರಾರಂಭೋತ್ಸವನ್ನು ಆಚರಿಸಲಾಯಿತು. ವಿದ್ಯಾಲಯಕ್ಕೆ ಆಗಮಿಸಿದ ವಿದ್ಯಾರ್ಥಿಗಳು ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿ ತಮ್ಮ ತಮ್ಮ ತರಗತಿಗಳಿಗೆ ತೆರಳಿದರು. ವಿದ್ಯಾಲಯಕ್ಕೆ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗೆ ಆರತಿ ಬೆಳಗಿಸಿ ತಿಲಕವಿಡುವ ಮೂಲಕ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂಚಾಲಕ ಸುಬ್ರಹ್ಮಣ್ಯ ಭಟ್ ಮಾತನಾಡಿ ದರು. 'ಹೈವ್‌ಗಾರ್ಡ್ 360' ಎನ್ನುವ ವಿಜ್ಞಾನ ಮಾದರಿಗೆ ಟಾಪ್ 3 ಇನ್ನೋವೇಟರ್ ಅವಾರ್ಡ್ ಲಭಿಸಿದ ವಿದ್ಯಾ ಸಂಸ್ಥೆಯ 8ನೇ ತರಗತಿಯ ಗವಿನ್ ರೇಶಿಮೆ ಅವರಿಗೆ ವಿದ್ಯಾ ಸಂಸ್ಥೆಯ ಪರವಾಗಿ ಅಭಿನಂದಿಸಲಾಯಿತು. ವಿದ್ಯಾಲಯದ ಮುಖ್ಯ ಶಿಕ್ಷಕಿ ವೀಣಾ ಆರ್. ಪ್ರಸಾದ್ ಸ್ವಾಗತಿಸಿ, ಸಹ ಶಿಕ್ಷಕಿಯರಾದ ನಿಶಿತಾ ಕೆ.ಕೆ. ವಂದಿಸಿದರು. ಶ್ವೇತಾ ಕಾರ್ಯಕ್ರಮ ನಿರ್ವಹಿಸಿದರು. ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಅಲ್ಲಲ್ಲಿ ಶಾಲಾ ಪ್ರಾರಂಭೋತ್ಸವ



ಕೋಟದ ಸೇವಾಸಂಗಮ ಶಿಶುಮಂದಿರದಲ್ಲಿ ಶಾಲಾ ಪ್ರಾರಂಭೋತ್ಸವ ಸೋಮವಾರ ಹಿಂದೂ ಸಂಪ್ರದಾಯದಂತೆ ನಡೆಯಿತು. ಶಿಶುಮಂದಿರದ ಅಧ್ಯಕ್ಷ ಶ್ರೀಕಾಂತ್ ಶೆಣೈ, ಸಮಿತಿಯ ಕಾರ್ಯದರ್ಶಿ ಕಲಾವತಿ , ಹಿರಿಯ ಸದಸ್ಯೆ ವಸುಧಾ ಪ್ರಭು, ಪ್ರಮೀಳಾ, ಅಮೃತ್ ಜೋಗಿ,ರವೀಂದ್ರ ಕೋಟ,ರೇಣುಕಾ ಮಯ್ಯ,ಮಾತಾಜಿ ಸಹನಾ,ಸಹಾಯಕಿ ಜ್ಯೋತಿ, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.



ಕೋಟ ವಿದ್ಯಾ ಸಂಘ ಪ್ರವರ್ತಿತ ವಿವೇಕ ಪದವಿ ಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾಗ ಹಾಗೂ ವಿವೇಕ ಬಾಲಕರ ಪ್ರೌಢ ಶಾಲೆಯ ಪ್ರಾರಂಭೋತ್ಸವ ಇತ್ತೀಚೆಗೆ ನಡೆಯಿತು. ವಿವೇಕ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಜಗದೀಶ ನಾವಡ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವೆಂಕಟೇಶ ಉಡುಪ, ವಿವೇಕ ಬಾಲಕಿಯರ ಪ್ರೌಢಶಾಲೆ ಹಿರಿಯ ಶಿಕ್ಷಕ ನರೇಂದ್ರ ಕುಮಾರ್ ಕೋಟ ಮತ್ತಿತರರಿದ್ದರು.



ಪಡುಬಿದ್ರಿ ಉಚ್ಚಿಲ ಸರಸ್ವತಿ ಮಂದಿರ ಶಾಲೆಗಳ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ನೆರವೇರಿತು. ಸರಸ್ವತಿ ಶಾಲಾ ಟ್ರಸ್ಟ್ ನ ಕಾರ್ಯದರ್ಶಿ ಶ್ರೀಧರ, ಸಂಚಾಲಕ ಮೋಹನ್ ಶೆಟ್ಟಿ ಗಂಗಾಧರ ಸುವರ್ಣ, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಸತೀಶ್, ಕಾಂತಿ, ಶ್ರೀಮತಿ, ಫಾತಿಮಾ, ಹಿರಿಯ ಶಿಕ್ಷಕಿ ಲಕ್ಷ್ಮಿ, ಪ್ರೌಢಶಾಲಾ ಮುಖ್ಯ ಶಿಕ್ಷಕ ಬಾಬು ರಾಯ ಆಚಾರ್ಯ, ಸದಾಶಿವ ನಾಯಕ, ಉಪಸ್ಥಿತರಿದ್ದರು.



ಉಪ್ಪುಂದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಶಾಲಾ ಪ್ರಾರಂಭೋತ್ಸವವು ಸೋಮವಾರ ಶಾಸಕ ಗುರುರಾಜ ಗಂಟಿಹೊಳೆ ಅವರ ಉಪಸ್ಥಿತಿಯೊಂದಿಗೆ ನೆರವೇರಿಸಲಾಯಿತು. ಈ ವೇಳೆ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.



ಕಾಪು ಉಳಿಯಾರಗೋಳಿ ದಂಡತೀರ್ಥ ಸಮೂಹ ವಿದ್ಯಾಸಂಸ್ಥೆಯಲ್ಲಿ ಶಾಲಾ ಪ್ರಾರಂಭೋತ್ಸವ ಆಚರಿಸಲಾಯಿತು. ಶಾಲಾ ಸಂಚಾಲಕ ಡಾ. ಪ್ರಶಾಂತ್ ಶೆಟ್ಟಿ, ಶಾಲಾ ಆಡಳಿತ ಮಂಡಳಿಯ ಸದಸ್ಯೆ ಡಾ. ಪನ್ನ ಪಿ. ಶೆಟ್ಟಿ, ಪ್ರಾಂಶುಪಾಲ ನೀಲಾನಂದ ನಾಯ್ಕ್,ಶಿಕ್ಷಣ ಸಂಯೋಜಕ ಶಿವಣ್ಣ ಬಾಯರ್, ಮುಖ್ಯೋಪಾಧ್ಯಾಯ ಗೇಬ್ರಿಯಲ್ ಮಸ್ಕರೇನ್ಹಸ್, ಕನ್ನಡ ಮಾಧ್ಯಮದ ಮುಖ್ಯಸ್ಥೆ ಕೃಪಾ ಅಮ್ಮಣ್ಣ, ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ರಾಜಲಕ್ಷ್ಮಿ ರಾವ್,ದೈಹಿಕ ಶಿಕ್ಷಣ ಶಿಕ್ಷಕ ಪ್ರಭಾಕರ್ ಶೆಟ್ಟಿ,ಶಿಕ್ಷಕರು, ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕುಂದಾಪುರ ವಲಯದ ಅಮಾಸೆಬೈಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭೋತ್ಸವದಲ್ಲಿ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಭಾಗವಹಿಸಿ, ಪುಸ್ತಕ ಹಸ್ತಾಂತರಿಸಿ ಶುಭ ಹಾರೈಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ಶೆಟ್ಟಿ, ಆರ್‌ಎಫ್‌ಒ ಅಧಿಕಾರಿ ರೂಪೇಶ್, ಎಸ್‌ಡಿಎಂಸಿ ಅಧ್ಯಕ್ಷ ಸುಕೇಶ್ ಭಂಡಾರಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಶೆಟ್ಟಿ, ಮುಖ್ಯೋಪಾಧ್ಯಾಯ ವೆಂಕಟೇಶ್, ನಿವೃತ್ತ ಮುಖ್ಯೋಪಾಧ್ಯಾಯ ಶ್ರೀಧರ ಶೆಟ್ಟಿ, ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.



ಪಡುಬೆಳ್ಳೆ ಶ್ರೀ ನಾರಾಯಣ ಗುರು ಕನ್ನಡ ಮಾಧ್ಯಮ ಪ್ರೌಢ ಶಾಲಾ ಪ್ರಾರಂಭೋತ್ಸವದಲ್ಲಿ ಶಾಲಾ ಆಡಳಿತ ಮಂಡಳಿ ಸದಸ್ಯರು, ಬೆಳ್ಳೆ ಸಿ.ಎ, ಬ್ಯಾಂಕ್ ಅಧ್ಯಕ್ಷ ಶಿವಾಜಿ ಎಸ್ ಸುವರ್ಣ, ಕಟಪಾಡಿ ಶಂಕರ ಪೂಜಾರಿ ಇದ್ದರು.



ಕೋಟದ ವಿವೇಕ ಆಂಗ್ಲಮಾಧ್ಯಮ ಪ್ರೌಢಶಾಲೆಯ ಶಾಲಾ ಆರಂಭೋತ್ಸವ ಇತ್ತೀಚೆಗೆ ನಡೆಯಿತು. ಕೋಟ ವಿದ್ಯಾಸಂಘದ ಆಡಳಿತ ಮಂಡಳಿಯ ಅಧ್ಯಕ್ಷ ಕೆ. ಭಾಸ್ಕರ ಹಂದೆ ಹಾಗೂ ವಿವೇಕ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ. ಜಗದೀಶ ನಾವಡ, ಮುಖ್ಯೋಪಾಧ್ಯಾಯಿನಿ ಪ್ರೀತಿ ರೇಖಾ, ಅಧ್ಯಾಪಕರು ಇದ್ದರು.

ಸುತ್ತ ಮುತ್ತ

ವಿದ್ಯುತ್ ಉಪಕೇಂದ್ರ 110 ಕೆವಿಗೆ ಭಡ್ತಿಗೊಳಿಸಲು ಆಗ್ರಹ

ಕಾಸರಗೋಡು: ಜಿಲ್ಲೆಯ ಬೆಳ್ಳೂರು ಮತ್ತು ನೀಲೇಶ್ವರದಲ್ಲಿರುವ 33 ಕೆವಿ ಸಾಮರ್ಥ್ಯದ ವಿದ್ಯುತ್ ಸಬ್ ಸ್ಟೇಷನ್‌ಗಳನ್ನು 110 ಕೆವಿ ಸಬ್ ಸ್ಟೇಷನ್‌ಗಳಾಗಿ ಭಡ್ತಿಗೊಳಿಸಬೇಕೆಂದು ಇಲೆಕ್ಟ್ರಿಸಿಟಿ ಎಂಪ್ಲಾಯೀಸ್ ಫೆಡರೇಶನ್‌ನ ಕಾಸರಗೋಡು ಜಿಲ್ಲಾ ಸಮಿತಿ ಸಭೆಯು ಆಗ್ರಹಿಸಿದೆ. ಸಬ್ ಸ್ಟೇಷನ್‌ಗಳಿಗೆ ತಲುಪುವ 33 ಕೆವಿ ವಿದ್ಯುತ್ ಲೈನ್‌ಗಳು ಮಳೆಗಾಲದಲ್ಲಿ ಪದೇ ಪದೇ ಹಾನಿಗೀಡಾಗುತ್ತವೆ. ಇದರಿಂದಾಗಿ ಇಂತಹ ಸಬ್ ಸ್ಟೇಷನ್‌ಗೊಳಪಟ್ಟ ವಿದ್ಯುತ್ ಸೆಕ್ಷನ್ ಕಚೇರಿಗಳ ವ್ಯಾಪ್ತಿಯೊಳಪಡುವ ಪ್ರದೇಶಗಳಲ್ಲಿ ಪದೇ ಪದೇ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದೆ ಎಂದು ಸಭೆಯು ಅಭಿಪ್ರಾಯಪಟ್ಟಿದೆ. ಸಭೆಯಲ್ಲಿ ಸಂಘಟನೆಯ ಜಿಲ್ಲಾ ಕಾರ್ಯನಿರ್ವಹಣಾಧ್ಯಕ್ಷ ಪಿ.ಜಯಚಂದ್ರನ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಕೆ.ಪಿ.ಗೋಪಕುಮಾರ್, ಕೆ.ಸುಧೀರ್, ಪಿ.ಮೊಹಮ್ಮದ್ ಶರೀಫ್, ಎಂ.ಮೋಹನನ್, ಕೆ.ಎಂ.ಪವಿತ್ರನ್, ಅಜಿತ್ ಕುಮಾರ್, ಅಬ್ದುಲ್ಲ ಕೆ.ಎ.ರೆಜಿಮೋನ್, ಜಲೀಲ್, ಕಾರ್ತಿಕ್, ಡಿ.ಆರ್. ಉದಯನ್, ಮನೋಜ್‌ಕುಮಾರ್, ಟಿ.ಮದನ, ಅನಿಲ್‌ಕುಮಾರ್ ಉಪಸ್ಥಿತರಿದ್ದರು.

ಎಲ್ಲಾ ಜಿಲ್ಲೆಗಳಲ್ಲೂ ಅಮ್ಮ ತೊಟ್ಟಿಲು ಸ್ಥಾಪಿಸಲು ನಿರ್ಧಾರ

ಕಾಸರಗೋಡು: ಕೇರಳದ ಎಲ್ಲಾ ಜಿಲ್ಲೆಗಳಲ್ಲಿ ಅಮ್ಮ ತೊಟ್ಟಿಲುಗಳನ್ನು ಸ್ಥಾಪಿಸಲು ರಾಜ್ಯ ಆರೋಗ್ಯ ಇಲಾಖೆಯು ತೀರ್ಮಾನಿಸಿದೆ. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಈ ಹಿಂದೆಯೇ ಅಮ್ಮ ತೊಟ್ಟಿಲು ಸ್ಥಾಪಿಸಲಾಗಿದೆ. ಆದರೆ ಕೆಲವು ಜಿಲ್ಲೆಗಳಲ್ಲಿ ಇನ್ನೂ ಅಮ್ಮ ತೊಟ್ಟಿಲುಗಳನ್ನು ಸ್ಥಾಪಿಸಲಾಗಿಲ್ಲ, ಅಂತಹ ಜಿಲ್ಲೆಗಳಲ್ಲಿ ಅವುಗಳನ್ನು ಅಳವಡಿಸಲು ಆರೋಗ್ಯ ಇಲಾಖೆಯು ಸೂಕ್ತ ಕ್ರಮಕ್ಕೆ ಮುಂದಾಗಿದೆ. ಇದರ ಹೊರತಾಗಿ ಇಡುಕ್ಕಿ ವಯನಾಡು, ಕಣ್ಣೂರು ಜಿಲ್ಲೆಗಳ ಜಿಲ್ಲಾಸ್ಪತ್ರೆಗಳಲ್ಲಿ ಹೈಟೆಕ್ ಇಲೆಕ್ಟ್ರಿಕ್ ಅಮ್ಮ ತೊಟ್ಟಿಲುಗಳನ್ನು ಸ್ಥಾಪಿಸುವ ತೀರ್ಮಾನವನ್ನು ಕೈಗೊಳ್ಳಲಾಗಿದೆ. ರಾಜ್ಯದಲ್ಲಿ ಕಲ್ಲಿಕೋಟೆ, ತಿರುವನಂತಪುರ, ಎರ್ನಾಕುಳಂ ಮತ್ತು ಪತ್ತನಂತಿಟ್ಟ ಜಿಲ್ಲಾಸ್ಪತ್ರೆಗಳಲ್ಲಿ ಮಾತ್ರವೇ ಈಗ ಹೈಟೆಕ್ ಇಲೆಕ್ಟ್ರಿಕ್ ಅಮ್ಮ ತೊಟ್ಟಿಲುಗಳಿವೆ. ಅನೈತಿಕ ಸಂಬಂಧ ಇತ್ಯಾದಿ ಘಟನೆಗಳಿಂದ ಜನಿಸುವ ಶಿಶುಗಳನ್ನು ಕೆಲವರು ರಸ್ತೆ ಬದಿಗಳಲ್ಲಿ ಉಪೇಕ್ಷಿಸುತ್ತಿದ್ದು ಅದಕ್ಕೆ ಪರಿಹಾರ ಎಂಬಂತೆ ಅಮ್ಮ ತೊಟ್ಟಿಲುಗಳನ್ನು ಸ್ಥಾಪಿಸಲಾಗುತ್ತಿದೆ. ಇಂತಹ ಶಿಶುಗಳನ್ನು ಅಮ್ಮ ತೊಟ್ಟಿಲಿನಲ್ಲಿ ಉಪೇಕ್ಷಿಸಿದಲ್ಲಿ ಅವುಗಳಿಗೆ ನಂತರ ಆಯಾ ಜಿಲ್ಲೆಗಳ ಶಿಶು ಕಲ್ಯಾಣ ಸಮಿತಿ ಸಂರಕ್ಷಣೆ ನೀಡುತ್ತಿದೆ. ಜೊತೆಗೆ ಸಮಗ್ರ ಅರ್ಹತೆಯೊಂದಿಗೆ ಸಾಕಿ ಸಲಹುವವರಿಗೆ ಕಾನೂನು ಪ್ರಕಾರ ಶಿಶುಗಳನ್ನು ನೀಡಲಾಗುತ್ತದೆ.

ಅಧ್ಯಾಪಕರ ನೇಮಕಾತಿ

ಮಂಜೇಶ್ವರ: ಪೈವಳಿಕೆ ನಗರ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಅರೇಬಿಕ್ ಮತ್ತು ವಾಣಿಜ್ಯ ವಿಷಯಗಳಲ್ಲಿ ಜೂನಿಯರ್ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಜೂ.4 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ.

ಶಿಕ್ಷಕ ಹುದ್ದೆಗೆ ನೇಮಕ

ಕಾಸರಗೋಡು: ಅಡೂರು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಅರೇಬಿಕ್ ವಿಷಯಕ್ಕೆ ಸಂಬಂಧಿಸಿ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಜೂ.4 ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9633808765 ಸಂಪರ್ಕಿಸಬಹುದು.

ಬೋಧನಾ ಶಿಕ್ಷಕರ ನೇಮಕಾತಿ

ಕಾಸರಗೋಡು: ರಾಜಪುರಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಲಕರ ಮೆಟ್ರಿಕ್ ಪೂರ್ವ ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಬೋಧನೆ ನೀಡಲು ಗೌರವಧನದ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಲಾಗುತ್ತಿದೆ. ಪ್ರೌಢಶಾಲಾ ಮಟ್ಟದಲ್ಲಿ ಸಂಬಂಧಿತ ವಿಷಯದಲ್ಲಿ ಬಿ.ಎಡ್., ಯುಪಿ ಮಟ್ಟದಲ್ಲಿ ಟಿಟಿಸಿ ಶಿಂಕ್ಷಣ ಹೊಂದಿರುವ ಶಿಕ್ಷಕರು ಅರ್ಹರು. ಬಿ.ಎಡ್. ಅರ್ಹತೆ ಹೊಂದಿರುವ ನಿರುದ್ಯೋಗಿ ಪದವೀಧರರು ಸಹ ಅರ್ಜಿ ಸಲ್ಲಿಸಬಹುದು. ಗಣಿತ, ಭೌತ ವಿಜ್ಞಾನ, ನೈಸರ್ಗಿಕ ವಿಜ್ಞಾನ, ಇಂಗ್ಲಿಷ್, ಹಿಂದಿ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ನೇಮಕಾತಿ ನಡೆಯಲಿದೆ. ಅರ್ಜಿಗಳು ಮತ್ತು ಪ್ರಮಾಣಪತ್ರಗಳ ಪ್ರತಿಗಳನ್ನು ಪರಪ್ಪ ಬ್ಲಾಕ್ ಪಂಚಾಯತ್ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಪ್ಪ ಬ್ಲಾಕ್ ಪರಿಶಿಷ್ಟ ಜಾತಿ ಅಭಿವೃದ್ಧಿ ಕಚೇರಿಯಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ 8848757193 ಕರೆ ಮಾಡಬಹುದು.

ಕಾಸರಗೋಡು ಕಂದಾಯ ಜಿಲ್ಲಾ ಮಟ್ಟದ ಶಾಲಾ ಪ್ರವೇಶೋತ್ಸವ | ಸಚಿವ ಸನ್ನಿ ಜೋಸೆಫ್ ಅಭಿಮತ

ವ್ಯಕ್ತಿಯಲ್ಲಿ ಸಚ್ಚಾರಿತ್ರ್ಯ ನಿರ್ಮಾಣಕ್ಕೆ ಶಿಕ್ಷಣವೇ ಮೂಲಾಧಾರ

ಕಾಸರಗೋಡು: ಶಿಕ್ಷಣವು ಕೇವಲ ಅಕ್ಷರ ಜ್ಞಾನವಷ್ಟೇ ಅಲ್ಲ, ಅದು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಮತ್ತು ಸಚ್ಚಾರಿತ್ರ್ಯ ನಿರ್ಮಾಣಕ್ಕೆ ಮೂಲಾಧಾರವಾಗಿದೆ. ಒಳ್ಳೆಯ ಶಿಕ್ಷಣವು ವ್ಯಕ್ತಿಯಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ ಎಂದು ಕೇರಳ ವಿದ್ಯುತ್, ಪರಿಸರ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಸನ್ನಿ ಜೋಸೆಫ್ ಹೇಳಿದ್ದಾರೆ. ಕೈಕೊಟ್ಟುಕಡವು ಪಿಎಂಎಸ್‌ಎ ಪೂಕೋಯ ತಂಙಳ್ ವೊಕೇಶನಲ್ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಕಾಸರಗೋಡು ಕಂದಾಯ ಜಿಲ್ಲಾ ಮಟ್ಟದ ಪ್ರವೇಶೋತ್ಸವ ಸಮಾರಂಭವನ್ನು ಸೋಮವಾರ ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಸಚಿವ ಎಂ.ಶಂಸುದ್ದೀನ್ ಆನ್‌ಲೈನ್ ಮೂಲಕ ಭಾಗವಹಿಸಿ ಮಾತನಾಡಿ, ಮಕ್ಕಳು ತಮ್ಮನ್ನು ತಾವು ಆನಂದಿಸನು, ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹಾರಲು ಮತ್ತು ಭಯವಿಲ್ಲದೆ ಪ್ರಶ್ನೆಗಳನ್ನು ಕೇಳಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಅವರ ಸಂದೇಶವನ್ನು ಓದಿದರು ಮತ್ತು ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಕ್ಕಳಿಗೆ ಪ್ರಶಸ್ತಿಗಳನ್ನು ನೀಡಿದರು. ಅಧ್ಯಕ್ಷತೆ ವಹಿಸಿದ್ದ ತೃಕ್ಕರಿಪುರ ಶಾಸಕ ಸಂದೀಪ್ ವಾರಿಯರ್ ಮಾತನಾಡಿದರು.



ಆಕರ್ಷಕ ಶೈಲಿಯಲ್ಲಿ ಮೆರವಣಿಗೆ

ಶಾಲೆಗಳಿಗೆ ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಸ್ವಾಗತಿಸಲು ಶಾಸಕ ಸಂದೀಪ್ ವಾರಿಯರ್ ನೇತೃತ್ವದಲ್ಲಿ ಮೆರವಣಿಗೆಯೊಂದಿಗೆ ಪ್ರವೇಶೋತ್ಸವ ಹಮ್ಮಿಕೊಳ್ಳಲಾಯಿತು. ನಂತರ ಪ್ರವೇಶೋತ್ಸವ ಹಾಡಿನ ಮೂಲಕ ನೂತನ ಮಕ್ಕಳನ್ನು ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು.

ಮಾದಕ ದ್ರವ್ಯ ವಿರೋಧಿ ಪ್ರತಿಜ್ಞೆ

ಕಾರ್ಯಕ್ರಮದಲ್ಲಿ ರಾಜ್ಯ ಅಬಕಾರಿ ಇಲಾಖೆಯ ನೇತೃತ್ವದ ವಿಮುಕ್ತಿ ಮಿಷನ್‌ನ ಭಾಗವಾಗಿ ಮಾದಕ ದ್ರವ್ಯ ವಿರೋಧಿ ಪ್ರತಿಜ್ಞೆಯನ್ನು ಕೈಗೊಳ್ಳಲಾಯಿತು. ವಿಮುಕ್ತಿ ಮಿಷನ್ ಜಿಲ್ಲಾ ಸಂಯೋಜಕ ಕೆ.ಎಂ. ಸ್ನೇಹಾ ಪ್ರತಿಜ್ಞೆ ಬೋಧಿಸಿದರು. ನಂತರ ಶಾಸಕ ಸಂದೀಪ್ ವಾರಿಯರ್ ವಿಮುಕ್ತಿ ಮಿಷನ್‌ನ ಮಾದಕ ದ್ರವ್ಯ ವಿರೋಧಿ ಅಭಿಯಾನದ ನೋಟೀಸ್‌ಗಳ ವಿತರಣೆಯನ್ನು ಶಾಲಾ ಪ್ರಾಂಶುಪಾಲ ಪಿ.ಹಮೀದ್ ಮಾಸ್ಟರ್ ಅವರಿಗೆ ಹಸ್ತಾಂತರಿಸುವ ಮೂಲಕ ಉದ್ಘಾಟಿಸಿದರು.

ಪ್ರಭಾರ ಶಿಕ್ಷಣ ನಿರ್ದೇಶಕ ಪಿ.ಸವಿತಾ ಸ್ವಾಗತಿಸಿ, ಮುಖ್ಯ ಶಿಕ್ಷಕ ಪಿ.ಹಮೀದ್ ವಂದಿಸಿದರು. ನೀಲೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಸಿ.ಎಂ. ಮೀನಾಕುಮಾರಿ, ತೃಕ್ಕರಿಪ್ಪುರ ಗ್ರಾಮ ಪಂಚಾಯತ್ ಅಧ್ಯಕ್ಷೆ ಸಜಿತಾ ಸಫರುಲ್ಲಾ, ಬ್ಲಾಕ್ ಪಂಚಾಯತ್ ಸದಸ್ಯೆ ವಿ.ಪಿ.ಸುನೀರ, ಕೈಕೊಟ್ಟುಕಡವು ವಾರ್ಡ್ ಸದಸ್ಯ ಎಂ.ಟಿ.ಅಬ್ದುರಹಮಾನ್, ಗ್ರಾಮ ಪಂಚಾಯತ್ ಉಪಾಧ್ಯಕ್ಷ ಎಂ.ರಾಜೇಶ್ ಬಾಬು, ಗ್ರಾಮ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಎಂ.ಕೆ.ಪ್ರಸನ್ನ, ಕಾಸರಗೋಡು ಡಯಟ್ ಪ್ರಾಂಶುಪಾಲ ರಘುರಾಮ್ ಭಟ್, ಎಡಿಎಚ್‌ಎಸ್‌ಇ ಇ.ಉದಯಕುಮಾರಿ, ಡಿಪಿಸಿ ಬಿಜುರಾಜ್, ಚೆರುವತ್ತೂರು ಎಇಒ ರಮೇಶ್ ಪುನ್ನತ್ತಿರಿಯನ್, ಚೆರುವತ್ತೂರು ಬಿಪಿಸಿ ವಿ.ಪಿ.ಸುಬ್ರಮಣಿಯನ್, ಕೈಕೊಟ್ಟುಕಡವು ಮುಸ್ಲಿಂ ಜಮಾಅತ್ ಅಧ್ಯಕ್ಷ ವಿ.ಪಿ.ಎಂ.ನೂರುದ್ದೀನ್, ಕಾರ್ಯದರ್ಶಿ ಅಬ್ದುಲ್ಲ ದಾರಿಮಿ, ವಿಎಚ್‌ಎಸ್‌ಇ ಪ್ರಾಂಶುಪಾಲ ಬಿಜು ಪ್ರಮೋದ್, ಪಿಟಿಎ ಅಧ್ಯಕ್ಷ ನಜೀರ್ ತೃಕ್ಕರಿಪ್ಪುರ, ಎಂಪಿಟಿಎ ಅಧ್ಯಕ್ಷೆ ರಹೀನಾ ಇಸ್ಮಾಯಿಲ್ ಮುಂತಾದವರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ಅಭಿನಂದನೆ

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎ ಪ್ಲಸ್ ಪಡೆದ ವಿದ್ಯಾರ್ಥಿಗಳು, ಎನ್‌ಎಂಎಂಎಸ್, ಯುಎಸ್‌ಎಸ್, ಎಲ್‌ಎಸ್‌ಎಸ್ ಮತ್ತು ವಿಎಚ್‌ಎಸ್‌ಇ ಪರೀಕ್ಷೆಗಳಲ್ಲಿ ಹೆಚ್ಚಿನ ಯಶಸ್ಸು ಸಾಧಿಸಿದ ವಿದ್ಯಾರ್ಥಿಗಳು ಮತ್ತು ಪರೀಕ್ಷೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಎಣ್ಮಕಜೆ ಗ್ರಾಮ ಪಂಚಾಯತ್ ಮಟ್ಟದ ಶಾಲಾ ಪ್ರವೇಶೋತ್ಸವ



ಪೆರ್ಲ: ಎಣ್ಮಕಜೆ ಗ್ರಾಮ ಪಂಚಾಯತ್ ಮಟ್ಟದ ಶಾಲಾ ಪ್ರವೇಶೋತ್ಸವ ಶೇಣಿ ಶ್ರೀ ಶಾರದಾಂಬಾ ಶಾಲೆಯ ನೂತನ ಸಭಾಂಗಣದಲ್ಲಿ ನಡೆಯಿತು.

ಅಧ್ಯಕ್ಷೆ ಕುಸುಮಾವತಿ ಉದ್ಘಾಟಿಸಿದರು. ಉಪಾಧ್ಯಕ್ಷ ಅಬೂಬಕ್ಕರ್ ಸಿದ್ದೀಕ್ ಖಂಡಿಗೆ ವಳಮೊಗರು ಅಧ್ಯಕ್ಷತೆ ವಹಿಸಿದ್ದರು. ಶರತ್ಚಂದ್ರ ಶೆಟ್ಟಿ ಎಂ.ಎಸ್., ಬ್ಲಾಕ್ ಪಂಚಾಯತ್ ಸದಸ್ಯೆ ಮಿಸ್ರಿಯಾ ಕರೀಂ, ಶಾಲಾ ಪ್ರಬಂಧಕಿ ಶಾರದಾ ವೈ., ಪೆರ್ಲ ಸೇವಾ ಸಹಕಾರಿ ಬ್ಯಾಂಕ್ ಅಧ್ಯಕ್ಷೆ ಶ್ಯಾಮಲಾ ಆರ್.ಭಟ್, ಹೈಯರ್ ಸೆಕೆಂಡರಿ ಶಾಲಾ ಪ್ರಾಂಶುಪಾಲ ಶಾಂತಕುಮಾರ್, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ವಿಲ್ಸನ್ ಡಿಸೋಜ, ಅಬೂಬಕ್ಕರ್ ಹಾಜಿ ಪೆರ್ದನೆ, ಮಾತೃ ಸಂಘದ ಅಧ್ಯಕ್ಷೆ ಜಯಲಕ್ಷ್ಮಿ ಪ್ರಜ್ವಲಿ, ಉಪಾಧ್ಯಕ್ಷ ಉಮ್ಮರ್ ಕಂಗಿನಮೂಲೆ, ಮಹೇಶ್ ಪುಣಿಯೂರು ಇದ್ದರು.

ಸಿಎಂ ಕಿಡ್ಸ್ ಸ್ಕಾಲರ್ ಶಿಪ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಯುಪಿ ವಿಭಾಗದ ಆಯಿಷತ್ ಇಹಾ ಕಲ್ಲಕಟ್ಟೆ ಹಾಗೂ ಎಸ್ಸೆಸ್ಸೆಲ್ಸಿಯಲ್ಲಿ ಎಲ್ಲಾ ವಿಷಯದಲ್ಲೂ ಎ ಪ್ಲಸ್ ಗಳಿಸಿದ 12 ಮಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಮಕ್ಕಳಿಗೆ ಪೆರ್ಲ ಸೊಸೈಟಿ, ಹಳೆ ವಿದ್ಯಾರ್ಥಿ ಸಂಘದ ಪರವಾಗಿ ಬ್ಯಾಗ್ ವಿತರಿಸಲಾಯಿತು. ಉದ್ಯಮಿ ಶಂಕರ ಪಾಟಾಳಿ, ಗೀತಾ ದಂಪತಿ ಪ್ರಾಯೋಜಕತ್ವದಲ್ಲಿ ಸಿಹಿತಿಂಡಿ ವಿತರಿಸಲಾಯಿತು. ಯುಪಿ ಶಾಲಾ ಮುಖ್ಯೋಪಾಧ್ಯಾಯ, ಪಂಚಾಯತ್ ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನಾಯಕ್ ಜೆ.ಎಸ್. ಸ್ವಾಗತಿಸಿ, ಹೈಸ್ಕೂಲ್ ವಿಭಾಗದ ಮುಖ್ಯೋಪಾಧ್ಯಾಯಿನಿ ಗೀತಾ ಬಿ.ಆರ್. ವಂದಿಸಿದರು. ಶ್ರೀಧರ ಮಾಸ್ತರ್ ಕುಕ್ಕಿಲ ಕಾರ್ಯಕ್ರಮ ನಿರೂಪಿಸಿದರು.

ಮಕ್ಕಳು ಬಾಲ್ಯವನ್ನು ಮನದುಂಬಿ ಅನುಭವಿಸಲಿ: ಎ.ಕೆ.ಎಂ.ಅಶ್ರಫ್



ಮಂಜೇಶ್ವರ: ಯಾವುದೇ ಜವಾಬ್ದಾರಿಗಳ ಹಂಗಿಲ್ಲದೇ ಮನಬಂದಂತೆ ಉಲ್ಲಾಸದಿಂದ ಅನುಭವಿಸುವ ಬಾಲ್ಯವನ್ನು ಮಕ್ಕಳು ಅನುಭವಿಸಬೇಕು ಎಂದು ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಶಾಸಕ ಎ.ಕೆ.ಎಂ.ಅಶ್ರಫ್ ಹೇಳಿದ್ದಾರೆ.

ಮಂಜೇಶ್ವರ ಉಪಜಿಲ್ಲಾ ಮಟ್ಟದ ಶಾಲಾ ಪ್ರವೇಶೋತ್ಸವ ಕಾರ್ಯಕ್ರಮವನ್ನು ಉಪ್ಪಳ ಐಲ ಶ್ರೀ ಶಾರದಾ ಬೋವಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ಶಾಲೆಯನ್ನು ತನ್ನ ಶಿಕ್ಷಣ ಮಾಧ್ಯಮವನ್ನಾಗಿ ಆರಿಸಿದ ಹೆತ್ತವರ ಆಯ್ಕೆ ನನ್ನ ಇಂದಿನ ಹಂತದ ಬೆಳವಣಿಗೆಗೆ ಪೂರಕವಾಗಿದೆ ಎಂದರು.

ಶಾಲಾ ವ್ಯವಸ್ಥಾಪಕ ಆನಂದ ಕೆ.ಐಲ ದೀಪ ಪ್ರಜ್ವಲನೆ ನಡೆಸಿದರು. ಮಂಗಲ್ಪಾಡಿ ಗ್ರಾ.ಪಂ. ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಮಾನ್ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅಬ್ದುಲ್ ರಜಾಕ್ ಬಪ್ಪಾಯಿತೊಟ್ಟಿ ಸದಸ್ಯರಾದ ಬಿ.ಎಂ.ಸಲೀಮ್, ವಸಂತ ಕುಮಾರ್ ಮಯ್ಯ, ರವೀಂದ್ರ ಶೆಟ್ಟಿ ನಿವೃತ್ತ ಸಹಾಯಕ ಶಿಕ್ಷಣಾಧಿಕಾರಿ ಜಾರ್ಜ್ ಕ್ರಾಸ್ತಾ ಸಿ.ಎಚ್., ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಕಿರಣ್ ಕುಮಾರ್, ಮಾತೃ ಸಂಘದ ಸದಸ್ಯೆ ಸೌಜನ್ಯ, ಜಿತೇಂದ್ರ ಎಸ್.ಎಚ್., ರಾಜಗೋಪಾಲ, ನಿವೃತ್ತ ಮುಖ್ಯ ಶಿಕ್ಷಕಿ ಜಲಜಾಕ್ಷಿ ಎ. ಶುಭಕೋರಿದರು. ಸಹ ಸಂಚಾಲಕಿ ಸ್ವಾತಿ ಉಚ್ಚಿಲ್ ಸ್ವಾಗತಿಸಿ, ಅಮಿತಾ ಐಲ ವಂದಿಸಿದರು. ಕೆ.ಪಿ.ನಾಭ, ರಂಜಿತ ನಿರೂಪಿಸಿದರು. ಕನ್ನಡ ಮಾಧ್ಯಮ ಕಲಿಕೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಐಲ ಬೋವಿ ಶಾಲೆಯಲ್ಲಿ ನೂತನವಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಕೊಡೆ ಹಾಗೂ ಬ್ಯಾಗ್ ವಿತರಿಸಲಾಯಿತು.

ಕಿಳಿಂಗಾರು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರವೇಶೋತ್ಸವ



ಬದಿಯಡ್ಕ: ಕಿಳಿಂಗಾರು ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರವೇಶೋತ್ಸವವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಶಾಲಾ ವ್ಯವಸ್ಥಾಪಕ, ಕೊಡುಗೈದಾನಿ ಕೆ.ಎನ್.ಕೃಷ್ಣ ಭಟ್ ದೀಪ ಬೆಳಗಿಸಿ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ವಿಷ್ಣುಪ್ರಕಾಶ್ ಪೆರ್ವ ವಹಿಸಿದ್ದರು.

ಶಾಲಾ ನಿವೃತ್ತ ಮುಖ್ಯೋಪಾಧ್ಯಾಯ, ವ್ಯವಸ್ಥಾಪಕ ಮಂಡಳಿ ಸದಸ್ಯ ಕೆ.ರಾಮಕೃಷ್ಣ ಭಟ್, ಶಾಲಾ ವ್ಯವಸ್ಥಾಪಕ ಮಂಡಳಿಯ ಸದಸ್ಯ ಶಿವಪ್ರಸಾದ್ ಹೊಸಮನೆ ಶುಭಾಶಂಸನೆಗೈದರು. ಹಳೆ ವಿದ್ಯಾರ್ಥಿ ಸಂಘದ ಸದಸ್ಯ, ನಿವೃತ್ತ ಅಧ್ಯಾಪಕ ಉದನೇಶವೀರ ಕಿಳಿಂಗಾರು ತಮ್ಮ ಶಾಲಾ ಜೀವನದ ಅನುಭವ ಹಂಚಿಕೊಂಡು ಶುಭಹಾರೈಸಿದರು.

ಶಾಲಾ ಮಾತೃ ಮಂಡಳಿ ಅಧ್ಯಕ್ಷೆ ದಿವ್ಯಲಕ್ಷ್ಮಿ ನಿಡುಗಳ ಶುಭಕೋರಿದರು.

ಮುಖ್ಯೋಪಾಧ್ಯಾಯಿನಿ ಶ್ರೀವಿದ್ಯಾ ಸ್ವಾಗತಿಸಿ, ಅಧ್ಯಾಪಿಕೆ ಸಹನಾ ವಂದಿಸಿದರು. ಅಧ್ಯಾಪಕರಾದ ಮಧುಮತಿ, ಪ್ರದೀಪಕುಮಾರ್ ಶೆಟ್ಟಿ ಅನುರಾಧಾ, ತೇಜಸ್ವಿ ಹಾಗೂ ಸ್ಥಳೀಯ ಯುವ ಕೇಸರಿ ಕ್ಲಬ್‌ನ ಸದಸ್ಯರು, ಶಾಲಾ ರಕ್ಷಕರು, ಹಳೆ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬ್ಯಾಗ್, ಕಲಿಕಾ ಕಿಟ್ ವಿತರಣೆ

ತರಗತಿಗಳಿಗೆ ನೂತನವಾಗಿ ದಾಖಲಾದ ಮಕ್ಕಳಿಗೆ ಬ್ಯಾಗ್ ಕಲಿಕಾ ಕಿಟ್ ವಿತರಿಸಿ ಸ್ವಾಗತಿಸಲಾಯಿತು.

ಮಧೂರು ದೇವಾಲಯದಲ್ಲಿ ಬೀಳ್ಕೊಡುಗೆ ಸಮಾರಂಭ, ಸನ್ಮಾನ



ಕಾಸರಗೋಡು: ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಕಳೆದ ನಾಲ್ಕು ದಶಕಗಳಿಂದ ಸೇವೆ ಸಲ್ಲಿಸುತ್ತಿದ್ದ ಬಿ.ಎನ್.ಸುಬ್ರಹ್ಮಣ್ಯ ರಂಗಾ ಭಟ್ ಅವರಿಗೆ ಭಾನುವಾರ ಬೀಳ್ಕೊಡುಗೆ ಸಮಾರಂಭವನ್ನು ಶ್ರೀ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಯಿತು.

ದೇವಾಲಯದ ಎಕ್ಸಿಕ್ಯೂಟಿವ್ ಆಫೀಸರ್ ರಾಜೇಶ್ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಜಯದೇವ ಖಂಡಿಗೆ, ಜ್ಯೋತಿಷಿ ನಾರಾಯಣ ರಂಗಾ ಭಟ್ ಮಧೂರು, ಪಿ.ಕೆ.ಧನಂಜಯ, ಕೆ. ನಾರಾಯಣಯ್ಯ ಮಾಸ್ತರ್ ಮಾತನಾಡಿದರು. ಶ್ರೀ ಕ್ಷೇತ್ರದ ನೌಕರ ವೃಂದದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭ ಉದ್ಯೋಗಕ್ಕೆ ಸೇರಲು ಸಹಕರಿಸಿದ ಅಂದಿನ ದಿ. ಶಂಕರ ರಾವ್ ಕಾಸರಗೋಡು, ಬೇವಿಂಜೆ ವಿಷ್ಣು ಕಕ್ಕಿಲ್ಲಾಯ ಅವರನ್ನು ಸುಬ್ರಹ್ಮಣ್ಯ ರಂಗಾ ಭಟ್ ಅವರು ನೆನಪಿಸಿದರು. ಶೋಭಾ ಪ್ರಾರ್ಥನೆ ಹಾಡಿದರು. ವೇಣುಗೋಪಾಲ ಸ್ವಾಗತಿಸಿ, ಕೆ.ಶ್ಯಾಮ ಮಧ್ಯಸ್ಥ ವಂದಿಸಿದರು.

ಜೂ.4ರಂದು ಟ್ರಾಲಿಂಗ್ ನಿಷೇಧ ಬಗ್ಗೆ ಸಭೆ

ಕಾಸರಗೋಡು: ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಟ್ರಾಲಿಂಗ್ ನಿಷೇಧ ಕುರಿತು ಸಮಾಲೋಚಿಸಲು ವಿಶೇಷ ಸಭೆಯು ಜೂ.4ರಂದು ಬೆಳಗ್ಗೆ 11 ಗಂಟೆಗೆ ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

ಕಾಸರಗೋಡು ಅಂತರ್ಜಲ ಇಲಾಖೆಯ ಕೊಳವೆಬಾವಿ ನಿರ್ಮಾಣ ಘಟಕಕ್ಕೆ ಚಾಲನೆ



ಕಾಸರಗೋಡು: ಸಾರ್ವಜನಿಕರಿಗೆ ಸೇವೆಗಳನ್ನು ಇನ್ನಷ್ಟು ಸುಧಾರಿಸಲು ಮತ್ತು ಉತ್ತಮಗೊಳಿಸಲು ಕಾಸರಗೋಡು ಅಂತರ್ಜಲ ಇಲಾಖೆಗೆ ಒದಗಿಸಲಾದ ಹೊಸ ಬೋರ್‌ವೆಲ್ ನಿರ್ಮಾಣ ಘಟಕದ ಧ್ವಜಾರೋಹಣ ಸಮಾರಂಭವನ್ನು ಸೋಮವಾರ ನಡೆಸಲಾಯಿತು.

ಕಾಸರಗೋಡು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಹೊಸ ಘಟಕವನ್ನು ಉದ್ಘಾಟಿಸಿ, ಧ್ವಜಾರೋಹಣ ನೆರವೇರಿಸಿದರು. ಒಳನಾಡಿನ ಪ್ರದೇಶಗಳನ್ನು ಕೂಡಾ ತಲುಪಬಹುದಾದ ಬೋರ್‌ವೆಲ್ ರಿಗ್ ಆಗಿರುವುದರಿಂದ ಹೊಸ ಅತ್ಯಾಧುನಿಕ ವ್ಯವಸ್ಥೆಯು ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ಪರಿಹರಿಸಲು ಮತ್ತು ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲು ಬಹಳ ಸಹಾಯಕವಾಗಲಿದೆ ಎಂದು ಅವರು ಇದೇ ವೇಳೆ ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಾಸರಗೋಡು ಅಂತರ್ಜಲ ಇಲಾಖೆಯ ಜಿಲ್ಲಾ ಅಧಿಕಾರಿ ರತೀಶ್ ಒ. ವಹಿಸಿದ್ದರು. ಸಹಾಯಕ ಇಂಜಿನಿಯರ್ ಸುಮಿತ್ ಲಾಲ್ ಸಿ. ಮತ್ತು ಹಿರಿಯ ಗುಮಾಸ್ತ ಮನೋಜ್ ಕುಮಾರ್ ಪಿ.ಆರ್. ಮಾತನಾಡಿದರು. ಅಂತರ್ಜಲ ಇಲಾಖೆಯ ಬೋರ್‌ವೆಲ್‌ಗಳ ನಿರ್ಮಾಣಕ್ಕೆ ಸಂಬಂಧಿಸಿ ಸಾರ್ವಜನಿಕರು ಅಗತ್ಯದ ಸೇವೆಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಬೇಕೆಂದು ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಯೀಮ್ ವಿ.ಎಂ. ಸ್ವಾಗತಿಸಿ, ಮಾಸ್ಟರ್ ಡ್ರಿಲ್ಲರ್ ಅಬ್ದುಲ್ ಸಮದ್ ಎ. ಧನ್ಯವಾದವಿತ್ತರು. ಈ ಮಧ್ಯೆ ಅಂತರ್ಜಲ ಇಲಾಖೆಯ ಬೋರ್‌ವೆಲ್ ನಿರ್ಮಾಣ ಘಟಕದ ಅಗತ್ಯವಿರುವವರು 04994255392 ಕರೆ ಮಾಡಬಹುದು.



ತಿರುವನಂತಪುರದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ಶಾಲಾ ಪ್ರವೇಶೋತ್ಸವವನ್ನು ಮುಖ್ಯಮಂತ್ರಿ ವಿ.ಡಿ.ಸತೀಶನ್ ದೀಪ ಬೆಳಗಿಸಿ ಉದ್ಘಾಟಿಸಿದರು.



ಕಾಸರಗೋಡಿನ ಎಡನೀರು ಶ್ರೀ ವನಶಾಸ್ತಾ ದೇವಸ್ಥಾನದ ಸುತ್ತು ಬೆಳಕು ಸೇವೆಯನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕೇಂದ್ರ ಸರ್ಕಾರದ ನೆರವಿನ ರಾಜ್ಯ ತೋಟಗಾರಿಕಾ ಮಿಷನ್ ಯೋಜನೆ

ಪುತ್ತಿಗೆ ಗ್ರಾ.ಪಂ.ನಿಂದ ತರಕಾರಿ ಮಾರಾಟ ಕೇಂದ್ರ

ಕುಂಬಳೆ: ಪುತ್ತಿಗೆ ಗ್ರಾಮ ಪಂಚಾಯತ್‌ನ ಕೃಷಿ ಭವನದ ಮೂಲಕ ಕೇಂದ್ರ ಸರ್ಕಾರದ ಆರ್ಥಿಕ ಸಹಾಯದೊಂದಿಗಿರುವ ರಾಜ್ಯ ಹಾರ್ಟಿಕಲ್ಚರ್ ಮಿಷನ್ ಯೋಜನೆಯ ಅಂಗವಾಗಿ ತರಕಾರಿ, ಹಣ್ಣುಹಂಪಲುಗಳ ಮಾರಾಟ ಕೇಂದ್ರವು ಪುತ್ತಿಗೆಯಲ್ಲಿ ಆರಂಭಗೊಂಡಿದೆ.

ಈ ಕೇಂದ್ರದ ಉದ್ಘಾಟನೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷೆ ಫಿದಾ ಊಜಂಪದವು ನೆರವೇರಿಸಿದರು. ಗ್ರಾ.ಪಂ. ಉಪಾಧ್ಯಕ್ಷ ಇ.ಕೆ.ಮುಹಮ್ಮದ್ ಕುಂಞಿ ಅಧ್ಯಕ್ಷತೆ ವಹಿಸಿದ್ದರು. ಪುತ್ತಿಗೆ ಕೃಷಿಭವನದ ಕೃಷಿ ಅಧಿಕಾರಿ ಯೋಜನೆ ಕುರಿತು ವಿವರಿಸಿದರು.



ಸಮಾರಂಭದಲ್ಲಿ ಎಣ್ಮಕಜೆ ಗ್ರಾ.ಪಂ. ಉಪಾಧ್ಯಕ್ಷ ಸಿದ್ದಿಕ್ ಒಳಮೊಗರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಗ್ರಾಮ ಪಂಚಾಯತ್ ಸದಸ್ಯರಾದ ಲಲಿತಾ ಸಂತೋಷ್, ಮಜೀದ್, ಅಬ್ದುಲ್ಲ ಮೊದಲಾದವರು ಮಾತನಾಡಿದರು.

ಯೋಜನೆಯು ಕೃಷಿ ವಲಯದ ಉತ್ಪನ್ನ ಹೆಚ್ಚಳ, ಮಾರುಕಟ್ಟೆ ವ್ಯವಸ್ಥೆ ಕೃಷಿಕರ ಸಹಾಯಕ್ಕಾಗಿ ರೂಪುಗೊಂಡಿದೆ. ಕೃಷಿಕರು ಬೆಳೆಸಿದ ಹೂ, ಹಣ್ಣುಹಂಪಲು, ತರಕಾರಿ, ಜೇನು, ಅಣಬೆ ಮೊದಲಾದವುಗಳಿಗೆ ಮಾರುಕಟ್ಟೆಯೊಂದಿಗೆ ಪ್ರೋತ್ಸಾಹ ನೀಡಿ ಕೃಷಿ ವಲಯವನ್ನು ಬೆಂಬಲಿಸುವುದು ಮತ್ತು ಕೃಷಿಕರನ್ನು ಉತ್ತೇಜಿಸುವುದು ಯೋಜನೆಯ ಮುಖ್ಯ ಧ್ಯೇಯವಾಗಿದೆ.

ಬೆಳ್ಳಿಪ್ಪಾಡಿಯಲ್ಲಿ ಕಾಡಾನೆ ಹಾವಳಿಯಿಂದ ಕೃಷಿತೋಟಗಳು ನಾಶ

ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ರೈತರ ವ್ಯಾಪಕ ಆಕ್ರೋಶ

ಮುಳ್ಳೇರಿಯ: ದೇಲಂಪಾಡಿ ಪಂಜಿಕಲ್ಲು ಬೆಳ್ಳಿಪ್ಪಾಡಿ ಪರಿಸರದಲ್ಲಿ ಕಾಡಾನೆಗಳ ಹಾವಳಿಯಿಂದ ಕೃಷಿಕರು ಕಂಗಾಲಾಗಿರುವುದಾಗಿ ಸ್ಥಳೀಯರು ದೂರಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಈ ಪ್ರದೇಶದಲ್ಲಿ ರಾತ್ರಿ ವೇಳೆ ಕಾಡಾನೆಗಳು ದಾಳಿ ನಡೆಸುತ್ತಿದ್ದು, ತೆಂಗು, ಕಂಗು, ಬಾಳೆ, ಕರಿಮೆಣಸು, ರಬ್ಬರ್, ತರಕಾರಿ, ಹಣ್ಣುಹಂಪಲು ಸಹಿತ ವಿವಿಧ ಕೃಷಿ ಭೂಮಿಗಳನ್ನು ನಾಶಪಡಿಸುತ್ತಿರುವುದಾಗಿ ಆಕ್ರೋಶ ವ್ಯಕ್ತಗೊಂಡಿದೆ. ಶನಿವಾರ ರಾತ್ರಿ ಬೆಳ್ಳಿಪ್ಪಾಡಿ ಎ.ಬಿ.ಶ್ರೀನಿಲಯ ಭಟ್ ಅವರ ಅಡಿಕೆ ತೋಟಕ್ಕೆ ಆನೆಗಳು ದಾಳಿಯಿಟ್ಟು ಕೃಷಿನಾಶಗೈದಿವೆ. ಈ ಪರಿಸರದಲ್ಲಿ ಸಂಭವಿಸುತ್ತಿರುವ ಕೃಷಿ ನಾಶ ನಷ್ಟದ ಬಗ್ಗೆ ಅರಣ್ಯಾಧಿಕಾರಿಗಳು ಗಮನ ಹರಿಸುತ್ತಿಲ್ಲವೆಂದು ಸ್ಥಳೀಯರು ಆರೋಪಿಸಿದ್ದಾರೆ. ಭಾನುವಾರ ಹಗಲು ಹೊತ್ತಿನಲ್ಲಿ ಪರಪ್ಪ ಫಾರೆಸ್ಟ್ ಅಧಿಕಾರಿಗಳು ಸ್ಥಳ ಸಂದರ್ಶಿಸಿದ್ದು, ಆದರೆ ಭಾನುವಾರ ರಾತ್ರಿ ವೇಳೆಯಲ್ಲಿ ಮತ್ತೆ ಆನೆಗಳು ಲಗ್ಗೆಯಿಟ್ಟಿರುವುದಾಗಿ ಪರಿಸರ ನಿವಾಸಿಗಳು ಹೇಳಿದ್ದಾರೆ.



ಸ್ಪಂದಿಸದ ಅಧಿಕಾರಿಗಳು

ದೇಲಂಪಾಡಿ, ಪಂಜಿಕಲ್ಲು, ಬೆಳ್ಳಿಪ್ಪಾಡಿ ಹಾಗೂ ಆಸುಪಾಸಿನ ಪ್ರದೇಶಗಳಿಗೆ ಕಾಡಾನೆಗಳು ಪದೇ ಪದೇ ಲಗ್ಗೆಯಿಟ್ಟು ಕೃಷಿ ಫಸಲುಗಳನ್ನು ಸಂಪೂರ್ಣವಾಗಿ ನಾಶಪಡಿಸುತ್ತಿದ್ದು, ಇಲ್ಲಿನ ಸಮಸ್ಯೆಗಳ ಬಗ್ಗೆ ಸ್ಥಳೀಯರು ಹಲವು ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದ್ದೂರು, ಯಾವುದೇ ಸ್ಪಂದನೆ ಲಭಿಸಿಲ್ಲ ಎಂದು ಸ್ಥಳೀಯ ಕೃಷಿಕರು ತಿಳಿಸಿದ್ದಾರೆ.

ಸುತ್ತಮುತ್ತ

ನಾಳೆ ಮೆಸ್ಕಾಂ ಜನಸಂಪರ್ಕ ಸಭೆ

ಉಡುಪಿ: ಮೆಸ್ಕಾಂ ಬ್ರಹ್ಮಾವರ ಉಪವಿಭಾಗ ಕಚೇರಿಯಲ್ಲಿ ಜೂ.3ರಂದು ಬೆಳಗ್ಗೆ 10.30ರಿಂದ 12 ಗಂಟೆಯವರೆಗೆ ಜನಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸಲಾಗುತ್ತಿದ್ದು ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:- 0820-25612 ಸಂಪರ್ಕಿಸುವಂತೆ ಮೆಸ್ಕಾಂ ಕಚೇರಿ ಪ್ರಕಟಣೆ ತಿಳಿಸಿದೆ.

ಯುವ ಕಲಾವಿದರಿಗೆ ಮಾರ್ಗದರ್ಶಿ ಶಿಬಿರ

ಉಡುಪಿ: ವೃತ್ತಿ ಮೇಳದಲ್ಲಿರುವ ಯುವ ಕಲಾವಿದರಿಗೆ ನಾಲ್ಕು ದಿನಗಳ ಮಾರ್ಗದರ್ಶಿ ಶಿಬಿರವನ್ನು ಉಡುಪಿಯ ಯಕ್ಷಗಾನ ಕಲಾರಂಗವು ಆಯೋಜಿಸಿದೆ. ಈ ಸನಿವಾಸ ಶಿಬಿರ ಜೂ.2ರಿಂದ 5ರವರೆಗೆ ಸಂಸ್ಥೆಯ ಐವೈಸಿ ಕಟ್ಟಡದಲ್ಲಿ ಜರುಗಲಿದೆ. ಯಕ್ಷಗಾನದ ಹಿರಿಯ ವಿದ್ವಾಂಸ ಡಾ. ಎಂ. ಪ್ರಭಾಕರ ಜೋಶಿಯವರು ಜೂ. 2ರಂದು ಬೆಳಗ್ಗೆ 10.30ಕ್ಕೆ ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷರೂ ಶಿಬಿರದ ಪ್ರಾಯೋಜಕರೂ ಆದ ಎಂ. ಗಂಗಾಧರ ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಮಾರಂಭದಲ್ಲಿ ಯಕ್ಷಗಾನ ವಿದ್ವಾಂಸ ದಿವಾಕರ ಹೆಗಡೆ, ಕೆರೆಹೊಂಡ ಅಭ್ಯಾಗತರಾಗಿ ಭಾಗವಹಿಸಲಿದ್ದಾರೆ. ಪ್ರಸಂಗಕರ್ತ ಪವನ್ ಕಿರಣ್‌ಕೆರೆ ಸಂಯೋಜನೆಯಲ್ಲಿ ನಡೆಯುವ ಶಿಬಿರದಲ್ಲಿ ವಿವಿಧ ಮೇಳಗಳ 35 ಯುವ ಕಲಾವಿದರು ಪ್ರಯೋಜನ ಪಡೆಯಲಿದ್ದು, 25ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ ಎಂದು ಕಾರ್ಯದರ್ಶಿ ಮುರಲಿ ಕಡೆಕಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರಸುದಾರರಿಗೆ ಸೂಚನೆ

ಉಡುಪಿ: ಜಿಲ್ಲಾಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ 35 ವರ್ಷ ಪ್ರಾಯದ ಅಪರಿಚಿತ ವ್ಯಕ್ತಿಯು ಚಿಕಿತ್ಸೆ ಫಲಕಾರಿಯಾಗದೆ ಮೃತರಾಗಿದ್ದು ಸಂಬಂಧಿಕರು ಯಾರಾದರೂ ಇದ್ದಲ್ಲಿ ನಾಗರಿಕ ಸಹಾಯ ಕೇಂದ್ರವನ್ನು ಸಂಪರ್ಕಿಸುವಂತೆ ಜಿಲ್ಲಾಸ್ಪತ್ರೆ ಪ್ರಕಟಣೆ ತಿಳಿಸಿದೆ.

ಕೋಟ ಪಡುಕೆರೆ: ಇಂದು ಉದ್ಯೋಗ ಮೇಳ

ಉಡುಪಿ: ಕೋಟ-ಪಡುಕೆರೆ ಲಕ್ಷ್ಮೀ ಸೋಮ ಬಂಗೇರ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಗೀತಾನಂದ ಫೌಂಡೇಶನ್ ಮಣೂರು-ಪಡುಕೆರೆ ಇವರ ಸಹಭಾಗಿತ್ವದಲ್ಲಿ ಉದ್ಯೋಗ ಮೇಳವನ್ನು ಜೂ.2ರಂದು ಬೆಳಗ್ಗೆ 9ಗಂಟೆಯಿಂದ ಹಮ್ಮಿಕೊಳ್ಳಲಾಗಿದೆ. ಉದ್ಯೋಗ ಮೇಳದಲ್ಲಿ ಪ್ರತಿಷ್ಠಿತ ಬಹುರಾಷ್ಟ್ರೀಯ ಮತ್ತು ಸ್ಥಳೀಯ ಕಂಪನಿಗಳು, ಎಂದು ಕಾಲೇಜಿನ ಪ್ರಕಟಣೆಯಲ್ಲಿ ಪ್ರಾಂಶುಪಾಲರು ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಮತ್ಸ್ಯಕ್ಷಾಮದ ಹೊಡೆತ!

ಹೀಗಾಗಿ ಗಂಗೊಳ್ಳಿ ಬಂದರಿನಲ್ಲಿ ಮೀನುಗಾರಿಕಾ ಚಟುವಟಿಕೆ ಕ್ಷೀಣಿಸುವುದರೊಂದಿಗೆ ಆರ್ಥಿಕ ಗಳಿಕೆಯ ಮೇಲೂ ಪರಿಣಾಮ ಬೀರುವಂತಾಗಿದೆ. ಪ್ರಸಕ್ತ ಮೀನುಗಾರಿಕಾ ಋತುವಿನಲ್ಲಿ ಮತ್ಸ್ಯಕ್ಷಾಮ, ಹವಾಮಾನ ವೈಪರೀತ್ಯ ಮೊದಲಾದ ಕಾರಣಗಳಿಂದ ಕಳೆದ ನಾಲ್ಕೈದು ತಿಂಗಳಿನಲ್ಲಿ ನಿರೀಕ್ಷೆಯಷ್ಟು ಮೀನುಗಾರಿಕೆ ನಡೆಯದಿರುವುದರಿಂದ ಬಹುತೇಕ ಬೋಟುಗಳು ಮ್ಯಾಂಗನೀಸ್ ರಸ್ತೆ ವಠಾರ, ಪೋರ್ಟ್ ಆಫೀಸಿನ ಬಳಿ ಲಂಗರು ಹಾಕಿದೆ. ಗಂಗೊಳ್ಳಿಯಲ್ಲಿ ಕಿರು ಮೀನುಗಾರಿಕಾ ಬಂದರು ಅನುಷ್ಠಾನಗೊಂಡಿದ್ದರೂ ನಡೆದ ಕಳಪೆ ಕಾಮಗಾರಿಗಳು, ಬಾಕಿ ಉಳಿದಿರುವ ಕಾಮಗಾರಿಗಳು ಹಾಗೂ ಅಧಿಕಾರಿ ವರ್ಗದ ನಿರ್ಲಕ್ಷ್ಯ ಧೋರಣೆ ಮೊದಲಾದವುಗಳ ಬಗ್ಗೆ ಸರಕಾರ ಗಮನ ಹರಿಸದಿರುವುದು ಮೀನುಗಾರರ ಆಕ್ರೋಶಕ್ಕೆ ಗುರಿಯಾಗಿದೆ. ದಶಕಗಳೇ ಕಳೆದರೂ ಗಂಗೊಳ್ಳಿ ಬಂದರು ಸಮಸ್ಯೆಗೆ ಇನ್ನೂ ಪರಿಹಾರ ಕಂಡುಕೊಳ್ಳಲಾಗಿಲ್ಲ ಎಂಬ ಅಳಲು ಈ ಭಾಗದ ಮೀನುಗಾರರದ್ದು. ಅನೇಕ ಸಮಸ್ಯೆಗಳ ಸರಮಾಲೆಯನ್ನೇ ಸುತ್ತಿಕೊಂಡಿರುವ ಗಂಗೊಳ್ಳಿ ಬಂದರು ಪ್ರದೇಶದಲ್ಲಿ ಇದೀಗ ಮೀನುಗಾರಿಕೆ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿರುವುದು ಮೀನುಗಾರರ ನಿದ್ದೆಗೆಡಿಸಿದೆ.

ಅಣೆಕಟ್ಟು

ಮುಂಗಾರು ಸ್ಪಷ್ಟವಾಗಿ ಪ್ರಾರಂಭವಾದ ಬಳಿಕ ಅಣೆಕಟ್ಟಿನ ಗೇಟನ್ನು ತೆರೆಯ ಲಾಗುವುದು. ಇದು ಜಿಲ್ಲಾಡಳಿತ ನಿರ್ದೇಶನವನ್ನು ಅವಲಂಬಿಸಿದೆ ಎಂದು ಅವರು ತಿಳಿಸಿದರು. ಈ ನಿಟ್ಟಿನಲ್ಲಿ ನಮ್ಮ ಇಲಾಖೆಗೆ ಸಾರ್ಥಕ್ಯತೆಯ ಭಾವನೆ ಇದೆ ಎಂದು ತಿಳಿಸಿದರು.

ಬಂಟ್ವಾಳದಲ್ಲಿ ಹಾನಿ

ಭಾನುವಾರ ಸಂಜೆ ಬಂಟ್ವಾಳ ತಾಲೂಕಿನ ಮಂಚಿ ಸಹಿತ ಅಕ್ಕಪಕ್ಕದ ಗ್ರಾಮಗಳಲ್ಲಿ ಬೀಸಿದ ಗಾಳಿ, ಧಾರಾಕಾರ ಮಳೆಗೆ ಹಾನಿ ಮುಂದುವರಿದಿದೆ. ಬಿರುಗಾಳಿಗೆ ಮಂಚಿ ಗ್ರಾಮದ ನಾಡಾಜೆ ಎಂಬಲ್ಲಿ ಯಮುನಾ ಅವರ ಮನೆಯ ಮೇಲೆ ಅಡಿಕೆ ಮರ ಬಿದ್ದು ಭಾಗಶಃ ಹಾನಿಯಾಗಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿರುವುದಿಲ್ಲ. ವಿಟ್ಲಪಡ್ನೂರು ಗ್ರಾಮದ ಕುಂಟುಕುಡೇಲು ಎಂಬಲ್ಲಿ ಮಳೆ, ಗಾಳಿಗೆ ಸ್ಟೀವಲ್ ಲೂವಿಸ್ ರವರ ಮನೆಗೆ ಹಾನಿಯಾಗಿದೆ. ಅದೇರೀತಿ ಬಾಳ್ತಿಲ ಗ್ರಾಮದ ಕಳ್ಳಪಾವು ನಿವಾಸಿ ನಾಣ್ಯಪ್ಪ ಪೂಜಾರಿ ಅವರ ದನದ ಕೊಟ್ಟಿಗೆಗೆ ಗಾಳಿ, ಮಳೆಗೆ ತೆಂಗಿನ ಮರ ಬಿದ್ದು ಭಾಗಶಃ ಹಾನಿಯಾಗಿದೆ.

ಕೊಲ್ಲೂರು ಬಳಿ ಇತ್ತೀಚೆಗೆ ನಡೆದ ಭೀಕರ ಅಪಘಾತದಲ್ಲಿ ಗಾಯಗೊಂಡಿದ್ದವರಿಗೆ ತುರ್ತು ಚಿಕಿತ್ಸೆ ಅಲಭ್ಯ

ಆರೋಗ್ಯ ಕೇಂದ್ರ ಮೇಲ್ದರ್ಜೆಯ ಬೇಡಿಕೆ ಮತ್ತೆ ಮುನ್ನೆಲೆಗೆ

ಬೈಂದೂರು: ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಬೇಕೆಂಬ ಕೂಗು ಮತ್ತೆ ಮುನ್ನೆಲೆಗೆ ಬಂದಿದೆ. ಇತ್ತೀಚೆಗೆ ಕೊಲ್ಲೂರು ಸಮೀಪದ ದಳಿ ಎಂಬಲ್ಲಿ ನಡೆದ ಭೀಕರ ಅಪಘಾತದಲ್ಲಿ ಕೇರಳ ಮೂಲದ ಇಬ್ಬರು ಮೃತಪಟ್ಟು ಮಕ್ಕಳ ಸಹಿತ ಹಲವರು ಗಾಯಗೊಂಡಿದ್ದು ತುರ್ತುಚಿಕಿತ್ಸೆಗೆ ಕೊಲ್ಲೂರು ಪ್ರಾಥಮಿಕ ಆಸ್ಪತ್ರೆ ತೆರೆದಿರಲಿಲ್ಲ. ತುರ್ತುಸೇವೆಗೆ 108 ಆಂಬುಲೆನ್ಸ್ ಸೇವೆ ಕೂಡ ಸಿಕ್ಕಿರಲಿಲ್ಲ. ಕೊಲ್ಲೂರಿನಲ್ಲಿ 24/7 ಆಸ್ಪತ್ರೆಯೊಂದಿಗೆ ವೈದ್ಯರು, ನುರಿತ ಸಿಬ್ಬಂದಿ ಹಾಗೂ ಆ್ಯಂಬುಲೆನ್ಸ್ ವಾಹನ ಸೇವೆ ಸಿಗಬೇಕು. ಈ ಬಗ್ಗೆ ಸರ್ಕಾರ ಹಾಗೂ ಜನಪ್ರತಿನಿಧಿಗಳು ಇಚ್ಛಾಶಕ್ತಿ ತೋರಿಸಬೇಕೆಂದು ಎಂದು ಸಾರ್ವಜನಿಕರು ಆಗ್ರಹಿಸತೊಡಗಿದ್ದಾರೆ.



ಸಿಬ್ಬಂದಿ ಕೊರತೆ

ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರವು ಕೊಲ್ಲೂರು, ಜಡ್ಕಲ್, ಮುದೂರು, ಗೋಳಿಹೊಳೆಯಲ್ಲಿ ಉಪಕೇಂದ್ರಗಳನ್ನು ಹೊಂದಿದ್ದು ಸಮುದಾಯ ಆರೋಗ್ಯ ಅಧಿಕಾರಿ (ಸಿಎಚ್‌ಒ) ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ (ಪಿಎಚ್ ಸಿಒ) ಸಿಬ್ಬಂದಿ ಕೊರತೆಯಿದೆ. ಪ್ರಾಥಮಿಕ ಆರೋಗ್ಯ ಕೇಂದ್ರವಾದ ಕಾರಣ ಬೆಳಗ್ಗೆ 9ರಿಂದ ಸಂಜೆ 4.30ರ ತನಕ ಹಾಗೂ ರಜಾದಿನಗಳಲ್ಲಿ ಅರ್ಧ ದಿನ ಸೇವೆ ಸಿಗುತ್ತದೆ. ಕೊಲ್ಲೂರು ದೇಗುಲದಿಂದ ನೀಡಲಾಗಿದ್ದ ಆ್ಯಂಬುಲೆನ್ಸ್ ವಾಹನವನ್ನು ಕುಂದಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ನಿಯೋಜಿಸಲಾಗಿದೆ. ಜಿಲ್ಲೆಯಲ್ಲಿ 128 ಪಿಎಚ್ ಸಿಒ ಹುದ್ದೆ ಖಾಲಿಯಿದೆ. 108 ಆಂಬುಲೆನ್ಸ್ ಸಿಬ್ಬಂದಿಯ ಕೊರತೆಯೂ ಇದೆ.

> **ತಾಂತ್ರಿಕ ಅಡಚಣೆ**
>
> ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆಯಿದೆ. ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. 108 ಆ್ಯಂಬುಲೆನ್ಸ್‌ಗೆ ಚಾಲಕ ಹಾಗೂ ಸ್ಟಾಫ್ ನರ್ಸ್ ನಿಯೋಜನೆಗೆ ಈಗಾಗಲೇ ಅಗತ್ಯ ಕ್ರಮ ವಹಿಸಲಾಗಿದೆ. ಸಮುದಾಯ ಆರೋಗ್ಯ ಕೇಂದ್ರಕ್ಕೂ ಈ ಹಿಂದೆ ಪ್ರಸ್ತಾವನೆ ಸಲ್ಲಿಸಿದ್ದು ವ್ಯಾಪ್ತಿಯಲ್ಲಿ ಜನಸಂಖ್ಯೆಯ ತಾಂತ್ರಿಕ ಕಾರಣದಿಂದ ಅದು ಸಾಧ್ಯವಾಗಿಲ್ಲ.
>
> ● ಡಾ. ಬಸವರಾಜು ಹುಬ್ಬಳ್ಳಿ, ಡಿಎಚ್‌ಒ

ಸಮುದಾಯ ಆಸ್ಪತ್ರೆಗೆ ಆಗ್ರಹ

ಯಾವುದೇ ಪ್ರದೇಶದಲ್ಲಿ ಸಮುದಾಯ ಆಸ್ಪತ್ರೆಯಾದಲ್ಲಿ ಏಳು ದಿನ, 24 ಗಂಟೆ ಕರ್ತವ್ಯ ನಿರತ ವೈದ್ಯರು, ಪ್ರಸೂತಿ, ಮಕ್ಕಳ ತಜ್ಞರು, ಡೆಂಟಲ್, ಅನಸ್ತೇಶಿಯಾ ತಜ್ಞರು, ಸ್ಟಾಫ್ ನರ್ಸ್, ಆ್ಯಂಬುಲೆನ್ಸ್, ರಕ್ತನಿಧಿ, ಅಸಾಂಕ್ರಮಿಕ ಕಾಯಿಲೆ ತಡೆಗಟ್ಟುವ ವಿಭಾಗ ಸಹಿತ ಎಲ್ಲಾ ತುರ್ತು ವೈದ್ಯಕೀಯ ಸೌಲಭ್ಯಗಳೊಂದಿಗೆ ಆರೋಗ್ಯ ಸೇವೆಗಳು ಲಭಿಸುತ್ತವೆ. ಕೊಲ್ಲೂರು ವ್ಯಾಪ್ತಿಯ ಕೆರಾಡಿ, ಹೊಸೂರು, ದಳಿ ಸಹಿತ ಶಿವಮೊಗ್ಗ ವ್ಯಾಪ್ತಿಗೊಳಪಡುವ ಹೊಸನಗರ, ಸಿಗಂಧೂರು, ಬ್ಯಾಕೋಡು, ತುಂಬ್ರಿ, ನಿಟ್ಟೂರು ನಿವಾಸಿಗಳಿಗೆ ತತ್ಕಾಲಕ್ಕೆ ರಾತ್ರಿ ವೇಳೆಯೂ ಅಗತ್ಯ ಆರೋಗ್ಯ ಸೇವೆ ಪಡೆಯಲು ಅನುಕೂಲವಾಗಲಿದೆ. ಜನಸಂಖ್ಯೆ ಆಧಾರಿತವಾಗಿ ಸಮುದಾಯ ಆಸ್ಪತ್ರೆ ನಿರ್ಮಿಸಲಾಗುತ್ತದೆಯಾದರೂ ಕೂಡ ಗುಡ್ಡಗಾಡು ಪ್ರದೇಶಕ್ಕೆ ಕೊಂಚ ವಿನಾಯಿತಿಯಿದೆ.

> **ಪ್ರಸ್ತಾವನೆ ಸಲ್ಲಿಸಿದರೆ ಸಮಿತಿಯಿಂದ ನಿರ್ಣಯ**
>
> ಕೊಲ್ಲೂರು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಚಿಂತನೆಯಿದೆ. ಆದರೆ ಧಾರ್ಮಿಕ ದತ್ತಿ ಇಲಾಖೆಯಡಿ ಬರುವ ಕಾರಣ ಆರೋಗ್ಯ ಇಲಾಖೆ ಪ್ರಸ್ತಾವನೆ ಕಳಿಸಿದಲ್ಲಿ ಸಮಿತಿ ಈ ಬಗ್ಗೆ ನಿರ್ಣಯ ಮಾಡಬಹುದು. ರಾತ್ರಿ ಪಾಳಿಯಲ್ಲಿ ಕೊಲ್ಲೂರು ಆಸ್ಪತ್ರೆ ಆಂಬುಲೆನ್ಸ್ ಸೌಕರ್ಯದೊಂದಿಗೆ ಕಾರ್ಯಾಚರಿಸಬೇಕಾದ ಅಗತ್ಯತೆಯಿದೆ.
>
> ● ಕೆ. ಬಾಬು ಶೆಟ್ಟಿ ತಗ್ಗರ್ಸೆ, ಅಧ್ಯಕ್ಷರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ

ಐದು ಆಸ್ಪತ್ರೆಗಳ ಅಗತ್ಯವಿದೆ

ಹತ್ತಾರು ಗ್ರಾಮಗಳಿಗೆ ಎರಡು ಜಿಲ್ಲೆಗಳ ಗಡಿಭಾಗದ ಜನರಿಗೆ ಅನುಕೂಲವಾಗಲು, ಪ್ರವಾಸಿಗರು, ಭಕ್ತರ ಹಿತದೃಷ್ಟಿಯಿಂದ ಕೊಲ್ಲೂರು ಕೂಡ ಸಮುದಾಯ ಆರೋಗ್ಯ ಕೇಂದ್ರವಾಗಲು ಸೂಕ್ತವಿದೆ. ಈಗಾಗಲೇ ಜಿಲ್ಲೆಯ ನಿಟ್ಟೆ, ಹೆಬ್ರಿ, ಕೋಟ, ಬ್ರಹ್ಮಾವರ, ಶಿರ್ವ, ಬೈಂದೂರಿನಲ್ಲಿ ಈಗಾಗಲೇ ಸಮುದಾಯ ಆರೋಗ್ಯ ಕೇಂದ್ರಗಳಿದೆ. ಆದರೆ ಜಿಲ್ಲೆಯ ಜನಸಂಖ್ಯೆ ಪರಿಗಣಿಸಿದರೆ ಇನ್ನೂ ಐದು ಆಸ್ಪತ್ರೆಗಳು ಅಗತ್ಯವಾಗಿದೆ.

ಸುಮನಸಾ ಕೊಡವೂರು ಸಂಸ್ಥೆಯ ರಜತ ಮಹೋತ್ಸವಕ್ಕೆ ಚಾಲನೆ

ಕೈಪಿಡಿ, ಲೋಗೋ ಬಿಡುಗಡೆ, ನಾಟಕ ಪ್ರದರ್ಶನ

ಉಡುಪಿ: ನಿಸ್ವಾರ್ಥ ಸೇವೆ, ಮಾನವೀಯ ಕಳಕಳಿಯೊಂದಿಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಬೆಳೆದು ನಿಂತಿರುವ 'ಸುಮನಸಾ ಕೊಡವೂರು' ಸಾಂಸ್ಕೃತಿಕ ಸಂಘಟನೆ ಮತ್ತು ರಜತ ಸಂಭ್ರಮ ಸಮಿತಿಯ ಜಂಟಿ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ರಜತ ಮಹೋತ್ಸವ ಕಾರ್ಯಕ್ರಮವು ಕುಂಜಿಬೆಟ್ಟು ಐವೈಸಿ ಸಭಾಂಗಣದಲ್ಲಿ ನೆರವೇರಿತು.



ಪಡುಬಿದ್ರಿಯ ಯಸ್ಸೆನ್ ಸ್ಪೆಶನ್ ಎಕಾನೋಮಿಕ್ ಜೋನ್ ಮುಖ್ಯಸ್ಥ ಅಶೋಕ್ ಶೆಟ್ಟಿ ಕಪ್ಪೆ ಚಿಪ್ಪಿನೊಳಗಿನಿಂದ ಮುತ್ತು ಹೊರಬರುವ ಮಾದರಿಯಲ್ಲಿ ಕಾರ್ಯಕ್ರಮವನ್ನು ವಿಭಿನ್ನವಾಗಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಬಡವರೊಬ್ಬರ ಮನೆ ಬೆಂಕಿಗಾಹುತಿಯಾದಾಗ ನೆರವಿನ ಹಸ್ತ ಚಾಚಿ, ಮನೆ ಕಟ್ಟಿಕೊಡುವ ಮೂಲಕ ಜನ್ಮತಾಳಿದ ಈ ಸಂಸ್ಥೆ ಇಂದು 31 ತುಳು ಹಾಗೂ 32 ಕನ್ನಡ ನಾಟಕಗಳು ಮತ್ತು ಯಕ್ಷಗಾನವನ್ನು ಪ್ರದರ್ಶಿಸಿ ಬೆಳೆದು ನಿಂತಿದೆ. ಪದಾಧಿಕಾರಿಗಳ ತ್ಯಾಗ, ಪರಿಶ್ರಮದಿಂದ ಸಂಸ್ಥೆ 25 ವರ್ಷ ಪೂರೈಸಿದೆ ಎಂದು ಶ್ಲಾಘಿಸಿದರು.

ಉಡುಪಿ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಪೂರ್ಣಿಮಾ ಅವರು ಕಾರ್ಯಕ್ರಮದ ಕೈಪಿಡಿ ಬಿಡುಗಡೆಗೊಳಿಸಿ, ಉಡುಪಿಯ ಸಾಂಸ್ಕೃತಿಕ ಲೋಕದಲ್ಲಿ ಭುಜಂಗ ಉದ್ಯಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ರಂಗಹಬ್ಬ ನಡೆಸುತ್ತಿರುವ ಏಕೈಕ ಸಂಸ್ಥೆ ಸುಮನಸಾ ಎಂದರು.

- 31 ತುಳು, 32 ಕನ್ನಡ ನಾಟಕಗಳು ಮತ್ತು ಯಕ್ಷಗಾನವನ್ನು ಪ್ರದರ್ಶಿಸಿ ಬೆಳೆದು ನಿಂತಿದೆ
- ಪದಾಧಿಕಾರಿಗಳ ತ್ಯಾಗ, ಪರಿಶ್ರಮದಿಂದ ಸಂಸ್ಥೆ 25 ವರ್ಷ ಪೂರೈಸಿರುವ ಬಗ್ಗೆ ಶ್ಲಾಘನೆ
- 'ಆಟಮಟ್ಟಾ' ಬೇಸಿಗೆ ಶಿಬಿರದ ವಿದ್ಯಾರ್ಥಿಗಳಿಂದ ಎರಡು ಆಕರ್ಷಕ ನಾಟಕ ಪ್ರದರ್ಶನ

ಇದೇ ಸಂದರ್ಭದಲ್ಲಿ ರಜತ ಮಹೋತ್ಸವದ ಆಕರ್ಷಕ ಲೋಗೋವನ್ನು ಬುಡ್ನಾರು ಯಕ್ಷಸಂಜೀವ ಟ್ರಸ್ಟ್‌ನ ಯಕ್ಷಗಾನ ಗುರು ಬನ್ನಂಜೆ ಸಂಜೀವ ಸುವರ್ಣ ಅವರು ಬಿಡುಗಡೆ ಮಾಡಿದರು. ರಜತ ಸಂಭ್ರಮ ಸಮಿತಿ ಅಧ್ಯಕ್ಷ ಹರಿಪ್ರಸಾದ್ ರೈ ಅಧ್ಯಕ್ಷತೆ ವಹಿಸಿದ್ದರು. ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಉದ್ಯಾವರ ನಾಗೇಶ್ ಕುಮಾರ್, ರಜತ ಸಂಭ್ರಮ ಸಮಿತಿ ಗೌರವಾಧ್ಯಕ್ಷ ಎಂ.ಎಲ್. ಸಾಮಗ ಹಾಗೂ ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆ ಸಂಚಾಲಕ ಭಾಸ್ಕರ ಪಾಲನ್ ಬಾಚನಬೈಲು ಇದ್ದರು. ಸಂಘಟನೆ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಸ್ವಾಗತಿಸಿದರು, ಗೌರವಾಧ್ಯಕ್ಷ ಎಂ.ಎಸ್. ಭಟ್ ವಂದಿಸಿದರು. ದಯಾನಂದ ಕರ್ಕೇರ ನಿರೂಪಿಸಿದರು. ಸಭೆಯ ಬಳಿಕ 'ಆಟಮಟ್ಟಾ' ಬೇಸಿಗೆ ಶಿಬಿರದ ವಿದ್ಯಾರ್ಥಿಗಳಿಂದ 2 ಆಕರ್ಷಕ ನಾಟಕಗಳು ಪ್ರದರ್ಶನಗೊಂಡವು.

ಪಡುಕುತ್ಯಾರಿನಲ್ಲಿ ಪುರುಷೋತ್ತಮ ಯಾಗ, ಲಕ್ಷ್ಮೀನಾರಾಯಣ ಹೃದಯ ಹೋಮ

ಸುಸಂಸ್ಕೃತ ಬದುಕು ಸಾರ್ಥಕ: ಆನೆಗುಂದಿ ಶ್ರೀ

ಕಾಪು: ಸುಸಂಸ್ಕೃತರಾಗಿ ಮಾನವನಿಂದ ಮಾಧವನೆಡೆಗೆ ಹೆಜ್ಜೆಯಿಟ್ಟಾಗ ಬದುಕು ಸಾರ್ಥಕ. ಒಂದು ಹಂತಕ್ಕೆ ಕೆಳಗಿಳಿದು ಮಾನವ ದಾನವರಾದರೆ ವಿಕಾರದ ಪ್ರಕೃತಿ, ಅಧಿಕಾರದ ಪರಿವರ್ತನೆಯಾದರೆ ಬದುಕು ನಿರರ್ಥಕ ಎಂದು ಕಟಪಾಡಿ ಪಡುಕುತ್ಯಾರು ಶ್ರೀಮತ್‌ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠದ ಜಗದ್ಗುರು ಅನಂತಶ್ರೀವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮಿಗಳವರು ವ್ಯಾಖ್ಯಾನಿಸಿದರು.



ಪಡುಕುತ್ಯಾರಿನ ಮಹಾಸಂಸ್ಥಾನದ ಶ್ರೀ ಸರಸ್ವತೀ ಯಾಗ ಶಾಲೆಯಲ್ಲಿ ಭಾನುವಾರ ಶ್ರೀಗಳ ಜನ್ಮವರ್ಧಂತಿಯ ಸುವರ್ಣ ಮಹೋತ್ಸವ ಅಂಗವಾಗಿ ವಿಶ್ವಬ್ರಾಹ್ಮಣ ಪ್ರತಿಷ್ಠಾನ ಹುಬ್ಬಳ್ಳಿ ವತಿಯಿಂದ ನಡೆದ ಶ್ರೀ ಪುರುಷೋತ್ತಮ ಯಾಗ ಹಾಗೂ ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ವಿವಿಧ ಧಾರ್ಮಿಕ ಕಾರ್ಯಕ್ರಮ

ಆನೆಗುಂದಿ ಮಹಾಸಂಸ್ಥಾನದ ಆಸ್ಥಾನ ವಿದ್ವಾಂಸ ಶಂಕರಾಚಾರ್ಯ ಗುರುನಾಥ ಆಚಾರ್ಯ ಪಂಡಿತ್ ಕಡ್ಲಾಸ್ಕರ್ ಅವರಿಂದ ಅಧಿಕಮಾಸ ಹಾಗೂ ಶ್ರೀ ಪುರುಷೋತ್ತಮ ಯಾಗದ ಮಹತ್ವ ವಿಷಯದ ಕುರಿತು ಧಾರ್ಮಿಕ ಪ್ರವಚನ ನಡೆಯಿತು. ಶ್ರೀಧರ ಪುರೋಹಿತ್ ಕಟಪಾಡಿ, ಅಕ್ಷಯ ಶರ್ಮ ಕಟಪಾಡಿ, ಪೂರ್ವ ಛಾತ್ರ ಸಂಘದ ಮನೋಜ್ ಶರ್ಮಾ, ವಿಕಾಸ ಶರ್ಮ, ವಿಜಯ ಶರ್ಮ ನೇತೃತ್ವದಲ್ಲಿ ನಾಗದರ್ಮೇಂದ್ರ ಸಂಸ್ಕೃತ ವೇದ ಸಂಜೀವಿನಿ ಪಾಠಶಾಲೆಯ ವಿದ್ಯಾರ್ಥಿಗಳ ಸಹಕಾರದಲ್ಲಿ ಮಹಾಯಾಗ, ಶ್ರೀ ಗುರುಪಾದುಕಾ ಪೂಜೆ, 108 ದಂಪತಿ ಪೂಜೆ, ವಾಯನ ದಾನ, ಅಪೂಪಾದಿ ದಾನ ವೈದಿಕ ಕಾರ್ಯಕ್ರಮಗಳು ಸಂಪನ್ನಗೊಂಡಿತು.

ಹುಬ್ಬಳ್ಳಿ ವಿಶ್ವ ಬ್ರಾಹ್ಮಣ ಪ್ರತಿಷ್ಠಾನದ ಅಧ್ಯಕ್ಷ ಅಶೋಕ್ ಜತ್ತಿ, ಪದಾಧಿಕಾರಿಗಳಾದ ಶಂಕರ್ ನಿಡಗುಂದಿ, ಸುಹಾಸ್ ಸವಣೂರು, ನರಗುಂದ ಮೋಹನ್, ಆರ್ ಎಂ. ಪತ್ತಾರ್, ಗುರುನಾಥ ಆಚಾರ್ಯ ಹುಬ್ಬಳ್ಳಿ, ಬಾಗಲಕೋಟೆಯ ಗುರುರಾಜ ಆಗಳದಕಟ್ಟಿ, ಐ.ಕೆ. ಪತ್ತಾರ್, ಆನೆಗುಂದಿ ಪ್ರತಿಷ್ಠಾನದ ಅಧ್ಯಕ್ಷ ವಿ. ಶ್ರೀಧರ ಆಚಾರ್ಯ ಒಡೆಯರ ಹೋಬಳಿ, ಅಸೆಟ್ ಅಧ್ಯಕ್ಷ ಸೂರ್ಯಕುಮಾರ ಹಳೆಯಂಗಡಿ, ಗೋ ಟ್ರಸ್ಟ್ ಅಧ್ಯಕ್ಷ ಸುಂದರ ಆಚಾರ್ಯ ಬೆಳುವಾಯಿ, ಗುರು ಸೇವಾ ಪರಿಷತ್ ಅಧ್ಯಕ್ಷ ಗಣೇಶ್ ಆಚಾರ್ಯ ಕೆಮ್ಮಣ್ಣು, ಮಾತೃ ಮಂಡಳಿ ಅಧ್ಯಕ್ಷೆ ಸಂಧ್ಯಾ ಲಕ್ಷ್ಮಣ ಆಚಾರ್ಯ, ಪೂರ್ವ ಛಾತ್ರ ಅಧ್ಯಕ್ಷ ಕೇಶವ ಶರ್ಮ, ಕೋಶಾಧಿಕಾರಿ ಅರವಿಂದ ವೈ. ಆಚಾರ್ಯ ಬೆಳುವಾಯಿ, ಕೆ.ಎಂ ಗಂಗಾಧರ ಆಚಾರ್ಯ ಕೊಂಡೆಯೂರು, ಗುರುರಾಜ್ ಕೆ.ಜೆ. ಆಚಾರ್ಯ, ಲೋಲಾಕ್ಷ ಶರ್ಮ ಸಹಿತ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸದಸ್ಯರು ವಿವಿಧ ದೇವಸ್ಥಾನಗಳ ಆಡಳಿತ ಮೊಕ್ತೇಸರರು ಭಾಗವಹಿಸಿದ್ದರು. ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಂ.ಬಿ. ಆಚಾರ್ ಸ್ವಾಗತಿಸಿ, ನಿರೂಪಿಸಿದರು.

ನ್ಯಾಯಾಧೀಶರಾಗಿ ಆಯ್ಕೆ: ಅಧಿವಕ್ತ ಪರಿಷತ್‌ನಿಂದ ಸುಕೇಂದ್ರಗೆ ಅಭಿನಂದನೆ



ಉಡುಪಿ: ಉಡುಪಿ ಜಿಲ್ಲಾ ವಕೀಲರ ಸಂಘದಿಂದ ಜೆಎಂಎಫ್‌ಸಿ ನ್ಯಾಯಾಧೀಶರಾಗಿ ಆಯ್ಕೆಯಾದ ಸುಕೇಂದ್ರ ಅವರಿಗೆ ಉಡುಪಿ ಜಿಲ್ಲಾ ಅಧಿವಕ್ತ ಪರಿಷತ್ ವತಿಯಿಂದ ಅಭಿನಂದಿಸಲಾಯಿತು. ಇವರು ಉಡುಪಿ ನ್ಯಾಯಾಲಯದಲ್ಲಿ ಯುವ ನ್ಯಾಯವಾದಿಯಾಗಿ ವೃತ್ತಿ ಮಾಡುತ್ತಿದ್ದು ಈಗ ಉಡುಪಿ ಜಿಲ್ಲೆಯಲ್ಲಿಯೇ ಆಯ್ಕೆಯಾದ ಏಕೈಕ ನ್ಯಾಯಾಧೀಶರಾಗಿದ್ದಾರೆ. ಅಧಿವಕ್ತ ಪರಿಷತ್ ಜಿಲ್ಲಾ ವತಿಯಿಂದ ಇವರಿಗೆ ಸನ್ಮಾನಿಸಿ ಅಭಿನಂದಿಸಿದ್ದು, ಈ ಸಂದರ್ಭದಲ್ಲಿ ಅಧಿವಕ್ತ ಪರಿಷತ್ ಅಧ್ಯಕ್ಷ ಶ್ರೀ ಸಂತೋಷ್ ಹೆಬ್ಬಾರ್ ಪ್ರಾಸ್ತವಿಕ ಭಾಷಣ ಮಾತನಾಡಿದರು. ಉಡುಪಿ ವಕೀಲರ ಸಂಘದ ಮಾಜಿ ಕಾರ್ಯದರ್ಶಿಯಾದ ರಾಜೇಶ್ ಎ.ಆರ್. ಅಭಿನಂದನ ಮಾತುಗಳನ್ನಾಡಿದರು.

ಈ ಸಂದರ್ಭದಲ್ಲಿ ಅಧಿವಕ್ತ ಪರಿಷತ್ ಪದಾಧಿಕಾರಿ, ನ್ಯಾಯವಾದಿ ಗಳಾದ ಶಶಿಕಲಾ ತೋನ್ಸೆ, ಬ್ರಹ್ಮಾವರ ವಕೀಲರ ಸಂಘದ ಉಪಾಧ್ಯಕ್ಷರಾದ ಕರ್ಜೆ ಬಾಲಕೃಷ್ಣ ಶೆಟ್ಟಿ, ಉಡುಪಿ ವಕೀಲರ ಸಂಘದ ಜೊತೆ ಕಾರ್ಯದರ್ಶಿ ಗಿರೀಶ್ ಎಸ್.ಪಿ ಏಳಿಂಜೆ, ವಕೀಲರ ಸಂಘದ ಮಾಜಿ ಜೊತೆ ಕಾರ್ಯದರ್ಶಿ ರವೀಂದ್ರ ಬೈಲೂರು, ನಾಗರಾಜ್ ಕಿನ್ನಿಮೂಲ್ಕಿ, ಆಶಿಶ್ ಶೆಟ್ಟಿ ಬೋಳ, ಸುಚಿತ ಶೆಟ್ಟಿ ಕಾವ್ಯ ನಾಯ್ಕ್, ಮೇಘನಾ, ಸುಚೇತಾ ಶೆಟ್ಟಿ, ಜಯಂತ್ ರಾವ್, ಪೆಲತ್ತೂರು ರೋಹಿತ್ ಆಚಾರ್ಯ, ಶ್ರೀನಿಧಿ ಸುವರ್ಣ, ಪ್ರಸನ್ನ ಶೆಣೈ, ಲೀವನ್ ಪ್ಲಾ ಇದ್ದರು. ವಕೀಲರ ಸಂಘದ ಮಾಜಿ ಸಾಂಸ್ಕೃತಿಕ ಕಾರ್ಯದರ್ಶಿ ಸಂತೋಷ್ ಕುಮಾರ್ ಮೂಡುಬೆಳ್ಳೆ ನಿರೂಪಿಸಿದರು. ಉಡುಪಿ ಜಿಲ್ಲಾ ಅಧಿವಕ್ತ ಪರಿಷತ್ ಪ್ರಧಾನ ಕಾರ್ಯದರ್ಶಿ ಆರೂರು ಸುಕೇಶ್ ಶೆಟ್ಟಿ ವಂದಿಸಿದರು.

ಮಣಿಪಾಲ: ಉಡುಪಿ ಇಂಡಸ್ಟ್ರಿಯಲ್ ಸೊಸೈಟಿಯ ಸಿಬ್ಬಂದಿ ವರ್ಗದ ತರಬೇತಿ



ಉಡುಪಿ: ಕಿನ್ನಿಮುಲ್ಕಿಯ ಉಡುಪಿ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಯ ಸಿಬ್ಬಂದಿ ವರ್ಗದವರಿಗಾಗಿ ಹಮ್ಮಿಕೊಳ್ಳಲಾಗಿದ್ದ ಒಂದು ದಿನದ ವಿಶೇಷ ತರಬೇತಿ ಮಣಿಪಾಲದ ರಂಜಿತಾ ಪ್ಯಾಲೇಸ್ ಹೋಟೆಲ್ ಸಭಾಂಗಣದಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ಜರುಗಿತು.

ಸೊಸೈಟಿಯ ಅಧ್ಯಕ್ಷ ಅರುಣ್ ಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಶಿರ್ವ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಪ್ರಸಾದ್ ಶೆಟ್ಟಿ ಕುತ್ಯಾರು ಉದ್ಘಾಟಿಸಿ, ಸಂಸ್ಥೆಯ ಪ್ರಗತಿಗೆ ಸಿಬ್ಬಂದಿ ತರಬೇತಿ ಪೂರಕವಾಗಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿ ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಬಿ. ಜಯಕರ ಶೆಟ್ಟಿ ಇಂದ್ರಾಳಿ ಉಪಸ್ಥಿತರಿದ್ದರು.

ಮೂಡಬಿದಿರೆ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಪ್ರೊಫೆಸರ್ ಬಿಂದು ನಾಯರ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಸೊಸೈಟಿಯ ಸಿಬ್ಬಂದಿಯ ಕಾರ್ಯಕ್ಷಮತೆ ಹೆಚ್ಚಿಸುವ ಹಾಗೂ ಗ್ರಾಹಕ ಸೇವೆ ಉತ್ತಮಪಡಿಸುವ 'ಟೋಟಲ್ ಕ್ವಾಲಿಟಿ ಮ್ಯಾನೇಜ್‌ಮೆಂಟ್' ವಿಷಯದ ಕುರಿತು ವಿಶೇಷ ತರಬೇತಿ ನೀಡಿದರು. ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ಕಾರ್ಯದರ್ಶಿ ಅನುಷಾ ಕೋಟ್ಯಾನ್, ಸೊಸೈಟಿಯ ಉಪಾಧ್ಯಕ್ಷ ಎಂ. ಗಣೇಶ್ ಕಿಣಿ, ಹಿರಿಯ ನಿರ್ದೇಶಕ ನಾರಾಯಣ ಬಲ್ಲಾಳ್ ಉಪಸ್ಥಿತರಿದ್ದರು.

ಸಂಘದ ಪ್ರಧಾನ ವ್ಯವಸ್ಥಾಪಕರಾದ ರಾಜೇಶ್ ಹೆಗ್ಡೆ ಅವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿ, ಕೊನೆಯಲ್ಲಿ ಧನ್ಯವಾದ ಸಮರ್ಪಿಸಿದರು.

ಪಡುಬೆಳ್ಳೆ ಶ್ರೀನಾರಾಯಣಗುರು ಸಂಸ್ಥೆಗೆ ಎಂಆರ್‌ಪಿಎಲ್ ಸ್ಕೂಲ್ ಬಸ್ ಕೊಡುಗೆ



ಶಿರ್ವ: ಪಡುಬೆಳ್ಳೆ ಬಿಲ್ಲವರ ಎಸೋಸಿಯೇಶನ್ ಸಂಚಾಲಿತ ಪಡುಬೆಳ್ಳೆ ಶ್ರೀನಾರಾಯಣ ಗುರು ವಿದ್ಯಾಸಂಸ್ಥೆಗೆ ಸೋಮವಾರ ಶಾಲಾ ಪ್ರಾರಂಭೋತ್ಸವದ ಸಂದರ್ಭ ಎಂಆರ್‌ಪಿಎಲ್ ಸಂಸ್ಥೆಯಿಂದ ಸಂಸ್ಥೆಯ ಅಧಿಕಾರಿ ಕೇಶವ ಪಾಟಾಳಿಯವರು ಶಾಸಕ ಉಮಾನಾಥ ಕೋಟ್ಯಾನ್ ಇವರಿಗೆ ವಾಹನದ ಕೀ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಶಾಸಕರು ಮಾತನಾಡಿ ಪಡುಬೆಳ್ಳೆ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯವರು ಶಾಲಾ ವಾಹನಕ್ಕೆ ಮನವಿ ಸಲ್ಲಿಸಿದ್ದರು. ಅವರ ಮನವಿಗೆ ಪೂರಕವಾಗಿ ಎಂಆರ್‌ಪಿಎಲ್ ಸಂಸ್ಥೆಯವರಲ್ಲಿ ಬಸ್ ನೀಡುವಂತೆ ಮನವಿ ಮನವರಿಕೆ ಮಾಡಿದ್ದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಹಕಾರ ಈ ಸಂಸ್ಥೆಯಿಂದ ಸಿಗುವಂತಾಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಎಂಆರ್‌ಪಿಎಲ್ ಸಂಸ್ಥೆಯ ಅಧಿಕಾರಿ ಕೇಶವ ಪಾಟಾಳಿ ಮತ್ತು ಸಮಾಜ ಸೇವಕ ರಾಮ ಅಮೀನ್ ಪಚ್ಚನಾಡಿ ಅವರನ್ನು ಸನ್ಮಾನಿಸಲಾಯಿತು. ಮುಂಬೈ ಬಿಲ್ಲವರ ಎಸೋಸಿಯೇಶನ್ ಕಾರ್ಯದರ್ಶಿ ಹರೀಶ್ ಜಿ. ಪೂಜಾರಿ, ಶಿವಾಜಿ ಎಸ್. ಸುವರ್ಣ, ಕಟಪಾಡಿ ಶಂಕರ ಪೂಜಾರಿ, ಪ್ರಕಾಶ್ ಪಾಲಮೆ, ಚಂದ್ರಶೇಖರ ಕಾಪು, ಸುರೇಶ್ ಪೂಜಾರಿ ಪಡುಬೆಳ್ಳೆ, ಶಾಲಾ ಪ್ರಾಂಶುಪಾಲ ರಾಘವೇಂದ್ರ ಸಾಲಿಯಾನ್, ಕನ್ನಡ ಮಾಧ್ಯಮ ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಉಷಾ ಎಸ್., ಪ್ರಸಾದ್ ಭಂಡಾರಿ, ಜ್ಯೋತಿ ಪ್ರವೀಣ್, ಕುಸುಮಾ ಅಮೀನ್, ಮನ್ವಿತಾ ಮತ್ತಿತರರು ಉಪಸ್ಥಿತರಿದ್ದರು.

ರಾಘವೇಂದ್ರ ಸಾಲಿಯಾನ್ ಸ್ವಾಗತಿಸಿದರು. ವೀಣಾ ನಾಯಕ್, ದೀಕ್ಷಾ ನಿರೂಪಿಸಿದರು. ಉಷಾ ಎಸ್. ವಂದಿಸಿದರು.

ಕುಂದಾಪುರ ಪುರಸಭೆಯ ಮಳೆಗಾಲದ ಪೂರ್ವ ಸಿದ್ಧತೆ | ಸಣ್ಣಪುಟ್ಟ ತೋಡು, ಚರಂಡಿಗಳಲ್ಲಿ ತುಂಬಿ ತುಳುಕುತ್ತಿದೆ ತ್ಯಾಜ್ಯಗಳು

ಮುಂಗಾರು ಸಮೀಪಿಸುತ್ತಿದ್ದರೂ ಚರಂಡಿ ಸ್ವಚ್ಛತಾ ಚಟುವಟಿಕೆ ಆಮೆಗತಿಯಲ್ಲಿ

ಕುಂದಾಪುರ: ಮಳೆಗಾಲ ಆರಂಭಕ್ಕೆ ದಿನಗಳಷ್ಟೇ ಬಾಕಿ ಉಳಿದಿದ್ದು, ಕುಂದಾಪುರ ಪುರಸಭೆಯಿಂದ ವಿವಿಧ ವಾರ್ಡ್‌ಗಳಲ್ಲಿ ಚರಂಡಿ ಸ್ವಚ್ಛಗೊಳಿಸುವುದು ಸಹಿತ ಹಲವು ಮುನ್ನೆಚ್ಚರಿಕೆ ಕಾರ್ಯಗಳು ಆರಂಭಗೊಂಡಿದೆ. ಆದರೆ ಕೆಲಸ ಮಾತ್ರ ಆಮೆನಡಿಗೆಯಲ್ಲಿ ಸಾಗುತ್ತಿದೆ.



ಈಗಾಗಲೇ ರಸ್ತೆ ಬದಿಗಳಲ್ಲಿ, ಚರಂಗಳಲ್ಲಿ ಹೂಳು, ತ್ಯಾಜ್ಯಗಳ ತೆರವು ಕಾರ್ಯ ಪ್ರಾರಂಭಗೊಂಡಿದೆಯಾದರೂ, ಮಳೆಗಾಲದ ಪೂರ್ವದಲ್ಲಿ ನಡೆಯಬೇಕಿದ್ದ ಇಂತಹ ಕಾರ್ಯಗಳು ನಿರೀಕ್ಷಿತ ವೇಗದಲ್ಲಿ ನಡೆಯುತ್ತಿಲ್ಲ ಎಂಬ ಆರೋಪ ಸಾರ್ವಜನಿಕ ವಲಯದಿಂದ ಕೇಳಿ ಬಂದಿದೆ. ಮಳೆಗಾಲದ ಪೂರ್ವದಲ್ಲಿ ಬಿದ್ದಿರುವ ಮಳೆ ಪುರಸಭೆ ಚರಂಡಿ ಸ್ವಚ್ಛತೆಯ ಅಸಲಿಯತ್ತನ್ನು ತೋರಿಸಿದೆ. ಸಣ್ಣಪುಟ್ಟ ತೋಡು, ಚರಂಡಿಗಳಲ್ಲಿ ತ್ಯಾಜ್ಯಗಳು ತುಂಬಿ ತುಳುಕುತ್ತಿದ್ದು, ಮಳೆಗಾಲ ಪ್ರಾರಂಭವಾಗುವುದರ ಒಳಗಾಗಿ ಚರಂಡಿ ಸ್ವಚ್ಛಗೊಳಿಸದಿದ್ದರೆ ಅನೇಕ ಕಡೆಗಳಲ್ಲಿ ಕೃತಕ ನೆರೆ ಉಂಟಾಗುವ ಸಾಧ್ಯತೆಗಳಿವೆ.

ಪುರಸಭಾ ವ್ಯಾಪ್ತಿಯ ಪ್ರಮುಖ ಚರಂಡಿಗಳಾದ ಸುಡುಗಾಡು ತೋಡು, ಕಲ್ಲಾಗರ, ಬರೆಕಟ್ಟು ಮದ್ದುಗುಡ್ಡೆ, ವಿಠಲವಾಡಿ ಮತ್ತು ಸಣ್ಣ ಪುಟ್ಟ ತೋಡುಗಳಲ್ಲಿ ತ್ಯಾಜ್ಯದ ರಾಶಿ ಶೇಖರಣೆಯಾಗಿದ್ದು, ಸ್ವಚ್ಛತಾ ಕಾರ್ಯವನ್ನು ಇನ್ನಷ್ಟು ಚುರುಕುಗೊಳಿಸಬೇಕಾಗಿದೆ. ಹಲವು ಪ್ರಮುಖ ಮಳೆ ನೀರು ಹರಿದು ಹೋಗುವ ತೋಡುಗಳಲ್ಲಿ ಕೊಳಚೆ ನೀರು ಸಂಗ್ರಹವಾಗಿ ಪರಿಸರದಲ್ಲಿ ದುರ್ವಾಸನೆ ಬೀರುತ್ತಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

> **ಜನರಿಗೆ ತೊಂದರೆ ಆಗದಂತೆ ಕ್ರಮ**
>
> ಚರಂಡಿ ಸ್ವಚ್ಛತೆ ಸಹಿತ ಹಲವು ಮುನ್ನೆಚ್ಚರಿಕೆ ಕಾರ್ಯ ಆರಂಭಿಸಲಾಗಿದೆ. ಪ್ರಮುಖ ಚರಂಡಿ, ತೋಡುಗಳ ಸ್ವಚ್ಛತೆ, ಹೂಳೆತ್ತುವ ಬಗ್ಗೆ ಕ್ರಮಕೈಗೊಳ್ಳಲಾಗಿದ್ದು, ಪುರಸಭೆಯಲ್ಲಿ ಲಭ್ಯವಿರುವ ಕಾರ್ಮಿಕರನ್ನು ಬಳಸಿಕೊಂಡು ಚರಂಡಿ ಸ್ವಚ್ಛತೆ ಮಾಡಲಾಗುತ್ತಿದೆ. ಮಳೆಗಾಲದಲ್ಲಿ ಜನರಿಗೆ ತೊಂದರೆಯಾಗದಂತೆ ಎಲ್ಲಾ ಕ್ರಮ ಕೈಗೊಳ್ಳಲಾಗುವುದು.
>
> ● ಆನಂದ ಜೆ., ಮುಖ್ಯಾಧಿಕಾರಿ, ಪುರಸಭೆ

ಬೃಹತ್ ತ್ಯಾಜ್ಯ ರಾಶಿ ಸಂಗ್ರಹ

ಹಲವು ಚರಂಡಿಗಳಲ್ಲಿ ದೊಡ್ಡ ಮಟ್ಟದ ತ್ಯಾಜ್ಯಗಳ ರಾಶಿಯೇ ಸಂಗ್ರಹಗೊಂಡಿದೆ. ಇದರಿಂದ ಮಳೆ ನೀರು ಸರಾಗವಾಗಿ ಚರಂಡಿ ಬ್ಲಾಕ್ ಆಗುತ್ತದೆ. ಚರಂಡಿಗಳಲ್ಲೂ ಹೂಳು ತುಂಬಿದ್ದು, ಇದು ನೇರವಾಗಿ ತೋಡಿಗೆ ಸೇರುವ ಕಾರಣ ಕೃತಕ ನೆರೆ ಉಂಟಾಗುವ ಸಾಧ್ಯತೆಗಳೂ ಇದೆ. ಅನೇಕ ಪ್ರಮುಖ ಚರಂಡಿಗಳ ಸ್ವಚ್ಛತೆ, ಹೂಳು ತೆಗೆಯುವ ಕಾರ್ಯ ಇನ್ನೂ ಆರಂಭಗೊಂಡಿಲ್ಲ ಎಂದು ಹೇಳಲಾಗುತ್ತಿದೆ.

ಸಂಭಾವ್ಯ ಸಮಸ್ಯೆ ತಡೆಗಟ್ಟಿ

ಪುರಸಭೆಯಲ್ಲಿ ಲಭ್ಯವಿರುವ ಕಾರ್ಮಿಕರನ್ನು ಬಳಸಿಕೊಂಡು ಚರಂಡಿ ಸ್ವಚ್ಛಗೊಳಿಸುವ ಕೆಲಸ ಕೈಗೆತ್ತಿಕೊಂಡಿರುವ ಪುರಸಭೆ, ಈ ಕಾರ್ಯಕ್ಕೆ ಇನ್ನಷ್ಟು ವೇಗ ನೀಡಬೇಕಾಗಿದೆ. ಸ್ವಚ್ಛತೆಗೆ ಹೆಸರುವಾಗಿರುವ ಪುರಸಭೆ ಮಳೆಗಾಲದ ಪೂರ್ವದಲ್ಲಿ ಚರಂಡಿ ಸ್ವಚ್ಛತೆ, ಹೂಳು ತೆಗೆಯುವ ಕೆಲಸಕ್ಕೆ ವೇಗ ನೀಡಬೇಕು, ಮಳೆಗಾಲದ ಪೂರ್ವದಲ್ಲಿ ಸ್ಥಳೀಯಾಡಳಿತ ಮುನ್ನೆಚ್ಚರಿಕಾ ಕ್ರಮಕೈಗೊಂಡು ಮಳೆಗಾಲದಲ್ಲಿ ಎದುರಾಗಬಹುದಾದ ಸಂಭಾವ್ಯ ತೊಂದರೆ ತಡೆಗಟ್ಟಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.